ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಪ್ರಜ್ಞಾನಂದಗೆ ನಾರ್ವೆ ಚೆಸ್ ಕಿರೀಟ

ಈ ಪ್ರಶಸ್ತಿ ಗೆದ್ದ ಮೊದಲ ಭಾರತೀಯ

|೧೦

ಭಾರತ ತಂಡಕ್ಕೆ ವೈಭವ್ ಸೂರ್ಯವಂಶಿ ಸೇರ್ಪಡೆ

|೧೦



ಹುಬ್ಬಳ್ಳಿ
ಭಾನುವಾರ, 7 ಜೂನ್ 2026
ಸಂಪುಟ 16, ಸಂಚಿಕೆ 74, ಪುಟಗಳು 12
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಅಧಿಕ ಜ್ಯೇಷ್ಠ ಮಾಸ, ಕೃಷ್ಣ ಪಕ್ಷ, ತಿಥಿ: ಸಪ್ತಮಿ, ನಕ್ಷತ್ರ: ಧನಿಷ್ಠೆ

ದಿನದ ಮಾತು

ಸಿಂಹದ ಗುಣವನ್ನು ನರಿಯ ಗುಣದಂತೆ ಮಾರ್ಪಡಿಸುವುದು ಬಡತನ.

▲ ನಾಣ್ನುಡಿ

ತಲೆಹರಟೆ ಸೀನುವಿನ ನೂತನ ಸಚಿವ ಸಲಹೆಗಳು

ವಕ್ರದೃಷ್ಟಿ

• ಎನ್.ರಾಮನಾಥ್

• ಪುಟ ೬

ಕಿರುಸುದ್ದಿ



ಗಿಲ್, ರಾಹುಲ್ ಶತಕ ವೈಭವ; ಭಾರತ ಸುಭದ್ರ

• ಪುಟ ೧೦

ಇರಾನ್-ಅಮೆರಿಕ ಮತ್ತೆ ಕ್ಷಿಪಣಿ ಸಮರ

• ಪುಟ ೭

ಕಾಕ್ರೋಚ್ ಪಾರ್ಟಿ ವಿರುದ್ಧ ಎಫ್ಐಆರ್

• ಪುಟ ೭

ಕೇರಳ ಮಳೆಗೆ 7 ಸಾವು: 5 ಜಿಲ್ಲೆಗಳಲ್ಲಿ ರೆಡ್ ಅಲರ್ಟ್

• ಪುಟ ೭

ಸುಳ್ಳು ಪ್ರಚಾರದಿಂದ ಸತ್ಯವೆಂದು ಬದಲಾಗದು

• ಪುಟ ೭

ಮೀಸಲು ನಿಗದಿಗೆ 8 ವಾರಗಳ ಕಾಲಾವಕಾಶ

• ಪುಟ ೫

ಪ್ರತ್ಯೇಕ ವೈದ್ಯಕೀಯ ಕೌನ್ಸೆಲಿಂಗ್: ಸಚಿವ

• ಪುಟ ೫



ಪ್ಲಾಸ್ಟಿಕ್ ನೋಟು ಯುಗಾರಂಭ?

• ಪುಟ ೭

ಸುದ್ದಿ ಸಮಗ್ರ

ಡಿಕೆಶಿ, ಸುರ್ಜೆವಾಲಾ ಮನವೊಲಿಕೆ ಬಳಿಕ ರಾಮಲಿಂಗಾರೆಡ್ಡಿ ನಿರ್ಧಾರ ಬದಲು | ನಾನಾಗಿಯೇ ಖಾತೆ ಕೇಳಿಲ್ಲ ಎಂದ ಸಚಿವ

ರಾಜೀನಾಮೆ ವಾಪಸ್

• **ಬೆಂಗಳೂರು:** ನಿರೀಕ್ಷಿಸಿದ ಸಚಿವ ಸ್ಥಾನ ನೀಡದಿದ್ದಕ್ಕೆ ಅಸಮಾಧಾನಗೊಂಡು ಶುಕ್ರವಾರ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ರಾಮಲಿಂಗಾರೆಡ್ಡಿ ಅವರನ್ನು ಸಮಾಧಾನಗೊಳಿಸುವಲ್ಲಿ ಕಾಂಗ್ರೆಸ್ ಹೈಕಮಾಂಡ್ ಯಶಸ್ವಿಯಾಗಿದ್ದು, ರಾಮಲಿಂಗಾರೆಡ್ಡಿ ತಮ್ಮ ರಾಜೀನಾಮೆಯನ್ನು ವಾಪಸ್ ಪಡೆದಿದ್ದಾರೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರೇ ಸ್ಪಷ್ಟಪಡಿಸಿದ್ದಾರೆ.

ಶುಕ್ರವಾರ ರಾತ್ರಿಯೇ ಜಯ ನಗರದ ಖಾಸಗಿ ಹೋಟೆಲ್‌ನಲ್ಲಿ ಸಚಿವ ರಾಮಲಿಂಗಾರೆಡ್ಡಿ ಅವರ ಜತೆ ಮಾತುಕತೆ ನಡೆಸಿದ್ದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಂಧಾನದ ಮಾತುಗಳನ್ನಾಡುವ ಮೂಲಕ ಸಮಾಧಾನಪಡಿಸಿದ್ದರು. ಶನಿವಾರ ನಗರಕ್ಕಾಗಮಿಸಿದ ಸುರ್ಜೆವಾಲಾ ಅವರು ರಾಮಲಿಂಗಾರೆಡ್ಡಿ ಜತೆ ಮಾತುಕತೆ ನಡೆಸಿದ್ದು, ಮಾತುಕತೆ ಯಶಸ್ವಿಯಾಗಿದೆ. ಇದೇ ಸಂದರ್ಭದಲ್ಲಿ ಕೃಷ್ಣಬೈರೇಗೌಡ ಜತೆಗೂ ಮಾತುಕತೆ ನಡೆಸಿದ್ದರು.



ರಾಮಲಿಂಗಾರೆಡ್ಡಿ ಅವರು ರಾಜೀನಾಮೆ ಸಲ್ಲಿಸುತ್ತಿದ್ದಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಕರೆ ಮಾಡಿ ತಮ್ಮ ನಿರ್ಧಾರ ವಾಪಸ್ ಪಡೆಯುವಂತೆ ಮನವಿ ಮಾಡಿದ್ದರು.

ಅಲ್ಲದೆ, ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಸೇರಿದಂತೆ ಹಲವು ನಾಯಕರು ತಮ್ಮ ನಿರ್ಧಾರ ವಾಪಸ್ ಪಡೆಯಬೇಕೆಂದು ಮನವಿ ಮಾಡಿದ್ದರು. ರಾಮಲಿಂಗಾರೆಡ್ಡಿ ಅವರು ಇದೀಗ ವರಿಷ್ಠರ ಮಾತಿಗೆ ಒಪ್ಪಿಗೆ ಸೂಚಿಸಿದ್ದರಿಂದ ರಾಜೀನಾಮೆ ಗೊಂದಲಕ್ಕೆ ತೆರೆ ಬಿದ್ದಿದೆ.

ಶನಿವಾರ ಬೆಳಗ್ಗೆ ವಿಧಾನಸೌಧದಲ್ಲಿ ಮಾತನಾಡಿದ ಸಿಎಂ ಡಿ.ಕೆ. ಶಿವಕುಮಾರ್ ಅವರು, ರಾಮಲಿಂಗಾರೆಡ್ಡಿ ಅವರು ನನ್ನ ಸ್ನೇಹಿತರು ಅವರೊಂದಿಗೆ ಮಾತನಾಡಿದ್ದು, ಎಲ್ಲಾ ಸಮಸ್ಯೆ ಬಗೆಹರಿಸಲಾಗಿದೆ. ಅವರು ರಾಜೀನಾಮೆಯನ್ನು ವಾಟ್ಸ್ಆ್ಯಪ್‌ನಲ್ಲಿ ಕಳುಹಿಸಿಕೊಟ್ಟಿದ್ದು ನಿಜ. ಈಗ ಆ ವಿಚಾರ ಬಗೆಹರಿಸಲಾಗಿದೆ. ಯಾವುದೇ ಕಾರಣಕ್ಕೂ ಅವರ ರಾಜೀನಾಮೆ ಅಂಗೀಕರಿಸುವುದಿಲ್ಲ ಎಂದಿದ್ದರು.



> ಮುಖ್ಯಮಂತ್ರಿಗಳ ಜತೆಗೆ ಎಲ್ಲವನ್ನೂ ಮಾತನಾಡಿದ್ದೇನೆ. ಅವರು ರಾಜೀನಾಮೆ ಸ್ವೀಕರಿಸಲ್ಲ ಎಂದಿದ್ದಾರೆ, ಸ್ವೀಕರಿಸಲ್ಲ ಅಂದರೆ ವಾಪಸ್ ಅಂತಾನೇ ಅರ್ಥ. ನಾನಾಗಿಯೇ ಯಾವ ಖಾತೆಯನ್ನೂ ಕೇಳಿಲ್ಲ. ಯಾವ ಖಾತೆ ಕೊಡಲಿದ್ದಾರೆ ಎಂದು ನೋಡೋಣ.
> ■ ರಾಮಲಿಂಗಾರೆಡ್ಡಿ, ಸಚಿವ

> ರಾಮಲಿಂಗಾರೆಡ್ಡಿ ಅವರು ನನ್ನ ಸ್ನೇಹಿತರು, ಅವರೊಂದಿಗೆ ಮಾತನಾಡಿದ್ದು, ಎಲ್ಲಾ ಸಮಸ್ಯೆ ಬಗೆಹರಿಸಲಾಗಿದೆ. ■ ಡಿ.ಕೆ. ಶಿವಕುಮಾರ್, ಸಿಎಂ

ರಾಜೀನಾಮೆ ಹಿಂಪಡೆದಿದ್ದಾರೆ: ಸುರ್ಜೆವಾಲಾ

ರಾಮಲಿಂಗಾ ರೆಡ್ಡಿ ಅವರ ಅನುಭವ, ಜಾಣ್ಮೆ ಕಾಂಗ್ರೆಸ್ ಪಕ್ಷಕ್ಕೆ ಅಮೂಲ್ಯವಾದುದು. ಅವರು ಕಾಂಗ್ರೆಸ್ ಪಕ್ಷದ ಆಸ್ತಿ. ಅವರು ತಮ್ಮ ರಾಜೀನಾಮೆಯನ್ನು ಹಿಂಪಡೆದಿದ್ದಾರೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ತಿಳಿಸಿದ್ದಾರೆ. ಕೆಪಿಸಿಸಿ ಕಚೇರಿಯಲ್ಲಿ ಮಾಧ್ಯಮಗಳ ಜತೆ ಮಾತನಾಡಿದ ಅವರು, ಮಾಧ್ಯಮಗಳು ರಾಜಿನಾಮೆ ಸುದ್ದಿ ಪ್ರಕಟಿಸಿದಾಗ, ನಾನು ಸೇರಿದಂತೆ ಡಿ.ಕೆ. ಶಿವಕುಮಾರ್, ಹರಿಪ್ರಸಾದ್ ಹಾಗೂ ಸಿದ್ದರಾಮಯ್ಯ ಅವರು ರಾಮಲಿಂಗಾರೆಡ್ಡಿ ಅವರೊಂದಿಗೆ ಚರ್ಚೆ ಮಾಡಿದ್ದೆವು.



ಕೆಲವು ತಪ್ಪು ಸಂವಹನದಿಂದಾಗಿ ರಾಮಲಿಂಗಾರೆಡ್ಡಿ ಅವರು ನಮ್ಮನ್ನು ಮತ್ತೊಮ್ಮೆ ಭೇಟಿ ಮಾಡಿದ್ದರು. ಅವರು ತಮ್ಮ ರಾಜೀನಾಮೆ ಹಿಂಪಡೆದಿರುವ ಬಗ್ಗೆ ಈಗಾಗಲೇ ನಿಮಗೆ ಮಾಹಿತಿ ನೀಡಿದ್ದಾರೆ. ಅವರು ಮುಂದೆಯೂ ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಸೈನಿಕನಾಗಿ ಹಾಗೂ ಸಚಿವರಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಸ್ಪಷ್ಟಪಡಿಸಿದ್ದರು.

ಬಿಜೆಪಿಗೆ ನಿರಾಸೆ: ಕಾಂಗ್ರೆಸ್ ಪಕ್ಷದಲ್ಲಿ ಅಧಿಕಾರ ಹಸ್ತಾಂತರ ಸುಗಮವಾಗಿ ಸಾಗಿರುವುದರಿಂದ ಆಘಾತಕ್ಕೆ ಒಳಗಾಗಿರುವ ಬಿಜೆಪಿ, ಈ ಪ್ರಕರಣದಿಂದ ರಾಜಕೀಯ ಲಾಭ ಪಡೆಯುವ ನಿರೀಕ್ಷೆಯಲ್ಲಿತ್ತು. ಈ ಕಾರಣಕ್ಕೆ ಅವರು ವಿಕೆಟ್ ಬೀಳುತ್ತಿದೆ ಎಂದೆಲ್ಲಾ ಮಾತನಾಡಿದ್ದರು. ಆದರೆ ಅವರಿಗೆ ಈಗ ನಿರಾಸೆಯಾಗಿದೆ. ವಿಜಯೇಂದ್ರ ಹಾಗೂ ಅಶೋಕ್ ಅವರೇ ನೀವು ಜನರ ಮುಂದೆ ನಿರಂತರವಾಗಿ ಕ್ಲೀನ್ ಬೋಲ್ಡ್ ಆಗಲಿದ್ದೀರಿ ಎಂದು ಹರಿಹಾಯ್ದರು.

ಸಿಇಟಿ: ಹೆಣ್ಣುಮಕ್ಕಳದ್ದೇ ಮೇಲುಗೈ

ತನಿಷಾ, ನಯನ, ನಿನಾದ್ ಪ್ರಥಮ

ಪ್ರಥಮ ಸ್ಥಾನ ಪಡೆದ ಮೂವರೂ ಬೆಂಗಳೂರಿಗರು



ತನಿಷಾ ಕಾರ್ತಿಕ್ (ಇಂಜಿನಿಯರಿಂಗ್)



ನಯನ ಗೋಪಿ (ಪಶು ವೈದ್ಯಕೀಯ, ಬಿ ಫಾರ್ಮ, ಫಾರ್ಮಡಿ)



ನಿನಾದ್ ವಸಿಷ್ಠ (ಕೃಷಿ ವಿಜ್ಞಾನ)

2,92,782 ಅಭ್ಯರ್ಥಿಗಳು ವಿವಿಧ ವೃತ್ತಿಪರ ಕೋರ್ಸ್‌ಗೆ ಅರ್ಹತೆ ಪಡೆದಿದ್ದಾರೆ

ರಾಜ್ಯ ಪಠ್ಯಕ್ರಮ ವಿದ್ಯಾರ್ಥಿಗಳ ಸಾಧನೆ

• ಪುಟ ೪

• **ಬೆಂಗಳೂರು:** ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿದ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ -2026) ಫಲಿತಾಂಶ ಶನಿವಾರ ಪ್ರಕಟವಾಗಿದೆ. ಇಂಜಿನಿಯರಿಂಗ್‌ನಲ್ಲಿ ಜಯನಗರದ ಆರ್‌ವಿ ಪಿಯು ಕಾಲೇಜಿನ ತನಿಷಾ ಕಾರ್ತಿಕ್, ಪಶು ವೈದ್ಯಕೀಯ, ನರ್ಸಿಂಗ್ ಬಿ-ಫಾರ್ಮ ಹಾಗೂ ಫಾರ್ಮ-ಡಿನಲ್ಲಿ ಶಿವ ನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ, ಕೃಷಿ ವಿಜ್ಞಾನದಲ್ಲಿ ಜಯನಗರದ ಆರ್.ವಿ ಪಿಯು ಕಾಲೇಜಿನ ನಿನಾದ್ ವಸಿಷ್ಠ ಪ್ರಥಮ ರ‍್ಯಾಂಕ್ ಪಡೆದಿದ್ದಾರೆ.



ಶನಿವಾರ ಮಲ್ಲೇಶ್ವರದ ಕೆಇಎನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಫಲಿತಾಂಶ ಪ್ರಕಟಿಸಿದರು. ಏ.23, 24ರಂದು ರಾಜ್ಯದ 745 ಪರೀಕ್ಷಾ ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆದಿದೆ. ಈ ಬಾರಿ ಇಂಜಿನಿಯರಿಂಗ್ ಜತೆ ವಿವಿಧ ಕೋರ್ಸ್‌ಗಳ ಪರೀಕ್ಷೆಗಳಿಗೆ ಒಟ್ಟು ಅರ್ಜಿ ಸಲ್ಲಿಸಿರುವ 3,30,646 ವಿದ್ಯಾರ್ಥಿಗಳ ಪೈಕಿ 3,09,014 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು. ಇವರಲ್ಲಿ 2,92,782 ಅಭ್ಯರ್ಥಿಗಳು ವಿವಿಧ ವೃತ್ತಿಪರ ಕೋರ್ಸ್‌ಗೆ ಅರ್ಹತೆ ಪಡೆದಿದ್ದಾರೆ.

➡ ಪುಟ ೪

ಸಿಇಟಿ ಬರೆಯದ ಮುಸ್ಲಿಂ ಯುವತಿಗೆ ರ‍್ಯಾಂಕ್!

ಹಿಜಾಬ್ ವಿಚಾರಕ್ಕೆ ಪರೀಕ್ಷೆ ಬರೆಯಲು ನಿರಾಕರಿಸಿದ ವಿದ್ಯಾರ್ಥಿನಿಯಲ್ಲಿ ಪುನಃ ಪರೀಕ್ಷೆ ಬರೆಯುತ್ತೀರಾ ಅಥವಾ ದ್ವಿತೀಯ ಪಿಯುಸಿ ಪರೀಕ್ಷೆಯ ನಾಲ್ಕು ವಿಷಯದ ಸರಾಸರಿ ಅಂಕ ಗಣನೆಗೆ ತೆಗೆದುಕೊಂಡು ರ‍್ಯಾಂಕ್ ನೀಡಬೇಕೆ ಎಂದು ಕೇಳಲಾಗಿತ್ತು. ಅದಕ್ಕೆ ಅವರು ಪಿಯುಸಿ ಪರೀಕ್ಷೆ ಆಧಾರದ ಮೇಲೆಯೇ ರ‍್ಯಾಂಕ್ ನೀಡಿ ಎಂದು ಹೇಳಿದ್ದರು. ಅದರಂತೆ ರ‍್ಯಾಂಕ್ ನೀಡಲಾಗಿದೆ. ಇನ್ನು ಜನಿವಾರ ತೆಗೆಸಿದ ಪ್ರಕರಣದಲ್ಲಿ ನಾಲ್ಕು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ. ಹಾಗಾಗಿ ಪರೀಕ್ಷೆ ಆಧಾರದ ಮೇಲೆ ರ‍್ಯಾಂಕ್ ನೀಡಲಾಗಿದೆ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದರು.

ಆರ್ಥಿಕ ಸಲಹಾ ಮಂಡಳಿ ಸಭೆಯಲ್ಲಿ ಸುದೀರ್ಘ ಚರ್ಚೆ

ಅಸ್ಥಿರತೆ ನಡುವೆಯೂ ಪ್ರಗತಿಗೆ ವೇಗ

ಯುದ್ಧ ಸುಧಾರಣೆ, ದೀರ್ಘಾವಧಿ ಅಭಿವೃದ್ಧಿ ಗುರಿ ಸಮಾಲೋಚನೆ

• **ಹೊಸದಿಲ್ಲಿ:** ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಆರ್ಥಿಕ ಅನಿಶ್ಚಿತತೆ, ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷ ಹಾಗೂ ಬದಲಾಗುತ್ತಿರುವ ಅಂತಾರಾಷ್ಟ್ರೀಯ ಪರಿಸ್ಥಿತಿಯ ನಡುವೆಯೂ ಭಾರತದ ಆರ್ಥಿಕ ಬೆಳವಣಿಗೆಗೆ ಮತ್ತಷ್ಟು ವೇಗ ನೀಡುವ ಮಾರ್ಗಗಳ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಪ್ರಧಾನಮಂತ್ರಿಯ ಆರ್ಥಿಕ ಸಲಹಾ ಮಂಡಳಿ (ಇಎಸಿ-ಪಿಎಂ) ಸದಸ್ಯರೊಂದಿಗೆ ಮಹತ್ವದ ಸಭೆ ನಡೆಸಿದರು. ಹಲವು ಗಂಟೆ ಕಾಲ ನಡೆದ ಸಭೆಯಲ್ಲಿ ಭಾರತದ ಆರ್ಥಿಕ ಪರಿವರ್ತನೆ, ದೀರ್ಘಾವಧಿಯ ಅಭಿವೃದ್ಧಿ ಆದ್ಯತೆಗಳು, ಹೂಡಿಕೆ ವೃದ್ಧಿ, ಉದ್ಯೋಗ ಸೃಷ್ಟಿ, ಸುಧಾರಣಾ ಕ್ರಮಗಳಿಗೆ ವೇಗ ನೀಡುವುದು ಹಾಗೂ ಜನಜೀವನ ಮತ್ತು ಉದ್ಯಮ ವಲಯಕ್ಕೆ ಅನುಕೂಲಕರ ವಾತಾವರಣ ನಿರ್ಮಿಸುವ ವಿಷಯಗಳ ಕುರಿತು ಸುದೀರ್ಘ ಚರ್ಚೆ ನಡೆಯಿತು.

➡ ಪುಟ ೪



ಏನಿದು ಇಎಸಿ-ಪಿಎಂ?

ಪ್ರಧಾನಮಂತ್ರಿಗೆ ಆರ್ಥಿಕ ಹಾಗೂ ಇತರೆ ಮಹತ್ವದ ವಿಷಯಗಳ ಕುರಿತು ಸಲಹೆ ನೀಡುವ ಸ್ವತಂತ್ರ ಸಂಸ್ಥೆಯಾಗಿರುವ ಇಎಸಿ-ಪಿಎಂ, ದೇಶದ ಸ್ಥೂಲ ಆರ್ಥಿಕ ಪರಿಸ್ಥಿತಿ, ಅಭಿವೃದ್ಧಿ ನೀತಿಗಳು ಹಾಗೂ ದೀರ್ಘಾವಧಿಯ ಆರ್ಥಿಕ ಗುರಿಗಳ ಕುರಿತು ಸರ್ಕಾರಕ್ಕೆ ಮಾರ್ಗದರ್ಶನ ನೀಡುವ ಪ್ರಮುಖ ವೇದಿಕೆಯಾಗಿದೆ.

ದೇವರಾಜ ಅರಸ್ ಪುಣ್ಯಸ್ಮರಣೆ ವೇಳೆ ಸಿಎಂ ಡಿಕೆಶಿ ಅಭಿಮತ

ಸಾಧನೆಗಳಿಂದ ಅರಸ್ ಸದಾ ಜೀವಂತ

• **ಬೆಂಗಳೂರು:** ದೇವರಾಜ ಅರಸ್ ಅವರು ನಮ್ಮ ರಾಜ್ಯದ ಪ್ರಗತಿಗೆ ಅಡಿಪಾಯ ಹಾಕಿದ್ದಾರೆ. 100 ವರ್ಷವಾದರೂ ಸಾಧನೆಗಳ ಮೂಲಕ ಅವರು ಜೀವಂತವಾಗಿರುತ್ತಾರೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಶನಿವಾರ ವಿಧಾನಸೌಧದಲ್ಲಿ ಮಾಜಿ ಮುಖ್ಯಮಂತ್ರಿ ದೇವರಾಜ ಅರಸ್ ಅವರ ಪುಣ್ಯಸ್ಮರಣೆ ಅಂಗವಾಗಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದ ಬಳಿಕ ಮಾತನಾಡಿದ ಅವರು, ದೇವರಾಜ ಅರಸ್ ಅವರು ನಮ್ಮನ್ನು ಅಗಲಿ 45 ವರ್ಷಗಳಾಗಿವೆ. ನಾನು ವಿದ್ಯಾರ್ಥಿ ನಾಯಕನಾಗಿದ್ದಾಗ ಅವರ ಭಾಷಣಗಳನ್ನು ಕೇಳಿದ್ದೇನೆ. ಅವರು ರಾಜಿನಾಮೆ ಕೊಟ್ಟಾಗ ಮಾಡಿದ ಕೊನೇ ಭಾಷಣ ನನ್ನ ಕಿವಿಯಲ್ಲಿ ಹಾಗಯೇ ಉಳಿದಿದೆ. ಅವರು ಯಾವ ಭಾವನೆಯೊಂದಿಗೆ ರಾಜಕಾರಣ, ಅಧಿಕಾರ ನಡೆಸಿದ್ದರು ಎಂದರು.

➡ ಪುಟ ೪



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ವಿಧಾನಸೌಧದ ಆವರಣದಲ್ಲಿ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸ್ ಅವರ 44ನೇ ಪುಣ್ಯಸ್ಮರಣೆ ಅಂಗವಾಗಿ ಅವರ ಪ್ರತಿಮೆ ಹಾಗೂ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಡಿಸಿಎಂ ಪರಮೇಶ್ವರ್ ಉಪಸ್ಥಿತರಿದ್ದರು.

ಭಾರತದಲ್ಲಿದ್ದಾರೆ ವಿಶ್ವಶ್ರೇಷ್ಠ ಕೋಡರ್ಸ್

ಐಟಿ, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಭಾರತ ಪ್ರಮುಖ ರಾಷ್ಟ್ರ: ಪುಟಿನ್

• **ಹೊಸದಿಲ್ಲಿ:** ಮಾಹಿತಿ ತಂತ್ರಜ್ಞಾನ ಮತ್ತು ಸಾಫ್ಟ್‌ವೇರ್ ಅಭಿವೃದ್ಧಿ ಕ್ಷೇತ್ರದಲ್ಲಿ ಭಾರತವು ವಿಶ್ವದ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿದೆ. ಭಾರತದವರು ಎಷ್ಟು ಪ್ರತಿಭಾವಂತರೆಂದು ನಮಗೆಲ್ಲರಿಗೂ ಗೊತ್ತಿದೆ. ಭಾರತೀಯ ಕೋಡರ್‌ಗಳು ವಿಶ್ವದ ಶ್ರೇಷ್ಠ ಕೋಡರ್‌ಗಳಾಗಿದ್ದಾರೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಭಾರತವನ್ನು ಶ್ಲಾಘಿಸಿದ್ದಾರೆ.



ಸೈಂಟ್ ಪೀಟರ್ಸ್‌ಬರ್ಗ್ ಇಂಟರ್‌ನ್ಯಾಷನಲ್ ಇಕನಾಮಿಕ್ ಫೋರಮ್‌ನಲ್ಲಿ ಮಾತನಾಡಿದ ರಷ್ಯಾ ಅಧ್ಯಕ್ಷ ಪುಟಿನ್ ಭಾರತದ ಶಿಕ್ಷಣ ಗುಣಮಟ್ಟ, ಐಟಿ ಕ್ಷೇತ್ರದಲ್ಲಿನ ಭಾರತೀಯ ಪ್ರತಿಭೆಗಳನ್ನು ಹೊಗಳಿದ್ದಾರೆ.

➡ ಪುಟ ೪

ಪುಣೆ ಜಾತ್ರೆಯಲ್ಲಿ ಮಾರಾಟ | ತನಿಖೆಗೆ ವಿಶೇಷ ತಂಡ

ಬೆಡ್‌ಶೀಟ್‌ನಲ್ಲಿ ಪಾಕ್ ಲೇಬಲ್

• **ಪುಣೆ:** ಪಿಂಪ್ರಿ-ಚಿಂಚಾಡದ ಧಾರ್ಮಿಕ ಜಾತ್ರೆಯೊಂದರಲ್ಲಿ ಖರೀದಿಸಿದ ಬೆಡ್‌ಶೀಟ್‌ನಲ್ಲಿ ಮೇಡ್ ಇನ್ ಪಾಕಿಸ್ತಾನ್ ಲೇಬಲ್ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸ್ ತನಿಖೆ ಆರಂಭವಾಗಿದೆ. ಚಿಂಚಾಡ ಪ್ರದೇಶದ ಮೋರ್ಯ ಗೋಸಾವಿ ದೇವಸ್ಥಾನದ ಸಂಕಷ್ಟ ಚತುರ್ಥಿ ಜಾತ್ರೆಯ ಮಳಿಗೆಯಿಂದ ಮಹಿಳೆಯೊಬ್ಬರು ಈ ಬೆಡ್‌ಶೀಟ್ ಖರೀದಿಸಿದ್ದರು.

ಖರೀದಿಸುವಾಗ ಸಾಮಾನ್ಯವಾಗಿಯೇ ಇದ್ದ ಬೆಡ್‌ಶೀಟ್ ವಾಶ್ ಮಾಡಿದ ನಂತರ ಮೇಡ್ ಇನ್ ಪಾಕಿಸ್ತಾನ್ ಲೇಬಲ್ ಇರುವುದು ಮಹಿಳೆಯ ಗಮನಕ್ಕೆ ಬಂದಿದೆ. ಇದರಿಂದ ಆತಂಕಗೊಂಡ ಅವರು, ಪಾಕಿಸ್ತಾನದಲ್ಲಿ ತಯಾರಾದ ಉತ್ಪನ್ನ ಸ್ಥಳೀಯ ಮಾರುಕಟ್ಟೆಗೆ ಹೇಗೆ ಬಂದಿತು ಎಂದು ಪ್ರಶ್ನಿಸಿ ಸಾಮಾಜಿಕ ಮಾಧ್ಯಮದಲ್ಲಿ ವಿಡಿಯೋ ಹಂಚಿಕೊಂಡಿದ್ದರು. ಈ ವಿಡಿಯೋ ವೈರಲ್ ಬೆನ್ನಲ್ಲೇ ಅಧಿಕಾರಿಗಳು ಪ್ರಕರಣದ ಪರಿಶೀಲನೆಗೆ ಮುಂದಾಗಿದ್ದಾರೆ.

ತನಿಖಾ ತಂಡ: ಪಿಂಪ್ರಿ-ಚಿಂಚಾಡ ಪೊಲೀಸರು ಪ್ರಕರಣದ ತನಿಖೆಗಾಗಿ ವಿಶೇಷ ತಂಡ ರಚಿಸಿದ್ದು, ಬೆಡ್‌ಶೀಟ್‌ನ ಮೂಲ ಮತ್ತು ಪೂರೈಕೆ ಜಾಲ ಪತ್ತೆಹಚ್ಚುತ್ತಿದ್ದಾರೆ. ಯಾವುದೇ ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಕ್ರಮ ಕೈಗೊಳ್ಳುವಂತೆ ಪಿಂಪ್ರಿ-ಚಿಂಚಾಡ ಮಹಾನಗರ ಪಾಲಿಕೆಗೆ ಪೊಲೀಸರು ಪತ್ರ ಬರೆದಿದ್ದಾರೆ. ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಬುಧವಾರದ ಆಚರಣೆಯ ಸಂದರ್ಭದಲ್ಲಿ ಈ ಬೆಡ್‌ಶೀಟ್ ಖರೀದಿಸಲಾಗಿತ್ತು.




ಉತ್ಪನ್ನದ ಮೂಲದ ಪತ್ತೆ ಕಾರ್ಯ

ಬೆಡ್‌ಶೀಟ್ ಎಲ್ಲಿಂದ ಬಂದಿದೆ ಮತ್ತು ವ್ಯಾಪಾರಿಗೆ ಯಾರು ಪೂರೈಸಿದ್ದಾರೆ ಎಂಬುದನ್ನು ತನಿಖಾಧಿಕಾರಿಗಳು ಪರಿಶೀಲಿಸುತ್ತಿದ್ದಾರೆ. ಇತ್ತೀಚೆಗಷ್ಟೇ ಮಹಾರಾಷ್ಟ್ರದ ಸಂಭಾಜಿನಗರ ಜಿಲ್ಲೆಯಲ್ಲಿ ಮೇಡ್ ಇನ್ ಪಾಕಿಸ್ತಾನ್ ಲೇಬಲ್ ಹೊಂದಿದ್ದ ಸೌಂದರ್ಯವರ್ಧಕ ಉತ್ಪನ್ನಗಳನ್ನು ಮಾರಾಟ ಮಾಡಿದ ಆರೋಪದ ಮೇಲೆ ಮೂವರನ್ನು ಬಂಧಿಸಲಾಗಿತ್ತು.

ಅಡುಗೆ ಎಣ್ಣೆ ಪ್ಯಾಕಿಂಗ್‌ಗೆ ಏಕರೂಪತೆ

• **ಹೊಸದಿಲ್ಲಿ:** ದೇಶದಲ್ಲಿ ಮಾರಾಟವಾಗುವ ಖಾದ್ಯ ತೈಲಗಳ (ಅಡುಗೆ ಎಣ್ಣೆ) ಪ್ಯಾಕಿಂಗ್‌ನಲ್ಲಿ ಏಕರೂಪತೆ ತರಲು ಕೇಂದ್ರ ಸರ್ಕಾರ ಮಹತ್ವದ ನಿರ್ಧಾರ ಕೈಗೊಂಡಿದೆ. ಅಂದರೆ, ಇನ್ನು ಮುಂದೆ 100 ಮಿ.ಲೀ. 200 ಮಿ.ಲೀ. 500 ಮಿ.ಲೀ. 1 ಲೀ. 2 ಲೀ. 5 ಲೀ.ನಂಥ ಪ್ಯಾಕ್‌ಗಳಲ್ಲಿ ಎಣ್ಣೆಯನ್ನು ಮಾರಾಟ ಮಾಡಲು ಅನುಮತಿ ಸಿಗಲಿದೆ. ಗ್ರಾಹಕರು ವಿವಿಧ ಕಂಪನಿಗಳ ಎಣ್ಣೆಗಳ ಬೆಲೆಯನ್ನು ಸುಲಭವಾಗಿ ಹೋಲಿಕೆ ಮಾಡಲು ಅನುಕೂಲವಾಗುವಂತೆ ಪ್ರಮಾಣೀಕೃತ ಪ್ಯಾಕಿಂಗ್ ಗಾತ್ರಗಳನ್ನು ಕಡ್ಡಾಯಗೊಳಿಸಲಾಗಿದೆ.



➡ ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: **2,65,000** (2,75,000) ಅಪರಂಜಿ ಚಿನ್ನ: **1,52,730** (1,55,730) ಆಭರಣ ಚಿನ್ನ: **1,40,000** (1,42,750) ಚಿನ್ನ 10 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

$1 = ₹95.27

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಹುಬ್ಬಳ್ಳಿ: 220/110/11ಕೆ.ವಿ ವಿದ್ಯುತ್ ಸ್ವೀಕರಣಾ ಕೇಂದ್ರ ಬಿಡ್ನಾಳದಿಂದ ಹೊರಡುವ ಎಫ್ 04 ಬೆಳಗಲಿ ಎನ್‌ಜೆವೈ ಫೀಡರ್ ಮೇಲೆ ತುರ್ತು ನಿರ್ವಹಣಾ ಕಾರ್ಯದ ನಿಮಿತ್ತ ಜೂ. 7ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯವಾಗಲಿದೆ. ಅಂದು ಬೆಳಗ್ಗೆ 10 ರಿಂದ ಸಂಜೆ 6 ರ ವರೆಗೆ ಬುಡರಸಿಂಗಿ, ಬೆಳಗಲಿ, ಬಮ್ಮಸಮುದ್ರ, ಇನಾಂವೀರಾಪುರ, ಕೊಟಗೊಂಡಹುನಸಿ, ಕೆಎಲ್‌ಇ ಸಂಸ್ಥೆ, ಇಂಡಸ್ಟ್ರೀಯಲ್ ಪ್ರದೇಶ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಹೆಸ್ಕಾಂನ ಗ್ರಾಮೀಣ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪದಾಧಿಕಾರಿಗಳ ನೇಮಕ

ಹುಬ್ಬಳ್ಳಿ: ಜನತಾದಳ (ಜಾತ್ಯಾತೀತ) ಪಕ್ಷ ಸಂಘಟಿಸುವ ನಿಟ್ಟಿನಲ್ಲಿ ವಿವಿಧ ಘಟಕಗಳಿಗೆ ಪದಾಧಿಕಾರಿಗಳನ್ನು ನೇಮಕ ಮಾಡಾಗಿದೆ ಎಂದು ಹು-ಧಾ ಮಹಾನಗರ ಜಿಲ್ಲಾ ಜನತಾದಳ (ಜಾತ್ಯಾತೀತ) ಜಿಲ್ಲಾಧ್ಯಕ್ಷ ಗುರುರಾಜ ಹುಣಸಿಮರದ ಹೇಳಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರ ಆದೇಶದ ಮೇರೆಗೆ ಜೆಡಿಎಸ್ ಮುಖ್ಯ ಘಟಕದ ಕಾರ್ಯಾಧ್ಯಕ್ಷರನ್ನಾಗಿ ಗಂಗಾಧರ ಪೆರೂರ, ಅಹ್ಮದ್ ಅರಶಿಕೇರಿ, ಹಿರಿಯ ಉಪಾಧ್ಯಕ್ಷರನ್ನಾಗಿ ತುಳಸಿಕಾಂತ ಖೋಡೆ, ಮಾರುತಿ ಹಿಂಡಸಗೇರಿ, ಉಪಾಧ್ಯಕ್ಷರನ್ನಾಗಿ ಆನಂದ ಹಬೀಬ್, ಗುರಯ್ಯಸ್ವಾಮಿ ವಿರಕ್ತಮಠ, ಶ್ರೀಕಾಂತ ತೆಲಗಾರ, ಶರಣಪ್ಪ ತಲ್ಲೂರ, ಮಹಾಪ್ರಧಾನ ಕಾರ್ಯದರ್ಶಿಯಾಗಿ ಶ್ರೀಕಾಂತ ಮುಗಜಿಗೊಂಡಿ, ಪ್ರಧಾನ ಕಾರ್ಯದರ್ಶಿಗಳನ್ನಾಗಿ ವೀರೇಶ ಕುಬಸದ, ಗೌಸುಸಾಬ್ ನದಾಫ್, ಸುವರ್ಣಾ ಪರಪ್ಪಗೌಡರ, ಎಂ.ಎ. ಪಠಾಣ, ಕಾರ್ಯದರ್ಶಿಗಳನ್ನಾಗಿ ವೀರನಗೌಡ ಪಾಟೀಲ, ನೇಮಚಂದ್ರ ಹನಸಿ, ನಜೀರ ಅಹ್ಮದ್ ಸಂಶಿ, ಇನಾಯಿತ ಹೆಬ್ಬಳ್ಳಿ, ನಾಗಭೂಷಣ ಕಾಳೆ, ಕರಿಯಪ್ಪ ಪೂಜಾರ, ಮೊಸೆಸ್ ಬೆಂಗಳೂರು, ಶಾಹೀದ್ ನದಾಫ್ ಅವರನ್ನು ನೇಮಕ ಮಾಡಲಾಗಿದೆ. ಹು-ಧಾ ಮಹಾನಗರ ಜಿಲ್ಲಾ ಜೆಡಿಎಸ್ ವಿಧಾನಸಭಾ ಕ್ಷೇತ್ರಗಳಾದ ಹು-ಧಾ ಪಶ್ಚಿಮ ಕ್ಷೇತ್ರಕ್ಕೆ ಸುಧೀರ ಕ್ಷತ್ರೀಯ, ಪೂರ್ವ ಕ್ಷೇತ್ರಕ್ಕೆ ಶಂಕರ ಪವಾರ, ಸೆಂಟ್ರಲ್ ಕ್ಷೇತ್ರಕ್ಕೆ ಸಿದ್ದಲಿಂಗೇಶ್ವರ ಮಹಾಂತೊಡೆಯರ, ಧಾರವಾಡ ನಗರ ಘಟಕ ಕ್ಷೇತ್ರಕ್ಕೆ ಬಸವರಾಜ ಕುರಟ್ಟಿಮಠ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಹು-ಧಾ ಮಹಾನಗರ ಜಿಲ್ಲಾ ಜೆಡಿಎಸ್ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರಾಗಿ ಮಂಜುನಾಥ ಹಗೇದಾರ, ಮಹಿಳಾ ಘಟಕದ ಅಧ್ಯಕ್ಷರಾಗಿ ಪೂರ್ಣಿಮಾ ಸವದತ್ತಿ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷರಾಗಿ ಬಾಷಾಸಾಬ್ ಮುದಗಲ್, ಯುವ ಘಟಕದ ಅಧ್ಯಕ್ಷರಾಗಿ ಭೀಮರಾಯ ಗುಡೇನಕಟ್ಟಿ, ಯುವ ಘಟಕದ ಕಾರ್ಯಾಧ್ಯಕ್ಷರಾಗಿ ಪುನೀತ ಅಡಿಗಲ್ಲ ನೇಮಕವಾಗಿದ್ದಾರೆ. ನೇಮಕವಾದ ಪದಾಧಿಕಾರಿಗಳಿಗೆ ಶೀಘ್ರದಲ್ಲಿಯೇ ರಾಜ್ಯ ಘಟಕದ ನಾಯಕರ ಸಮ್ಮುಖದಲ್ಲಿ ಕಾರ್ಯಕ್ರಮ ಆಯೋಜಿಸಿ ನೇಮಕಾತಿ ಪತ್ರ ವಿತರಣೆ ಮಾಡಲಾಗುವುದು ಎಂದರು.

ಏಜೆಂಟರ ಹಾವಳಿ ತಡೆಯಿರಿ



ನವಲಗುಂದ: ತಾಲೂಕಿನ ರಾಷ್ಟ್ರೀಕೃತ ಬ್ಯಾಂಕ್ ಸೇರಿದಂತೆ ವಿವಿಧ ಬ್ಯಾಂಕ್‌ಗಳಲ್ಲಿ ಕೃಷಿ ಸಾಲ ಪಡೆಯಲು ರೈತರು ತೀವ್ರ ತೊಂದರೆ ಅನುಭವಿಸುತ್ತಿದ್ದು, ಮಧ್ಯವರ್ತಿಗಳ ಹಾವಳಿ ಮಿತಿಮೀರಿದೆ ಎಂದು ಆರೋಪಿಸಿ ಶಿವಪ್ಪ ಲಕ್ಷ್ಮಣ ನಾಯಕ ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ತಹಶೀಲ್ದಾರ್‌ಗೆ ಮನವಿ ಪತ್ರ ಸಲ್ಲಿಸಿದರು.

ರೈತರು ನೇರವಾಗಿ ಬ್ಯಾಂಕಿಗೆ ಹೋದರೆ ಸಾಲ ಇಲ್ಲ ಎನ್ನುವ ಸಿಬ್ಬಂದಿ, ಏಜೆಂಟರ ಮೂಲಕ ಹೋದರೆ ಸುಲಭವಾಗಿ ರೈತರಿಗೆ ಸಾಲ ದೊರೆಯುತ್ತದೆ. ಕೃಷಿ ಚಟುವಟಿಕೆಗಳಿಗಾಗಿ ಬ್ಯಾಂಕುಗಳಿಗೆ ನೇರವಾಗಿ ತೆರಳಿದಾಗ ಸಿಬ್ಬಂದಿ ಸೂಕ್ತ ಮಾಹಿತಿ ನೀಡದೆ ಸತಾಯಿಸುತ್ತಿದ್ದಾರೆ. ಜಮೀನಿನ ಮೇಲೆ ಬೆಳೆ ಸಾಲ ನೀಡಲು ನಿರಾಕರಿಸಿ ವಾಪಸ್ ಕಳುಹಿಸುತ್ತಿದ್ದಾರೆ. ಆದರೆ ಅದೇ ಬ್ಯಾಂಕ್‌ಗಳಿಗೆ ಏಜೆಂಟರನ್ನು ಕರೆದುಕೊಂಡು ಹೋದರೆ ಯಾವುದೇ ಅಡೆತಡೆಯಿಲ್ಲದೆ ಸುಲಭವಾಗಿ ಸಾಲ ಮಂಜೂರು ಮಾಡಲಾಗುತ್ತಿದೆ. ಇದರಿಂದಾಗಿ ರೈತರು ಏಜೆಂಟರಿಗೆ ದೊಡ್ಡ ಮೊತ್ತದ ಕಮಿಷನ್ ಹಣ ನೀಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ಆರೋಪಿಸಿದ್ದಾರೆ. ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಧಾರವಾಡ ಜಿಲ್ಲಾ ಸಂಚಾಲಕ ನಿಂಗಪ್ಪ ಕೆಳಗೇರಿ ಮಾತನಾಡಿ, ಬ್ಯಾಂಕ್ ಸಿಬ್ಬಂದಿ ದೊಡ್ಡ ರೈತರಿಗೆ ಹಾಗೂ ಪ್ರಭಾವಿಗಳಿಗೆ ಸಲೀಸಾಗಿ ಸಾಲ ನೀಡುತ್ತಿದ್ದಾರೆ. ಆದರೆ ಬಡ, ಸಣ್ಣ ಮತ್ತು ಮಧ್ಯಮ ವರ್ಗದ ರೈತರನ್ನು ಕಡೆಗಣಿಸಿ ಸುಲಿಗೆ ಮಾಡುತ್ತಿದ್ದಾರೆ. ಇದರಿಂದಾಗಿ ರೈತರು ಸಾಲದ ಸುಳಿಗೆ ಸಿಲುಕಿ ತತ್ತರಿಸುತ್ತಿದ್ದಾರೆ ಎಂದು ದೂರಿದ್ದಾರೆ. ಸಾಮಾಜಿಕ ಕಾರ್ಯಕರ್ತ ಮಾಬುಸಾಬ ಯರಗುಪ್ಪಿ ಮಾತನಾಡಿ, ಬ್ಯಾಂಕ್ ಸಿಬ್ಬಂದಿ ನಿಗದಿತ ಸಮಯ ಪಾಲನೆ ಮಾಡುತ್ತಿಲ್ಲ ಎಂದು ಆರೋಪಿಸಿದರು. ರೈತ ಮುಖಂಡ ಮಲ್ಲಿಕಾರ್ಜುನಸ್ವಾಮಿ ಮಠಪತಿ, ದಿಲೀಪ್ ರತ್ನಾಕರ, ಶಿವಲಿಂಗಯ್ಯ ಹಿರೇಮಠ, ಬಸವರಾಜ ಮಲ್ಲದಾಸರ, ತನ್ವಿರ ನದಾಫ ಸೇರಿದಂತೆ ಇನ್ನಿತರರಿದ್ದರು.



ಹುಬ್ಬಳ್ಳಿ: ಸವದತ್ತಿಯ ರೇಣುಕಾ ಯಲ್ಲಮ್ಮದೇವಿಯ ಗುಡ್ಡದಲ್ಲಿ ವಿಶ್ವ ಪರಿಸರ ದಿನದ ಅಂಗವಾಗಿ ದೇವಸ್ಥಾನದ ಆವರಣದಲ್ಲಿ ಮಾತೋಶ್ರೀ ಡಾ. ಹುಲಿಗೆಮ್ಮಾ ಪೋಸಾ ಅಮ್ಮನವರು ಮತ್ತು ಯಲ್ಲಮ್ಮದೇವಿ ದೇವಸ್ಥಾನದ ಉಪಕಾರ್ಯದರ್ಶಿ ನಾಗರತ್ನ ಚೋಳನ ಅವರು ಸಸಿ ನೆಟ್ಟು ವನಮಹೋತ್ಸವವನ್ನು ಆಚರಿಸಲಾಯಿತು. ಆಡಳಿತ ಮಂಡಳಿಯಶ್ರೀಧರ ಗಲಗಲಿ, ಶೀತಲ್ ಕಡಹಟ್ಟಿ, ಶ್ರೀಧರ ಕನಮಕಲ್, ಚಂದ್ರು, ಚೇತನ ಚಲವಾದಿ, ಅರ್ಜುನ ಮಾದರ, ರಾಜೇಶ ಸಂಕನಾಳ, ದೇವಸ್ಥಾನದ ಪ್ರಧಾನ ಅರ್ಚಕ ರವಿಕುಮಾರ ಮಡ್ಡಿ ಇದ್ದರು.

ಜೂ.14ಕ್ಕೆ ಪ್ರತಿಬಿಂಬ ವಿವಿಧ ಸ್ಪರ್ಧೆ: ಭಟ್

ಹುಬ್ಬಳ್ಳಿ: ಬೆಂಗಳೂರಿನ ಅಖಿಲ ಹವ್ಯಕ ಮಹಾಸಭಾ ಮತ್ತು ಹುಬ್ಬಳ್ಳಿ- ಧಾರವಾಡ ಹವ್ಯಕ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಜೂ.14 ರಂದು ಹವ್ಯಕ ಸಮುದಾಯದ ಪ್ರತಿಬಿಂಬ ವಿವಿಧ ಸ್ಪರ್ಧಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಸ್ಥೆಯ ಅಧ್ಯಕ್ಷ ವಿ.ಎಂ.ಭಟ್ ತಿಳಿಸಿದ್ದಾರೆ. ಈ ಕಾರ್ಯಕ್ರಮದಲ್ಲಿ ಹವ್ಯಕರ ಹಾಡುಗಳು, ಜನಪದ ಹಾಡುಗಳು, ಚಿತ್ರಕಲೆ, ಹವ್ಯಕ ಭಾಷೆಯಲ್ಲಿ ಆಶುಭಾಷಣ, ಛದ್ಮವೇಶ, ಹವ್ಯಕರ ತಿಂಡಿ ಮೊದಲಾದ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ. ವಿವಿಧ ವಯಸ್ಸಿನ ಗುಂಪುಗಳನ್ನಾಗಿ ಮಾಡಿದ್ದು ಹವ್ಯಕರ ಸದಸ್ಯರು ಭಾಗವಹಿಸಬಹುದಾಗಿದೆ. ಇದರಲ್ಲಿ ವಿಜೇತರಾದವರು ಬೆಂಗಳೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಸ್ಪರ್ಧೆಗೆ ಅರ್ಹರಾಗುತ್ತಾರೆ. ಹವ್ಯಕ ಸಮುದಾಯ ಭವನದಲ್ಲಿ ಬೆಳಗ್ಗೆ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿವೆ. ಮಧ್ಯಾಹ್ನ 3 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದ್ದು, ಅಧ್ಯಕ್ಷತೆ ವಿ.ಎಂ.ಭಟ್ ವಹಿಸಲಿದ್ದಾರೆ. ಅತಿಥಿಗಳಾಗಿ ಅಖಿಲ ಹವ್ಯಕಮಹಾಸಭಾ ಉಪಾಧ್ಯಕ್ಷ ಶ್ರೀಧರ ಭಟ್ ಕೆಕ್ಕಾರು, ಹವ್ಯಕ ಸಂಸ್ಥೆ ಉಪಾಧ್ಯಕ್ಷರಾದ ಶಿವರಾಮ ಹೆಗಡೆ ಹಿತ್ಲಳ್ಳಿ, ಶ್ರೀಕಾಂತ ಹೆಗಡೆ ಮತ್ತು ವಸಂತ ಭಟ್, ಗೌರವ ಕಾರ್ಯದರ್ಶಿ ಸುದರ್ಶನ ಹೇಮಾದ್ರಿ, ಹವ್ಯಕ ಮಹಿಳಾ ಮಂಡಳದ ಅಧ್ಯಕ್ಷೆ ವೀಣಾ ಹೆಗಡೆ, ಅನಿತಾ ವಸಂತ ಭಟ್ ಅಖಿಲ ಹವ್ಯಕ ಮಹಾಸಭಾದ ಅಧ್ಯಕ್ಷ ಡಾ.ಗಿರಿಧರ ಕಜೆ, ಪ್ರಮೋದ ಹೆಗಡೆ ಮೊದಲಾದವರು ಭಾಗಹಿಸಲಿದ್ದಾರೆ. ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಿರಿಯನ್ನು ಸನ್ಮಾನಿಸಲಾಗುತ್ತದೆ. ಅರುಣಕುಮಾರ ಹಬ್ಬು (ಸಾಹಿತ್ಯ), ಮೋಹನನ ಹೆಗಡೆ (ಪತ್ರಿಕೋದ್ಯಮ), ದತ್ತಾತ್ರೆಯ ಭಟ್, (ಗೋ ಸೇವೆ) ಸುಮಂಗಲಾ ಭಟ್ (ಶಿಕ್ಷಣ), ಆರ್ .ಜಿ.ಭಟ್ ವರ್ಗಾಸುರ (ಯಕ್ಷಗಾನ), ಆರ್.ಕೆ.ಹೆಗಡೆ (ಸಮಾಜ ಸೇವೆ) ಸನ್ಮಾನಿಸಲಾಗುತ್ತದೆ. ಸಂಜೆ ಸುಧನ್ವಾರ್ಜುನ ಕಾಳಗ ಯಕ್ಷಗಾನ ಏರ್ಪಡಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.



ಹುಬ್ಬಳ್ಳಿ: ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ದಿ. ಗುದ್ಲೆಪ್ಪ ಹಳ್ಳಿಕೇರಿ ಹಾಗೂ ಮಾಜಿ ಸಿಎಂ ಎಸ್.ಆರ್. ಬೊಮ್ಮಾಯಿ ಅವರ ಜನ್ಮದಿನ ಅಂಗವಾಗಿ ಇಲ್ಲಿಯ ಇಂದಿರಾ ಗ್ಲಾಸ್ ಹೌಸ್‌ನಲ್ಲಿರುವ ಅವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಯಿತು. ಸಂಸದ ಬಸವರಾಜ ಬೊಮ್ಮಾಯಿ, ಉಪಮೇಯರ್ ಸಂತೋಷ ಚವ್ಹಾಣ, ಪಾಲಿಕೆ ಸದಸ್ಯ ತಿಪ್ಪಣ್ಣ ಮಜ್ಜಗಿ, ರಾಮಣ್ಣ ಬಡಿಗೇರ, ಬೀರಪ್ಪ ಖಂಡೇಕರ, ಪಾಂಡುರಂಗ ಪಾಟೀಲ, ಚನ್ನು ಪಾಟೀಲ, ತುಳಸಿದಾಸ ಕೋಡೆ, ಈಶ್ವರಗೌಡ ಪಾಟೀಲ, ವಿಜಯಾನಂದ ಹೊಸಕೋಟೆ , ಬಾಳು ಮಗಜಿಗೊಂಡಿ ಇದ್ದರು.

23ನೇ ದಿನವೂ ಮುಂದುವರಿದ ಸತ್ಯಾಗ್ರಹ | ವಿವಿಧ ಸಂಘಟನೆ ಬೆಂಬಲ

ಅಧಿಸೂಚನೆ ಹೊರಡಿಸಲು ಆಗ್ರಹ



ಧಾರವಾಡ: ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸಬೇಕೆಂದು ಒತ್ತಾಯಿಸಿ ಧಾರವಾಡ ಸ್ವಾಭಿಮಾನಿ ಹೋರಾಟ ಸಮಿತಿಯು ಹಮ್ಮಿಕೊಂಡಿರುವ ಧರಣಿ ಸತ್ಯಾಗ್ರಹವು ಶನಿವಾರ 23ನೇ ದಿನಕ್ಕೆ ಕಾಲಿಟ್ಟಿದೆ.

ಹೋರಾಟಗಾರ ಬಿ.ಡಿ.ಹಿರೇಮಠ ಮಾತನಾಡಿ, ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ಈ ಭಾಗದ ಜನರ ಬಹುಕಾಲದ ನ್ಯಾಯ ಸಮ್ಮತ ಬೇಡಿಕೆ. ಸರ್ಕಾರ ಕೇವಲ ಬಾಯಿಮಾತಿನ ಭರವಸೆಗಳನ್ನು ನೀಡುತ್ತ ಕಾಲಹರಣ ಮಾಡುವುದು ನಿಲ್ಲಿಸಲು ಹೇಳಿದರು.

ಮುಖ್ಯಮಂತ್ರಿಗಳು ಹಾಗೂ ನಗರಾಭಿವೃದ್ಧಿ ಸಚಿವರು ತಕ್ಷಣವೇ ಈ ಕುರಿತು ಅಧಿಕೃತವಾಗಿ ಅಧಿಸೂಚನೆ ಹೊರಡಿಸಬೇಕು. ಅಲ್ಲಿಯವರೆಗೆ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದು ಹಿರೇಮಠ ಸ್ಪಷ್ಟಪಡಿಸಿದರು.

ಧರಣಿ ಸತ್ಯಾಗ್ರಹದಲ್ಲಿ ಧಾರವಾಡ ವಕೀಲರ ಸಂಘದ ಅಧ್ಯಕ್ಷ ನೇಗನಾಳ, ಮೋಹನ ರಾಮದುರ್ಗ, ಅಭಿನಂದ ಹಿರೇಮಠ, ಕುಶಾಲಾ ಕಾಂಬಳೆ, ಡಾ.ಮಂಜುನಾಥ ಹೊಂಗಲದ, ಕಾವ್ಯಾಶಯಾಲಗಿ, ಜೋಶನಾ ಧಾನವೆ, ಸಂಜನಾ ಮೂದೋಳ, ಲಕ್ಷ್ಮೀ ಬಡಿಗೇರ, ಚೈತ್ರಾ ದಂಡಿನ, ಶಿವಲಿಂಗಯ್ಯಾ ಹೀರೆಮಠ, ಶಿವಾನಂದ ಕವಳಿ ಇದ್ದರು.

ವಿಳಂಬ ಸಲ್ಲ
ಹುಬ್ಬಳ್ಳಿ-ಧಾರವಾಡ ಪಾಲಿಕೆಯಿಂದ ಧಾರವಾಡವನ್ನು ಮುಕ್ತಗೊಳಿಸಿ, ಸ್ವತಂತ್ರ ಆಡಳಿತ ವ್ಯವಸ್ಥೆ ಕಲ್ಪಿಸುವುದರಿಂದ ಮಾತ್ರ ಸ್ಥಳೀಯ ಸಮಸ್ಯೆಗಳಿಗೆ ಶೀಘ್ರ ಪರಿಹಾರ ಸಿಗಲು ಸಾಧ್ಯ. ಸರ್ಕಾರ ವಿಳಂಬ ನೀತಿ ಕೈಬಿಟ್ಟು ತಕ್ಷಣವೇ ಆದೇಶ ಹೊರಡಿಸಬೇಕು ಎಂದು ಹೋರಾಟಗಾರ ಬಿ.ಡಿ.ಹಿರೇಮಠ ಆಗ್ರಹಿಸಿದ್ದಾರೆ.

ಪ್ರತ್ಯೇಕತೆ ಅಭಿವೃದ್ಧಿಗೆ ಪೂರಕ

ಹೈಕೋರ್ಟ್ ವಕೀಲರ ಸಂಘವು ಧಾರವಾಡದ ಪ್ರತ್ಯೇಕತೆ ಅಭಿವೃದ್ಧಿಗೆ ಪೂರಕ. ಈ ಹೋರಾಟಕ್ಕೆ ಕಾನೂನಾತ್ಮಕ ಹಾಗೂ ನೈತಿಕವಾಗಿ ವಕೀಲರ ಸಮೂಹ ಸಂಪೂರ್ಣ ಬೆಂಬಲವಿದೆ ಎಂದು ಪದಾಧಿಕಾರಿಗಳು ಘೋಷಿಸಿದರು. ಧಾರವಾಡದ ಜನರ ಸ್ವಾಭಿಮಾನದ ಈ ಹೋರಾಟಕ್ಕೆ ಶಿವಸೇನಾ ಸದಾ ಜೊತೆಗಿರಲಿದ್ದು, ಸರ್ಕಾರ ಜನಸಾಮಾನ್ಯರ ಧ್ವನಿಗೆ ಓಗೊಡದಿದ್ದರೆ ಮುಂದಿನ ದಿನಗಳಲ್ಲಿ ತೀವ್ರ ಸ್ವರೂಪದ ಹೋರಾಟ ರೂಪಿಸುವುದಾಗಿ ಎಚ್ಚರಿಸಿತು. ಹೆಬಿಕ್ ಚರ್ಚ್, ಮಹಿಳಾ ಮಂಡಳ ಸೇರಿದಂತೆ ವಿವಿಧ ಪ್ರಗತಿಪರ ಸಂಘಟನೆ ಬೆಂಬಲಿಸಿ, ಧಾರವಾಡಕ್ಕೆ ಸತತ ಅನ್ಯಾಯವಾಗುತ್ತಿದ್ದು, ಪ್ರತ್ಯೇಕತೆಯಿಂದ ಧಾರವಾಡದ ಸಮಗ್ರ ವಿಕಾಸ ಸಾಧ್ಯ ಎಂದು ಒಕ್ಕೊರಲಿನಿಂದ ಪ್ರತಿಪಾದಿಸಿದವು.

- ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸಬೇಕೆಂದು ಒತ್ತಾಯಿಸಿ ಧಾರವಾಡ ಸ್ವಾಭಿಮಾನಿ ಹೋರಾಟ ಸಮಿತಿಯು ಹಮ್ಮಿಕೊಂಡಿರುವ ಧರಣಿ ಸತ್ಯಾಗ್ರಹಕ್ಕೆ ದಿನದಿಂದ ದಿನಕ್ಕೆ ಹೋರಾಟಕ್ಕೆ ವ್ಯಾಪಕ ಬೆಂಬಲ ವ್ಯಕ್ತ
- ಶನಿವಾರ ಹೈಕೋರ್ಟ್ ವಕೀಲರ ಸಂಘ, ಶಿವಸೇನಾ ಪಕ್ಷ, ಹೆಬಿಕ್ ಚರ್ಚ್, ಮಹಿಳಾ ಮಂಡಳ ಸೇರಿ ವಿವಿಧ ಸಂಘಟನೆಗಳಿಂದ ಬೆಂಬಲ ಘೋಷಣೆ

ಆಪರೇಷನ್ ಫುಟ್‌ಪಾತ್ ಕಾರ್ಯಾಚರಣೆ

ಹುಬ್ಬಳ್ಳಿ: ಹುಬ್ಬಳ್ಳಿ- ಧಾರವಾಡ ಮಹಾನಗರ ಪಾಲಿಕೆ ಅಧಿಕಾರಿಗಳು 'ಆಪರೇಷನ್ ಫುಟ್ ಪಾತ್' ಕಾರ್ಯಾಚರಣೆ ಮೂಲಕ ನಗರದ ಮಾರುಕಟ್ಟೆ ಪ್ರದೇಶ, ಪ್ರಮುಖ ರಸ್ತೆ ಪಕ್ಕ ಪಾದಚಾರಿ ಮಾರ್ಗ ಅತಿಕ್ರಮಿಸಿಕೊಂಡು ಇಟ್ಟುಕೊಂಡಿರುವ ಗೂಡಂಗಡಿಗಳು ಮತ್ತು ಕಟ್ಟಡಗಳನ್ನು ಶನಿವಾರ ತೆರವುಗೊಳಿಸಿದರು.

ಪಾಲಿಕೆ ಆಯುಕ್ತ ರುದ್ರೇಶ ಘಾಳಿ ಮಾರ್ಗದರ್ಶನದಲ್ಲಿ ವಲಯಾಧಿಕಾರಿಗಳ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಿ ನಗರದ ಕೊಪ್ಪಿಕರ್ ರಸ್ತೆ, ಗೋಕುಲ ರಸ್ತೆಯ, ಬ್ರಾಡವೇ, ಮರಾಠಗಲ್ಲಿ, ದುರ್ಗದ ಬೈಲ್, ಶಾ ಬಜಾರ, ಸಿಬಿಟಿ ಸೇರಿ 12 ವಲಯ ಕಚೇರಿ ವ್ಯಾಪ್ತಿಯ ಪಾದಚಾರಿ ಮಾರ್ಗದಲ್ಲಿ ಒತ್ತುವರಿ ತೆರವುಗೊಳಿಸಲಾಯಿತು. ಪಾದಚಾರಿ ಮಾರ್ಗದಲ್ಲಿದ್ದ ಬಟ್ಟೆ, ಅಲಂಕಾರಿಕ ವಸ್ತು, ಚಪ್ಪಲಿ ಹಾಗೂ ಇನ್ನಿತರ ವಸ್ತುಗಳ ಮಾರಾಟಕ್ಕೆ ಇಟ್ಟಿದ್ದ ಗೂಡಂಗಡಿಗಳನ್ನು ತೆರವು ಮಾಡಲಾಯಿತು. ಯುರೇಕಾ ಟವರ್ ಎದುರಿನ ಪಾದಚಾರಿ ಮಾರ್ಗದಲ್ಲಿ ವ್ಯಾಪಾರಿಯೊಬ್ಬರು ಸಿಮೆಂಟ್, ಸರಳು ಬಳಸಿ ನಿರ್ಮಿಸಿಕೊಂಡಿದ್ದ ಅಂಗಡಿಯನ್ನು ಅಧಿಕಾರಿಗಳು ತೆರವುಗೊಳಿಸಿದರು. ಸಿಬಿಟಿ, ಮರಾಠಾಗಲ್ಲಿ ಮಾರುಕಟ್ಟೆ ಪ್ರಮುಖ ಪ್ರದೇಶಗಳಾಗಿದ್ದು, ಪಾದಚಾರಿ ರಸ್ತೆ ಸಂಪೂರ್ಣ ತೆರವು ಮಾಡಿ ಸಾರ್ವಜನಿಕರು ಹಾಗೂ ವಾಹನ ಸವಾರರ ಸುಗಮ ಸಂಚಾರಕ್ಕೆ ಅನುಕೂಲ ಮಾಡಿಕೊಡಲಾಗಿದೆ ಎಂದು ವಲಯ ಕಚೇರಿ 8ರ ಅಧಿಕಾರಿ ಚಂದ್ರಶೇಖರ ಮಾಲಿಪಾಟೀಲ ತಿಳಿಸಿದರು. ಗೋಕುಲ ರಸ್ತೆಯ ಬನ್ನಿಗಿಡ ಸ್ಟಾಪ್‌ನಿಂದ ಅಕ್ಷಯ ಪಾರ್ಕ್ ವೃತ್ತದವರೆಗೂ ಕಾರ್ಯಾಚರಣೆ ನಡೆಸಿ, ಎಳನೀರು, ಐಸ್ ಕ್ರೀಮ್, ತಂಪು ಪಾನೀಯ, ಚಾಟ್ ಮಸಾಲ ಮತ್ತು ಬೇಲ್ ಪುರಿ, ಪಾನಿಪುರಿ ಅಂಗಡಿಗಳನ್ನು ತೆರವು ಮಾಡಲಾಯಿತು.

> ಪಾದಚಾರಿ ಮಾರ್ಗವನ್ನು ಒತ್ತುವರಿ ಮಾಡಿಕೊಂಡು ವ್ಯಾಪಾರ ಮಾಡುತ್ತಿದ್ದುದರಿಂದ ಸಂಚಾರ ದಟ್ಟಣೆ ಜತೆಗೆ, ಪಾದಾಚಾರಿಗಳು ಸಂಚರಿಸಲು ಕಷ್ಟವಾಗುತ್ತಿತ್ತು. ಪೊಲೀಸ್ ಸಿಬ್ಬಂದಿ ಸಹಕಾರದಿಂದ 263ಕ್ಕೂ ಹೆಚ್ಚು ಡಬ್ಬಾ ಅಂಗಡಿಗಳನ್ನು ತೆರವು ಮಾಡಿ, ಪಾದಚಾರಿ ಮಾರ್ಗ ಮುಕ್ತಗೊಳಿಸಲಾಗಿದೆ. ಮಹಾನಗರ ಪಾಲಿಕೆಯಿಂದ ಆಪರೇಷನ್ ಫುಟ್ ಪಾತ್ ಅಡಿ ಮುಂದಿನ ನಾಲ್ಕು ತಿಂಗಳು ಪ್ರತಿ ವಾರ ತೆರವು ಕಾರ್ಯಾಚರಣೆ ಮಾಡಲಾಗುವುದು.
> ■ ಡಾ. ರುದ್ರೇಶ ಘಾಳಿ, ಆಯುಕ್ತ, ಹು-ಧಾ ಮಹಾನಗರ ಪಾಲಿಕೆ



ಎಸ್.ಆರ್. ಬೊಮ್ಮಾಯಿ ಜನ್ಮದಿನ: ಪುತ್ಥಳಿಗೆ ಮಾಲಾರ್ಪಣೆ

ಕುಂದಗೋಳ: ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಆರ್. ಬೊಮ್ಮಾಯಿ ಅವರ ಜನ್ಮದಿನದ ಅಂಗವಾಗಿ ಶನಿವಾರ ಪಟ್ಟಣದ ಕೆರೆ ಅಂಗಳದ ಹತ್ತಿರದ ಎಸ್.ಆರ್. ಬೊಮ್ಮಾಯಿ ಪುತ್ಥಳಿಗೆ ಶಾಸಕ ಎಂ.ಆರ್. ಪಾಟೀಲ ಅವರು ಮಾಲಾರ್ಪಣೆ ಮಾಡಿ ಮಾಡಿ ಗೌರವನಮನ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ರಾಜ್ಯ ರಾಜಕಾರಣದಲ್ಲಿ ಎಸ್.ಆರ್. ಬೊಮ್ಮಾಯಿ ಅವರು ಸಲ್ಲಿಸಿದ ಸೇವೆ ಹಾಗೂ ಕುಂದಗೋಳ ಪಟ್ಟಣಕ್ಕೆ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸಿದ , ಅವರ ತಾಲೂಕಿಗೆ ಅವರು ನೀಡಿದ ಕೊಡಿಗೆ , ಆಡಳಿತದ ದೃಷ್ಟಿಕೋನ ಹಾಗೂ ಪ್ರಜಾಪ್ರಭುತ್ವ ಮೌಲ್ಯಗಳ ಬಗ್ಗೆ ಸ್ಮರಿಸಿದರು. ಅವರ ರಾಜಕೀಯ ಬದುಕು ಇಂದಿನ ಪೀಳಿಗೆಗೆ ಮಾರ್ಗದರ್ಶಕವಾಗಿದ್ದು, ರಾಜ್ಯದ ಅಭಿವೃದ್ಧಿಗೆ ಅವರು ನೀಡಿದ ಕೊಡುಗೆ ಸದಾ ಸ್ಮರಣೀಯ ಎಂದರು.

ಈ ಸಂದರ್ಭದಲ್ಲಿ ಮುಖಂಡರಾದ ಸಿ.ಎಂ. ಕಾಳೆ, ದಾನಪ್ಪ ಗಂಗಾಯಿ, ಮಾಲತೇಶ ಶಾಗೋಟಿ, ನಾಗರಾಜ ದೇಶಪಾಂಡೆ, ಈಶ್ವರಪ್ಪ ಗಂಗಾಯಿ,ರಾಮಣ್ಣ ನೆಲಗುಡ್ಡ, ರಾಜು ಶಿವಳ್ಳಿ, ಮಲ್ಲಿಕಾರ್ಜುನ ಪಾಟೀಲ, ವಾಗೇಶ್ ಗಂಗಾಯಿ, ಗಣೇಶ ಕೋಕಾಟೆ, ಹನುಮಂತ ರಣತೂರ, ಮಂಜುನಾಥ ಹಿರೇಮಠ, ಗಂಗಾಧರ ಗುಡೆಮ್ಮನವರ, ವೀರೇಶ ಭಂಡಿವಾಡ ಸೇರಿದಂತೆ ಎಸ್. ಆರ್. ಬೊಮ್ಮಾಯಿ ಅಭಿಮಾನಿಗಳು ಉಪಸ್ಥಿತರಿದ್ದರು.



ಜಮೀರ್‌ಗೆ ಉಪಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ಹೋರಾಟ

ಅಣ್ಣಿಗೇರಿ: ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸಚಿವ ಸಂಪುಟದಲ್ಲಿ ಸೂಕ್ತ ಪ್ರಾತಿನಿಧ್ಯ ದೊರಕಬೇಕಾಗಿದ್ದು ಈ ಹಿನ್ನೆಲೆಯಲ್ಲಿ ಜಮೀರ್ ಅಹ್ಮದ್ ಅವರಿಗೆ ಸಂಪುಟ ವಿಸ್ತರಣೆಯಲ್ಲಿ ಉಪಮುಖ್ಯಮಂತ್ರಿ ಅಥವಾ ಸಚಿವ ಸ್ಥಾನ ನೀಡಬೇಕು. ಇಲ್ಲದಿದ್ದರೆ ಹೋರಾಟ ಮಾಡಲಾಗುವುದು ಎಂದು ಹಸನ್ ಸಾಬ್ ಗೋಡುನಾಯ್ಕ ಹೇಳಿದರು.

ನಗರದ ಅಂಜುಮನ್ ಸಂಸ್ಥೆಯ ಶಾದಿ ಮಹಾಲ್ ಅವರಣದಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ವಿಧಾನಸಭಾ ಚುನಾವಣೆಯ ಆಡಿಯೋ ಸುಳ್ಳು ಆರೋಪಮಾಡಿ ಜಮೀರ್ ಅವರಿಗೆ ಉದ್ದೇಶ ಪೂರ್ವಕ ಸಚಿವ ಸ್ಥಾನ ತಪ್ಪಿಸಿದ್ದಾರೆ ಎಂದು ದೂರಿದರು.

ಅಂಜುಮನ್ ಸಂಸ್ಥೆಯ ಅಧ್ಯಕ್ಷ ಫಕ್ರುಲಿ ಲೋಕಪುರಿ, ಅಣ್ಣಿಗೇರಿ ಸ್ಥಾಯಿ ಸಮಿತಿ ಮಾಜಿ ಚೇರ್ಮನ್ ಬಾಬಾಜಾನ್ ಮುಲ್ಲನ್ನವರ ಹಾಗೂ ಅಣ್ಣಿಗೇರಿ ಸ್ಥಾಯಿ ಸಮಿತಿ ಚೇರ್ಮನ್ ಇಮಾಮಸಾಬ ದರ್ವಾನ ಮಾತನಾಡಿ, ಕರ್ನಾಟಕ ರಾಜ್ಯದಲ್ಲಿ 80 ಲಕ್ಷ ಜನಸಂಖ್ಯೆ ಹೊಂದಿರುವ ನಾವು ಜಮೀರ್ ಅಹ್ಮದ್ ಅವರಿಗೆ ಉಪಮುಖ್ಯಮಂತ್ರಿಯ ಅಥವಾ ಸಚಿವ ಸ್ಥಾನ ನೀಡದಿದ್ದರೆ ಮುಂಬರುವ ದಿನಗಳಲ್ಲಿ ನಾವು ತಕ್ಕ ಪಾಠವನ್ನು ಕಾಂಗ್ರೆಸ್ ಪಕ್ಷಕ್ಕೆ ಕಲಿಸಲಾಗುವುದು ಎಂದರು.

ಮೋದಿನ ಸಾಬ್ ಮುಳಗುಂದ ಇಮಾಮಸಾಬ ದರ್ವಾನ್, ಹಸನ್ ಗಡ್ಡದ ,ಸಾದಿಕ್ ಠಾಣೆದ ನೂರ ಠಾಣೆದ, ನೂರ ಸುಂಕದ, ಹಸನಸಾಬ ಸುಂಕದ, ಖಾದರಸಾಬ ಮುಳಗುಂದ, ಮಾಬುಬುಸಾಬ್ ಕುಡ್ಡಣನವರ, ಹಸನ್ ರೊಕ್ಕದಕಟ್ಟಿ ತಾಜು ದಲಿಲ, ಆಸಿಫ್ ಗುಳೇದಗುಡ್ಡ, ಅಬ್ದುಲ್ ಖಾದರ್ ಸನ್ನುಬಾಯಿ ಇತರರಿದ್ದರು.



ನೆಟ್ಟ ಗಿಡಗಳ ಪೋಷಣೆ ಅವಶ್ಯ: ಪಾಟೀಲ



ಹುಬ್ಬಳ್ಳಿ: ಕೆ.ಎಲ್.ಇ. ಸಂಸ್ಥೆಯ ಶ್ರೀ ಕಾಡಸಿದ್ದೇಶ್ವರ ಕಲಾ ಮಹಾವಿದ್ಯಾಲಯ ಹಾಗೂ ಎಚ್.ಎಸ್. ಕೋತಂಬ್ರಿ ವಿಜ್ಞಾನ ಸಂಸ್ಥೆಯಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಗಿಡ ನೆಡುವ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲೆ ಸುಮಂಗಲಾ ಬಿ. ಪಾಟೀಲ ಅವರು ಗಿಡ ನೆಡುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿ, ಪರಿಸರ ಸಂರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿಯಾಗಿದ್ದು, ವಿದ್ಯಾರ್ಥಿಗಳು ಗಿಡಗಳನ್ನು ನೆಟ್ಟು ಅವುಗಳ ಪೋಷಣೆ ಮಾಡುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದರು.

ಉಪನ್ಯಾಸಕರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಿದರು.

ಗೋಪಾಲ ಪೀರಗಿಗೆ ಪ್ರಶಂಸನಾ ಪತ್ರ



ಕಲಘಟಗಿ: ತಾಲೂಕಿನ ಕಲಘಟಗಿ ಪೊಲೀಸ್ ಠಾಣೆಯ ಗೋಪಾಲ ಪೀರಗಿ, ಸಿಪಿಸಿ–799 ಅವರ ಕರ್ತವ್ಯ ನಿಷ್ಠೆಯನ್ನು ಮೆಚ್ಚಿ ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಪ್ರಶಂಸನಾ ಪತ್ರವನ್ನು ನೀಡಲಾಗಿದೆ.

ಗೋಪಾಲ ಅವರು ಠಾಣೆಯಲ್ಲಿ ದಾಖಲಾಗುವ ಸ್ವತ್ತಿನ ಪ್ರಕರಣಗಳಲ್ಲಿಯ ಆರೋಪಿತರನ್ನು ಪತ್ತೆ ಮಾಡಲು ಮತ್ತು ಕಳುವಾದ ಮಾಲನ್ನು ಪತ್ತೆ ಮಾಡಿ ಸಾಮಾಜಿಕ ಜಾಲತಾಣಗಳ ಬಗ್ಗೆ ನಿಗಾ ಇಟ್ಟು ಠಾಣಾ ವ್ಯಾಪ್ತಿಯಲ್ಲಿ ಪ್ರತಿ ದಿನ ನಡೆಯುವ ಕಾನೂನು ಸುವ್ಯವಸ್ಥೆಗೆ ಸಂಬಂಧಪಟ್ಟ ಮಾಹಿತಿ ಸಂಗ್ರಹಿಸಿ ಜಿಲ್ಲಾ ಸಾಮಾಜಿಕ ಜಾಲತಾಣಗಳ ನಿಯಂತ್ರಣ ಕೇಂದ್ರಕ್ಕೆ ಮಾಹಿತಿ ಸೇವೆ ನೀಡುತ್ತಿದ್ದರು.

ಕಲಘಟಗಿ ಪೊಲೀಸ್ ಠಾಣಾ ಅಪರಾಧ ಸಂಖ್ಯೆ: 34/2026 ಕಲಂ: 305(ಎ), 331(3) ಬಿ.ಎನ್.ಎಸ್. ನೇದ್ದರಲ್ಲಿ ಆರೋಪಿತರನ್ನು ಪತ್ತೆ ಮಾಡಲು ಸಹಕರಿಸಿ ಆರೋಪಿತನಿಂದ 62 ಗ್ರಾಂ ಬಂಗಾರದ ಆಭರಣ ವಶಪಡಿಸಿಕೊಳ್ಳಲು ಕಾರಣೀಭೂತರಾಗಿದ್ದಾರೆ. ಕಲಘಟಗಿ ಪೊಲೀಸ್ ಠಾಣಾ ಅಪರಾಧ ಸಂಖ್ಯೆ: 17/2026 ಕಲಂ: 305, 331(3) ಬಿ.ಎನ್.ಎಸ್. ನೇದ್ದರಲ್ಲಿ ಆರೋಪಿತನಿಂದ 02 ಗ್ರಾಂ ಬಂಗಾರದ ಆಭರಣ ವಶಪಡಿಸಿಕೊಳ್ಳಲು ಅತ್ಯುತ್ತಮ ಕರ್ತವ್ಯ ನಿರ್ವಹಿಸಿದ್ದಾರೆ. ಈ ಸಂದರ್ಭದಲ್ಲಿ ಐಜಿಪಿ ಕೆ ತ್ಯಾಗರಾಜನ್, ಎಸ್.ಪಿ. ಗುಂಜನ್ ಆರ್ಯ, ವಿವಿಧ ಅಧಿಕಾರಿಗಳು, ಸಿಬ್ಬಂದಿ ಇದ್ದರು. ಕಲಘಟಗಿ ಸಿಪಿಐ ಶ್ರೀಶೈಲ ಕೌಜಲಗಿ ಹರ್ಷವ್ಯಕ್ತಪಡಿಸಿದ್ದಾರೆ.

ಜನ್ಮದಿನದಂದು ಒಂದು ಗಿಡ ನೆಡಿ: ಪಿಡಿಒ

ನವಲಗುಂದ: ಪ್ರತಿ ಮಗು ಪ್ರತಿ ವರ್ಷ ಹುಟ್ಟು ಹಬ್ಬ ಆಚರಿಸುವ ಸಂದರ್ಭ 1 ಗಿಡ ನಟ್ಟು ಬೆಳೆಸಬೇಕು ಎಂದು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿಸಿ ಟ್ರಸ್ಟ್ ನವಲಗುಂದ ವತಿಯಿಂದ ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬೆಳವಟಗಿಯಲ್ಲಿ ನಡೆದ ಪರಿಸರ ಮಾಹಿತಿ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿದ ಪಿಡಿಒ ಎಸ್. ಎಂ. ಐರಾಣಿ ವಿದ್ಯಾರ್ಥಿಗಳಿಗೆ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ನವಲಗುಂದ ಯೋಜನಾಧಿಕಾರಿ ದಿನೇಶ್ ಸೇರಿಗಾರ ಮಾತನಾಡಿ, ಪರಿಸರ ದಿನಾಚರಣೆ ಕೇವಲ ಇಂದು ದಿನಕ್ಕೆ ಮಾತ್ರ ಸೀಮಿತವಾಗಬಾರದು ಎಂದರು.

ಬೆಳವಟಿಗಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲೆಯಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಪ್ರಬಂಧ ಸ್ಪರ್ಧೆ ಚಿತ್ರಕಲಾ ಸ್ಪರ್ಧೆ ಭಾಷಣ ಸ್ಪರ್ಧೆಯನ್ನು ಏರ್ಪಡಿಸಿ ಮಕ್ಕಳಿಗೆ ಬಹುಮಾನ ವಿತರಿಸಿದರು. ಶಾಲೆಯ ಮುಖ್ಯ ಗುರು ಪಿ.ಎಸ್. ಬಿಡನಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಪರಿಸರ ಜಾಗೃತಿ ಕಾಪಾಡುವುದು ನಮ್ಮೆಲ್ಲರ ಆದ್ಯ ಹಕ್ಕು. ಅದನ್ನು ನಾವು ಕಾಪಾಡಿಕೊಳ್ಳಬೇಕು ಎಂದರು.

ಗದಗ ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಜಗದೀಶ ಬ್ಯಾಳಿ, ಶಾಲಾ ಸಹ ಶಿಕ್ಷಕರಾದ ಪಿ. ಸಿ. ಸೂರಪ್ಪನವರ, ಸುಲೇಮಾನ ಧಾರವಾಡ, ರೇಣುಕಾ ಕಮ್ಮಾರ, ತಾಲೂಕಿನ ಕೃಷಿ ಮೇಲ್ವಿಚಾರಕ ತೋಟಯ್ಯ, ಶಾಲಾ ವಿದ್ಯಾರ್ಥಿಗಳು ಇದ್ದರು.



ಪರಿಸರದ ಬಗ್ಗೆ ಕಾಳಜಿ ಅಗತ್ಯ: ಭಟ್



ಕಲಘಟಗಿ: ಪರಿಸರದ ಕಾಳಜಿ ಅದನ್ನು ಉಳಿಸಿ ಬೆಳೆಸುವುದರ ಮೂಲಕ ವ್ಯಕ್ತವಾಗುತ್ತದೆ. ಅದರ ಬಗ್ಗೆ ಪ್ರತಿಯೊಬ್ಬರೂ ಗಮನ ಹರಿಸಲೇಬೇಕಾಗಿದೆ. ಪ್ರತಿಯೊಬ್ಬರ ಮನೆಯಲ್ಲಿ ಕೈತೋಟದಲ್ಲಿ ಗಿಡವನ್ನು ನೆಡುವುದರ ಮೂಲಕ ಸಾಧ್ಯವಾದಷ್ಟು ಪರಿಸರವನ್ನು ಬೆಳೆಸಬಹುದು ಎಂದು ಪರಿಸರ ಪ್ರೇಮಿ, ಕೃಷಿಕ ವಿನಾಯಕ ಭಟ್ ಹೇಳಿದರು.

ಅವರು ಪಟ್ಟಣದ ಗರ್ಲ್ಸ್ ಇಂಗ್ಲಿಷ್ ಸ್ಕೂಲ್ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಪರಿಸರ ಪ್ರತಿ ಘಟ್ಟದಲ್ಲಿಯೂ ಸಮಾಜಕ್ಕೆ ಬಹಳಷ್ಟು ಕೊಡುಗೆಯನ್ನು ನೀಡಿದೆ ಎಂದರು.

ಪತ್ರಕರ್ತ ಗಿರೀಶ ಮುಕ್ಕಲ್ಲ ಮಾತನಾಡಿ, ಸಾಲುಮರದ ತಿಮ್ಮಕ್ಕ ಪದ್ಮಶ್ರೀ ಪ್ರಶಸ್ತಿ ಪಡೆದ ಕ್ಷೇತ್ರ ಪರಿಸರ ಕ್ಷೇತ್ರ, ಪರಿಸರದ ಬಗ್ಗೆ ಕಾಳಜಿಯನ್ನು ತಾವುಗಳು ಬೆಳೆಸಿಕೊಳ್ಳಬೇಕು. ಪ್ರತಿಯೊಬ್ಬರೂ ತಾವು ಹಚ್ಚಿದ ಸಸಿಗಳನ್ನು ರಕ್ಷಿಸುತ್ತೇವೆ ಎಂದು ಶಪಥ ಮಾಡಬೇಕು ಎಂದರು.

ಶಿಕ್ಷಕ ವಿನಾಯಕ ಶೇಟ್ ಪ್ರಾಸ್ತಾವಿಸಿದರು. ಸಂತೋಷ್ ಇಟಗಿ ನಿರೂಪಿಸಿದರು. ಸಿ.ಎನ್. ಹಂಚಿನಮನಿ ವಂದಿಸಿದರು. ಮುಖ್ಯೋಪಾಧ್ಯಾಯ ಸಂತೋಷ ಬಿಜಾಪುರ್, ಎಸ್.ವಿ.ಇಟಗಿ, ಆರ್.ಡಿ. ನೀಲಣ್ಣವರ್, ಚೇತನಾ ಚನ್ನಗೌಡರ, ಜೆ.ಎಫ್.ಉಣಕಲ್, ಮೇಘಾ ಹುದ್ದಾರ ಸೇರಿದಂತೆ ಶಿಕ್ಷಕ ವೃಂದ, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಕಿರುಸುದ್ದಿ

ಸಚಿವ ಸ್ಥಾನಕ್ಕೆ ಲಾಬಿ ಮಾಡಲ್ಲ: ಭೀಮಣ್ಣ ನಾಯ್ಕ

ಶಿರಸಿ: ಪಕ್ಷ ಮತ್ತು ಸರ್ಕಾರ ನೀಡುವ ಯಾವುದೇ ಜವಾಬ್ದಾರಿಯನ್ನು ನಿರ್ವಹಿಸಲು ಸಿದ್ದನಿದ್ದೇನೆ. ಆದರೆ, ಸಚಿವ ಸ್ಥಾನಕ್ಕಾಗಿ ಎಂದಿಗೂ ಲಾಬಿ ಮಾಡುವುದಿಲ್ಲ ಎಂದು ಶಾಸಕ ಭೀಮಣ್ಣ ನಾಯ್ಕ ಸ್ಪಷ್ಟಪಡಿಸಿದ್ದಾರೆ. ನಗರದಲ್ಲಿ ಶನಿವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ವರಿಷ್ಠರ ತೀರ್ಮಾನದಂತೆ ಡಿ.ಕೆ.ಶಿವಕುಮಾರ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ. ಸಿದ್ದರಾಮಯ್ಯನವರ 3 ವರ್ಷಗಳ ಜನಪರ ಆಡಳಿತದ ಅವಧಿಯಲ್ಲಿ ಕ್ಷೇತ್ರಕ್ಕೆ ನೂರಾರು ಕೋಟಿ ರೂ. ಅನುದಾನ ತರಲಾಗಿದೆ. ಡಿ.ಕೆ. ಶಿವಕುಮಾರ್ ಅವರ ಅವಧಿಯಲ್ಲೂ ಹೆಚ್ಚಿನ ಹಣ ತಂದು ಅಭಿವೃದ್ಧಿ ಮಾಡಲಾಗುವುದು. ಶೀಘ್ರದಲ್ಲೇ ಸಂಪುಟ ವಿಸ್ತರಣೆಯಾಗಲಿದ್ದು, ಹಿರಿಯರಿಗೆ ಸಚಿವ ಸ್ಥಾನ ಸಿಗಲಿದೆ ಎಂದರು. ಅಲ್ಲದೆ, ಡಿ.ಕೆ.ಶಿವಕುಮಾರ ಸಿಎಂ ಆದ ಕೆಲವೇ ಗಂಟೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಘೋಷಿಸಿದ್ದಾರೆ ಹಾಗೂ ಮಧು ಬಂಗಾರಪ್ಪ ಅವರ ಶಿಕ್ಷಣ ಇಲಾಖೆಯ ಸುಧಾರಣೆಗಳಿಂದ ಎಸ್ಎಸ್ಎಲ್‌ಸಿಯಲ್ಲಿ ವಿದ್ಯಾರ್ಥಿಗಳು ರ‍್ಯಾಂಕ್ ಪಡೆಯಲು ಸಾಧ್ಯವಾಗಿದೆ ಎಂದು ಶ್ಲಾಘಿಸಿದರು. ನ್ಯಾಯಾಂಗ ವ್ಯವಸ್ಥೆ ಕುರಿತು ಪ್ರಸ್ತಾಪಿಸಿದ ಅವರು, ಉತ್ತರ ಕನ್ನಡ ಜಿಲ್ಲೆಯನ್ನು ಮಂಗಳೂರು ಹೈಕೋರ್ಟ್ ಪೀಠದ ವ್ಯಾಪ್ತಿಗೆ ಸೇರಿಸುತ್ತಿರುವುದು ಸರಿಯಲ್ಲ, ಇದರಿಂದ ಘಟ್ಟದ ಮೇಲಿನ ತಾಲೂಕುಗಳ ಜನರಿಗೆ ತೊಂದರೆಯಾಗಲಿದ್ದು, ಪೀಠವನ್ನು ಧಾರವಾಡದಲ್ಲೇ ಮುಂದುವರಿಸಲು ಅಥವಾ ಶಿರಸಿಯಲ್ಲೇ ಆರಂಭಿಸಲು ಸಿಎಂಗೆ ಪತ್ರ ಬರೆಯುತ್ತೇನೆ ಎಂದರು. ಬ್ರಿಟಿಷ್ ಕಾಲದ ಬೆಟ್ಟ ಭೂಮಿ ಬ ಕರಾಬ್ ಆಗಿರುವುದನ್ನು ಸರಿಪಡಿಸಲು ಅಧಿವೇಶನದಲ್ಲಿ ಧ್ವನಿ ಎತ್ತಿದ್ದು, ಬೆಟ್ಟ ಬಳಕೆದಾರರು ಪಕ್ಷಾತೀತವಾಗಿ ಹೋರಾಡಬೇಕು ಎಂದು ನೀಡಿದರು. ಈ ಸಂದರ್ಭದಲ್ಲಿ ಗ್ಯಾರಂಟಿ ಯೋಜನಾ ಪ್ರಾಧಿಕಾರದ ತಾಲೂಕಾಧ್ಯಕ್ಷೆ ಸುಮಾ ಉಗ್ರಾಣಕರ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಜಗದೀಶ ಗೌಡ, ಪ್ರಮುಖರಾದ ಎಸ್.ಕೆ.ಭಾಗ್ವತ ಹಾಗೂ ಶ್ರೀನಿವಾಸ ನಾಯ್ಕ ಉಪಸ್ಥಿತರಿದ್ದರು.

ಎಕ್ಸ್‌ಪ್ರೆಸ್ ರೈಲಿನ ಸಂಚಾರ ವಿಸ್ತರಣೆ

ಹುಬ್ಬಳ್ಳಿ: ಪ್ರಯಾಣಿಕರ ಅನುಕೂಲತೆಗಾಗಿ ಯಶವಂತಪುರ-ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲಿನ(06577/06578) ಸಂಚಾರ ವಾರಕ್ಕೊಮ್ಮೆ ಇತ್ತು. ಈಗ ಅದನ್ನು ವಾರಕ್ಕೆ ಎರಡು ಬಾರಿ ಸಂಚರಿಸುವಂತೆ ವಿಸ್ತರಿಸಲಾಗಿದೆ. ಜೊತೆಗೆ ಕಾರ್ಯಾಚರಣಾ ದಕ್ಷತೆಯನ್ನು ಸುಧಾರಿಸಲು ಹಾಗೂ ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸಲು ಗದಗ ಬೈಪಾಸ್‌ನಲ್ಲಿದ್ದ ಕಾರ್ಯಾಚರಣಾ ನಿಲುಗಡೆ ರದ್ದುಗೊಳಿಸಲಾಗಿದೆ. ಈ ಕುರಿತು ನೈರುತ್ಯ ರೈಲ್ವೆ ಪ್ರಕಟಣೆಗೆ ತಿಳಿಸಿದ್ದು, ಯಶವಂತಪುರ-ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ ರೈಲು(06577) ಜೂನ್ 1ರಿಂದ ಜೂನ್ 29ರವರೆಗೆ ಪ್ರತಿ ಸೋಮವಾರ ಮತ್ತು ಶನಿವಾರ ಸಂಚರಿಸಲಿದೆ. ಈ ರೈಲು ಯಶವಂತಪುರದಿಂದ ಸಂಜೆ 6.15 ಗಂಟೆಗೆ ಹೊರಟು ಮರುದಿನ ಬೆಳಗ್ಗೆ 5.15 ಗಂಟೆಗೆ ವಿಜಯಪುರ ತಲುಪಲಿದೆ. ಮಾರ್ಗ ಮಧ್ಯೆ ತುಮಕೂರು, ಅರಸೀಕೆರೆ, ದಾವಣಗೆರೆ, ಹಾವೇರಿ, ಬಾದಾಮಿ, ಬಾಗಲಕೋಟೆ, ಆಲಮಟ್ಟಿ ಹಾಗೂ ಬಸವನ ಬಾಗೇವಾಡಿ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ. ಹಿಂತಿರುಗಿ ಯಶವಂತಪುರ-ವಿಜಯಪುರ ವಿಶೇಷ ಎಕ್ಸ್‌ಪ್ರೆಸ್ (06578) ರೈಲು ಜೂನ್ 2ರಿಂದ ಜೂನ್ 30 ರವರೆಗೆ ಪ್ರತಿ ಭಾನುವಾರ ಮತ್ತು ಮಂಗಳವಾರ ಸಂಚರಿಸಲಿದೆ. ಈ ರೈಲು ವಿಜಯಪುರದಿಂದ ಸಂಜೆ 5.00 ಗಂಟೆಗೆ ಹೊರಟು ಮರುದಿನ ಬೆಳಗ್ಗೆ 4.10 ಗಂಟೆಗೆ ಯಶವಂತಪುರ ತಲುಪಲಿದೆ. ಮಾರ್ಗ ಮಧ್ಯೆ ಬಸವನ ಬಾಗೇವಾಡಿ, ಆಲಮಟ್ಟಿ, ಬಾಗಲಕೋಟೆ, ಬಾದಾಮಿ, ಎಸ್.ಎಂ.ಎಂ ಹಾವೇರಿ, ದಾವಣಗೆರೆ, ಅರಸೀಕೆರೆ ಹಾಗೂ ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಇದೆ. ಈ ವಿಶೇಷ ರೈಲು ಒಟ್ಟು 19 ಐಸಿಎಫ್ ಬೋಗಿಗಳನ್ನು ಹೊಂದಿದ್ದು, ಅವುಗಳಲ್ಲಿ 2 ಎಸಿ 2-ಟೈಯರ್ ಕೋಚ್‌ಗಳು, 4 ಎಸಿ 3-ಟೈಯರ್ ಕೋಚ್‌ಗಳು, 7 ಸ್ಲೀಪರ್ ಕ್ಲಾಸ್ ಕೋಚ್‌ಗಳು, 4 ಸಾಮಾನ್ಯ ದ್ವಿತೀಯ ದರ್ಜೆ ಕೋಚ್‌ಗಳು ಹಾಗೂ ದಿವ್ಯಾಂಗಜನ ಸ್ನೇಹಿ ಸೌಲಭ್ಯಗಳನ್ನು ಒಳಗೊಂಡ 2 ದ್ವಿತೀಯ ದರ್ಜೆ ಲಗೇಜ್ ಕಮ್ ಬ್ರೇಕ್ ವ್ಯಾನ್‌ಗಳು ಸೇರಿವೆ. ಅಧಿಸೂಚಿತ ಅವಧಿಯಲ್ಲಿ ಈ ವಿಶೇಷ ರೈಲು ಎರಡೂ ದಿಕ್ಕುಗಳಲ್ಲಿ ತಲಾ 7 ಸುತ್ತು ಸಂಚಾರಗಳನ್ನು ನಡೆಸಲಿದೆ ಎಂದು ರೈಲ್ವೆ ಸಾರ್ವಜನಿಕ ಸಂಪರ್ಕ ಅಧಿಕಾರಿ ತಿಳಿಸಿದ್ದಾರೆ.

ಬೈಕ್ ಸವಾರ ಸಾವು

ಚನ್ನಮ್ಮನ ಕಿತ್ತೂರು: ಬೆಳಗಾವಿ ಕಡೆಯಿಂದ ಕಿತ್ತೂರು ಕಡೆಗೆ ರಾಷ್ಟ್ರೀಯ ಹೆದ್ದಾರಿ 48 ರಸ್ತೆಯ ಮೂಲಕ ಬರುತ್ತಿದ್ದ ಬೈಕ್ ಸವಾರ ಅಂಬಡಗಟ್ಟಿ ಕ್ರಾಸ್ ಹತ್ತಿರ ನಿಂತಿದ್ದ ವಾಹನಕ್ಕೆ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಮೃತಪಟ್ಟಿದ್ದಾನೆ. ತಾಲೂಕಿನ ಅವರಾದಿ ಗ್ರಾಮದ ಸಂದೀಪ ಅನಿಲ ತಡಕೋಡ (25) ಮೃತಪಟ್ಟಿದ್ದಾನೆ. ಹಿಂಬದಿಯ ಸವಾರ ಈರಯ್ಯ ನಾಗಯ್ಯ ಪೂಜೇರ ಇತನಿಗೆ ಗಂಭೀರ ಗಾಯವಾಗಿದ್ದು, ಹುಬ್ಬಳ್ಳಿ ಕಿಮ್ಸ್ ಆಸ್ಪತ್ರೆಗೆ ಸಾಗಿಸಲಾಗಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪ್ರಕರಣ ದಾಖಲಿಸಿದ್ದಾರೆ.

ಮಳೆಗೆ ರಸ್ತೆಗಳು ಸಂಪೂರ್ಣ ಜಲಾವೃತ | ಬಿತ್ತನೆಗೆ ಅನುಕೂಲ

ರೈತರ ಮುಖದಲ್ಲಿ ಹರ್ಷ ತಂದ ಮಳೆ

ಧಾರವಾಡ: ಜಿಲ್ಲೆಗೆ ಮಂಗಾರು ಮಳೆಯ ಅಧಿಕೃತ ಪ್ರವೇಶವಾಗಿದ್ದು, ಶನಿವಾರ ಮಧ್ಯಾಹ್ನದಿಂದ ನಿರಂತರ ಸುರಿದ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿದೆ. ಈ ಮಳೆ ಜಿಲ್ಲೆಯ ಅನ್ನದಾತರ ಮುಖದಲ್ಲಿ ಹೊಸ ಕಳೆ ತಂದಿದೆ.

ಕೃಷಿಗೆ ಮತ್ತಷ್ಟು ಇಂಬು: ಜಿಲ್ಲೆಯಲ್ಲಿ ಈಗಾಗಲೇ ಮುಂಗಾರು ಪೂರ್ವ ಸಿದ್ಧತೆಗಳೊಂದಿಗೆ ಕೃಷಿ ಚಟುವಟಿಕೆ ಗರಿಗೆದರಿದ್ದವು. ಈಗ ಸರಿಯಾದ ಸಮಯಕ್ಕೆ ಮಂಗಾರು ಮಾರುತಗಳು ಪ್ರವೇಶ ಪಡೆದಿರುವುದರಿಂದ ರೈತರ ಸಂತಸ ಮುಗಿಲು ಮುಟ್ಟಿದೆ.

ಶನಿವಾರ ಸುರಿದ ಉತ್ತಮ ಮಳೆಯು ಕೃಷಿ ಭೂಮಿಯನ್ನು ಹದಗೊಳಿಸಿದ್ದು, ಬಿತ್ತನೆ ಕಾರ್ಯಕ್ಕೆ ಮತ್ತಷ್ಟು ಇಂಬು ನೀಡಿದೆ. ರೈತರು ಹೊಲಗಳತ್ತ ಮುಖ ಮಾಡಿದ್ದು, ಇಡೀ ಜಿಲ್ಲೆಯಲ್ಲಿ ಕೃಷಿ ಹಬ್ಬದ ವಾತಾವರಣ ಸೃಷ್ಟಿಯಾಗಿದೆ.

ಚರಂಡಿ ನೀರು ರಸ್ತೆ ಪಾಲು: ಕೃಷಿ ಕ್ಷೇತ್ರಕ್ಕೆ ಮಳೆ ವರವಾದರೆ, ನಗರ ಜನರಿಗೆ ಮಾತ್ರ ಶನಿವಾರದ ಮಳೆ ತೀವ್ರ ತಲೆನೋವಾಗಿ ಪರಿಣಮಿಸಿತು. ಬಿಡುವಿಲ್ಲದೆ



ಸುರಿದ ಮಳೆಯಿಂದಾಗಿ ನಗರದ ಪ್ರಮುಖ ರಸ್ತೆಗಳು ಜಲಾವೃತಗೊಂಡು, ಬೈಕ್ ಸವಾರರು ಪೇಚೆಗೆ ಸಿಲುಕಿದರು.

ತುಂಬಿ ಹರಿದ ಚರಂಡಿಗಳು: ಆವಳಿ ನಗರದ ಬಹುತೇಕ ಕಡೆಗಳಲ್ಲಿ ಸಮರ್ಪಕ ಹೂಳೆತ್ತದ ಕಾರಣ, ಮಳೆ ನೀರು ಸರಾಗವಾಗಿ ಹೋಗಲಾಗದೆ ಚರಂಡಿಗಳು ತುಂಬಿ ರಸ್ತೆಯ ಮೇಲೆಯೇ ಹರಿದವು.

ಸಂಚಾರ ದಟ್ಟಣೆ: ರಸ್ತೆಗಳು ಸಣ್ಣ ಪ್ರಮಾಣದ ಕೆರೆಗಳಂತಾಗಿದ್ದರಿಂದ ದ್ವಿಚಕ್ರ ಹಾಗೂ ನಾಲ್ಕು ಚಕ್ರದ ವಾಹನ ಸವಾರರು ಸಂಚರಿಸಲು ತೀವ್ರ ಹರಸಾಹಸ ಪಡಬೇಕಾಯಿತು.

> ಮಳೆರಾಯನ ಸಕಾಲಿಕ ಪ್ರವೇಶದಿಂದ ಈ ಬಾರಿ ಉತ್ತಮ ಇಳುವರಿಯ ನಿರೀಕ್ಷೆಯಿದೆ. ಬಿತ್ತನೆಗೆ ಭೂಮಿ ಹದವಾಗಿದ್ದು, ಮಳೆ ಹೀಗೆಯೇ ಮುಂದುವರಿದರೆ ಈ ವರ್ಷದ ಕೃಷಿ ಚಟುವಟಿಕೆಗಳು ಯಶಸ್ವಿಯಾಗಲಿವೆ.
> ■ ನಾಗಪ್ಪ ಉಂಡಿ, ರೈತ

ವ್ಯಾಪಾರಸ್ಥರಿಗೆ ನಷ್ಟ: ದಿಢೀರ್ ಸುರಿದ ಮಳೆಯಿಂದಾಗಿ ಶನಿವಾರದ ಸಂತೆ ಹಾಗೂ ಮಾರುಕಟ್ಟೆಗೆ ಬಂದಿದ್ದ ಸಾರ್ವಜನಿಕರು ಮತ್ತು ಬೀದಿ ಬದಿ ವ್ಯಾಪಾರಸ್ಥರು ಸುರಕ್ಷಿತ ಸ್ಥಳಗಳಿಗಾಗಿ ಓಡಾಡುವ ದೃಶ್ಯಗಳು ಕಂಡುಬಂದವು.

ಮಂಗಾರಿನ ಆರಂಭಿಕ ಆರ್ಭಟವೇ ನಗರದ ಮೂಲ ಸೌಕರ್ಯಗಳ ಕೊರತೆ ಎತ್ತಿ ತೋರಿಸಿದ್ದು, ಮುಂದಿನ ದಿನಗಳಲ್ಲಿ ಮಳೆ ತೀವ್ರಗೊಳ್ಳುವ ಮುನ್ನ ಪಾಲಿಕೆಯ ಅಧಿಕಾರಿಗಳು ಎಚ್ಚೆತ್ತು ಚರಂಡಿ ಸ್ವಚ್ಛಗೊಳಿಸುವಂತೆ ಮಹಾನಗರ ಜನರ ಆಗ್ರಹಿಸಿದ್ದಾರೆ.

ಮನೆಗಳಿಗೆ ನುಗ್ಗಿದ ಮಳೆ ನೀರು

ಹಾವೇರಿ: ಹಾವೇರಿ ನಗರ ಸೇರಿದಂತೆ ಜಿಲ್ಲೆಯ ಹಲವು ಭಾಗಗಳಲ್ಲಿ ಶನಿವಾರ ಸಂಜೆ ಏಕಾಏಕಿ ಧಾರಾಕಾರ ಮಳೆಯಾಗಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಬೆಳಗ್ಗೆಯಿಂದಲೇ ಮೋಡ ಕವಿದ ವಾತಾವರಣ ನಿರ್ಮಾಣವಾಗಿದ್ದರೂ ಮಳೆಯ ಲಕ್ಷಣಗಳು ಕಂಡು ಬಂದಿರಲಿಲ್ಲ, ಆದರೆ, ಸಂಜೆ ಏಕಾಏಕಿ ಸುರಿದ ಭಾರೀ ಮಳೆಯಿಂದ ರಸ್ತೆಗಳಲ್ಲಿ ನೀರು ಹರಿದು ವಾಹನ ಸವಾರರು ಹಾಗೂ ಸಾರ್ವಜನಿಕರು ಪರದಾಡುವಂತಾಯಿತು.

ಹಾವೇರಿ ನಗರದ ತಗ್ಗು ಪ್ರದೇಶಗಳಲ್ಲಿ ಮಳೆನೀರು ಮನೆಗಳಿಗೆನುಗ್ಗಿದಪರಿಣಾಮ ನಿವಾಸಿಗಳು ನೀರು ಹೊರಹಾಕಲು ಹರಸಾಹಸಪಟ್ಟರು. ತಾಲೂಕಿನ ಅಗಡಿ, ಕನವಳ್ಳಿ, ಹನುಮನಹಳ್ಳಿ, ಕಾಟೇನಹಳ್ಳಿ, ಯತ್ತಿನಹಳ್ಳಿ ಹಾಗೂ ಬಸವನಕಟ್ಟಿ ಸೇರಿದಂತೆ ವಿವಿಧ ಗ್ರಾಮಗಳಲ್ಲಿಯೂ ಭಾರೀ ಮಳೆಯಾಗಿ ಕೆಲ ಮನೆಗಳು ಹಾಗೂ ರಸ್ತೆಗಳು ಜಲಾವೃತಗೊಂಡವು.

ಮಳೆ ನೀರು ಚರಂಡಿಗಳಲ್ಲಿ ಸರಾಗವಾಗಿ ಹರಿಯದ ಕಾರಣ ಹಲವೆಡೆ ರಸ್ತೆಗಳ ಮೇಲೆ ನೀರು ನಿಂತು ಸಂಚಾರಕ್ಕೆ ತೊಂದರೆಯಾಯಿತು. ಮನೆಗಳಿಗೆ ನುಗ್ಗಿದ ನೀರನ್ನು ಹೊರಹಾಕಲು ಸ್ಥಳೀಯರು ಬಕೆಟ್‌ಗಳು ಮತ್ತು ಮೋಟಾರ್ ಪಂಪ್‌ಗಳ ಸಹಾಯದಿಂದ ಪರದಾಡಿದರು.

ಇನ್ನೊಂದೆಡೆ, ಮುಂಗಾರು ಮಳೆಯ ನಿರೀಕ್ಷೆಯಲ್ಲಿದ್ದ ರೈತರ ಮುಖದಲ್ಲಿ ಈ ಮಳೆ ಮಂದಹಾಸ ಮೂಡಿಸಿದೆ. ಈಗಾಗಲೇ ಸಾಲಸೋಲ ಮಾಡಿ ಬಿತ್ತನೆ ಕಾರ್ಯ ಕೈಗೊಂಡಿದ್ದ ರೈತರು ಮಳೆ ಬಾರದೆ ಆತಂಕದಲ್ಲಿದ್ದರು. ಆದರೆ, ಸುರಿದ ಉತ್ತಮ ಮಳೆಯಿಂದ ಹೊಲಗಳಲ್ಲಿನ ಬೆಳೆಗಳಿಗೆ ಜೀವಕಳೆ ಬಂದಿದ್ದು, ಕೃಷಿ ಚಟುವಟಿಕೆಗಳಿಗೆ ಹೊಸ ಚೈತನ್ಯ ದೊರೆತಿದೆ.

ಜಿಲ್ಲೆಯ ರಾಣೇಬೆನ್ನೂರು, ಬ್ಯಾಡಗಿ, ಹಾನಗಲ್ಲ ಹಾಗೂ ಶಿಗ್ಗಾವಿ ತಾಲೂಕುಗಳ ವಿವಿಧ ಭಾಗಗಳಲ್ಲಿಯೂ ಉತ್ತಮ ಮಳೆಯಾಗಿದ್ದು, ಮುಂಗಾರು ಚುರುಕುಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ರೈತರ ಮೊಗದಲ್ಲಿ ಖುಷಿ ಮೂಡಿಸಿದೆ.

ಹುಬ್ಬಳ್ಳಿಯಲ್ಲಿ ಭಾರೀ ಮಳೆ





ಹುಬ್ಬಳ್ಳಿ: ನಗರ ಸೇರಿದಂತೆ ತಾಲೂಕಿನ ವಿವಿಧೆಡೆ ಶನಿವಾರ ಆರಂಭದಲ್ಲಿ ಜೋರಾಗಿ ಹಾಗೂ ಬಳಿಕ ಜಿಟಿಜಿಟಿ ಮಳೆ ಸುರಿಯಿತು.

ಮಧ್ಯಾಹ್ನ ಸಂಪೂರ್ಣ ಮೋಡ ಕವಿದು ಕತ್ತಲು ಆವರಿಸಿತ್ತು. ಮಾರುಕಟ್ಟೆ ಪ್ರದೇಶದಲ್ಲಿ ಸಾರ್ವಜನಿಕರು, ವ್ಯಾಪಾರಿಗಳು ಪರದಾಡಿದರು. ಕ್ಷಣಾರ್ಧದಲ್ಲಿ ರಸ್ತೆ, ಗಟಾರು ಹಾಗೂ ಚರಂಡಿಗಳು ಜಲಾವೃತವಾದವು. ಮಳೆಯಿಂದಾಗಿ ಪ್ರಮುಖ ರಸ್ತೆಗಳಲ್ಲಿ ನೀರು ಸಂಗ್ರಹವಾಗಿದ್ದರಿಂದ ವಾಹನ ಸವಾರರು ಹರಸಾಹಸ ಪಟ್ಟರು. ಫ್ಲೈಓವರ್ ಕೆಳಗಿನ ರಸ್ತೆ ತೆಗ್ಗು, ಗುಂಡಿಗಳು ಬಿದ್ದಿದ್ದವು.

ನಗರದ ಸ್ಟೇಷನ್ ರಸ್ತೆ ಅಂಬೇಡ್ಕರ್ ವೃತ್ತದ ಬಿಆರ್‌ಟಿಎಸ್ ಬಸ್ ನಿಲ್ದಾಣ, ಲ್ಯಾಮಿಂಗ್ಟನ್ ರಸ್ತೆ, ಉಣಕಲ್‌ನ ಪ್ರೆಸಿಡೆಂಟ್ ಹೋಟೆಲ್ ಎದುರಿನ ರಸ್ತೆ, ಉಣಕಲ್ ವೃತ್ತ, ಕೇಶ್ವಾಪುರ, ಶಿರೂರ ಪಾರ್ಕ್, ಗಣೇಶನಗರ ಸೇರಿದಂತೆ ಹಲವು ಪ್ರದೇಶಗಳಲ್ಲಿ ನೀರು ಸಂಗ್ರಹವಾಗಿತ್ತು.

ಮಳೆಯಿಂದ ನಗರದಲ್ಲಿ ಐದಕ್ಕೂ ಹೆಚ್ಚು ಮರಗಳು ಧರೆಗುರುಳಿರುವುದು ದೂರು ಪಾಲಿಕೆ ಕಂಟ್ರೋಲ್ ರೂಂ ದಾಖಲಾಗಿವೆ. ವಿದ್ಯಾನಗರದ ಲೋಕಪ್ಪನಹಕ್ಕಲನಲ್ಲಿ ಮಳೆಯಿಂದ ನೀರು ಸೇರಿ ಸಾರ್ವಜನಿಕರಿಗೆ ತೊಂದರೆಯಾದ ಹಿನ್ನೆಲೆ ಹು-ಧಾ ಮಹಾನಗರ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ ಸುರಿಯುತ್ತಿರುವ ಮಳೆಯಲ್ಲಿ ಭೇಟಿ ನೀಡಿ ಸಮಸ್ಯೆ ಪರಿಹರಿಸಲು ಅಧಿಕಾರಿಗಳಿಗೆ ಸೂಚಿಸಿದರು. ಈ ವೇಳೆ ಪಾಲಿಕೆ ಸದಸ್ಯೆ ರೂಪಾ ಶೆಟ್ಟಿ ಹಾಗೂ ಅಧಿಕಾರಿಗಳಿದ್ದರು.

ಮುಂಗಾರು ಬಿತ್ತನೆ ತಾಲೂಕಿನಾದ್ಯಂತ ರೈತರು ಸಿದ್ಧತೆ ಮಾಡಿಕೊಂಡಿದ್ದು, ಮಳೆರಾಯನಿಗೆ ಕಾಯುತ್ತಿದ್ದರು. ಕೆಲವು ದಿನಗಳಿಂದ ಮೋಡ ಕವಿದು ಮಳೆಯಾಗಿದಿಲ್ಲ, ಇದರಿಂದ ರೈತರಲ್ಲಿ ಆತಂಕ ವ್ಯಕ್ತವಾಗಿತ್ತು. ಗುರುವಾರ ಸಂಜೆ ಸುರಿದ ಮಳೆಯಿಂದ ರೈತರ ಮುಖದಲ್ಲಿ ಸಂತಸ ಮೂಡಿದೆ. ಮಳೆಯಿಂದ ಈಗಾಗಲೇ ಬಿತ್ತಿದ ಬೆಳೆಗೆ ಅನುಕೂಲವಾಗಿದೆ ಎಂದು ರೈತರೊಬ್ಬರು ತಿಳಿಸಿದರು.

ಬೀಳಗಿ ತಾಲೂಕಿನಾದ್ಯಂತ ಉತ್ತಮ ಮಳೆ

ಬೀಳಗಿ: ತಾಲೂಕಿನಾದ್ಯಂತ ಶನಿವಾರ ಸಂಜೆ ರೋಹಿಣಿ ಮಳೆ ಧರೆಗೆ ಸುರಿದು ತಂಪೆರೆಯಿತು. ರಭಸವಾಗಿ ಸುರಿದ ಮಳೆಯಿಂದ ಜಮೀನುಗಳ ಒಡ್ಡು, ಓರೆಗಳು ತುಂಬಿ ಒಡೆದು ಹೋಗಿವೆ. ಒಣಗಿ ಹೋಗಿದ್ದ ಹಳ್ಳ, ಕೊಳ್ಳಗಳು ಹರಿಯ ತೊಡಗಿವೆ.

ಕಳೆದ ಎರಡ್ಮೂರು ವರ್ಷಗಳಿಂದ ರೋಹಿಣಿ ಮಳೆ ಇಷ್ಟೊಂದು ಪ್ರಮಾಣದಲ್ಲಿ ಸುರದಿರಲಿಲ್ಲ, ಈ ಬಾರಿ ದೊಡ್ಡ ಪ್ರಮಾಣದಲ್ಲಿ ರೋಹಿಣಿ ಸುರಿದದ್ದು, ರೈತರ ಮುಖದಲ್ಲಿ ಮಂದಹಾಸ ಮೂಡಲು ಕಾರಣವಾಗಿದೆ. ರೋಣಿ(ರೋಹಿಣಿ) ಮಳೆಯಾದರೆ ಓಣಿ ತುಂಬ ಜ್ವಾಳ(ಜೋಳ) ಎಂಬ ಮಾತಿನಂತೆ ಮಳೆಯ ಸಾಕಷ್ಟು ಪ್ರಮಾಣದಲ್ಲಿ ಸುರಿದಿದ್ದರಿಂದ ಕಬ್ಬು ಬೆಳೆ ನಳನಳಿಸುವಂತಾಯಿತು. ಬಿತ್ತನೆಗಾಗಿ ಭೂಮಿ ಹದಮಾಡಿಕೊಂಡಿರುವ ನೇಗಿಲಯೋಗಿಗಳು ಸಜ್ಜೆ, ಸೂರ್ಯಕಾಂತಿ, ಈರುಳ್ಳಿ, ಗೋವಿನಜೋಳ, ಹೆಸರು, ಉದ್ದು, ತೊಗರಿ ಸೇರಿದಂತೆ ಇನ್ನಿತರ ಬೆಳೆಗಳ ಬೀಜ ಬಿತ್ತನೆ ಕಾರ್ಯ ಚುರುಕುಗೊಳ್ಳಲಿದೆ. ರೋಹಿಣಿ ಮತ್ತು ಮೃಗಶಿರ ಮಳೆಯಾದರೆ ಬೆಳೆಗಳು ಕೂಡ ಹುಲುಸಾಗಿ ಬರುತ್ತವೆ ಎಂದು ರೈತರು ಹೇಳುವ ಮಾತಾಗಿದೆ.

ಈಗಾಗಲೇ ಚೆಂಡು ಹೂವಿನ ಗಿಡಗಳನ್ನು ನಾಟಿ ಮಾಡಿದ್ದು, ಅವುಗಳು ರೋಹಿಣಿ ಮಳೆಯಿಂದ ಭರಪೂರ ಇಳುವರಿ ನಿರೀಕ್ಷೆಯಲ್ಲಿದ್ದರೆ, ಬಹಳಷ್ಟು ನೀರು ನಿಂತರೆ ಚೆಂಡು ಗಿಡಗಳು ಒಣಗಿ ಹೋಗುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ರಭಸವಾಗಿ ಬೀಸಿದ ಗಾಳಿ, ಮಳೆಯಿಂದ ವಿದ್ಯುತ್ ಸರಬರಾಜು ಕಡಿತಗೊಂಡಿತು. ಸಂಜೆ ಅಡುಗೆ ತಯಾರಿಸಲು ಮಹಿಳೆಯರು ಸಾಕಷ್ಟು ತೊಂದರೆ ಅನುಭವಿಸುವಂತಾಯಿತು. ಅಲ್ಲದೇ ಚರಂಡಿಗಳು ತುಂಬಿ ನೀರು ರಸ್ತೆ ಮೇಲೆ ನುಗ್ಗಿದ್ದರಿಂದ ಪಾದಚಾರಿಗಳಿಗೆ ಮತ್ತು ದ್ವಿಚಕ್ರ ವಾಹನ ಸವಾರರು ತೊಂದರೆ ಅನುಭವಿಸುವಂತಾಯಿತು.

ಭಟ್ಕಳದಲ್ಲಿ ಮಳೆ: ಮುಖ್ಯರಸ್ತೆ ಜಲಾವೃತ

ಭಟ್ಕಳ: ತಾಲೂಕಿನಲ್ಲಿ ಶನಿವಾರ ಸಂಜೆ ಭಾರೀ ಮಳೆ ಸುರಿದಿದ್ದರಿಂದ ಪಟ್ಟಣದ ನಗರಸಭೆ ಎಡಬದಿ ರಸ್ತೆ ಮತ್ತು ಮುಖ್ಯ ರಸ್ತೆಯಲ್ಲಿ ಮಳೆ ನೀರು ಹರಿದು ವಾಹನ ಮತ್ತು ಜನ ಸಂಚಾರಕ್ಕೆ ತೊಂದರೆ ಉಂಟಾಯಿತು.



ಪಟ್ಟಣದಲ್ಲಿ ಮುಖ್ಯರಸ್ತೆ, ಪುರಸಭೆ ಎಡಬದಿ ರಸ್ತೆಯ ಗಟಾರ ಸ್ವಚ್ಛ ಮಾಡಿದ್ದರೂ ಸಹ ಕೋಟೇಶ್ವರ ನಗರ ಕಡೆಯ ನೀರು ಒಮ್ಮೇಲೆ ಬಂದಿದ್ದರಿಂದ ರಸ್ತೆಯ ಮೇಲೆ ಮಳೆ ನೀರು ಹರಿಯುವಂತಾಯಿತು.

ರಂಗಿನಕಟ್ಟೆಯಿಂದ ತಾಲೂಕು ಪಂಚಾಯತವರೆಗೆಹೆದ್ದಾರಿಅಗಲೀಕರಣ ಕಾಮಗಾರಿ ನಡೆಯುತ್ತಿರುವುದರಿಂದ ಗಟಾರ ವ್ಯವಸ್ಥೆ ಸರಿಯಿಲ್ಲ. ಹೆದ್ದಾರಿ ಕಾಮಗಾರಿ ಮಾಡುವವರು ಕೆಲವು ಕಡೆ ಗಟಾರ ಕಾಮಗಾರಿ ಮಾಡಿದ್ದರೂ ಸಹ ಪೂರ್ಣಗೊಂಡಿಲ್ಲ, ರಸ್ತೆ ಅರ್ಧಂಬರ್ಧ ಸ್ಥಿತಿಯಲ್ಲಿರುವುದರಿಂದ ಜನರು ದಿನಂಪ್ರತಿ ತೊಂದರೆ ಅನುಭವಿಸುತ್ತಿದ್ದಾರೆ. ರಸ್ತೆಯಂಚಿನ ಅಂಗಡಿಗಳ ಎದುರು ಗಟಾರ ಕಾಮಗಾರಿ ಮಾಡುತ್ತಿದ್ದು, ಮಳೆಗೆ ಕೆಸರು ಮಯವಾಗಿದೆ. ಮಳೆಯ ಆರಂಭದಲ್ಲೇ ಹೀಗೆ ಆದರೆ ದೊಡ್ಡ ಮಳೆ ಬಂದರೆ ಏನಾದೀತು ಎಂದು ಜನರು ಪ್ರಶ್ನಿಸುತ್ತಿದ್ದಾರೆ.

ಮಳೆ ಆರಂಭವಾಗುವ ಪೂರ್ವದಲ್ಲೇ ಹೆದ್ದಾರಿ ಮತ್ತು ಗಟಾರ ಕಾಮಗಾರಿ ಮುಗಿಸಿದ್ದರೆ ಮಳೆಗಾಲದಲ್ಲಿ ಜನರು ತೊಂದರೆ ಅನುಭವಿಸುವುದು ತಪ್ಪುತ್ತಿತ್ತು ಎಂದು ಜನರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ತಾಲೂಕಿನಲ್ಲಿ ಕಳೆದ ಎರಡು ಮೂರು ದಿನಗಳಿಂದ ಹದ ಮಳೆ ಬೀಳುತ್ತಿದೆ. ಕೃಷಿ ಚಟುವಟಿಕೆಗೆ ರೈತರು ಸಿದ್ದರಾಗುತ್ತಿದ್ದಾರೆ. ರೈತ ಸಂಪರ್ಕ ಕೇಂದ್ರದಲ್ಲಿ ಬಿತ್ತನೆ ಬೀಜ ವಿತರಣೆ ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ತಾಲೂಕಿನಲ್ಲಿ ಕರೆಂಟ್ ಪದೇ ಪದೆ ಕೈಗೊಡುತ್ತಿದ್ದು, ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿವೃತ್ತ ವಿಂಗ್ ಕಮಾಂಡರ್ ಪ್ರಕಾಶ ನಾರ್ವೇಕರ ನಿಧನ

ಅಂಕೋಲಾ: ಗೋಮಾಂತಕ ಸಮಾಜದ ಹಿರಿಯರು ಹಾಗೂ ಭಾರತೀಯ ವಾಯುಪಡೆಯ ನಿವೃತ್ತ ವಿಂಗ್ ಕಮಾಂಡರ್ ಪ್ರಕಾಶ ಮಂಗೇಶ ನಾರ್ವೇಕರ ಅವರು ಶನಿವಾರ ಬೆಳಗಾವಿಯಲ್ಲಿ ನಿಧನರಾದರು.



ಅವರು ದೇಶದ ಅತ್ಯುತ್ತಮ ಮಿಸೈಲ್ ತಜ್ಞರಲ್ಲಿ ಒಬ್ಬರಾಗಿ ಗುರುತಿಸಿಕೊಂಡಿದ್ದರು. ಭಾರತೀಯ ಸಶಸ್ತ್ರ ಪಡೆಗಳ ಮಹತ್ವದ ಕಾರ್ಯಾಚರಣೆಗಳಲ್ಲಿಒಂದಾದ 'ಆಪರೇಷನ್ ಬ್ಲೂಸ್ಟಾರ್'ನಲ್ಲಿ ಭಾಗವಹಿಸಿದ ಹೆಗ್ಗಳಿಕೆಯೂ ಅವರಿಗೆ ಸಲ್ಲುತ್ತದೆ. ರಾಷ್ಟ್ರಸೇವೆಯಲ್ಲಿ ಮಹತ್ವದ ಕೊಡುಗೆ ನೀಡಿದ ಅವರು ತಮ್ಮ ವೃತ್ತಿ ಜೀವನದ ಮೂಲಕ ದೇಶದ ಭದ್ರತಾ ಕ್ಷೇತ್ರದಲ್ಲಿ ವಿಶಿಷ್ಟ ಛಾಪು ಮೂಡಿಸಿದ್ದರು.

ಮೂಲತಃ ಅಂಕೋಲಾ ತಾಲೂಕಿನವರಾದ ಪ್ರಕಾಶ ನಾರ್ವೇಕರ ಅವರು ಹಲವು ವರ್ಷಗಳ ಕಾಲ ಅಂಕೋಲಾದ ವಂದಿಗೆಯಲ್ಲಿರುವ ತಮ್ಮ ನಿವಾಸದಲ್ಲಿ ವಾಸವಿದ್ದು, ಬಳಿಕ ಬೆಳಗಾವಿಗೆ ತೆರಳಿದ್ದರು. ಅವರು ಲಕ್ಷ್ಮೇಶ್ವರದ ನಿವಾಸಿ ಕಿರಣ ನಾರ್ವೇಕರ ಅವರ ಸಹೋದರರಾಗಿದ್ದರು.

ಸಾಮಾಜಿಕ, ಶೈಕ್ಷಣಿಕ ಹಾಗೂ ಸಾರ್ವಜನಿಕ ಸೇವಾ ಕ್ಷೇತ್ರಗಳಲ್ಲಿ ಸಕ್ರಿಯರಾಗಿದ್ದ ಅವರು ಅನೇಕ ಜನಪರ ಕಾರ್ಯಗಳಿಗೆ ನೆರವಿನ ಹಸ್ತ ಚಾಚಿದ್ದರು. ಗೋಮಾಂತಕ ಸಮಾಜ ಸೇರಿದಂತೆ ವಿವಿಧ ಸಂಘ-ಸಂಸ್ಥೆಗಳ ಚಟುವಟಿಕೆಗಳಲ್ಲಿ ಭಾಗವಹಿಸಿ ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಿದ್ದರು.

ಅವರ ನಿಧನಕ್ಕೆ ಕುಟುಂಬಸ್ಥರು, ಬಂಧು-ಬಳಗ, ಸ್ನೇಹಿತರು ಹಾಗೂ ವಿವಿಧ ಸಂಘಟನೆಗಳ ಮುಖಂಡರು ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಇವರ ನಿಧನಕ್ಕೆ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಸತೀಶ ಸೈಲ್, ಮಾಜಿ ಸಚಿವ ಆನಂದ ಅಸ್ನೋಟಿಕರ, ಮಾಜಿ ಶಾಸಕಿ ರೂಪಾಲಿ ನಾಯ್ಕ, ಪುರಸಭಾ ಮಾಜಿ ಅಧ್ಯಕ್ಷ ಬಾಸ್ಕರ ನಾರ್ವೇಕರ, ಉತ್ತರ ಕನ್ನಡ ಜಿಲ್ಲಾ ನಿವೃತ್ತ ಸೇನಾ ಸಂಘಟನೆ ಸೇರಿದಂತೆ ಹಲವರು ಸಂತಾಪ ಸೂಚಿಸಿದ್ದಾರೆ.


ಚಿರತೆ ದಾಳಿಗೆ ಆಕಳ ಕರು ಬಲಿ

ಸಿದ್ದಾಪುರ: ತಾಲೂಕಿನ ಹಸರಗೋಡ ಗ್ರಾಪಂ ವ್ಯಾಪ್ತಿಯ ಹೊಸಗದ್ದೆಯ ಮನೆಯಂಗಳದಲ್ಲಿ ಕಟ್ಟಿದ್ದ ಎರಡು ತಿಂಗಳ ಆಕಳ ಕರುವನ್ನು ಚಿರತೆ ತಿಂದು ಸಾಯಿಸಿದ ಘಟನೆ ಗುರುವಾರ ರಾತ್ರಿ ನಡೆದಿದೆ. ಹೊಸಗದ್ದೆಯ ಶ್ರೀಧರ ಪರಮೇಶ್ವರ ಹೆಗಡೆ ಅವರಿಗೆ ಸೇರಿದ ಆಕಳ ಕರು ಇದಾಗಿದೆ. ಚಿರತೆ ಆಕಳ ಕರುವಿನ ಹಿಂಭಾಗ ಸಂಪೂರ್ಣ ತಿಂದು ಹಾಕಿದ್ದು, ಆಕಳ ಕರು ರಕ್ತದ ಮಡುವಿನಲ್ಲಿ ಬಿದ್ದು ಮೃತಪಟ್ಟಿದೆ. ಸ್ಥಳಕ್ಕೆ ಜಾನ್ಮನೆ ವಲಯ ಅರಣ್ಯಾಧಿಕಾರಿ ಉಷಾ ಕಬ್ಬೇರ, ಹೇರೂರು ಉಪವಲಯ ಅರಣ್ಯಾಧಿಕಾರಿ ಯಶೋಧಾ ನಾಯ್ಕ, ಬೀಟ್ ಫಾರೆಸ್ಟರ್ ಕಿರಣ ನಾಯ್ಕ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲಿಸಿದ್ದಾರೆ. ವಲಯ ಅರಣ್ಯಾಧಿಕಾರಿ ಉಷಾ ಕಬ್ಬೇರ ಕಾಡು ಪ್ರಾಣಿಗಳ ಕುರಿತು ಜನತೆ ಹೆಚ್ಚು ಜಾಗೃತರಾಗಿರಬೇಕು. ಅರಣ್ಯ ಇಲಾಖೆಯೂ ಈ ಕುರಿತು ಸೂಕ್ತ ಕ್ರಮವಹಿಸಲಿದೆ. ಚಿರತೆ ಓಡಾಡುತ್ತಿರುವ ಕುರಿತು ಗ್ರಾಮದಲ್ಲಿ ಹೆಚ್ಚು ಪ್ರಚಾರ ಮಾಡಲಾಗುವುದು. ನೊಂದವರಿಗೆ ಇಲಾಖೆಯಿಂದ ಪರಿಹಾರ ಕೊಡಿಸುವುದಕ್ಕೆ ಎಲ್ಲ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಕೆಕೆಆರ್‌ಟಿಸಿ ಅಧ್ಯಕ್ಷ ಅರುಣಕುಮಾರ ಪಾಟೀಲ ಹೇಳಿಕೆ

ಉಚಿತ ಬಸ್ ಪಾಸ್ ಐತಿಹಾಸಿಕ ನಿರ್ಧಾರ

ಕಲಬುರಗಿ: ನೂತನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನೇತೃತ್ವದಲ್ಲಿ ಕಳೆದ ಬುಧವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ರಾಜ್ಯದ ಎಲ್ಲ ವರ್ಗದ ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಸೌಲಭ್ಯವನ್ನು ಘೋಷಿಸಿರುವುದು ಐತಿಹಾಸಿಕ, ದೂರದೃಷ್ಟಿಯ ನಿರ್ಧಾರವಾಗಿದೆ ಎಂದು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷ ಅರುಣಕುಮಾರ ಎಂ.ವೈ.ಪಾಟೀಲ ತಿಳಿಸಿದ್ದಾರೆ.



ಈ ಕುರಿತು ಪ್ರಕಟಣೆ ಹೊರಡಿಸಿರುವ ಅವರು, 60 ಕಿಮೀ ವರೆಗೂ ಶಾಲಾ,ಕಾಲೇಜು ಮತ್ತು ಇತರೇ ಶೈಕ್ಷಣಿಕ ಸಂಸ್ಥೆಗಳಿಗೆ ಉಚಿತವಾಗಿ ಸಂಚರಿಸಿ ವಿದ್ಯಾಭ್ಯಾಸ ಮುಂದುವರಿಸಲು ಅವಕಾಶ ಕಲ್ಪಿಸಿರುವುದು ವಿಶೇಷವಾಗಿ ಗ್ರಾಮೀಣ ಭಾಗದ ಬಡ ಹಾಗೂ ಮಧ್ಯಮ ವರ್ಗದ ಕುಟುಂಬಗಳ ವಿದ್ಯಾರ್ಥಿಗಳಿಗೆ ಮಹತ್ತರ ವರದಾನವಾಗಲಿದೆ ಎಂದಿದ್ದಾರೆ.

ದೂರದ ಹಳ್ಳಿಗಳಿಂದ ನಗರ ಪ್ರದೇಶಗಳಿಗೆ ವಿದ್ಯಾಭ್ಯಾಸಕ್ಕಾಗಿ ತೆರಳುವ ಸಾವಿರಾರು ವಿದ್ಯಾರ್ಥಿಗಳಿಗೆ ಯೋಜನೆ ಹೊಸ ಭರವಸೆ ನೀಡಲಿದ್ದು, ಶಾಲಾ-ಕಾಲೇಜು ತೊರೆಯುವ ಪ್ರಮಾಣ ಕಡಿಮೆಯಾಗಲು ಮತ್ತು ಉನ್ನತ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಲು ಸಹಕಾರಿಯಾಗಲಿದೆ ಎಂದಿದ್ದಾರೆ.

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಈ ಯೋಜನೆಯ ಅನುಷ್ಠಾನದಿಂದ ವಾರ್ಷಿಕ ಸರಾಸರಿ 335.50 ಕೋಟಿ ರೂ.ಗಳನ್ನು ವೆಚ್ಚವಾಗುವ ಸಾಧ್ಯತೆ ಇದ್ದರೂ, ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಆ ವೆಚ್ಚವನ್ನು ಸರ್ಕಾರವೇ ಭರಿಸುವುದಾಗಿ ಮುಖ್ಯಮಂತ್ರಿಗಳು ಭರವಸೆ ನೀಡಿರುವುದು ಶಿಕ್ಷಣ ಮತ್ತು ಸಾಮಾಜಿಕ ನ್ಯಾಯದ ಬದ್ಧತೆಗೆ ಸಾಕ್ಷಿಯಾಗಿದೆ ಎಂದಿದ್ದಾರೆ.

ಇದರಿಂದ ನಿಗಮದ ಆರ್ಥಿಕ ಸ್ಥಿರತೆಯನ್ನು ಕಾಪಾಡುವುದರ ಜತೆಗೆ ವಿದ್ಯಾರ್ಥಿಗಳ ಹಿತಾಸಕ್ತಿಯನ್ನು ಸಮಾನವಾಗಿ ರಕ್ಷಿಸುವ ಕಾರ್ಯ ನಡೆದಿದೆ. ಶಿಕ್ಷಣ, ಸಾಮಾಜಿಕ ಸಮಾನತೆ ಹಾಗೂ ಯುವಜನರ ಭವಿಷ್ಯ ನಿರ್ಮಾಣಕ್ಕೆ ಹೊಸ ದಿಕ್ಕು ನೀಡುವ ಈ ಮಹತ್ವಾಕಾಂಕ್ಷಿ ಯೋಜನೆಗಾಗಿ ಮುಖ್ಯಮಂತ್ರಿ ಹಾಗೂ ರಾಜ್ಯ ಸರ್ಕಾರಕ್ಕೆ ಅಧ್ಯಕ್ಷ ಅರುಣಕುಮಾರ ಪಾಟೀಲ ಅಭಿನಂದಿಸಿದ್ದಾರೆ. ಕಾರಣ, ಎಲ್ಲ ವಿದ್ಯಾರ್ಥಿಗಳು ಇದರ ಸದುಪಯೋಗ ಪಡೆದು ಉನ್ನತ ಶಿಕ್ಷಣದ ಮೂಲಕ ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಿದ್ದಾರೆ.

ದ.ಕ ಹಾಗೂ ಶಿವಮೊಗ್ಗಕ್ಕೆ ಉಸ್ತುವಾರಿಯಾಗಿ ರೂಪಾಲಿ ಎಸ್.ನಾಯ್ಕ

ಕಾರವಾರ: ಭಾರತೀಯ ಜನತಾ ಪಕ್ಷದ ರಾಜ್ಯ ಉಪಾಧ್ಯಕ್ಷರಾಗಿ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಜೊತೆಗೆ ರಾಜ್ಯಾದ್ಯಂತ ಪಕ್ಷ ಸಂಘಟನೆಯಲ್ಲಿ ಚುರುಕಾಗಿ ತೊಡಗಿಕೊಂಡಿರುವ ರೂಪಾಲಿ ಎಸ್.ನಾಯ್ಕ ಅವರಿಗೆ ದಕ್ಷಿಣ ಕನ್ನಡ ಹಾಗೂ ಶಿವಮೊಗ್ಗ ಜಿಲ್ಲೆಗೆ ಪಕ್ಷದ ಸಂಯೋಜಕರನ್ನಾಗಿ ನಿಯುಕ್ತಿಗೊಳಿಸಲಾಗಿದೆ.



ಪಕ್ಷ ಸಂಘಟನೆಯಲ್ಲಿ ಕ್ರಿಯಾಶೀಲ
ರೂಪಾಲಿ ಎಸ್.ನಾಯ್ಕ ಅವರು ಮಾಜಿ ಶಾಸಕರಾಗಿ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದಲ್ಲಿ ಪಕ್ಷದ ಪದಾಧಿಕಾರಿಗಳು ಹಾಗೂ ಕಾರ್ಯಕರ್ತರ ಸಹಕಾರದಿಂದ ಬಲಿಷ್ಠವಾಗಿ ಸಂಘಟಿಸಿದ್ದಾರೆ. ಹಾಗೆಯೇ ರಾಜ್ಯ ಉಪಾಧ್ಯಕ್ಷರಾಗಿ ಉತ್ತರ ಕನ್ನಡ ಜಿಲ್ಲೆ ಹಾಗೂ ರಾಜ್ಯಾದ್ಯಂತ ಪ್ರವಾಸ ಮಾಡಿ ಪಕ್ಷದ ನಾಯಕರು, ಮುಖಂಡರೊಂದಿಗೆ ಪಕ್ಷ ಸಂಘಟನೆಯಲ್ಲಿ ಕ್ರಿಯಾಶೀಲವಾಗಿ ತೊಡಗಿಕೊಂಡಿದ್ದಾರೆ.

ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳನ್ನು ಗಮನಿಸಲು ರಾಜ್ಯ ಪದಾಧಿಕಾರಿಗಳನ್ನು ವಿವಿಧ ಜಿಲ್ಲೆಗಳಿಗೆ ಸಂಯೋಜಕರನ್ನಾಗಿ ನಿಯುಕ್ತಿ ಮಾಡಿ ಬಿಜೆಪಿ ರಾಜ್ಯಾಧ್ಯಕ್ಷರು ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಉಸ್ತುವಾರಿಯಾಗಿ ನೇಮಕ: ಮುಂಬರುವ ಪಶ್ಚಿಮ ಪದವೀಧರ ಕ್ಷೇತ್ರದಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಸಂಬಂಧಿಸಿದಂತೆ ಕಾರವಾರ ಅಂಕೋಲಾ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕಿಯೂ ಆಗಿರುವ ರೂಪಾಲಿ ಎಸ್.ನಾಯ್ಕ ಹಾಗೂ ಮಾಜಿ ಶಾಸಕ ಸುನೀಲ ನಾಯ್ಕ ಅವರನ್ನು ಜಿಲ್ಲಾ ಉಸ್ತುವಾರಿಗಳನ್ನಾಗಿ ಪಕ್ಷದ ರಾಜ್ಯಾಧ್ಯಕ್ಷರಾದ ಬಿ.ವೈ.ವಿಜಯೇಂದ್ರ ನೇಮಿಸಿ ಆದೇಶ ಹೊರಡಿಸಿದ್ದಾರೆ.

ಮಾಜಿ ಶಾಸಕ ರೇವೂರ ವಿರುದ್ಧ ಎಫ್‌ಐಆರ್ ಖಂಡನೀಯ

ಕಲಬುರಗಿ: ಮಾಜಿ ಶಾಸಕ ದತ್ತಾತ್ರೇಯ ಪಾಟೀಲ ರೇವೂರ ವಿರುದ್ಧ ದಾಖಲಿಸಿರುವ ಎಫ್‌ಐಆರ್ ರಾಜಕೀಯ ದುರುದ್ದೇಶದಿಂದ ಕೂಡಿದ್ದು, ಇದು ಖಂಡನೀಯ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ಖಜಾಂಚಿ, ಕೋಶಾಧ್ಯಕ್ಷ ಚನ್ನಪ್ಪ ಡಿಗ್ಗಾವಿ ಆರೋಪಿಸಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೇವೂರ ಕುಟುಂಬವು ಹಲವು ದಶಕಗಳಿಂದ ಧಾರ್ಮಿಕ, ಸಾಮಾಜಿಕ ಹಾಗೂ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದು, ಜನರ ವಿಶ್ವಾಸ ಗಳಿಸಿರುವ ಕುಟುಂಬವಾಗಿದೆ. ಚಂದ್ರಶೇಖರ ಪಾಟೀಲ ರೇವೂರ, ಅರುಣಾ ಚಂದ್ರಶೇಖರ ಪಾಟೀಲ ರೇವೂರ ಹಾಗೂ ದತ್ತಾತ್ರೇಯ ಪಾಟೀಲ ರೇವೂರ ಅವರನ್ನು ಜನರು ಹಲವು ಬಾರಿ ಚುನಾವಣೆಯಲ್ಲಿ ಗೆಲ್ಲಿಸಿರುವುದು ಅವರ ಸೇವಾ ಮನೋಭಾವಕ್ಕೆ ಸಾಕ್ಷಿಯಾಗಿದೆ ಎಂದು ತಿಳಿಸಿದರು.



ರಾಜಕೀಯ ದುರುದ್ದೇಶ
ಕೋಮು ದ್ವೇಷ ಭಾಷಣದ ಹೆಸರಿನಲ್ಲಿ ರಾಜಕೀಯ ದುರುದ್ದೇಶದಿಂದ ಮಾಜಿ ಶಾಸಕ ಅಪ್ಪುಗೌಡರ ಮೇಲೆ ಎಫ್‌ಐಆರ್ ಹಾಕಿದ್ದು ಖಂಡನಾರ್ಹ. ಎಫ್‌ಐಆರ್ ಹಿಂದೆ ರಾಜಕೀಯ ಷಡ್ಯಂತ್ರ ಅಡಗಿದೆ. ವಿರೋಧಿಗಳು ಸಾಮಾಜಿಕ ಜಾಲತಾಣದಲ್ಲಿ ನಾಲಾಯಕ್ ಹಾಗೂ ಅನೇಕ ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದ್ದು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಕುರುಬ ಸಮಾಜ ಹಾಗೂ ಇಡೀ ಹಿಂದೂ ಸಮಾಜ ಅಪ್ಪುಗೌಡರ ಬೆನ್ನಿಗೆ ನಿಂತಿದೆ ಎಂದು ಕೋಮರಾಮ್ ಭೀಮ ಗೊಂಡ ಕುರುಬ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಮದ್ರಿಕಿ ತಿಳಿಸಿದರು.

ಮುಖಂಡ ನಾಗಲಿಂಗಯ್ಯ ಹಿರೇಮಠ ಮಾತನಾಡಿ, ಸಾಮರಸ್ಯ ಮತ್ತು ಕೋಮು ಸೌಹಾರ್ದತೆಗೆ ಧಕ್ಕೆ ಉಂಟುಮಾಡಿದ್ದಾರೆ ಎಂಬ ಆರೋಪದಡಿ ದತ್ತಾತ್ರೇಯ ರೇವೂರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದು ಅವರ ರಾಜಕೀಯ ಹಾಗೂ ಸಾರ್ವಜನಿಕ ಬದುಕಿಗೆ ಧಕ್ಕೆ ತರುವ ಹುನ್ನಾರವಾಗಿದೆ. ಅವರು ಮಾಡಿದ ಹೇಳಿಕೆಯಲ್ಲಿ ಯಾವುದೇ ಅಸತ್ಯವಿದ್ದರೆ ಅದನ್ನು ಕಾನೂನು ಅಥವಾ ಸಾರ್ವಜನಿಕ ಚರ್ಚೆಯ ಮೂಲಕ ಪ್ರಶ್ನಿಸಬಹುದು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು ಇದೆ ಎಂದು ಅಭಿಪ್ರಾಯಪಟ್ಟರು.

ರೇವೂರ ಕುಟುಂಬವು ಸುಸಂಸ್ಕೃತ ಹಿನ್ನೆಲೆ ಹೊಂದಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಕೆಲವರು ಕೀಳುಮಟ್ಟದ ಹಾಗೂ ಅಸಂವಿಧಾನಿಕ ಪದಗಳನ್ನು ಬಳಸಿ ಅವಹೇಳನ ಮಾಡುತ್ತಿರುವುದು ಖಂಡನೀಯ. ಇಂತಹ ಪೋಸ್ಟ್‌ಗಳ ವಿರುದ್ಧ ನಗರ ಪೊಲೀಸ್ ಆಯುಕ್ತರು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ರೇವೂರ ಅವರ ಹಿಂದೆ ಸಮಸ್ತ ವೀರಶೈವ ಲಿಂಗಾಯತ ಸಮುದಾಯ ನಿಂತಿದೆ ಎಂದು ಮುಖಂಡರು ಹೇಳಿದರು.

ಶಾಂತಕುಮಾರ್ ದುದನಿ ಮಾತನಾಡಿದರು. ಶರಣು ಟೆಂಗಳಿ, ಶರಣು ಸಜ್ಜನ್, ರವಿ ಮಹಾಗಾಂವ್, ಶಿವಲಿಂಗ ಪಾಟೀಲ್, ಆನಂದ ಲೇಂಗಟಿ, ರವೀಂದ್ರ, ಭಾಗಣ್ಣಾ ಸ್ವಾದಿ, ಸತೀಶ್, ಶರಣಗೌಡ ಪಾಟೀಲ, ವೀರಣ್ಣ, ಗುರುಶಾಂತ್, ವೀರಣ್ಣ ಅವರಾದಿ ಇದ್ದರು.

ರಾಜ್ಯದಲ್ಲಿ ಬಿತ್ತನೆ ಬೀಜ, ಗೊಬ್ಬರದ ಕೊರತೆ: ಬೊಮ್ಮಾಯಿ

ಶಿಗ್ಗಾವಿ: ರಾಜ್ಯದಲ್ಲಿ ಮುಂಗಾರು ಆರಂಭವಾಗಿದ್ದು, ನನ್ನ ನಿರೀಕ್ಷೆ ಹುಸಿಯಾಗಿದೆ ಅಲ್ಲಲ್ಲಿ ಬಿತ್ತನೆ ಬೀಜ ಮತ್ತು ಗೊಬ್ಬರದ ಕೊರತೆಯಾಗಿದೆ. ಕೂಡಲೇ ರಾಜ್ಯ ಸರ್ಕಾರ ರೈತರಿಗೆ ಬಿತ್ತನೆ ಬೀಜ, ಗೊಬ್ಬರದ ವ್ಯವಸ್ಥೆ ಮಾಡಿ ನ್ಯಾಯಸಮ್ಮತ ರೀತಿಯಲ್ಲಿ ಅದು ಮುಟ್ಟುವಂತೆ ಮಾಡಬೇಕು ಎಂದು ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ.



ಶಿಗ್ಗಾವಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈಗಾಗಲೇ ಬ್ಲಾಕ್ ಮಾರ್ಕೆಟ್ ಆರಂಭವಾಗಿದೆ. ಯುದ್ಧದ ನೆಪ ಮಾಡಿಕೊಂಡು ಗೊಬ್ಬರವನ್ನ ದಾಸ್ತಾನು ಮಾಡಿಟ್ಟುಕೊಂಡು ಅತೀ ಹೆಚ್ಚಿಗೆ ದರದಲ್ಲಿ ರೈತರಿಗೆ ವಿತರಿಸಲಾಗುತ್ತಿದೆ. ಇದರಿಂದ ರೈತ ಅಸಹಾಯಕನಾಗಿದ್ದಾನೆ. ನಾನು ಸಿಎಂ ಇದ್ದಾಗ ರೈತರಿಗೆ ಯಾವುದೇ ಬಿತ್ತನೆ ಬೀಜ, ಗೊಬ್ಬರದ ಕೊರತೆಯಾಗದಂತೆನೋಡಿಕೊಂಡಿದ್ದೆ. ಕೃಷಿ ಖಾತೆಯನ್ನೇ ಇನ್ನೂ ಯಾರಿಗೂ ಕೊಟ್ಟಿಲ್ಲ, ರೈತರ ಕಾಳಜಿಯುಳ್ಳ ಓರ್ವ ಹಿರಿಯರಿಗೆ ಕೃಷಿ ಸಚಿವ ಸ್ಥಾನವನ್ನ ನೀಡಬೇಕು ಎಂದು ಸಲಹೆ ನೀಡಿದರು.

ಹೊಸ ಆಡಳಿತ ವ್ಯವಸ್ಥೆ ಬರುತ್ತದೆ ಎಂಬ ನಿರೀಕ್ಷೆ ಹುಸಿಯಾಗಿದೆ. ಅದೇ ಹಳೆಯ ಮಂತ್ರಿಗಳು, ಅದೇ ವ್ಯವಸ್ಥೆ ಮುಂದುವರಿದಿದೆ. ಆದ್ದರಿಂದ ಈ ಸರ್ಕಾರದಿಂದ ಜನಪರವಾದ ಆಡಳಿತವನ್ನ ನಿರೀಕ್ಷೆ ಮಾಡಲು ಸಾಧ್ಯವಿಲ್ಲ, ಪ್ರತಿ ಜಿಲ್ಲೆಯಲ್ಲಿಯೂ ಸಮಸ್ಯೆಗಳು ಇವೆ. ನೂತನ ಸಿಎಂ ಡಿಕೆಶಿ ಅವರು ಆಡಳಿತದ ನಿಯಂತ್ರಣ ಎಷ್ಟು ಮಾಡಲು ಸಾಧ್ಯ ಎಂಬುದು ಸಾರ್ವಜನಿಕವಾಗಿಯೇ ಕೇಳಿ ಬರುತ್ತಿರುವ ಪ್ರಶ್ನೆಯಾಗಿದೆ. ಹಣಕಾಸಿನ ಸುಧಾರಣೆ ಮಾಡುವ ಬಗ್ಗೆ ಯಾರಿಗೂ ಖಾಳಜಿ ಇಲ್ಲವಾಗಿದೆ. ರಾಜ್ಯದ ಆರ್ಥಿಕ ಪರಿಸ್ಥಿತಿ ದುಸ್ಥಿತಿಯಲ್ಲಿದ್ದು, ಹಿಂದಿನ ಸಿಎಂ ಸಿದ್ದರಾಮಯ್ಯ ಅವರು ಬಿಟ್ಟು ಹೋದ ಹಣಕಾಸಿನ ಸ್ಥಿತಿ ಕುರಿತು ಸಿಎಂ ಡಿ.ಕೆ. ಶಿವಕುಮಾರ ಶ್ವೇತಪತ್ರ ಹೊರಡಿಸಲಿ ಎಂದು ಆಗ್ರಹಿಸಿದರು.

4.5 ಲಕ್ಷ ಕೋಟಿ ಬಜೆಟ್ ಮಾಡಿದ್ದಾರೆ. ಅದರ ಶೇ.90 ರಷ್ಟು ಬದ್ಧತಾ ವೆಚ್ಚಕ್ಕೆ ಹೋಗುತ್ತಿದೆ. ಯಾವ ಅಭಿವೃದ್ಧಿ ಕಾರ್ಯಕ್ಕೆ ಹೋಗುತ್ತಿಲ್ಲ, ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕವನ್ನು ಯಾವ ರೀತಿ ಮುನ್ನಡಿಸುತ್ತಾರೆ. ಸಿಎಂ ಶಿವಕುಮಾರ ಸಾರ್ವಜನಿಕವಾಗಿ ತಿಳಿಸಬೇಕು ಅದು ಅವರ ಜವಾಬ್ದಾರಿ ಎಂದು ತಿಳಿಸಿದ ಬೊಮ್ಮಾಯಿ, ನಾನು ಸಿಎಂ ಆಗಿ ಅಧಿಕಾರ ವಹಿಸಿಕೊಂಡ ಕೋವಿಡ್ ವೇಳೆಯಲ್ಲಿ ಹಣಕಾಸಿನ ಸಮಸ್ಯೆಯಿದ್ದರೂ ಸರಿಯಾದ ಆರ್ಥಿಕ ನಿರ್ವಹಣೆ ಮಾಡಿ, ಸೋರಿಕೆ ತಡೆದು ಅನಾವಶ್ಯಕ ವೆಚ್ಚಗಳನ್ನು ಕಡಿಮೆ ಮಾಡಿ ಕೆಲಸ ಮಾಡಿದ್ದೇವೆ. ಇಂತಹ ಧೈರ್ಯ ಮಾಡುತ್ತಾರಾ ಎಂದು ಪ್ರಶ್ನಿಸಿದರು.

ಹರಿಪ್ರಸಾದ್ ಸೇರಿ 4 ನಾಮಪತ್ರ

• **ಬೆಂಗಳೂರು:** ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್‌ನಿಂದ ಬಿ.ಕೆ ಹರಿಪ್ರಸಾದ್, ತಿಪ್ಪಣಪ್ಪ ಕಮಕನೂರ, ಪಿ.ವಿ.ಮೋಹನ್ ಮತ್ತು ಬಿ.ಎಸ್. ಶಿವಣ್ಣ ನಾಮಪತ್ರ ಸಲ್ಲಿಸಿದ್ದು, ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಇನ್ನೂ ನಾಮಪತ್ರ ಸಲ್ಲಿಸಿಲ್ಲ. ಶನಿವಾರ ಶಾಸಕ ನರೇಂದ್ರಸ್ವಾಮಿ, ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್




ಜತೆಗೆ ಆಗಮಿಸಿದ ಬಿ.ಕೆ. ಹರಿಪ್ರಸಾದ್ ಅವರು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರಿಗೆ ನಾಮಪತ್ರ ಸಲ್ಲಿಸಿದರು. ಐದನೇ ಅಭ್ಯರ್ಥಿಯನ್ನು ಕಾಂಗ್ರೆಸ್ ಕಣಕ್ಕೆ ಇಳಿಸಿರುವುದಾಗಿ ಕಾಂಗ್ರೆಸ್ ಘೋಷಣೆ ಮಾಡಿದ್ದು, ಆದರೆ ಅಭ್ಯರ್ಥಿ ಇನ್ನೂ ನಾಮಪತ್ರ ಸಲ್ಲಿಸಿಲ್ಲ. ಬಿಜೆಪಿಯ ಪಟ್ಟಿ ಅಭ್ಯರ್ಥಿಗಳನ್ನು ನೋಡಿಕೊಂಡು ಐದನೇ ಅಭ್ಯರ್ಥಿ ನಾಮಪತ್ರ ಸಲ್ಲಿಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ. ಇನ್ನೂ ಬಿಜೆಪಿ ಅಭ್ಯರ್ಥಿಗಳನ್ನು ಘೋಷಿಸಿಲ್ಲ. ಒಂದು ವೇಳೆ ಕಾಂಗ್ರೆಸ್ ಐದನೇ ಅಭ್ಯರ್ಥಿ ಕಣಕ್ಕೆ ಇಳಿಸಿದ್ದಲ್ಲಿ ವಿಧಾನಸಭೆ ಚುನಾವಣೆ ತುರುಸುಗೊಳ್ಳಲಿದೆ.

ಮನ್ಸೂರ್, ಪವನ್ ಖೇರಾ ನಾಮಪತ್ರ

ರಾಜ್ಯದ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ, ಮನ್ಸೂರ್ ಅಲಿ ಖಾನ್ ಮತ್ತು ಪವನ್ ಖೇರಾ ನಾಮಪತ್ರ ಸಲ್ಲಿಸಿದರು. ಈ ವೇಳೆ ಸಿಎಂ ಡಿ.ಕೆ ಶಿವಕುಮಾರ್, ಮಾಜಿ ಸಿಎಂ ಸಿದ್ದರಾಮಯ್ಯ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಉಪಸ್ಥಿತರಿದ್ದರು.

ರಾಮಬಾಣ



ಡ್ರಗ್ಸ್ ವ್ಯಸನ ಸಮಾಜಕ್ಕೆ ಸವಾಲು

• **ಬೆಂಗಳೂರು:** ಮಾದಕ ದ್ರವ್ಯ ವ್ಯಸನವು ಕೇವಲ ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆಯಾಗಿ ಉಳಿದಿಲ್ಲ, ಇದು ಇಡೀ ಸಮಾಜವನ್ನು ಕಾಡುತ್ತಿರುವ ಸಾರ್ವಜನಿಕ ಆರೋಗ್ಯ ಮತ್ತು ಸಾಮಾಜಿಕ ಸವಾಲಾಗಿದೆ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಜಸ್ಟಿಸ್ ಜಾನ್ ಮೈಕಲ್ ಕುನ್ಹಾ ಹೇಳಿದರು.

ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಮಾದಕ ವಸ್ತು ನಿಯಂತ್ರಣ ದಳ, ಗೃಹ ಇಲಾಖೆ, ನಿಮ್ಹಾನ್ಸ್ ಸೇರಿದಂತೆ ವಿವಿಧ ಇಲಾಖೆಗಳು ಹಾಗೂ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾದಕ ದ್ರವ್ಯ ದುರುಪಯೋಗ ತಡೆ ಕುರಿತ ರಾಜ್ಯಮಟ್ಟದ ಸಮಾಲೋಚನಾ ಸಭೆಯಲ್ಲಿ ಅವರು ಮಾತನಾಡಿದರು.

ವ್ಯಸನ ನೈತಿಕ ವೈಫಲ್ಯವಲ್ಲ–ಅದೊಂದು ಕಾಯಿಲೆ: ಇತ್ತೀಚಿನ ದಿನಗಳಲ್ಲಿ ಯುವಜನತೆಯಲ್ಲಿ ಮಾದಕ ದ್ರವ್ಯಗಳ ಬಳಕೆಯ ವಯಸ್ಸು ಕಡಿಮೆಯಾಗುತ್ತಿರುವುದು ಅತ್ಯಂತ ಆತಂಕಕಾರಿ ಬೆಳವಣಿಗೆ. ವ್ಯಸನವನ್ನು ನೈತಿಕ ವೈಫಲ್ಯವಾಗಿ ನೋಡದೆ ವೈದ್ಯಕೀಯ ಸಮಸ್ಯೆಯಾಗಿ ಪರಿಗಣಿಸಬೇಕು ಎಂದು ತಿಳಿಸಿದರು.

ಮಹಿಳೆಯರು ಮತ್ತು ಮಕ್ಕಳ ಮೇಲೆ ಇದರ ದುಷ್ಪರಿಣಾಮ ಹೆಚ್ಚಾಗುತ್ತಿದ್ದು, ಅವರಿಗೆ ವಿಶೇಷ ರಕ್ಷಣೆ ಹಾಗೂ ಪುನರ್‌ವಸತಿಯ ಅಗತ್ಯವಿದೆ. ಮಾದಕ ವ್ಯಸನದಿಂದ ಬಳಲುತ್ತಿರುವವರಿಗೆ ಸೂಕ್ತ ಚಿಕಿತ್ಸೆ ಮತ್ತು ಪುನರ್‌ವಸತಿ ಕಲ್ಪಿಸಲು ಎನ್‌ಡಿಪಿಎಸ್ ಕಾಯ್ದೆಯ ಸೆಕ್ಷನ್ 64ಎ ಅನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವಂತೆ ನ್ಯಾಯಾಂಗ ಅಧಿಕಾರಿಗಳು ಮತ್ತು ವಕೀಲರಿಗೆ ಮನವಿ ಮಾಡಿದರು.

ಕುಟುಂಬದ ಸಮಸ್ಯೆಗಳೂ ಕಾರಣ: ಹೈಕೋರ್ಟ್ ನ್ಯಾಯಮೂರ್ತಿ ಹಾಗೂ ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಅಧ್ಯಕ್ಷ ಜಸ್ಟಿಸ್ ಜಯಂತ್ ಬ್ಯಾನರ್ಜಿ ಅವರು ಮಾತನಾಡಿ, ಮಾದಕ ವ್ಯಸನವು ಕೇವಲ ವೈಯಕ್ತಿಕ ಸಮಸ್ಯೆಯಲ್ಲ. ಇದು ಮಾನಸಿಕ ಆರೋಗ್ಯ, ನಿರುದ್ಯೋಗ, ಕೌಟುಂಬಿಕ ಕಲಹಗಳು ಮತ್ತು ಸಾಮಾಜಿಕ ಪರಿಸ್ಥಿತಿಗಳೊಂದಿಗೆ ನೇರ ಸಂಬಂಧ ಹೊಂದಿದೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಜ್ಞಾನವು ಇತರರನ್ನು ಆಳಲು ಅಸ್ತ್ರವಾಗಬಾರದು, ಬದಲಿಗೆ ಅದು ಎಲ್ಲರ ಒಳಿತಿಗೆ ಬಳಕೆಯಾಗಬೇಕು

– ಜೆ. ನಂದ ಕುಮಾರ್

– ಜ್ಞಾನ, ವಿಜ್ಞಾನ, ಶಿಕ್ಷಣ, ರಾಜಕಾರಣಗಳು ವ್ಯಾಪಾರವಾದಾಗ ಎಲ್ಲರ ಒಳಿತಿಗಾಗಿ ಎಂಬ ಜಾಹೀರಾತಿನಡಿಯಲ್ಲಿ ಒಬ್ಬರ ಒಳಿತಿಗೆ ಬಳಕೆಯಾಗುತ್ತದೆ!

ದಿನ ಭವಿಷ್ಯ

ಮೇಷ
ಭಾವನಾತ್ಮಕ ಏರುಪೇರು. ಗ್ರಹಗತಿ ಅಷ್ಟೇನೂ ಪೂರಕವಾಗಿಲ್ಲ. ಮುಖ್ಯ ನಿರ್ಧಾರ ಕಾರ್ಯಗತ ಮಾಡಲು ಕಾಯುವುದು ಒಳಿತು.

ವೃಷಭ
ಆರ್ಥಿಕವಾಗಿ, ವೈಯಕ್ತಿಕವಾಗಿ ಸಮಸ್ಯೆ ಎದುರಿಸುವಿರಿ. ಪರಿಸ್ಥಿತಿ ನಿಮಗೆ ಪ್ರತಿಕೂಲ. ಇಷ್ಟದೇವರ ಪ್ರಾರ್ಥನೆ ಮಾಡಿ, ಒಳಿತಾಗುವುದು.

ಮಿಥುನ
ವೃತ್ತಿ ಕೌಶಲ ಸುಧಾರಣೆಗೆ ಪ್ರೇರಣೆ ಸಿಗಲಿದೆ. ಮನೆಯವರ ಜತೆ ಹೊಂದಾಣಿಕೆ ಮುಖ್ಯ. ಸಣ್ಣ ವಿಷಯಕ್ಕೆ ಸಂಘರ್ಷಕ್ಕೆ ಇಳಿಯದಿರಿ.

ಕಟಕ
ಸಂಗಾತಿಯ ಅಭಿಪ್ರಾಯಕ್ಕೆ ಮನ್ನಣೆ ಕೊಡಿ. ಆದರಿಂದ ವಿವಾದ ಅಂತ್ಯ. ವೃತ್ತಿಯಲ್ಲಿ ಹಿರಿಯರ ಸಹಕಾರ. ಆರ್ಥಿಕ ಒತ್ತಡ ಅಂತ್ಯ.

ಸಿಂಹ
ಆರ್ಥಿಕ ಪರಿಸ್ಥಿತಿ ಸುಧಾರಣೆ. ಕಾಡುತ್ತಿದ್ದ ಚಿಂತೆ ಪರಿಹಾರದ ಲಕ್ಷಣ ತೋರಿಬರುತ್ತಿದೆ. ಕೋಪತಾಪ ನಿಯಂತ್ರಿಸಿ. ಸಮಾಧಾನಚಿತ್ತರಾಗಿರಿ.

ಕನ್ಯಾ
ಗ್ರಹಗತಿ ಪೂರಕ. ಸಂಬಂಧದಲ್ಲಿ ಸುಧಾರಣೆ. ಮಾನಸಿಕ ನಿರಾಳತೆ. ಹಣದ ಬಿಕ್ಕಟ್ಟು ಪರಿಹಾರ. ಹಳೆಯ ಸ್ನೇಹಿತರ ಭೇಟಿ. ಇಷ್ಟದ ವಸ್ತು ಖರೀದಿ.

ತುಲಾ
ನಿಮ್ಮ ಸುತ್ತಲಿನ ಬದಲಾವಣೆಗೆ ಒಗ್ಗಿಕೊಳ್ಳಿ. ದೂರವಾಗಿ ನಿಲ್ಲಬೇಡಿ. ಸಣ್ಣ ವಿಷಯಕ್ಕೆ ಅಸಹನೆಯಿಂದ ರೇಗದಿರಿ. ಶಾಂತಚಿತ್ತತೆ ಮುಖ್ಯ.

ವೃಶ್ಚಿಕ
ಉತ್ಸಾಹದ ದಿನ. ಕಾರ್ಯ ಸಂಪೂರ್ಣ. ಭಿನ್ನಮತ ನಿವಾರಣೆ. ಜಡತ್ವ ಬಿಟ್ಟು ಕೆಲಸ ಮಾಡಿ. ಆರೋಗ್ಯ ಸಮಸ್ಯೆ ಪರಿಹಾರದಿಂದ ನೆಮ್ಮದಿ.

ಧನು
ನಿಮ್ಮ ತಪ್ಪಿಗೆ ಇತರರ ಮೇಲೆ ದೂರು ಹಾಕಬೇಡಿ. ನಿಮ್ಮ ಸಮಸ್ಯೆ ನೀವು ಭಾವಿಸಿದಷ್ಟು ಕಠಿಣವಾಗಿಲ್ಲ. ಪರಿಹಾರ ಸಾಧ್ಯವಿದೆ.

ಮಕರ
ಮನೆಯವರ ಜತೆ ಪ್ರೀತಿಯಿಂದ ನಡಕೊಳ್ಳಿ. ಅಧಿಕಾರ ಚಲಾವಣೆ ಒಳಿತು ತರದು. ಮುನಿಸು ನಿವಾರಣೆಗೆ ಗಮನ ಕೊಡಿ. ವೆಚ್ಚ ಅಧಿಕ.

ಕುಂಭ
ನಿಮ್ಮ ಅಸಹನೆಗೆ ಇತರರ ಮೇಲೆ ರೇಗುವಿರಿ. ಸಂಘರ್ಷದ ಮನೋಭಾವ ಬಿಡಿ. ಇತರರ ಮನಸ್ಥಿತಿ ಅರಿತು ವ್ಯವಹರಿಸಿ.

ಮೀನ
ಅಶಾಂತ ಮನಸ್ಸು. ನಿಮ್ಮ ಚಿಂತನೆಗಳು ಕಾರ್ಯರೂಪಕ್ಕೆ ಬರದಿರುವ ಚಿಂತೆ. ಅಧ್ಯಾತ್ಮ, ಧ್ಯಾನ ನಿಮಗೆ ಸಹಕಾರಿಯಾದೀತು.

ರಾಹುಕಾಲ: 4.30-6.00
ಗುಳಿಕಕಾಲ: 3.00-4.30

ಅದೃಷ್ಟ ಸಂಖ್ಯೆ : 0,7,3,8

ನಾವು ಧರ್ಮ ಬಿಟ್ಟು ಇರಲಾಗುವುದಿಲ್ಲ: ಸಿಎಂ ಡಿ.ಕೆ.ಶಿವಕುಮಾರ್

ಎಲ್ಲಾ ಧರ್ಮಕ್ಕೂ ಗೌರವ



ನಾನು ಯಾವ ದೇವರಿಗೂ ಹರಕೆ ಹೊತ್ತಿಲ್ಲ. ನನ್ನ ಭಾವನೆ, ಭಕ್ತಿ ಹಾಗೂ ಜನರಿಗೆ ಒಳ್ಳೆಯದಾಗಲಿ, ನನಗೆ ಸಿಕ್ಕಿರುವ ಅಧಿಕಾರ ಜನರಿಗೆ ಸಮರ್ಪಣೆಯಾಗಲಿ, ರಾಜ್ಯದ ಜನರಿಗೆ ನೆಮ್ಮದಿ ಶಾಂತಿ ಸಿಗಲಿ, ರಾಜ್ಯದ ಕೆರೆಗಳು ತುಂಬಿ ತುಳುಕಲಿ ಎಂದು ಪ್ರಾರ್ಥಿಸಿದ್ದೇನೆ.

■ **ಡಿ.ಕೆ.ಶಿವಕುಮಾರ್,** ಮುಖ್ಯಮಂತ್ರಿ

• **ತುಮಕೂರು:** ಪ್ರಮಾಣವಚನ ಸಂದರ್ಭದಲ್ಲಿ ಹಿಂದು ಶಾಸ್ತ್ರಗಳನ್ನು ಪಾಲಿಸಿದ್ದೇನೆ. ನನಗೆ ರಾಜಕಾರಣ ಮುಖ್ಯವಲ್ಲ, ಇದು ಭಕ್ತ ಹಾಗೂ ಭಗವಂತನ ನಡುವಣ ಸಂಬಂಧ. ನಾನು ಎಲ್ಲಾ ಧರ್ಮವನ್ನು ಗೌರವಿಸುತ್ತೇನೆ. ಹೀಗಾಗಿ ಎಲ್ಲಾ ಧರ್ಮ ಪೀಠಗಳನ್ನು ಆಹ್ವಾನಿಸಿದ್ದೆ. ನಾವು ನಮ್ಮ ಧರ್ಮ ಬಿಡಲು ಆಗುವುದೇ? ನಮ್ಮ ಹೆಸರು ಬದಲಿಸಲು ಸಾಧ್ಯವೇ? ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದ್ದಾರೆ. ತುಮಕೂರಿನ ನೊಣವಿನಕೆರೆಯ ಕಾಡಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿ ಮಾತನಾಡಿದ ಅವರು, ಯಾವುದೇ ಧರ್ಮವಾಗಲಿ, ನಾವು ಧರ್ಮ ಬಿಟ್ಟು ಇರಲಾಗುವುದಿಲ್ಲ, ಪ್ರತಿ ಮನೆಯಲ್ಲಿ ನಾಮಕರಣ, ಕಿವಿ ಚುಚ್ಚುವ ಶಾಸ್ತ್ರ, ಉಪನಯನ ಮಾಡಿದರೂ ಧರ್ಮದ ಮೇಲೆ ಮಾಡಲಾಗುವುದು. ರಾಜ್ಯದ ಹಿತ ಕಾಪಾಡುವ ಜವಾಬ್ದಾರಿ ತಮ್ಮ ಮೇಲಿದ್ದು, ಎಲ್ಲರ ಆಶೀರ್ವಾದ ಪಡೆದು ನಾನು ಕೆಲಸ ಪ್ರಾರಂಭಿಸಿದ್ದೇನೆ ಎಂದು ತಿಳಿಸಿದರು.

ಈ ಮಠಕ್ಕೆ ಸಿಎಂ ಆಗಿಯಲ್ಲ, ಭಕ್ತನಾಗಿ ಬಂದಿರುವೆ

ನೊಣವಿನಕೆರೆ ಕಾಡಸಿದ್ದೇಶ್ವರ ಮಠಕ್ಕೆ ನಾನು ಹೊಸಬನಲ್ಲ, ನಾನು ಇಲ್ಲಿಗೆ ಸಿಎಂ ಆಗಿಯಲ್ಲ, ಒಬ್ಬ ಭಕ್ತನಾಗಿ ಬಂದಿರುವೆ. ಕಳೆದ 25 ವರ್ಷಗಳಿಂದ ನಾನು ಈ ಮಠಕ್ಕೆ ಬರುತ್ತಿದ್ದೇನೆ. ಇದುವರೆಗೂ ಎಷ್ಟು ಬಾರಿ ಈ ಮಠಕ್ಕೆ ಬಂದಿದ್ದೇನೊ ಲೆಕ್ಕವಿಲ್ಲ, ನನ್ನ ಜೀವನದ ಪ್ರತಿ ಹಂತದಲ್ಲೂ ನಾನು ಇಲ್ಲಿಗೆ ಬಂದು ಸೇವೆ ಮಾಡಿ, ಪ್ರಾರ್ಥಿಸಿ ಮಾರ್ಗದರ್ಶನ ಪಡೆದಿದ್ದೇನೆ. ಚುನಾವಣೆಗೂ ಮುನ್ನ, ಚುನಾವಣೆ ನಂತರ, ಅಧಿಕಾರ ಸ್ವೀಕಾರದ ನಂತರ ಎಲ್ಲ ಸಂದರ್ಭದಲ್ಲಿ ಬಂದಿದ್ದೇನೆ. ಇಲ್ಲಿ ಭಕ್ತ ಹಾಗೂ ಭಗವಂತನ ಸಂಬಂಧವಿದೆ. ಪ್ರಾರ್ಥನೆ ಮಾಡಲು ಇಲ್ಲಿಗೆ ಬಂದಿರುವೆ ಎಂದು ತಿಳಿಸಿದರು.

ಮಲ್ಲಘಟ್ಟ ಕೆರೆಗೆ ಭೇಟಿ, ಪರಿಶೀಲನೆ

ತುಮಕೂರಿನ ನೊಣವಿನಕೆರೆಯ ಬುರುಡೆಘಟ್ಟದ ಮಲ್ಲಘಟ್ಟ ಕೆರೆಯ ಕಾಮಗಾರಿಗಳನ್ನು ಪರಿಶೀಲನೆ ಮಾಡಿದ ಮುಖ್ಯಮಂತ್ರಿಗಳು, ಪವಿತ್ರವಾದ ಮಲ್ಲಘಟ್ಟ ಪ್ರದೇಶದ ಅಭಿವೃದ್ಧಿಗೆ ಈಗಾಗಲೇ 35 ಕೋಟಿ ರೂ. ಮೊತ್ತದ ಕಾಮಗಾರಿಗಳು ನಡೆಯುತ್ತಿದೆ. ಇನ್ನೂ ಹೆಚ್ಚಿನ ಅಭಿವೃದ್ಧಿಗೆ ಏನು ಮಾಡಬೇಕು ಎಂದು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಕಾಡುಸಿದ್ದೇಶ್ವರ ಮಠದವರೊಂದಿಗೆ ಚರ್ಚೆ ನಡೆಸಿದ್ದು, ಎಲ್ಲರ ಸಲಹೆ ಪಡೆದು ಅಗತ್ಯ ನೆರವು ನೀಡುವ ಭರವಸೆ ನೀಡಿದರು. ನಾನು ಈ ಹಿಂದೆ ಮೂರ್ನಾಲ್ಕು ಬಾರಿ ಈ ಐತಿಹಾಸಿಕ ಮಲ್ಲಘಟ್ಟದ ಗಂಗಾಧರೇಶ್ವರ ದೇವಾಲಯಕ್ಕೆ ಬಂದಿದ್ದೇನೆ. ಎಲ್ಲಾ ಊರಿನ ದೇವತೆಗಳನ್ನು ಇಲ್ಲಿಗೆ ಕರೆತಂದು ಸ್ನಾನ ಮಾಡಿಸುತ್ತಾರೆ. ನನ್ನ ಮನೆ ಗೃಹಪ್ರವೇಶ ಸಂದರ್ಭದಲ್ಲಿ ಐದು ಕಡೆಗಳಿಂದ ನೀರನ್ನು ತರಿಸಲಾಗಿತ್ತು, ಆ ಪೈಕಿ ಈ ಕೆರೆಯೂ ಒಂದಾಗಿದೆ. ಈ ಕೆರೆಯಲ್ಲಿ ಸದಾ ನೀರು ತುಂಬಿ ತುಳುಕುತ್ತಿರುತ್ತದೆ. ಕಳೆದ 25 ವರ್ಷಗಳಿಂದ ನಾನು ಈ ಪ್ರದೇಶವನ್ನು ಗಮನಿಸುತ್ತಿದ್ದು, ಇಲ್ಲಿಗೆ ಬಂದಾಗ ನನ್ನ ಮನಸ್ಸಿಗೆ ನೆಮ್ಮದಿ ಸಂತೋಷ ಸಿಗುತ್ತದೆ. ರೈತರು, ಸುತ್ತಮುತ್ತಲಿನ ಜನರಿಗೆ ಅನುಕೂಲವಾಗುವಂತೆ ಕಾಲುವೆ ವ್ಯವಸ್ಥೆ, ಸಮುದಾಯಭವನ, ಅತಿಥಿ ಗೃಹ ಸೇರಿದಂತೆ ಹಲವು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗಿದೆ ಎಂದು ತಿಳಿಸಿದರು.

ಜರ್ಮನಿ ಸಂಸ್ಥೆಗೆ ಜಿಟಿಟಿಸಿ ವಿದ್ಯಾರ್ಥಿಗಳ ಆಯ್ಕೆ

• **ಬೆಂಗಳೂರು:** ಕರ್ನಾಟಕ ಮತ್ತು ಜರ್ಮನಿ ನಡುವೆ ಕೌಶಲ್ಯಪೂರ್ಣ ಸಹಕಾರ ಸಂಬಂಧ ವೃದ್ಧಿಸಲು ಮಹತ್ವದ ಹೆಜ್ಜೆ ಇಡಲಾಗಿದೆ. ಈ ನಿಟ್ಟಿನಲ್ಲಿ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ (ಜಿಟಿಟಿಸಿ) ಐವರು ವಿದ್ಯಾರ್ಥಿಗಳನ್ನು ಜರ್ಮನಿಯ ಡಸೆಲ್ಡಾರ್ಫ್‌ನ ಪ್ರಮುಖ ಸಾರ್ವಜನಿಕ ಸಾರಿಗೆ ಸಂಸ್ಥೆಯಾದ ರೈನ್‌ಬಾನ್ ಎಜಿ ಉದ್ಯೋಗಕ್ಕೆ ಆಯ್ಕೆ ಮಾಡಿಕೊಂಡಿದೆ.

ವಿಕಾಸಸೌಧದಲ್ಲಿ ನಡೆದ ಸಮಾರಂಭದಲ್ಲಿ ಕೌಶಲ್ಯಾಭಿವೃದ್ಧಿ ಸಚಿವ ಡಾ. ಶರಣಪ್ರಕಾಶ್ ಪಾಟೀಲ್, ಹಿರಿಯ ಅಧಿಕಾರಿಗಳ ಸಮ್ಮುಖದಲ್ಲಿ ರೈನ್‌ಬಾನ್ ಎಜಿ ನೀಡಿದ ಒಪ್ಪಿತ ಪತ್ರಗಳನ್ನು (ಎಲ್‌ಒಐ) ಐದೂ ಅಭ್ಯರ್ಥಿಗಳಿಗೆ ಹಸ್ತಾಂತರಿಸಿದರು. ಈಗ ಆಯ್ಕೆಯಾದ ಜಿಟಿಟಿಸಿ ಅಭ್ಯರ್ಥಿಗಳು ಡಸೆಲ್ಡಾರ್ಫ್ ರೈನ್‌ಬಾನ್ ಎಜಿಯಲ್ಲಿ ತರಬೇತಿ ಪಡೆದು, ವಿಶ್ವದರ್ಜೆಯ ಕೈಗಾರಿಕಾ ಅನುಭವ ಮತ್ತು ಔಪಚಾರಿಕ ಜರ್ಮನ್ ಪ್ರಮಾಣೀಕರಣ ಪಡೆಯಲಿದ್ದಾರೆ. ಸೆಪ್ಟೆಂಬರ್ 2026ರಿಂದ ಆರಂಭವಾಗುವ ಜರ್ಮನ್ ಅಸ್ಬಿಲ್ಡಿಂಗ್ (ದ್ವಿಮುಖ ವೃತ್ತಿಪರ ತರಬೇತಿ) ಕಾರ್ಯಕ್ರಮದಡಿ ಉದ್ಯೋಗಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಜಾಗತಿಕವಾಗಿ ಮಾನ್ಯತೆ ಪಡೆದ ಜರ್ಮನ್ ವೃತ್ತಿಪರ ಶಿಕ್ಷಣ ಪದ್ಧತಿಯಾದ ಅಸ್ಬಿಲ್ಡಂಗ್, ರಚನಾತ್ಮಕ ತರಗತಿ ಬೋಧನೆ ಮತ್ತು ಪ್ರಾಯೋಗಿಕ ಕಾರ್ಯಸ್ಥಳ ತರಬೇತಿಯನ್ನು ಒದಗಿಸುತ್ತದೆ. ಅಂತರರಾಷ್ಟ್ರೀಯ ಮಾನ್ಯತೆಯ ಪ್ರಮಾಣಪತ್ರವನ್ನೂ ನೀಡುತ್ತದೆ. ಇಲಾಖೆಯ ಪ್ರಧಾನ ಕಾರ್ಯದರ್ಶಿ ಸುಬೋಧ್ ಯಾದವ್ ಇದ್ದರು.



ಜಾಗತಿಕ ಅವಕಾಶ ಒದಗಿಸಲು ಬದ್ಧ

ಸಚಿವ ಡಾ. ಪಾಟೀಲ್ ಮಾತನಾಡಿ, ಇದು ರಾಜ್ಯಕ್ಕೆ ಹೆಮ್ಮೆಯ ಕ್ಷಣ. ನಮ್ಮ ಯುವಕರು ವಿಶ್ವದ ಅತ್ಯುತ್ತಮರೊಂದಿಗೆ ಸ್ಪರ್ಧಿಸುವ ಪ್ರತಿಭೆ ಮತ್ತು ಶಿಸ್ತನ್ನು ಹೊಂದಿದ್ದಾರೆ. ಇಂತಹ ಅಂತರರಾಷ್ಟ್ರೀಯ ಪಾಲುದಾರಿಕೆಗಳ ಮೂಲಕ ಕೌಶಲ್ಯಪೂರ್ಣ ಯುವಕ–ಯುವತಿಯರಿಗೆ ಜಾಗತಿಕ ಅವಕಾಶಗಳನ್ನು ಒದಗಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಇದು ಸುದೀರ್ಘ ಪ್ರಯಾಣದ ಆರಂಭ ಮಾತ್ರ, ಎಂದರು.

ಭಾರತದಲ್ಲಿದ್ದಾರೆ ವಿಶ್ವಶ್ರೇಷ್ಠ ಕೋಡರ್ಸ್

ಪುಟ ೧➜ ಭಾರತ ಮತ್ತು ರಷ್ಯಾ ಪರಸ್ಪರ ನಂಬಿಕೆ ಆಧಾರಿತ ಸಹೋದರ ಸಂಬಂಧವನ್ನು ಹೊಂದಿವೆ ಎಂದು ಪುಟಿನ್ ಹೇಳಿದ್ದಾರೆ. ಪ್ರಮುಖ ಪಾಲುದಾರರಲ್ಲಿ ಒಬ್ಬರಾದ ಭಾರತವನ್ನು ಪರಿಚಯಿಸಲು ಇಚ್ಛಿಸುತ್ತೇನೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವೊಂದು ಪ್ರಮುಖ ರಾಷ್ಟ್ರ. ಜಾಗತಿಕ ಸಾಫ್ಟ್‌ವೇರ್ ಮಾರುಕಟ್ಟೆಯಲ್ಲಿ ಭಾರತದ ಕೊಡುಗೆ ಅಪಾರ. ನುರಿತ ವೃತ್ತಿಪರರನ್ನು ಉತ್ಪಾದಿಸುವ ಮೂಲಕ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಭಾರತ ತನ್ನದೇ ಆದ ಛಾಪು ಮೂಡಿಸಿದೆ ಎಂದು ಹೊಗಳಿದ್ದಾರೆ. ಭಾರತೀಯರು ಎಷ್ಟು ಪ್ರತಿಭಾವಂತರೆಂದು ನಮಗೆಲ್ಲರಿಗೂ ತಿಳಿದಿದೆ. ಅವರು ಬಹಳ ಸುಶಿಕ್ಷಿತರು ಮತ್ತು ಸಮರ್ಥರು. ಜಾಗತಿಕ ಮಟ್ಟದಲ್ಲಿ ಭಾರತೀಯ ಕೋಡರ್‌ಗಳು ಗಮನಾರ್ಹ ಸಾಧನೆಗೈದಿದ್ದಾರೆ ಎಂದು ಅಧ್ಯಕ್ಷ ಪುಟಿನ್ ಪ್ರಶಂಸಿಸಿದ್ದಾರೆ.

ಸೇವೆಗಳನ್ನು ವಿಸ್ತರಿಸಿದ ಭಾರತ

ಕೃತಕ ಬುದ್ಧಿಮತ್ತೆ (ಎಐ), ಸಾಫ್ಟ್‌ವೇರ್, ಡಿಜಿಟಲ್ ಪಾವತಿಗಳು ಮತ್ತು ತಂತ್ರಜ್ಞಾನ ರಫ್ತು ಇತ್ಯಾದಿ ಸೇವೆಗಳ ತನ್ನ ಮಾರುಕಟ್ಟೆಯನ್ನು ಭಾರತವು ವಿಸ್ತರಿಸುತ್ತಿರುವ ಸಂದರ್ಭದಲ್ಲಿ ರಷ್ಯಾ ಅಧ್ಯಕ್ಷ ಪುಟಿನ್ ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

2020ರಲ್ಲೇ ಜಿ7 ಹಿಂದಿಕ್ಕಿದೆ ಬ್ರಿಕ್ಸ್

ಬ್ರಿಕ್ಸ್ 2020ರಲ್ಲಿಯೇ ಜಿ7ನ್ನು ಹಿಂದಿಕ್ಕಿದ್ದು, ಬ್ರಿಕ್ಸ್ ಮತ್ತು ಜಿ7 ನಡುವಿನ ಅಂತರ ಇನ್ನಷ್ಟು ಹೆಚ್ಚಾಗಲಿದೆ. ಬ್ರಿಕ್ಸ್ ಇನ್ನಷ್ಟು ವೇಗದಲ್ಲಿ ಸ್ಥಿರ ಪ್ರಗತಿ ಸಾಧಿಸುತ್ತಿದೆ. ಜಿ7 ವಾರ್ಷಿಕ ಪ್ರಗತಿ ಶೇ.1.1 ಆಗಿದ್ದು, ಬ್ರಿಕ್ಸ್ ರಾಷ್ಟ್ರಗಳ ಪ್ರಗತಿ ಶೇ.4ಕ್ಕಿಂತ ಹೆಚ್ಚಾಗಿದೆ. ಇದು ನಾವು ಹೇಳುತ್ತಿರುವುದಲ್ಲ, ವಿಶ್ವ ಬ್ಯಾಂಕ್ ಮತ್ತು ಐಎಂಎಫ್ ಸಹ ಇದನ್ನೇ ಹೇಳುತ್ತಿವೆ ಎಂದು ಪುಟಿನ್ ತಿಳಿಸಿದ್ದಾರೆ.

ಸಾಧನೆಗಳಿಂದ ಅರಸ್ ಸದಾ ಜೀವಂತ

ಪುಟ ೧➜ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಮಾರ್ಗದರ್ಶನದಲ್ಲಿ ಅರಸ್ ಅವರ ನಾಯಕತ್ವದಲ್ಲಿ ಉಳುವವನಿಗೆ ಭೂಮಿ ನೀಡಬೇಕು ಎಂದು ತಂದ ಭೂ ಸುಧಾರಣಾ ಕಾಯ್ದೆ ದೇಶಕ್ಕೆ ಒಂದು ಮಾದರಿ. ಅದೊಂದು ಕ್ರಾಂತಿ. ಅರಸು ಅವರೊಬ್ಬ ಧೀಮಂತ ನಾಯಕ. ಅವರು ಎಲ್ಲಾ ಜನಾಂಗದವರನ್ನು ಬೆಳೆಸಿ, ಹಿಂದುಳಿದ ವರ್ಗಗಳ ನಾಯಕರ ಬಗ್ಗೆ ವಿಶೇಷ ಕಾಳಜಿ ಹೊಂದಿದ್ದರು. ಹಿಂದುಳಿದವರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಾಗೂ ರಾಜಕೀಯವಾಗಿ ಬೆಳೆಸಲು ಅವರು ಕ್ರಮ ಕೈಗೊಂಡರು. ಎಂದು ಸ್ಮರಿಸಿದರು.

ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣಕ್ಕೆ ಅರಸ್ ಕಾರಣ: ಅಂದಿನ ಕಾಲದಲ್ಲಿ ಎಲೆಕ್ಟ್ರಾನಿಕ್ ಸಿಟಿಗೆ ಅಡಿಪಾಯ ಹಾಕಿದ ಧೀಮಂತ ನಾಯಕ ದೇವರಾಜ ಅರಸರು. ಅವರು, ರೈತರು ಮಾತ್ರವಲ್ಲ ಎಲ್ಲ ಕ್ಷೇತ್ರದ ಅಭಿವೃದ್ಧಿಗೆ ಕಾರಣರಾಗಿದ್ದರು. ಅವರು ಕೊಡುಗೆಯನ್ನು ನಾವು ಉಳಿಸಿ ಬೆಳೆಸಿಕೊಂಡು ಹೋಗುತ್ತಿದ್ದೇವೆ. ನಾನು ಮುಖ್ಯಮಂತ್ರಿಯಾಗಿ ಅಧಿಕಾರ ತೆಗೆದುಕೊಂಡ ಬಳಿಕ ಎಲ್ಲಾ ನಾಯಕರಿಗೆ ನಮನ ಅರ್ಪಿಸಿದ್ದೆ, ಇಂದು ಅರಸ್ ಅವರನ್ನು ಸ್ಮರಿಸುತ್ತಿದ್ದೇವೆ. ಅವರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಹೆಜ್ಜೆ ಹಾಕೋಣ ಎಂದು ಸಿಎಂ ತಿಳಿಸಿದರು.

ಅಡುಗೆ ಎಣ್ಣೆ ಪ್ಯಾಕಿಂಗ್‌ಗೆ ಏಕರೂಪತೆ

ಪುಟ ೧➜ ಇದರಿಂದ 850 ಮಿ.ಲೀ., 910 ಮಿ.ಲೀ., 925 ಮಿ.ಲೀ. ಮೊದಲಾದ ವಿಭಿನ್ನ ಗಾತ್ರದ ಪ್ಯಾಕ್‌ಗಳ ಬದಲು ನಿಗದಿತ ಪ್ರಮಾಣದ ಪ್ಯಾಕ್‌ಗಳಲ್ಲಿ ಮಾತ್ರ ಎಣ್ಣೆ ಮಾರಾಟ ಮಾಡಲು ಅವಕಾಶ ಇರಲಿದೆ.

ಗ್ರಾಹಕ ವ್ಯವಹಾರಗಳ ಸಚಿವಾಲಯದ ಅಧೀನದಲ್ಲಿರುವ ಕಾನೂನು ಮಾಪನಶಾಸ್ತ್ರ ವಿಭಾಗ (ಲೀಗಲ್ ಮೆಟ್ರಾಲಜಿ) ಈ ಸಂಬಂಧ ಆದೇಶ ಹೊರಡಿಸಿದ್ದು, ದೇಶೀಯವಾಗಿ ಉತ್ಪಾದನೆಯಾಗುವ ಹಾಗೂ ಆಮದು ಮಾಡಿಕೊಳ್ಳುವ ಎಲ್ಲ ಖಾದ್ಯ ತೈಲಗಳಿಗೂ ಈ ನಿಯಮ ಅನ್ವಯವಾಗಲಿದೆ.

ಪ್ಯಾಕಿಂಗ್‌ನಲ್ಲಿ ಗೊಂದಲ: ಕಳೆದ ಕೆಲವು ವರ್ಷಗಳಿಂದ ಅನೇಕ ಕಂಪನಿಗಳು ಎಣ್ಣೆಯ ಬೆಲೆ ಹೆಚ್ಚಳದ ಒತ್ತಡವನ್ನು ನೇರವಾಗಿ ಗ್ರಾಹಕರ ಮೇಲೆ ಹಾಕದೆ, ಪ್ಯಾಕೆಟ್‌ನ ಪ್ರಮಾಣವನ್ನು ಕಡಿಮೆ ಮಾಡುವ ಮಾರ್ಗ ಅನುಸರಿಸುತ್ತಿದ್ದವು. ಉದಾಹರಣೆಗೆ, ಹಿಂದೆ 1 ಲೀಟರ್ ಪ್ಯಾಕ್‌ನಲ್ಲಿ ಮಾರಾಟವಾಗುತ್ತಿದ್ದ ಉತ್ಪನ್ನವನ್ನು 910 ಮಿ.ಲೀ. ಅಥವಾ 850 ಮಿ.ಲೀ. ಪ್ಯಾಕ್‌ನಲ್ಲಿ ಮಾರಾಟ ಮಾಡಲಾಗುತ್ತಿತ್ತು. ಆದರೆ ಪ್ಯಾಕೆಟ್‌ನ ಬೆಲೆಯಲ್ಲಿ ಹೆಚ್ಚಿನ ವ್ಯತ್ಯಾಸ ಕಾಣಿಸದ ಕಾರಣ ಗ್ರಾಹಕರಿಗೆ ನೈಜ ಬೆಲೆ ಏರಿಕೆಯ ಅರಿವು ಆಗುತ್ತಿರಲಿಲ್ಲ.

ಈ ರೀತಿಯ ಪ್ಯಾಕಿಂಗ್ ಕ್ರಮದಿಂದ ವಿವಿಧ ಬ್ರ್ಯಾಂಡ್‌ಗಳ ನಡುವಿನ ಬೆಲೆಯನ್ನು ಹೋಲಿಕೆ ಮಾಡುವುದು ಕಷ್ಟಕರವಾಗಿತ್ತು. ಒಂದೇ ರೀತಿಯ ಬೆಲೆಯ ಎರಡು ಪ್ಯಾಕ್‌ಗಳಲ್ಲಿಯೂ ಪ್ರಮಾಣದಲ್ಲಿ ವ್ಯತ್ಯಾಸ ಇರುವುದರಿಂದ ಗ್ರಾಹಕರು ಯಾವ ಉತ್ಪನ್ನ ಹೆಚ್ಚು ಲಾಭದಾಯಕ ಎಂಬುದನ್ನು ತಕ್ಷಣ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಇದರಿಂದ ಮಾರುಕಟ್ಟೆಯಲ್ಲಿ ಗೊಂದಲ ಸೃಷ್ಟಿಯಾಗುತ್ತಿದೆ ಎಂಬ ಆರೋಪಗಳು ಹಲವು ವರ್ಷಗಳಿಂದ ಕೇಳಿಬರುತ್ತಿದ್ದವು.

ಪ್ರಮಾಣಿತ ಪ್ಯಾಕ್ ಗಾತ್ರಗಳ ನಿಗದಿ

ತಾಳೆ ಎಣ್ಣೆ, ಸೋಯಾಬೀನ್ ಎಣ್ಣೆ, ಸೂರ್ಯಕಾಂತಿ ಎಣ್ಣೆ, ಸಾಸಿವೆ/ಹರಳೆಣ್ಣೆ, ಕಡಲೇಕಾಯಿ ಎಣ್ಣೆ, ಎಳ್ಳೆಣ್ಣೆ, ಅಕ್ಕಿ ತೌಡಿನ ಎಣ್ಣೆ, ಹತ್ತಿಬೀಜದ ಎಣ್ಣೆ ಮತ್ತು ಮೆಕ್ಕೆಜೋಳದ ಎಣ್ಣೆ ಸೇರಿದಂತೆ ಪ್ರಮುಖ ಖಾದ್ಯ ತೈಲಗಳು ಮತ್ತು ಮಿಶ್ರಿತ ಖಾದ್ಯ ತೈಲಗಳಿಗೆ ಪ್ರಮಾಣಿತ ಪ್ಯಾಕ್ ಗಾತ್ರಗಳನ್ನು ನಿಗದಿಪಡಿಸುತ್ತದೆ.

ಅನುಮತಿಸಲಾದ ಪ್ರಮಾಣಿತ ಪ್ಯಾಕ್ ಗಾತ್ರಗಳು ಈ ಕೆಳಗಿನಂತಿವೆ

- 200 ಮಿಲಿ/ಗ್ರಾಂ
- 500 ಮಿಲಿ/ಗ್ರಾಂ
- 1 ಲೀಟರ್/ಕೆಜಿ
- 2 ಲೀಟರ್/ಕೆಜಿ
- 3 ಲೀಟರ್/ಕೆಜಿ
- 4 ಲೀಟರ್/ಕೆಜಿ
- 5 ಲೀಟರ್/ಕೆಜಿ
- 15 ಲೀಟರ್/ಕೆಜಿ
- 20 ಲೀಟರ್/ಕೆಜಿ

ಯುಜಿಸಿಇಟಿ: ಅರ್ಹತಾ ಪರೀಕ್ಷೆ ಅಂಕ ದಾಖಲು ಕಡ್ಡಾಯ

• **ಬೆಂಗಳೂರು:** ಯುಜಿಸಿಇಟಿ ಸಂಬಂಧ ಅರ್ಹತಾ ಪರೀಕ್ಷೆಯ ಅಂಕಗಳನ್ನು ಅಪ್‌ಲೋಡ್ ಮಾಡದ ಕೆಲ ಅಭ್ಯರ್ಥಿಗಳ ರ್‍ಯಾಂಕ್ ಪ್ರಕಟಣೆ ಆಗಿರುವುದಿಲ್ಲ. ಅಂತಹವರು ಕೂಡಲೇ ಕೆಇಎ ವೆಬ್‌ಸೈಟ್‌ನಲ್ಲಿ ಹಾಕಲಾಗಿರುವ ಲಿಂಕ್ ಮೂಲಕ ತಮ್ಮ ಅಂಕಗಳನ್ನು ಅಪ್ ಲೋಡ್ ಮಾಡಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಅಂಕಗಳನ್ನು ದಾಖಲಿಸಿ, ಅಂಕ ಪಟ್ಟಿ ಅಪ್‌ಲೋಡ್ ಮಾಡಿದ ನಂತರ ಅದರ ಆಧಾರದ ಮೇಲೆ ಐದು ದಿನಗಳ ಒಳಗೆ ಸ್ಪಾಟ್ ರ್‍ಯಾಂಕ್ ನೀಡಲಾಗುವುದು. ಈ ವಿಷಯದಲ್ಲಿ ಗಾಬರಿಯಾಗುವ ಅಗತ್ಯ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಿಬಿಎಸ್‌ಇ, ಐಸಿಎಸ್‌ಇ ಹಾಗೂ ಇತರ ರಾಜ್ಯಗಳ ಕೆಲ ಅಭ್ಯರ್ಥಿಗಳ ಅಂಕಗಳು ಆನ್‌ಲೈನ್ ನಲ್ಲಿ ಕೆಇಎಗೆ ಲಭ್ಯವಾಗದ ಕಾರಣ, ಖುದ್ದು ಲಿಂಕ್ ಮೂಲಕ ದಾಖಲಿಸಲು ಹಲವು ಬಾರಿ ಅಂತಹವರಿಗೆ ಸೂಚಿಸಲಾಗಿತ್ತು. ಆದರೂ ಕೆಲವರು ಅಂಕ ಹಾಗೂ ಅಂಕ ಪಟ್ಟಿಯನ್ನು ಅಪ್‌ಲೋಡ್ ಮಾಡಿಲ್ಲ ಎಂದು ತಿಳಿಸಿದ್ದಾರೆ.



ಅಸ್ಥಿರತೆ ನಡುವೆಯೂ ಪ್ರಗತಿಗೆ ವೇಗ

ಪುಟ ೧➜ ಸಭೆಯ ನಂತರ ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡ ಪ್ರಧಾನಿ ನರೇಂದ್ರ ಮೋದಿ, ಭಾರತದ ಆರ್ಥಿಕ ಪರಿವರ್ತನೆಗೆ ಸಂಬಂಧಿಸಿದ ವಿವಿಧ ವಿಷಯಗಳ ಬಗ್ಗೆ ಚರ್ಚೆ ನಡೆಸಲಾಗಿದ್ದು, ಸುಧಾರಣಾ ಪಯಣಕ್ಕೆ ಮತ್ತಷ್ಟು ಚೈತನ್ಯ ನೀಡುವುದರ ಜತೆ ಈಸ್ ಆಫ್ ಲಿವಿಂಗ್ ಹಾಗೂ ಈಸ್ ಆಫ್ ಡೂಯಿಂಗ್ ಬಿಸಿನೆಸ್ ಗುರಿಗಳನ್ನು ಸಾಧಿಸುವ ಕುರಿತು ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದಾರೆ ಎಂದು ತಿಳಿಸಿದ್ದಾರೆ.

ಮೂಲಗಳ ಪ್ರಕಾರ, ಜಾಗತಿಕ ಅಶಾಂತಿ ಮತ್ತು ಭೂ ರಾಜಕೀಯ ಉದ್ವಿಗ್ನತೆಯ ನಡುವೆಯೂ ಭಾರತದ ಆರ್ಥಿಕ ಬೆಳವಣಿಗೆಯ ವೇಗ ಕಾಯ್ದುಕೊಳ್ಳಲು ಹಾಗೂ ಮತ್ತಷ್ಟು ಹೆಚ್ಚಿಸಲು ಕೈಗೊಳ್ಳಬೇಕಾದ ಕ್ರಮಗಳ ಕುರಿತು ಸಭೆಯಲ್ಲಿ ವಿಚಾರ ವಿನಿಮಯ ನಡೆದಿದೆ. ಮೂಲಸೌಕರ್ಯ ಅಭಿವೃದ್ಧಿ, ಖಾಸಗಿ ಹೂಡಿಕೆಗಳಿಗೆ ಉತ್ತೇಜನ, ಉತ್ಪಾದನಾ ಕ್ಷೇತ್ರದ ವಿಸ್ತರಣೆ ಮತ್ತು ತಂತ್ರಜ್ಞಾನ ಆಧಾರಿತ ಬೆಳವಣಿಗೆಗೆ ಒತ್ತು ನೀಡುವ ಕುರಿತು ಚರ್ಚೆ ನಡೆದಿದೆ ಎನ್ನಲಾಗಿದೆ.

ಇದೇ ವೇಳೆ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದ ಪರಿಣಾಮ ಭಾರತ ಹಾಗೂ ಜಾಗತಿಕ ಆರ್ಥಿಕತೆಯ ಮೇಲೆ ಹೇಗೆ ಬೀಳಬಹುದು ಎಂಬುದರ ಕುರಿತು ಆರ್ಥಿಕ ಸಲಹಾ ಮಂಡಳಿಯ ಸದಸ್ಯರು ತಮ್ಮ ಮೌಲ್ಯಮಾಪನವನ್ನು ಪ್ರಧಾನಿಯ ಮುಂದಿಟ್ಟಿದ್ದಾರೆ. ಕಚ್ಚಾ ತೈಲದ ಬೆಲೆ, ಜಾಗತಿಕ ಸರಕು ಸಾಗಣೆ, ವ್ಯಾಪಾರ ಚಟುವಟಿಕೆಗಳು ಹಾಗೂ ಹೂಡಿಕೆ ಹರಿವಿನ ಮೇಲೆ ಉಂಟಾಗಬಹುದಾದ ಪರಿಣಾಮಗಳ ಬಗ್ಗೆಯೂ ಸಮಾಲೋಚನೆ ನಡೆದಿದೆ.

ಸಭೆಯಲ್ಲಿ ಪ್ರಧಾನಿಯ ಪ್ರಧಾನ ಕಾರ್ಯದರ್ಶಿಗಳಾದ ಪಿ.ಕೆ. ಮಿಶ್ರಾ ಮತ್ತು ಶಕ್ತಿಕಾಂತ ದಾಸ್ ಸೇರಿದಂತೆ ಆರ್ಥಿಕ ಸಲಹಾ ಮಂಡಳಿಯ ಸದಸ್ಯರು ಉಪಸ್ಥಿತರಿದ್ದರು.

ಪ್ರಸ್ತುತ ಆರ್ಥಿಕ ಸಲಹಾ ಮಂಡಳಿಯ ಅಧ್ಯಕ್ಷರಾಗಿ ಎಸ್. ಮಹೇಂದ್ರ ದೇವ್ ಕಾರ್ಯನಿರ್ವಹಿಸುತ್ತಿದ್ದು, ಪೂರ್ಣಾವಧಿ ಸದಸ್ಯರಾಗಿ ಸಂಜಯ್ ಕುಮಾರ್ ಮಿಶ್ರಾ, ಸಂಜೀವ್ ಸಾನ್ಯಾಲ್ ಹಾಗೂ ಶಮಿಕಾ ರವಿ ಇದ್ದಾರೆ. ಅರೆಕಾಲಿಕ ಸದಸ್ಯರಾಗಿ ರಾಕೇಶ್ ಮೋಹನ್, ಸಜ್ಜಿದ್ ಜೆಡ್. ಚಿನಾಯ್, ನೀಲಕಂಠ ಮಿಶ್ರಾ, ನಿಲೇಶ್ ಶಾ, ಟಿ.ಟಿ. ರಾಮ್ ಮೋಹನ್, ಸೌಮ್ಯ ಕಾಂತಿ ಘೋಷ್, ಕೆ.ವಿ. ರಾಜು, ಚೇತನ್ ಘಾಟೆ, ಪಾಮಿ ದುವಾ, ಪುಲಕ್ ಘೋಷ್ ಹಾಗೂ ಗೌರವ್ ವಲ್ಲಭ್ ಕಾರ್ಯನಿರ್ವಹಿಸುತ್ತಿದ್ದಾರೆ.

ತನಿಷಾ, ನಯನ, ನಿನಾದ್ ಪ್ರಥಮ

ಪುಟ ೧➜ ಇವುಗಳ ಪೈಕಿ ಭೌತಶಾಸ್ತ್ರ ಪರೀಕ್ಷೆಗೆ 3,09,014, ರಸಾಯನ ಶಾಸ್ತ್ರ 3,08,946, ಗಣಿತ 3,02,384, ಜೀವಶಾಸ್ತ್ರ 2,31,023 ವಿದ್ಯಾರ್ಥಿಗಳು ಹಾಜರಾಗಿದ್ದರು. ಇದರಲ್ಲಿ ಎಂಜಿನಿಯರಿಂಗ್ 2,82,603, ಬಿಎನ್‌ವೈಎಸ್ 2,12,730, ಬಿಎಸ್ಸಿ ಕೃಷಿ 2,09,220, ಪಶು ವೈದ್ಯಕೀಯ 2,12,909, ಬಿ-ಫಾರ್ಮ್ 2,86,609, ಫಾರ್ಮ್-ಡಿ 2,86,965, ನರ್ಸಿಂಗ್ 2,18,785 ವಿದ್ಯಾರ್ಥಿಗಳು ಅರ್ಹತೆ ಪಡೆದಿದ್ದಾರೆ.

ವಿದ್ಯಾರ್ಥಿನಿಯರದ್ದೇ ಮೇಲುಗೈ: ಈ ಬಾರಿ ಎಂಜಿನಿಯರಿಂಗ್‌ನಲ್ಲಿ ಜಯನಗರದ ಆರ್‌ವಿ ಪಿಯು ಕಾಲೇಜಿನ ತನಿಷಾ ಕಾರ್ತಿಕ್, ಪಶು ವೈದ್ಯಕೀಯ, ನರ್ಸಿಂಗ್, ಬಿ.ಫಾರ್ಮಾ ಹಾಗೂ ಡಿ.ಫಾರ್ಮಾನಲ್ಲಿ ಶಿವನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ ಮೊದಲ ರ್‍ಯಾಂಕ್ ಪಡೆಯುವ ಮೂಲಕ ವಿದ್ಯಾರ್ಥಿನಿಯರೇ ಮೇಲುಗೈ ಸಾಧಿಸಿದ್ದಾರೆ.

ರಾಜ್ಯ ಪಠ್ಯಕ್ರಮ ವಿದ್ಯಾರ್ಥಿಗಳ ಸಾಧನೆ: ರ್‍ಯಾಂಕಿಂಗ್‌ನಲ್ಲಿ ಮೊದಲ ಹತ್ತು ರ್‍ಯಾಂಕ್‌ಗಳಲ್ಲಿ ಎಂಜಿನಿಯರಿಂಗ್‌ನಲ್ಲಿ ರಾಜ್ಯ ಪಠ್ಯಕ್ರಮದಲ್ಲಿ ಓದಿದ 9 ವಿದ್ಯಾರ್ಥಿಗಳು, ಪಶು ವೈದ್ಯಕೀಯದಲ್ಲಿ 8, ಕೃಷಿ ವಿಜ್ಞಾನದಲ್ಲಿ ಹತ್ತಕ್ಕೆ ಹತ್ತು ಮಂದಿ, ಬಿಎಸ್ಸಿ ನರ್ಸಿಂಗ್‌ನಲ್ಲಿ 8 ಮಂದಿ ಯೋಗ ಮತ್ತು ನ್ಯಾಚುರೋಪತಿಯಲ್ಲಿ 8 ಮಂದಿ, ಬಿ.ಫಾರ್ಮ್, ಡಿ.ಫಾರ್ಮ್‌ನಲ್ಲಿ ತಲಾ 7 ಮಂದಿ ರ್‍ಯಾಂಕ್ ಪಡೆದಿದ್ದಾರೆ.

ಮೊದಲ ಮೂರು ಸ್ಥಾನ ಪಡೆದ ಸಾಧಕರು ಇಂಜಿನಿಯರಿಂಗ್: ಜಯನಗರದ ಆರ್‌ವಿ ಪಿಯು ಕಾಲೇಜಿನ ತನಿಷಾ ಕಾರ್ತಿಕ್ (ಶೇ.99.44), ಕೆಎಂಡಬ್ಲ್ಯುಎ ಪಿಯು ಕಾಲೇಜಿನ ಸೃಜನ್ ಬಿ.ಎಸ್.(ಶೇ.99.16), ಜಯನಗರದ ಆರ್.ವಿ. ಪಿಯು ಕಾಲೇಜಿನ ನಿನಾದ್ ವಸಿಷ್ಠ (ಶೇ.98.88) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಪಶು ವೈದ್ಯಕೀಯ: ಬೆಂಗಳೂರಿನ ಶಿವ ನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ (ಶೇ.100), ದಾವಣಗೆರೆ ಸರ್ ಎಂ.ವಿ. ಪಿಯು ಕಾಲೇಜಿನ ಅಮೂಲ್ಯ ಎಸ್. (ಶೇ.100), ಜಯನಗರದ ಆರ್‌ವಿ ಪಿಯು ಕಾಲೇಜಿನ ರಿತ್ವಿಕ್ ಕುಮಾರ್ (ಶೇ.99.44) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಕೃಷಿ ವಿಜ್ಞಾನ: ಜಯನಗರದ ಆರ್.ವಿ. ಪಿಯು ಕಾಲೇಜಿನ ನಿನಾದ್ ವಸಿಷ್ಠ (ಶೇ.98.75), ಧಾರವಾಡ ಅರ್ಜುನ ಸ್ಟೈನ್ಸ್ ಪಿಯು ಕಾಲೇಜಿನ ಅನ್ಮೋಲ್ ಪ್ರಭು (98.58), ಮಂಗಳೂರಿನ ಎಕ್ಸ್‌ಪರ್ಟ್ ಪಿಯು ಕಾಲೇಜಿನ ಸಮಯ್ ಎ.ಎಸ್.(98.41) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ನರ್ಸಿಂಗ್: ಬೆಂಗಳೂರಿನ ಶಿವ ನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ (ಶೇ.100), ದಾವಣಗೆರೆ ಸರ್ ಎಂ.ವಿ. ಪಿಯು ಕಾಲೇಜಿನ ಅಮೂಲ್ಯ ಎಸ್. (ಶೇ.100), ಜಯನಗರದ ಆರ್.ವಿ. ಪಿಯು ಕಾಲೇಜಿನ ರಿತ್ವಿಕ್ ಕುಮಾರ್ (ಶೇ.99.44) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಬಿ-ಫಾರ್ಮ್ ಹಾಗೂ ಡಿ-ಫಾರ್ಮ್: ಬೆಂಗಳೂರಿನ ಶಿವ ನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ (ಶೇ.100), ದಾವಣಗೆರೆ ಸರ್ ಎಂ.ವಿ. ಪಿಯು ಕಾಲೇಜಿನ ಅಮೂಲ್ಯ ಎಸ್. (ಶೇ.100), ದಾವಣಗೆರೆ ಶ್ರೀ ಚೈತನ್ಯ ಪಿಯು ಕಾಲೇಜಿನ ಸುಚಿತಾ ಎಂ.(99.44) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಬಿಎನ್‌ವೈಎಸ್: ಬೆಂಗಳೂರಿನ ಶಿವನಗರದ ಬೇಸ್ ಪಿಯು ಕಾಲೇಜಿನ ನಯನ ಗೋಪಿ (ಶೇ.100), ದಾವಣಗೆರೆಯ ಸರ್ ಎಂ.ವಿ. ಪಿಯು ಕಾಲೇಜಿನ ಅಮೂಲ್ಯ ಎಸ್. (ಶೇ.99.83), ದಾವಣಗೆರೆ ಶ್ರೀ ಚೈತನ್ಯ ಪಿಯು ಕಾಲೇಜಿನ ಸುಚಿತಾ ಎಂ.(99.72) ರ್‍ಯಾಂಕ್ ಪಡೆದುಕೊಂಡಿದ್ದಾರೆ.

ಜೂ.10ರಿಂದ ಕೊಡಗಿನಲ್ಲಿ ವಾಹನ ಸಂಚಾರ ನಿಷೇಧ


• **ಮಡಿಕೇರಿ:** ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆಯ ಅವಧಿಯಲ್ಲಿ ರಸ್ತೆಯ ಪರಿಸ್ಥಿತಿ ಹದಗೆಡುವುದನ್ನು ನಿಯಂತ್ರಿಸುವ ಹಿನ್ನೆಲೆಯಲ್ಲಿ ಜೂ.10ರಿಂದ ಜು.9ರವರೆಗೆ ಭಾರೀ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ ಎಸ್.ಜೆ.ಸೋಮಶೇಖರ್ ಅವರು ಆದೇಶ ಹೊರಡಿಸಿದ್ದಾರೆ.

ಮಳೆಗಾಲದಲ್ಲಿ ಅಧಿಕ ಭಾರ ತುಂಬಿದ ಭಾರೀ ಸರಕು ಸಾಗಣೆ ವಾಹನಗಳು ದಿನನಿತ್ಯ ಸಂಚರಿಸುವುದರಿಂದ ರಸ್ತೆಯ ಬದಿಗಳ ಮಣ್ಣು ಕುಸಿತದಿಂದಾಗಿ ರಸ್ತೆಯ ಮೇಲೆ ಮಣ್ಣು ಬಿದ್ದು ರಸ್ತೆ ಸಂಚಾರಕ್ಕೆ ತೊಂದರೆಯಾಗಿ ಸಾಕಷ್ಟು ಅಪಘಾತಗಳಿಗೆ ಕಾರಣವಾಗುತ್ತಿರುತ್ತದೆ. ಈ ಹಿನ್ನೆಲೆಯಲ್ಲಿ ಸ್ಥಳೀಯರು ಹಾಗೂ ವಾಹನ ಸವಾರರ ಹಾಗೂ ಸಾರ್ವಜನಿಕರ ಆಸ್ತಿಪಾಸ್ತಿಗಳ ಸುರಕ್ಷತೆಯ ಹಿತದೃಷ್ಟಿಯಿಂದ ಸಂಚಾರ ವ್ಯವಸ್ಥೆಯನ್ನು ನಿರ್ವಹಿಸುವಂತೆ ಜಿಲ್ಲಾ ದಂಡಾಧಿಕಾರಿಗಳೂ ಮತ್ತು ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಸೋಮಶೇಖರ್ ಅವರು ಪೊಲೀಸ್ ಹಾಗೂ ಸಾರಿಗೆ ಇಲಾಖೆಗೆ ನಿರ್ದೇಶನ ನೀಡಿದ್ದಾರೆ.

ನಿರ್ಬಂಧಿತ ವಾಹನಗಳು: ಈ ಅವಧಿಯಲ್ಲಿ ಮರದ ದಿಮ್ಮಿ ಮತ್ತು ಮರಳು ಸಾಗಾಣಿಕೆ ವಾಹನಗಳು, ವಾಹನ ನೋಂದಣಿ ತೂಕ 18,500 ಕೆ.ಜಿ.ಗಿಂತ ಹೆಚ್ಚಿನ ಸರಕು ಸಾಗಣೆ ಮಾಡುವ ಸರಕು ಸಾಗಾಣಿಕೆ ವಾಹನಗಳು, ಭಾರೀ ವಾಹನಗಳಾದ ಬುಲೆಟ್ ಟ್ಯಾಂಕರ್‌ಗಳು, ಶಿಪ್ ಕಾರ್ಗೋ ಕಂಟೈನರ್‌ಗಳು, ಲಾಂಗ್ ಚಾಸಿಸ್ ಸಂಚಾರವನ್ನು ನಿಬಂಧಿಸಲಾಗಿದೆ.

ಕೊಡಗು ಜಿಲ್ಲೆಯ ಮುಖಾಂತರ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿ 275ರ ಜಿಲ್ಲೆಯ ಗಡಿಭಾಗಗಳಾದ ಕುಶಾಲನಗರ ಮತ್ತು ಸಂಪಾಜೆಯಲ್ಲಿ ವ್ಯವಸ್ಥಿತ ಚೆಕ್‌ಪೋಸ್ಟ್ ನಿರ್ಮಿಸಿ, ದಿನದ 24 ಗಂಟೆಯೂ ನಿಗಾ ವಹಿಸಲು ಸಿಬ್ಬಂದಿಗಳನ್ನು ನಿಯೋಜಿಸಲು, ಮೊಬೈಲ್ ಪ್ಯಾಟ್ರೋಲಿಂಗ್ ನಡೆಸಲು ಹಾಗೂ ಈ ಆದೇಶ ಉಲ್ಲಂಘನೆಯಾಗದಂತೆ ಮತ್ತು ಆದೇಶ ಉಲ್ಲಂಘಿಸಿದವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳು ಪೊಲೀಸ್ ಹಾಗೂ ಸಾರಿಗೆ ಇಲಾಖೆಗೆ ಸೂಚಿಸಿದ್ದಾರೆ.

ಆಶೀರ್ವಾದ



ತುಮಕೂರು ಜಿಲ್ಲೆಯ ತಿಪಟೂರು ತಾಲೂಕಿನ ನೊಣವಿನಕೆರೆಯ ಕಾಡಸಿದ್ದೇಶ್ವರ ಮಠದ ಭೇಟಿ ನೀಡಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಡಾ. ಶ್ರೀಕರಿವೃಷಭದೇಶಿಕೇಂದ್ರ ಶಿವಯೋಗೀಶ್ವರ ಸ್ವಾಮೀಜಿ ಆಶೀರ್ವಾದ ಪಡೆದರು.

ರಾಜ್ಯ ಅಭಿವೃದ್ಧಿಪಡಿಸಲು ಇಚ್ಛಾಶಕ್ತಿ ಕೊರತೆ: ಶಾಸಕ

• **ಶಿವಮೊಗ್ಗ:** ಸಿದ್ದರಾಮಯ್ಯ ಅವರನ್ನು ಕಡೆಗಣಿಸಿ ರಾಜಕಾರಣ ಮಾಡುವುದು ಅಷ್ಟು ಸುಲಭ ಅಲ್ಲ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಪ್ರತಿಕ್ರಿಯಿಸಿದರು.



ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ಡಿಕೆಶಿ ಅನುಭವ ಹೊಂದಿರುವ ಮುಖ್ಯಮಂತ್ರಿ ಆಗಿರಬಹುದು. ಆದರೆ ರಾಜ್ಯವನ್ನು ಅಭಿವೃದ್ಧಿಪಡಿಸುವ ಇಚ್ಛಾಶಕ್ತಿಯ ಕೊರತೆ ಇದೆ. ಸಿದ್ದರಾಮಯ್ಯ ಈಗಲೂ ಕೂಡ ಪವರ್ ಫುಲ್. ಮಾಸ್ ಲೀಡರ್ ಅಧಿಕಾರದಲ್ಲಿರಲಿ, ಇಲ್ಲದಿರಲಿ ಅವರ ಪ್ರಭಾವ ಇರುತ್ತದೆ ಎಂದರು. ಇನ್ನೂ ಪೂರ್ಣ ಪ್ರಮಾಣದ ಸಂಪುಟ ವಿಸ್ತರಣೆ ಆಗಿಲ್ಲ. ಆಗಲೇ ಸಚಿವರ ಖಾತೆಗಳ ಕ್ಯಾತೆ ತೆರೆದಿರುವುದು ಸರ್ಕಾರ ದೃಷ್ಟಿಯಿಂದ ಒಳ್ಳೆಯದಲ್ಲ. ಈಗಲೇ ಅಸಮಾಧಾನ ಉಂಟಾದರೆ ಪೂರ್ಣ ಪ್ರಮಾಣದ ಸಂಪುಟದ ನಂತರ ಪರಿಣಾಮ ಏನು ಆಗಬಹುದು. ಇದು ಆಡಳಿತದ ಮೇಲೆ ಪರಿಣಾಮ ಬೀರುತ್ತದೆ. ಇವರನ್ನು ಸಂಭಾಳಿಸುವುದನ್ನು ಬಿಟ್ಟು ಬೇರೆ ಕೆಲಸ ಮಾಡಲು ಆಗುವುದಿಲ್ಲ ಎಂದರು.

1,34,000 ಕೋಟಿ ರೂ. ಸಾಲ ಮಾಡಬೇಕಾಗುತ್ತದೆ ಎಂದು ಬಜೆಟ್ ಪೂರ್ವದಲ್ಲಿ ಸಿದ್ದರಾಮಯ್ಯ ಹೇಳಿದ್ದರು. ಡಿಕೆಶಿ ಕೂಡ ಮತ್ತಷ್ಟು ಘೋಷಣೆ ಮಾಡಿದ್ದಾರೆ. ಇದು ಕೇಳಲು ಮತ್ತಷ್ಟು ಚಂದ. ಉಚಿತ ಬಸ್ ಪಾಸ್ ಎಂದರೆ ಇನ್ನಷ್ಟು ಸಾಲ ಮಾಡಬೇಕಾಗುತ್ತೆ. ಜನರ ಮೇಲೆ ತೆರಿಗೆ ಹಾಕಬೇಕಾಗುತ್ತದೆ ಎಂದರು. ದನಗಳಿಗೆ ತೊಂದೆ ಹಾಕುವುದು ಬೇರೆಯವರ ಹೊಲಗಳಿಗೆ ನುಗ್ಗಬಾರದು ಎಂದು. ಅದೇ ರೀತಿ ಡಿ.ಕೆ.ಶಿವಕುಮಾರ್ ಅವರಿಗೂ ತೊಂದೆ ಹಾಕಲಾಗಿದೆ. ಡಿಕೆಶಿ ಬೇರೆ ಖಾತೆಗಳಿಗೆ ಕೈ ಹಾಕಬಾರದು ಎಂದು ತೊಂದೆ ಹಾಕುವ ಕೆಲಸ ಮಾಡಿದ್ದಾರೆ. ಒಬ್ಬರಿಗೆ ಹೆಚ್ಚುವರಿ ಜವಾಬ್ದಾರಿ ಕೊಟ್ಟಿದ್ದಕ್ಕೆ ಸಚಿವರು ಮುನಿಸಿಕೊಂಡಿದ್ದಾರೆ ಎಂದರು.

ಕಿರುಸುದ್ದಿ

ಅರ್ಜಿ ವಿಚಾರಣೆ ಮುಂದೂಡಿಕೆ

• **ದಾವಣಗೆರೆ:** ಜಿಲ್ಲೆಯ ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಮಠದ ಪದಚ್ಯುತ ಪೀಠಾಧ್ಯಕ್ಷ ಶ್ರೀ ವಚನಾನಂದ ಸ್ವಾಮೀಜಿಗೆ ಪೋಕ್ಸೋ ಪ್ರಕರಣದಲ್ಲಿ ನೀಡಿರುವ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಜಿಲ್ಲಾ ವಿಶೇಷ ಪೋಕ್ಸೋ ನ್ಯಾಯಾಲಯ ಜೂನ್ 11ಕ್ಕೆ ಮುಂದೂಡಿದೆ. ಹರಿಹರ ಗ್ರಾಮಾಂತರ ಠಾಣೆ ಪೊಲೀಸರ ಅರ್ಜಿಗೆ ಸ್ವಾಮೀಜಿ ಪರ ವಕೀಲ ಎಸ್.ವಿ.ಪಾಟೀಲ್ ತಕರಾರು ಸಲ್ಲಿಸಿದ್ದರು. ಹಿಂದಿನ ವಿಚಾರಣೆಯಲ್ಲಿ ಹೆಚ್ಚಿನ ಕಾಲಾವಕಾಶ ನೀಡುವಂತೆ ಸ್ವಾಮೀಜಿ ಪರ ವಕೀಲರು ಮಾಡಿದ್ದ ಕೋರಿಕೆಯನ್ನು ನ್ಯಾಯಾಲಯ ಪುರಸ್ಕರಿಸಿತ್ತು. ಶನಿವಾರ ಸರ್ಕಾರಿ ಅಭಿಯೋಜಕರು ರಜೆ ಇರುವ ಹಿನ್ನೆಲೆಯಲ್ಲಿ ವಿಚಾರಣೆಯನ್ನು ಜೂನ್ 11ಕ್ಕೆ ನ್ಯಾಯಾಲಯ ಮುಂದೂಡಿರುವುದಾಗಿ ಹಿರಿಯ ವಕೀಲ ಎಸ್.ವಿ.ಪಾಟೀಲ್ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

• **ಬೆಂಗಳೂರು:** ಚಿತ್ರಕಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು ಉತ್ತೇಜಿಸುವ ನಿಟ್ಟಿನಲ್ಲಿ ಕರ್ನಾಟಕ ಲಲಿತಕಲಾ ಅಕಾಡೆಮಿಯು 2026-27ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಕರ್ನಾಟಕದ ಅಂಗೀಕೃತಗೊಂಡ ಚಿತ್ರಕಲಾ ವಿದ್ಯಾಲಯಗಳಲ್ಲಿ ಬಿ.ಎಫ್.ಎ ಅಥವಾ ಎಂ.ಎಫ್.ಎ ವ್ಯಾಸಂಗ ಮಾಡುತ್ತಿರುವ ಸಾಮಾನ್ಯ ವರ್ಗ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಚಿತ್ರಕಲಾ ವಿದ್ಯಾರ್ಥಿಗಳು ಈ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಸಲ್ಲಿಸಬಹುದಾಗಿದೆ. ಈ ಆರ್ಥಿಕ ನೆರವನ್ನು ಶೈಕ್ಷಣಿಕ ವಿದ್ಯಾಭ್ಯಾಸದ ಅವಧಿಯಲ್ಲಿ ಒಂದು ಬಾರಿ ಮಾತ್ರ ನೀಡಲಾಗುತ್ತದೆ. ಅರ್ಜಿದಾರರು ಕಡ್ಡಾಯವಾಗಿ ಕರ್ನಾಟಕದವರಾಗಿರಬೇಕು. ಅರ್ಜಿಯನ್ನು ಕಡ್ಡಾಯವಾಗಿ ಕನ್ನಡದಲ್ಲೇ ಭರ್ತಿ ಮಾಡಬೇಕು. ಅಭ್ಯರ್ಥಿಗಳು ಈ ಹಿಂದೆ ಅಕಾಡೆಮಿಯಿಂದ ಯಾವುದೇ ವಿದ್ಯಾರ್ಥಿ ವೇತನ ಪಡೆದಿಲ್ಲ ಎಂಬುದರ ಕುರಿತು ಸಂಬಂಧಪಟ್ಟ ಕಲಾ ವಿದ್ಯಾಲಯದ ಮುಖ್ಯಸ್ಥರು ಅಥವಾ ಪ್ರಾಚಾರ್ಯರಿಂದ ದೃಢೀಕರಣ ಪತ್ರವನ್ನು ಲಗತ್ತಿಸುವುದು ಕಡ್ಡಾಯವಾಗಿದೆ. ಸ್ವ-ವಿವರ ದಾಖಲೆಗಳೊಂದಿಗೆ ಅರ್ಜಿಯನ್ನು ಜೂ.30 ರ ಒಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ಲಲಿತಕಲಾ ಅಕಾಡೆಮಿ, ಕನ್ನಡ ಭವನ, 2ನೇ ಮಹಡಿ, ಜೆ.ಸಿ.ರಸ್ತೆ, ಬೆಂಗಳೂರು - 560 002 ಈ ವಿಳಾಸಕ್ಕೆ ಕಳುಹಿಸಬೇಕು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 080-22480297, ಇ-ಮೇಲ್: kla.karnatakagmail.com ಹಾಗೂ ವೆಬ್‌ಸೈಟ್ https://lalitkala.karnataka.gov.in ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ಆಸಕ್ತರು ಭರ್ತಿ ಮಾಡಿದ ಅರ್ಜಿಯನ್ನು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬೇಕು.

ಲಂಚಕ್ಕೆ ಬೇಡಿಕೆ: ಅಧಿಕಾರಿಗಳು ಲೋಕಾಯುಕ್ತ ಬಲೆಗೆ

• **ವಿಜಯಪುರ:** ಕೆಬಿಜೆಎನ್‌ಎಲ್ ಕೆನಾಲ್ ಬಿಲ್ ಪಾವತಿಗಾಗಿ ಲಂಚದ ಬೇಡಿಕೆಯಿಟ್ಟ ಇಬ್ಬರು ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು ಬಂಧಿಸಿರುವ ಘಟನೆ ಜಿಲ್ಲೆಯ ಸಾಲೋಟಗಿಯಲ್ಲಿ ನಡೆದಿದೆ. ಕೆಬಿಜೆಎನ್‌ಎಲ್ ಉಪ ವಿಭಾಗ ನಂಬರ್ ಒಂದರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಸೇವುಲಾಲ್ ಚವ್ಹಾಣ 10 ಸಾವಿರ ಲಂಚಕ್ಕೆ ಹಾಗೂ ಕೆಬಿಜೆಎನ್‌ಎಲ್ ಉಪ ವಿಭಾಗ ನಂಬರ್ ಒಂದರ ಕಿರಿಯ ಅಭಿಯಂತರ ಸಾತಲಿಂಗಪ್ಪ ರೋಡಗಿ 8 ಸಾವಿರ ರೂ.ಗಳ ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಒಟ್ಟು 3,71,419 ಬಿಲ್ ಪಾವತಿಗಾಗಿ ಈ ಇಬ್ಬರು ಅಧಿಕಾರಿಗಳು 18 ಸಾವಿರ ಲಂಚಕ್ಕೆ ಬೇಡಿಕೆಯಿಟ್ಟಿದ್ದು, ಲಂಚದ ಹಣ ಪಡೆಯುತ್ತಿದ್ದ ವೇಳೆ ಹಣದ ಸಮೇತ ಇಬ್ಬರು ಅಧಿಕಾರಿಗಳನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ನೀಟ್ ಪರೀಕ್ಷೆ: ಅಂಕಗಳ ಆಧಾರದ ಮೇಲೆ ಸೀಟುಗಳ ಹಂಚಿಕೆ

ಪ್ರತ್ಯೇಕ ಕೌನ್ಸಲಿಂಗ್: ಸಚಿವ

• **ಬೆಂಗಳೂರು:** ನೀಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳು ಹಂಚಿಕೆಯಾಗಲಿವೆ. ಆದ್ದರಿಂದ ವೈದ್ಯಕೀಯ ಕೋರ್ಸ್ ಹೊರತುಪಡಿಸಿ ಎಂಜಿನಿಯರಿಂಗ್ ಸೇರಿದಂತೆ ಇತರೆ ಎಲ್ಲ ಕೋಸ್‌ಗಳಿಗೆ ಪ್ರತ್ಯೇಕವಾಗಿ ಕೌನ್ಸಲಿಂಗ್ ನಡೆಸಲು ತೀರ್ಮಾನಿಸಲಾಗಿದೆ ಎಂದು ವೈದ್ಯಕೀಯ ಸಚಿವ ಡಾ.ಶರಣ ಪ್ರಕಾಶ್ ಪಾಟೀಲ್ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಶ್ನೆ ಪತ್ರಿಕೆಸೋರಿಕೆಯಿಂದಾಗಿ ನೀಟ್ ಪರೀಕ್ಷೆ ರದ್ದಾಗಿದೆ. ಜೂ.21ಕ್ಕೆ ಮರು ಪರೀಕ್ಷೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ನೀಟ್ ಫಲಿತಾಂಶ ಬಂದ ನಂತರವೇ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ಪ್ರತ್ಯೇಕ ಕೌನ್ಸಲಿಂಗ್ ನಡೆಸಲಾಗುವುದು. 2026ರ ನೀಟ್ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ವೈದ್ಯಕೀಯ, ದಂತ ವೈದ್ಯಕೀಯ ಸೀಟುಗಳು ಹಂಚಿಕೆಯಾಗಲಿವೆ. ಆದ್ದರಿಂದ ವೈದ್ಯಕೀಯ ಕೋರ್ಸ್ ಹೊರತುಪಡಿಸಿ ಎಂಜಿನಿಯರಿಂಗ್ ಸೇರಿದಂತೆ ಇತರೆ ಎಲ್ಲ ಕೋರ್ಸ್‌ಗಳಿಗೆ ಪ್ರತ್ಯೇಕವಾಗಿ ಕೌನ್ಸಲಿಂಗ್ ನಡೆಸಲು ತೀರ್ಮಾನಿಸಲಾಗಿದೆ. ಜೂ. 10ರಿಂದಲೇ ಈ ಪ್ರಕ್ರಿಯೆ ಪ್ರಾರಂಭವಾಗಲಿದೆ ಎಂದು ಹೇಳಿದರು.

ಜೂ. 10ರಿಂದ ಆಪ್ಷನ್ ಎಂಟ್ರಿ ಪ್ರಾರಂಭ: ಎಲ್ಲ ವಿದ್ಯಾರ್ಥಿಗಳ, ಎಲ್ಲ ವಿಷಯಗಳ 11,51,367 ಒಎಂಆರ್ ಶೀಟ್‌ಗಳನ್ನು ಐದು ದಿನಗಳಲ್ಲಿಯೇ ಕೆಇಎ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಲಾಗಿದೆ. ಸಿಇಟಿ ಫಲಿತಾಂಶ ಪ್ರಕಟಿಸುವುದಕ್ಕೆ ಮೊದಲು ಸ್ಯಾಟ್ಸ್ ಮತ್ತು ಆರ್‌ಡಿ ದತ್ತಾಂಶದ ಆಧಾರದ ಮೇಲೆ ದಾಖಲೆಗಳನ್ನು ಆನ್‌ಲೈನ್‌ನಲ್ಲಿಯೇ ಪರಿಶೀಲಿಸಲಾಗಿದೆ. ಆನ್‌ಲೈನ್‌ನಲ್ಲಿ ಪರಿಶೀಲನೆ ಆಗದ ಅಭ್ಯರ್ಥಿಗಳ ದಾಖಲೆಗಳನ್ನು ಆಯಾ ಪಿಯು ಕಾಲೇಜುಗಳಲ್ಲಿ ಮಾಡಲಾಗಿದೆ. ಆಪ್ಷನ್ ಎಂಟ್ರಿಗೆ ಎಲ್ಲ ವಿದ್ಯಾರ್ಥಿಗಳ ದತ್ತಾಂಶ ಸಿದ್ಧವಾಗಿದ್ದು, ಜೂ.10ರಿಂದ ಪ್ರಾರಂಭಿಸಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದರು.

ಶುಲ್ಕ ಹೆಚ್ಚಳ ಚರ್ಚಿಸಿ ನಿರ್ಧಾರ: ಪ್ರಸಕ್ತ ಸಾಲಿನ ಎಂಜಿನಿಯರಿಂಗ್ ಕೋರ್ಸ್‌ಗೆ ಸಂಬಂಧಿಸಿದ ಪ್ರವೇಶ ಶುಲ್ಕವನ್ನು ಈಗಾಗಲೇ ಶೇ.7.5ರಷ್ಟು ಹೆಚ್ಚಿಸಲಾಗಿದೆ. ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋಸ್‌ಗಳ ಪ್ರವೇಶ ಶುಲ್ಕ ಹೆಚ್ಚಳದ ಕುರಿತು ಯಾವುದೇ ಕಾಲೇಜುಗಳಿಂದ ಪ್ರಸ್ತಾವನೆ ಸಲ್ಲಿಕೆಯಾಗಿಲ್ಲ. ಆದ್ದರಿಂದ ಶೀಘ್ರವೇ ಈ ಬಗ್ಗೆ ಸಭೆ ನಡೆಸಿ, ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು ಎಂದು ಸಚಿವ ಡಾ.ಶರಣ ಪ್ರಕಾಶ ಪಾಟೀಲ್ ಸ್ಪಷ್ಟಪಡಿಸಿದರು. ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ ವಿಷಯದಲ್ಲಿ ತಲಾ ಒಂದು ಪ್ರಶ್ನೆ ತಪ್ಪಾಗಿದ್ದರಿಂದ ಕೃಪಾಂಕ ನೀಡಲಾಗಿದೆ. ಗಣಿತಕ್ಕೆ ಯಾವುದೇ ಕೃಪಾಂಕವನ್ನು ನೀಡಲಾಗಿಲ್ಲ ಎಂದು ಡಾ.ಶರಣಪ್ರಕಾಶ್ ಪಾಟೀಲ್ ಹೇಳಿದರು.



ಇದೇ ಮೊದಲ ಬಾರಿಗೆ ಪ್ರೀ ಸುತ್ತಿನ ಕೌನ್ಸಿಲಿಂಗ್ ಅನ್ನು ನಡೆಸಲಾಗುತ್ತಿದ್ದು ಹಂಚಿಕೆಯಾದ ಸೀಟು ಶೇ.100ರಷ್ಟು ಆಗುವ ಅಭ್ಯರ್ಥಿಗಳಿಗೆ ಕಾಲೇಜಿಗೆ ಸೇರಬಹುದಾಗಿದೆ ಅಥವಾ ಮುಂದಿನ 1ನೇ ಸುತ್ತಿನಲ್ಲಿ ಭಾಗವಹಿಸಬಹುದಾಗಿದೆ.
■ ಡಾ.ಶರಣ ಪ್ರಕಾಶ್ ಪಾಟೀಲ್, ವೈದ್ಯಕೀಯ ಸಚಿವ



ಎರಡು ವರ್ಷಗಳ ಕಾಲ ಯಾವುದೇ ಅನ್ಯ ಚಟುವಟಿಕೆಗಳಲ್ಲಿ ಭಾಗವಹಿಸದೇ ಕಠಿಣ ಪರಿಶ್ರಮವಹಿಸಿ ಓದಿದ್ದೆ. ಸದ್ಯಕ್ಕೆ ಈಗ ನೀಟ್‌ಗೆ ಸಿದ್ಧತೆ ನಡೆಸುತ್ತಿದ್ದೇನೆ. ನೀಟ್ ಫಲಿತಾಂಶದ ಆಧಾರಿಸಿ ಮುಂದಿನ ತೀರ್ಮಾನ ಕೈಗೊಳ್ಳುತ್ತೇನೆ.
■ ನಯನಾ ಗೋಪಿ, ಪಶು ವೈದ್ಯಕೀಯ, ಪ್ರಥಮ ರ್‍ಯಾಂಕ್



ನಾನು ದಿನಕ್ಕೆ ನಾಲ್ಕೂವರೆ ಗಂಟೆ ಓದುತ್ತಿದ್ದೆ. ನನಗೆ ಶುದ್ಧ ವಿಜ್ಞಾನ ಅದರಲ್ಲಿಯೂ ರಸಾಯನಶಾಸ್ತ್ರದಲ್ಲಿ ಉನ್ನತ ಶಿಕ್ಷಣ ಪಡೆಯುವ ಆಸೆಯಿದೆ. ಗಮನ ಕೇಂದ್ರಿಕರಿಸಿ ಓದಿದರೆ ಸಾಧನೆ ಸಾಧ್ಯ ಎಂದು ನಾನು ನಂಬಿದ್ದೇನೆ.
■ ನಿನಾದ್ ವಸಿಷ್ಠ, ಕೃಷಿ ವಿಜ್ಞಾನದಲ್ಲಿ ಮೊದಲ ರ್‍ಯಾಂಕ್

ಕೆಲವು ಜನಪ್ರತಿನಿಧಿಗಳಿಗೆ ಅರೆಬರೆ ಜ್ಞಾನ: ಗೌರ್ನರ್

• **ಬೆಂಗಳೂರು:** ದೇಶದಲ್ಲಿ ಕಾರು ಚಾಲಕನಿಂದ ಹಿಡಿದು ಕಚೇರಿ ಸಿಬ್ಬಂದಿ ವರೆಗೂ ಶೈಕ್ಷಣಿಕ ಅರ್ಹತೆ ನಿಗದಿಪಡಿಸಲಾಗುತ್ತದೆ. ಆದರೆ ಲಕ್ಷಾಂತರ ಜನರನ್ನು ಪ್ರತಿನಿಧಿಸುವ ಜನಪ್ರತಿನಿಧಿಗಳಿಗೆ ಯಾವುದೇ ಕನಿಷ್ಠ ಶೈಕ್ಷಣಿಕ ಅರ್ಹತೆ ನಿಗದಿಯಿಲ್ಲದಿರುವುದು ಪ್ರಶ್ನಾರ್ಹ ಎಂದು ಕೇರಳ ಮತ್ತು ತಮಿಳುನಾಡಿನ ರಾಜ್ಯಪಾಲ ರಾಜೇಂದ್ರ ಆರಳೇಕರ್ ಅಭಿಪ್ರಾಯಪಟ್ಟರು.

ಶನಿವಾರ ನಗರದ ಸರ್ಕಾರಿ ನೌಕರರ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಧಾನ ಪರಿಷತ್ ನಿವೃತ್ತ ಕಾರ್ಯದರ್ಶಿ ಧ್ರುವಕುಮಾರ್ ಅವರ ರಚಿಸಿರುವ ಸಂಸತ್ತಿನ ಹಕ್ಕು ಭಾದ್ಯತಾ ನೋಟಗಳು ಎಂಬ ಪುಸ್ತಕ ಲೋಕಾರ್ಪಣೆಗೊಳಿಸಿ ಮಾತನಾಡಿದರು. ಕೇಂದ್ರ ಸರ್ಕಾರ ಅಥವಾ ಇತರ ರಾಜ್ಯಗಳನ್ನು ಟೀಕಿಸುವ ವೇದಿಕೆಯಾಗಬಾರದು ಎಂದು ರಾಜೇಂದ್ರ ಆರಳೇಕರ್ ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಪುಸ್ತಕದ ಲೇಖಕ ಧ್ರುವಕುಮಾರ್, ಪತ್ರಕರ್ತ ರವಿ ಹೆಗಡೆ, ಸುಪ್ರೀಂ ಕೋರ್ಟ್ ವಕೀಲ ಕೆ.ವಿ. ಧನಂಜಯ್ ಸೇರಿದಂತೆ ಇತರರಿದ್ದರು.



ಸಂಸದೀಯ ಇತಿಹಾಸದಲ್ಲೇ ವಿಶಿಷ್ಟ ಆಕರ ಗ್ರಂಥ

ಕನ್ನಡಪ್ರಭ ಮತ್ತು ಏಷ್ಯಾನೆಟ್ ಸುವರ್ಣ ನ್ಯೂಸ್ ಸಮೂಹ ಸಂಪಾದಕೀಯ ನಿರ್ದೇಶಕ ರವಿ ಹೆಗಡೆ ಅವರು ಮಾತನಾಡಿ, ಸಂಸದೀಯ ವಿಶೇಷಾಧಿಕಾರಗಳು ಹಾಗೂ ಪತ್ರಿಕೋದ್ಯಮದ ನಡುವಿನ ಸಂಬಂಧವನ್ನು ಅತ್ಯಂತ ಸೂಕ್ಷ್ಮವಾಗಿ ಮತ್ತು ಆಳವಾಗಿ ವಿಶ್ಲೇಷಿಸಿರುವ ಧ್ರುವಕುಮಾರ್ ಅವರ ಈ ಕೃತಿಯು, ಭಾರತೀಯ ಸಂಸದೀಯ ಇತಿಹಾಸದಲ್ಲೇ ಒಂದು ವಿಶಿಷ್ಟ ಆಕರ ಗ್ರಂಥವಾಗಿದೆ. ಶಾಸಕಾಂಗ, ಕಾರ್ಯಾಂಗ ಮತ್ತು ಪತ್ರಿಕಾರಂಗ ಹೇಗೆ ಜವಾಬ್ದಾರಿಯಿಂದ ಕೆಲಸ ಮಾಡಬೇಕು ಎಂಬುದಕ್ಕೆ ಈ ಕೃತಿ ದಿಕ್ಸೂಚಿ ಇದ್ದಂತೆ ಎಂದರು.

ಕಾಂಗ್ರೆಸ್ ಯಾವ ಗ್ಯಾರಂಟಿ ಪಾಲಿಸುವುದಿಲ್ಲ: ಜೋಶಿ

• **ಸಾಗರ:** ರಾಜ್ಯದಲ್ಲಿ ಕಾಂಗ್ರೆಸ್ ಗ್ಯಾರಂಟಿ ಬಗ್ಗೆ ಮಾತನಾಡುತ್ತಿದೆ. ಆದರೆ ಖಾತೆ ಬಗ್ಗೆ ಗ್ಯಾರಂಟಿ ನೀಡಿಲ್ಲ ಎಂದು ಸಚಿವರು ತಕರಾರು ತೆಗೆದಿದ್ದಾರೆ. ಕಾಂಗ್ರೆಸ್ ಪಕ್ಷ ಯಾವ ಗ್ಯಾರಂಟಿಯನ್ನು ಪಾಲನೆ ಮಾಡುವುದಿಲ್ಲ, ತನಗೆ ಕೊಟ್ಟ ಗ್ಯಾರಂಟಿ ಪಾಲನೆ ಮಾಡಿಲ್ಲ ಎಂದು ರಾಮಲಿಂಗಾರೆಡ್ಡಿ ಅವರಿಗೆ ನೋವಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ತಿಳಿಸಿದರು. ಎಲ್.ಬಿ.ಕಾಲೇಜು ಆವರಣದಲ್ಲಿ ಶನಿವಾರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಇದು ಖಾತೆ ಜಗಳ ಅಲ್ಲ, ಕಾಂಗ್ರೆಸ್ ಒಳಬೇಗುದಿ ಬಯಲಿಗೆ ಬರುತ್ತಿದೆ ಎಂದು ಹೇಳಿದರು.




ಸಿದ್ದರಾಮಯ್ಯ ಅವರನ್ನು ಒತ್ತಾಯಪೂರ್ವಕವಾಗಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗೆ ಇಳಿಸಿದ ನಂತರ ಕಾಂಗ್ರೆಸ್‌ನಲ್ಲಿ ಒಳಬೇಗುದಿ ಸ್ಫೋಟಗೊಂಡಿದೆ. ಈ ಒಳಜಗಳ ಇರಿಸಿಕೊಂಡು ಮುಂದಿನ ಎರಡು ವರ್ಷ ಹೇಗೆ ಸರ್ಕಾರ ಮುಂದುವರೆಯುತ್ತದೆ ಎನ್ನುವುದು ನೋಡಬೇಕು. ಈ ಆಡಳಿತದಿಂದ ರಾಜ್ಯ 10 ವರ್ಷ ಅಭಿವೃದ್ಧಿಯಲ್ಲಿ ಹಿಂದೆ ಹೋಗುತ್ತದೆ ಯಲ್ಲ ಎನ್ನುವ ಆತಂಕ ನಮ್ಮದಾಗಿದೆ. ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ ನಡೆಯಬೇಕು ಎನ್ನುವುದು ನಮ್ಮ ಪಕ್ಷದ ಉದ್ದೇಶವಲ್ಲ. ಜನರು ಐದು ವರ್ಷ ಅವಕಾಶ ಕೊಟ್ಟಿದ್ದಾರೆ. ಅದನ್ನು ಪೂರ್ಣಗೊಳಿಸಲಿ ಎಂದು ನಾವು ಬಯಸುತ್ತೇವೆ ಎಂದು ಹೇಳಿದರು.

ಕೇಂದ್ರ ಸಂಪುಟ ವಿಸ್ತರಣೆ ಬಗ್ಗೆ ಪ್ರಧಾನ ಮಂತ್ರಿಗಳು ತೀರ್ಮಾನಿಸುತ್ತಾರೆ. ಅಣ್ಣಾಮಲೈ ಹೊಸ ಪಕ್ಷ ಸ್ಥಾಪನೆಗೆ ಮುಂದಾಗಿದ್ದು ಅವರಿಗೆ ಶುಭ ಕೋರುತ್ತೇನೆ. ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆಯನ್ನು ಕೇಂದ್ರ ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ನಾವು ಇದರ ಬಗ್ಗೆ ಸಂವೇದನಾ ಶೀಲರಾಗಿದ್ದೇವೆ. ಜೂ. 21ಕ್ಕೆ ನೀಟ್ ಮರು ಪರೀಕ್ಷೆ ನಡೆಸಲು ಅಗತ್ಯ ಕ್ರಮ ತೆಗೆದುಕೊಂಡಿದ್ದೇವೆ. ಮುಂದಿನ ದಿನಗಳಲ್ಲಿ ಆನ್‌ಲೈನ್ ಮೂಲಕ ಅತ್ಯಂತ ಶಿಸ್ತುಬದ್ಧವಾಗಿ ನೀಟ್ ಪರೀಕ್ಷೆ ನಡೆಸಲು ಗಮನ ಹರಿಸುತ್ತೇವೆ ಎಂದರು. ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕ ಆರಗ ಜ್ಞಾನೇಂದ್ರ ಇನ್ನಿತರರು ಹಾಜರಿದ್ದರು.

ಮೀಸಲಾತಿ ನಿಗದಿಗೆ ಎಲ್ಲಾ ಡಿಸಿಗಳಿಗೆ ಕಾಲಾವಕಾಶ

• **ಬೆಂಗಳೂರು:** ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳ ಸದಸ್ಯ ಸ್ಥಾನಗಳಿಗೆ ವರ್ಗವಾರು ಮೀಸಲಾತಿ ನಿಗದಿಪಡಿಸಲು ಎಲ್ಲಾ ಜಿಲ್ಲಾಧಿಕಾರಿಗಳಿಗೆ 30 ದಿನಗಳ ಕಾಲಾವಕಾಶ ನೀಡಲಾಗಿದೆ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

ಅವಧಿ ಮುಗಿದ ರಾಜ್ಯದ 5,950 ಗ್ರಾಮ ಪಂಚಾಯಿತಿಗಳಿಗೆ ಸಕಾಲದಲ್ಲಿ ಚುನಾವಣೆ ನಡೆಸಲು ಪೂರಕವಾಗಿ ಅಂತಿಮ ಮೀಸಲಾತಿ ಅಧಿಸೂಚನೆ ಹೊರಡಿಸಲು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದು ಕೋರಿ ರಾಜ್ಯ ಚುನಾವಣಾ ಆಯೋಗ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಹಾಗೂ ನ್ಯಾ. ಕೆ.ಎಸ್.ಹೇಮಲೇಖಾ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.



ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ, ಗ್ರಾ.ಪಂ ಚುನಾವಣೆಗೆ ಸಂಬಂಧಿಸಿದಂತೆ ಸರ್ಕಾರದಿಂದ ಈವರೆಗೆ ಆಗಿರುವ ಪ್ರಗತಿಯ ಬಗ್ಗೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿ, ರಾಜ್ಯದ ಎಲ್ಲಾ ಗ್ರಾ.ಪಂ.ಗಳಿಗೆ ಸದಸ್ಯ ಸ್ಥಾನಗಳನ್ನು ನಿಗದಿಪಡಿಸಿ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. ಮುಂದುವರೆದು ಸದಸ್ಯ ಸ್ಥಾನಗಳಿಗೆ ಪ್ರವರ್ಗವಾರು ಮೀಸಲಾತಿಯನ್ನು 30 ದಿನಗಳಲ್ಲಿ ನಿಗದಿಪಡಿಸುವಂತೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸುತ್ತೋಲೆ ಹೊರಡಿಸಲಾಗಿದೆ ಎಂದರು.

ಇದನ್ನು ನ್ಯಾಯಪೀಠ, ವಿಚಾರಣೆಯನ್ನು ಜುಲೈ 10ಕ್ಕೆ ಮುಂದೂಡಿತು. ರಾಜ್ಯ ಚುನಾವಣಾ ಆಯೋಗವನ್ನು ಹಿರಿಯ ವಕೀಲ ಕೆ.ಎನ್.ಫಣೀಂದ್ರ ದಾಖಲಿಸಿಕೊಂಡ ಪ್ರತಿನಿಧಿಸಿದ್ದರು.

ಖಾಸಗಿ ಬಸ್ ಬೆಂಕಿಗಾಹುತಿ

▸▸ ಹುಲಿಕಲ್ ಘಾಟಿಯಲ್ಲಿ ದುರಂತ: 23 ಪ್ರಯಾಣಿಕರು ಅಪಾಯದಿಂದ ಪಾರು



• **ಹೊಸನಗರ:** ಶಿವಮೊಗ್ಗ ಜಿಲ್ಲಾ ಗಡಿ ಭಾಗದ ಹುಲಿಕಲ್ ಘಾಟಿಯ ಜಲಪಾತದ ಸಮೀಪದಲ್ಲಿ ಉಡುಪಿಗೆ ತೆರಳುತ್ತಿದ್ದ ಶ್ರೀ ದುರ್ಗಾಂಬಾ ಖಾಸಗಿ ಬಸ್‌ನ ಅಡಿಯಲ್ಲಿ ಕಾಣಿಸಿಕೊಂಡ ಬೆಂಕಿಯಿಂದ ಕ್ಷಣ ಮಾತ್ರದಲ್ಲಿ ಜ್ವಾಲೆ ಆವರಿಸಿ ಬಸ್ ಸಂಪೂರ್ಣ ಸುಟ್ಟು ಕರಕಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದಿಂದ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಗೆ ಪ್ರತಿನಿತ್ಯ ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಶ್ರೀ ದುರ್ಗಾಂಬಾ ಕಂಪೆನಿಯ (ಮಂತ್ರಾಲಯ ಪ್ರಭು) ಬಸ್‌ಗೆ ಶನಿವಾರ ಬೆಳಗ್ಗೆ 11.30ರ ಸುಮಾರಿಗೆ ತಾಂತ್ರಿಕ ದೋಷದಿಂದಾಗಿ ಬೆಂಕಿ ಕಾಣಿಸಿಕೊಂಡಿದೆ. ಬಸ್‌ನಲ್ಲಿ ಕಾಣಿಸಿಕೊಂಡ ಬೆಂಕಿಯು ಡಿಸೇಲ್ ಪೈಪ್‌ಗೂ ಆವರಿಸಿದೆ. ಬಸ್ಸಿನಲ್ಲಿ ಆಕಸ್ಮಿಕವಾಗಿ ಹೊತ್ತಿಕೊಂಡ ಬೆಂಕಿಗೆ ಗಾಬರಿಗೊಂಡ ಪ್ರಯಾಣಿಕರು ಬಸ್ಸಿನಿಂದ ಇಳಿದು ಅಗ್ನಿ ದುರಂತದಿಂದ ಪಾರಾಗಿದ್ದಾರೆ. ಭೂಕುಸಿತದ ಹಿನ್ನೆಲೆಯಲ್ಲಿ ಘಾಟಿಯಲ್ಲಿ ವಾಹನ ಸಂಚಾರ ಈಗಾಗಲೇ ಬಂದ್ ಮಾಡಲಾಗಿದೆ. ಆದರೆ ಉಭಯ ಜಿಲ್ಲಾಡಳಿತದ ಸೂಚನೆ ಮೇರೆಗೆ ಖಾಸಗಿ ಬಸ್‌ಗಳು ಪ್ರಯಾಣಿಕರ ಅನುಕೂಲಕ್ಕಾಗಿ ಹುಲಿಕಲ್ ಘಾಟಿ ದೇಗುಲದ ಸಮೀಪ ಬಸ್‌ಗಳನ್ನು ಅದಲು ಬದಲು ಮಾಡಿಕೊಳ್ಳುವ ಮೂಲಕ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಲಾಗುತ್ತಿತ್ತು.

ಹುಲಿಕಲ್ ಘಾಟಿಯಲ್ಲಿ ಇದೇ ಕಂಪೆನಿಯ ಎರಡನೇಯ ಬಸ್ ಇಂದು ಸುಟ್ಟು ಹೋಗಿದ್ದು, ಕೆಲವೇ ದಿನಗಳ ಹಿಂದೆಯೂ ಇದೇ ಘಾಟಿಯಲ್ಲಿಯೇ ಹೀಗೆಯೇ ಬಸ್ ಸುಟ್ಟುಹೋದ ಘಟನೆಯೂ ಸಹ ನಡೆದಿತ್ತು.

78 ವರ್ಷಗಳಿಂದ ನೀರಿನಲ್ಲಿದ್ದರೂ ಮುಕ್ಕಾಗದ ಹಿರೇಭಾಸ್ಕರ ಅಣೆಕಟ್ಟು

ಅಪರೂಪಕ್ಕೆ ಗೋಚರಿಸುವ ಮಡೆನೂರು !

▸ ಜಿ. ನಾಗೇಶ್ ಸಾಗರ

• **ಸಾಗರ:** ಸುಮಾರು 78 ವರ್ಷಗಳ ಹಿಂದೆ ಶರಾವತಿ ಹಿನ್ನೀರಿನಲ್ಲಿ ವಿದ್ಯುತ್ ಉತ್ಪಾದನೆ ಹಿನ್ನೆಲೆಯಲ್ಲಿ ಮಡೆನೂರು-ಹಿರೇಭಾಸ್ಕರ ನಡುವೆ ನಿರ್ಮಿಸಿದ್ದ ಅಣೆಕಟ್ಟು ಮತ್ತೆ ನೀರಿನಿಂದ ಮೇಲೆದ್ದು ಬಂದಿದೆ. ಲಿಂಗನಮಕ್ಕಿ ಜಲಾಶಯದ ನೀರಿನ ಸಂಗ್ರಹಮಟ್ಟ 1760 ಅಡಿಗೆ ತಲುಪುತ್ತಿದ್ದಂತೆಯೇ ಮುಳುಗಿದ್ದ ಹಿರೇಭಾಸ್ಕರ ಅಣೆಕಟ್ಟು ತಲೆ ಎತ್ತಿ ತನ್ನತ್ತ ಪ್ರವಾಸಿಗರನ್ನು ಆಕರ್ಷಿಸುತ್ತದೆ.

1948ರಲ್ಲಿ ನಿರ್ಮಾಣ: ರಾಜ್ಯಕ್ಕೆ ವಿದ್ಯುತ್ ಪೂರೈಕೆ ಮಾಡಬೇಕು ಎನ್ನುವ ಸದುದ್ದೇಶದಿಂದ ಹಿರೇಭಾಸ್ಕರ ಅಣೆಕಟ್ಟು ನಿರ್ಮಿಸಲಾಗಿತ್ತು. ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ 1939ರ ಫೆಬ್ರವರಿ 5ರಂದು ಶರಾವತಿ ವಿದ್ಯುತ್ ಯೋಜನೆಗೆ ಅಡಿಗಲ್ಲು ಹಾಕಿದ್ದರು. ವಿದ್ಯುತ್ ಉತ್ಪಾದನೆಗೆ ಮಹಾತ್ಮಾಗಾಂಧಿ ವಿದ್ಯುದಾಗರ ನಿರ್ಮಾಣ ಮಾಡಲು ಸುಮಾರು 8 ಕಡೆಗಳಲ್ಲಿ ಸರ್ವೇ ನಡೆಸಿ ಅಂತಿಮವಾಗಿ ಮಡೆನೂರು ಮತ್ತು ಹಿರೇಭಾಸ್ಕರ ಗ್ರಾಮಗಳನ್ನು ಅಣೆಕಟ್ಟು ನಿರ್ಮಾಣಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣ: ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚುತ್ತಾ ಹೋಗಿತ್ತು. ಅಂದು ಕಲ್ಲಿದ್ದಲು, ಸೋಲಾರ್, ವಿಂಡ್ ಇನ್ನಿತರೆ ವಿದ್ಯುತ್ ಮೂಲಗಳು ಇರಲಿಲ್ಲ, ಆಗ ಜಲವಿದ್ಯುತ್‌ಗೆ ಹೆಚ್ಚಿನ ಬೇಡಿಕೆ ಇತ್ತು. ಈ ಹಿನ್ನೆಲೆಯಲ್ಲಿ ಲಿಂಗನಮಕ್ಕಿಯಲ್ಲಿ ಮತ್ತೊಂದು ಬೃಹತ್ ಅಣೆಕಟ್ಟು ನಿರ್ಮಿಸಲು ಚಿಂತನೆ ನಡೆಯಿತು. 156 ಟಿಎಂಸಿ ನೀರು ಸಂಗ್ರಹಿಸಿ ತನ್ಮೂಲಕ 1035 ಮೆ.ವ್ಯಾ. ವಿದ್ಯುತ್ ಉತ್ಪಾದನೆ ಮಾಡುವ ಯೋಜನೆ ಅನುಷ್ಠಾನಕ್ಕೆ ಬಂದಿತು.

ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣ ಸಂದರ್ಭದಲ್ಲಿ ಸಹ ಅಪಾರ ಪ್ರಮಾಣದ ಭೂಮಿ, ಮನೆ, ಜಮೀನು, ಅರಣ್ಯ ಮುಳುಗಿತ್ತು. ಸಹಸ್ರಾರು ಕುಟುಂಬ ನಿರಾಶ್ರಿತರಾಗಿದ್ದೂ ಹೌದು. ಆದರೆ ರಾಜ್ಯದಲ್ಲಿಯೆ ಅತಿಹೆಚ್ಚು ವಿದ್ಯುತ್ ಉತ್ಪಾದನೆ ಮಾಡುವ ಸ್ಥಳ ಇದಾಯಿತು. ಲಿಂಗನಮಕ್ಕಿ ಅಣೆಕಟ್ಟು ನಿರ್ಮಾಣ ಮಾಡಿ ನೀರು ಸಂಗ್ರಹವಾದ ನಂತರ ಮಡೆನೂರು ಡ್ಯಾಂ ನೀರಿನಲ್ಲಿ ಮುಳುಗಿತು. ವಿದ್ಯುತ್ ಉತ್ಪಾದನೆಗೆ ನಿರ್ಮಾಣವಾಗಿದ್ದ ಡ್ಯಾಂ 16 ವರ್ಷಗಳಲ್ಲಿ ಶರಾವತಿ ಹಿನ್ನೀರಿನಲ್ಲಿ ಅಡಗಿ ಕುಳಿತುಕೊಂಡಿತು.



ಹನ್ನೊಂದು ಸೈಫನ್‌ಗಳಿವೆ..!

ಸ್ವಾತಂತ್ರ್ಯ ಪೂರ್ವದಲ್ಲಿ ನಿರ್ಮಿಸಿದ ಮಡೆನೂರು ಡ್ಯಾಂ ಭಾರತೀಯ ಇಂಜಿನಿಯರ್‌ಗಳ ಕೌಶಲ್ಯಕ್ಕೆ ಕನ್ನಡಿ ಹಿಡಿದಂತೆ ಇದೆ. ಇದೊಂದು ಅದ್ಭುತ ತಾಂತ್ರಿಕ ನಿರ್ಮಾಣ ಎನ್ನುವ ಪ್ರಶಂಸೆಗೂ ಪಾತ್ರವಾಗಿದೆ. ಮಡೆನೂರು ಅಣೆಕಟ್ಟನ್ನು ಈಗಿನಂತೆ ಸಿಮೆಂಟ್, ಕಬ್ಬಿಣ ಇನ್ನಿತರೆಯಿಂದ ನಿರ್ಮಿಸಿಲ್ಲ, ಸುಟ್ಟ ಇಟ್ಟಿಗೆ ಚೂರು, ಮರಳು, ಸುಣ್ಣದ ಕಲ್ಲಿನ ಪುಡಿ, ಬೆಲ್ಲ ಮಿಶ್ರಣದ ಸುರ್ಕಿ ಯಿಂದ ಕಟ್ಟಲ್ಪಟ್ಟಿದೆ. ನೀರನ್ನು ವಿದ್ಯುತ್ ಉತ್ಪಾದನೆಗೆ ಬಿಡಲು 6 ಗೇಟ್ ಅಳವಡಿಸಿದ್ದು, ಮಳೆಗಾಲ ಸಂದರ್ಭದಲ್ಲಿನ ಪ್ರವಾಹದ ನೀರು ಹೊರಗೆ ಕಳಿಸಲು ಹದಿನೆಂಟು ಅಡಿ ವಿಸ್ತೀರ್ಣದ ವೋಲ್ಯೂಟ್ ಮಾದರಿಯ ಹನ್ನೊಂದು ಸೈಫನ್‌ಗಳನ್ನು ಅಳವಡಿಸಿದೆ. ಈ ಸೈಫನ್‌ಗಳು ಹನ್ನೊಂದು ಸಾವಿರ ಕ್ಯೂಸೆಕ್ಸ್ ನೀರನ್ನು ಹೊರಗೆ ಬಿಡುವ ಸಾಮರ್ಥ್ಯ ಹೊಂದಿದೆ.



ಅಪರೂಪಕ್ಕೆ ದರ್ಶನ

ಶರಾವತಿ ನದಿ ಒಡಲು ಬರಿದಾಗುವುದು ತೀರ ವಿರಳ. ಲಿಂಗನಮಕ್ಕಿ ಅಣೆಕಟ್ಟಿನಲ್ಲಿ ಮೇ ಅಂತ್ಯ ಅಥವಾ ಜೂನ್ ಮೊದಲ ವಾರದವರೆಗೆ ಸಹಜ ವಾಗಿ 25ರಿಂದ 30 ಟಿಎಂಸಿ ನೀರು ಇರುತ್ತದೆ. ಯಾವಾಗ ಡ್ಯಾಂ ಲೆವೆಲ್ 1760 ಅಡಿಗಿಂತ ಕಡಿಮೆ ಆಗುತ್ತದೆಯೋ ಆಗೆಲ್ಲಾ ಮಡೆನೂರು ಡ್ಯಾಂ ತಲೆಎತ್ತಿ ನಿಲ್ಲುತ್ತದೆ. ಆಗ ಡ್ಯಾಂನಲ್ಲಿ ನೀರು ಕಡಿಮೆಯಾಗಿದೆ ಎನ್ನುವ ಲೆಕ್ಕಾಚಾರ ಪ್ರಾರಂಭವಾಗುತ್ತದೆ.

ಮೀಸಲು ನಿಗದಿಗೆ 8 ವಾರಗಳ ಕಾಲಾವಕಾಶ

• **ಬೆಂಗಳೂರು:** ಕಳೆದ ಐದು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ರಾಜ್ಯದ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ವಿಳಂಬ ಆಗಿರುವುದಕ್ಕೆ ಹೈಕೋರ್ಟ್ ಮುಂದೆ ಕ್ಷಮೆಯಾಚಿಸಿರುವ ರಾಜ್ಯ ಸರ್ಕಾರ, ಜಿ.ಪಂ. ಹಾಗೂ ತಾ.ಪಂ. ಕ್ಷೇತ್ರಗಳಿಗೆ ಮೀಸಲಾತಿ ನಿಗದಿ ಪ್ರಕ್ರಿಯೆ ಪೂರ್ಣಗೊಳಿಸಲು ಮತ್ತೆ 8 ವಾರಗಳ ಕಾಲಾವಕಾಶ ಕೇಳಿದೆ.

ರಾಜ್ಯದ ಎಲ್ಲ ಜಿಲ್ಲಾ ಪಂಚಾಯಿತಿ ಹಾಗೂ ತಾಲೂಕು ಪಂಚಾಯಿತಿಗಳಿಗೆ 12 ವಾರಗಳಲ್ಲಿ ಮೀಸಲಾತಿ ಅಂತಿಮಗೊಳಿಸಲಾಗುವುದು ಎಂದು 2023ರ ಡಿಸೆಂಬರ್ 19ಕ್ಕೆ ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಲಿಖಿತ ಭರವಸೆ ನೀಡಿತ್ತು. ಆದರೆ, ನ್ಯಾಯಾಲಯಕ್ಕೆ ಕೊಟ್ಟ ಭರವಸೆಯಂತೆ ಸರ್ಕಾರ ನಡೆದುಕೊಂಡಿಲ್ಲ ಎಂದು ಆಕ್ಷೇಪಿಸಿ, ಸ್ವತಃ ರಾಜ್ಯ ಚುನಾವಣಾ ಆಯೋಗವು ಸರ್ಕಾರದ ವಿರುದ್ಧ 2024ರಲ್ಲಿ ದಾಖಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಹಾಗೂ ನ್ಯಾಯಮೂರ್ತಿ ಎಂ.ಐ.ಅರುಣ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.ವಿಚಾರಣೆ ವೇಳೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಕಾರ್ಯದರ್ಶಿ ಡಿ.ರಂದೀಪ್, ನ್ಯಾಯಾಲಯಕ್ಕೆ ಪ್ರಮಾಣಪತ್ರ ಸಲ್ಲಿಸಿದ್ದು, ಮೀಸಲಾತಿ ನಿಗದಿ ಪ್ರಕ್ರಿಯೆಗೆ ವಿಳಂಬವಾದ ಕಾರಣಗಳನ್ನು ವಿವರಿಸಿದ್ದಾರೆ. ಸರ್ಕಾರದಿಂದ ಉದ್ದೇಶಪೂರ್ವಕವಾಗಿ ವಿಳಂಬಕ್ಕೆ ಕ್ಷಮೆಯಾಚಿಸುವುದಾಗಿ ಪ್ರಮಾಣಪತ್ರದಲ್ಲಿ ಹೇಳಿದ್ದಾರೆ. ಜಿಲ್ಲೆಯ 4, ಬಾಗಲಕೋಟೆ ಜಿಲ್ಲೆಯ ತಾಲೂಕುಗಳ ಗಡಿ ಬದಲಾಯಿಸಿ ಅಧಿಸೂಚನೆ ಹೊರಡಿಸಿತ್ತು.



ಪ್ರಶ್ನೋತ್ತರ ರತ್ನಮಾಲಿಕೆ

• ವಿದ್ವಾನ್ ನರಸಿಂಹ ಭಟ್

ಮನುಷ್ಯ ಯಾವಾಗ ಶೋಕಿಸಬೇಕಿಲ್ಲ?

ವಿನೀತಳಾದ ಪತ್ನಿ ಇರುವಾಗ ಮತ್ತು ಸನ್ಮಾರ್ಗದಲ್ಲಿ ವೈಭವವಿದ್ದಾಗ

ಈ ಪ್ರಶ್ನೋತ್ತರದಲ್ಲಿ ಕಾರ್ಯಕಾರಣಭಾವವಿದೆ. ಲಕ್ಷ್ಮ್ಯಾಯ ಕಾರ್ಯವಾದರೆ ಈ ಪ್ರಶ್ನೋತ್ತರದಲ್ಲಿ ಗ್ರಸನಿಗೆ ನೆಮ್ಮದಿ ಯಾವಾಗ ಸಿಗುತ್ತದೆ ಎಂಬ ವಿಷಯ ಪ್ರಸ್ತಾಪಿತಗೊಂಡಿದೆ. ವಿನಯದಿಂದ ಇರುವ ಪತ್ನಿ ಮತ್ತು ತಾನು ಸಂಪಾದಿಸದ ಸಂಪತ್ತು ಸನ್ಮಾರ್ಗದಲ್ಲಿ ಬಳಕೆಯಾದಾಗ ಅವನು ಶೋಕಿಸುವ ಅನಿವಾರ್ಯ ಅಥವಾ ಅವಶ್ಯಕತೆ ಇಲ್ಲ ಎಂಬುದು ಇದರ ತಾತ್ಪರ್ಯ. ಅಂದರೆ ಇದಕ್ಕೆ ವಿರುದ್ಧವಾದ ಪ್ರೀತಿಯಲ್ಲಿ ಇದ್ದರೆ ಅದು ದುಃಖಕ್ಕೆ ಕಾರಣ ಎಂಬುದು ಇದರ ಅರ್ಥ. ನಾಲ್ಕು ಬಗೆಯ ಆಶ್ರಮ ಜೀವನ ಇದೆ. ಇವುಗಳಲ್ಲಿ ಗೃಹಸ್ಥನು ಮಾತ್ರ ಸಂಪತ್ತನ್ನು ಸಂಪಾದಿಸಬೇಕು. ಅದನ್ನು ಪರಿಪಾಲಿಸಬೇಕಾದದ್ದು ಅವನ ಕರ್ತವ್ಯವಾಗಿದೆ. ಗೃಹಸ್ಥಾಶ್ರಮವು ಸಂಪತ್ತನ್ನು ಸಂಪಾದಿಸಲು ಮತ್ತು ಅದನ್ನು ವಿನಿಯೋಗಿಸಲು ಕೂಡ ಅರ್ಹತೆಯಿರುವ ಕೂಡಿರುತ್ತದೆ. ಆದರೆ ಇದನ್ನು ವಿನಿಯೋಗಿಸಬೇಕಾದರೆ ಜೊತೆಗೂಡ ಗೃಹಿಣಿಯ ಪಾತ್ರವು ಅತ್ಯಂತ ಪ್ರಮುಖವಾದದ್ದು. ಆದ್ದರಿಂದ ಗೃಹಿಣಿಯನ್ನು ಗೃಹ ಎಂಬುದಾಗಿ ಗೃಹಿಣಿ ಗೃಹಮುಚ್ಯತೆ ಎಂಬುದಾಗಿ ಹೇಳಲಾಗಿದೆ.

ರಾಜನಿಗೆ ಸರಿಯಾದ ಮಂತ್ರಿ ಇದ್ದರೆ ಅವರ ರಾಜ್ಯ ಹೇಗೆ ಸುಂದರವಾಗಿ ಇರುತ್ತದೆಯೋ ಅಂತೆಯೇ ಮಂತ್ರಿ ಸ್ಥಾನದಲ್ಲಿರುವ ಗೃಹಿಣಿಯು ಗೃಹಸ್ಥನ ಎಲ್ಲ ರೀತಿಯ ಧರ್ಮ ಅರ್ಥ ಕಾಮ ಮೋಕ್ಷ ಈ ನಾಲ್ಕು ಪುರುಷಾರ್ಥಗಳಲ್ಲಿ ಪರಿಪೂರ್ಣವಾಗಿ ತನ್ನ ಸಹಯೋಗಿತ್ವವನ್ನು ಮತ್ತು ಸಹಭಾಗಿತ್ವವನ್ನು ನೀಡು ನೀಡಬೇಕಾಗುತ್ತದೆ. ಹಾಗೆ ನೀಡಿದಾಗ ಮಾತ್ರ ಗೃಹಸ್ಥ ಜೀವನವು ಧನ್ಯ ಎಂಬುದಾಗಿ ಪರಿಗಣಿಸಲಾಗುತ್ತದೆ. ಆದ್ದರಿಂದಲೇ ಗಂಡನಾದವನು ತನ್ನ ಜೀವನದಲ್ಲಿ ಯಾವುದನ್ನು ಪರಮಪುರುಷಾರ್ಥಕ್ಕೆ ಅನುಗುಣವಾಗಿ ಮಾಡಬೇಕು ಎಂಬುದಾಗಿ ಅಂದುಕೊಂಡಿರುತ್ತಾನೋ ಅದಕ್ಕೆ ಸ್ವಲ್ಪವು ದಕ್ಕೆ ಬರದ ರೀತಿಯಲ್ಲಿ ಪತ್ನಿಯಾದವಳು ಅವನ ಪೂರ್ಣ ಜೀವನಕ್ಕೆ ಸಹಕರಿಸಬೇಕಾಗುತ್ತದೆ. ಆಗ ಅವಳು ತನ್ನ ಪತಿಗೆ ವಿನೀತಳು ಎಂದರ್ಥ. ಮತ್ತೊಂದು ಅರ್ಥವೆಂದರೆ ಒಬ್ಬ ದುರ್ಮಾರ್ಗಗಾಮಿಯಾದ ಪತಿಯನ್ನು ಕೂಡ ಸನ್ಮಾರ್ಗದಲ್ಲಿ ನಡೆಸಿಕೊಂಡು ಬರುವ ಸಾಮರ್ಥ್ಯ ಮತ್ತು ಕರ್ತವ್ಯ ಇವರದು ಕೂಡ ಗೃಹಿಣಿಯಾದವಳಿಗೆ ಇರುತ್ತದೆ ಎಂಬ ವಿಷಯ ಇಲ್ಲಿ ಧ್ವನಿಸಲಾಗುತ್ತದೆ. ಕಾಳಿದಾಸನು ಹೇಳುವಂತೆ ಯೌವನದಲ್ಲಿ ಸಂಪಾದಿಸಬೇಕು. ಆ ಸಂಪಾದನೆ ಬ್ರಹ್ಮಚಾರಿಯ ಆಶ್ರಮದಲ್ಲಿ ಸಂಪಾದಿಸಿದ ವಿದ್ಯೆಯ ಬಲದಿಂದ ಆಗಿರಬೇಕು. ಯಾವಾಗ ವಿದ್ಯೆಯಿಂದ ಬರುವ ಸಂಪಾದನೆ ಇರುತ್ತದೋ, ಆ ಸಂಪಾದನೆಯನ್ನು ಧರ್ಮಕಾರ್ಯದಲ್ಲಿ ವಿನಿಯೋಗಿಸಲಾಗುತ್ತದೆ. ವಿದ್ಯಾ ದದಾತಿ ವಿನಯಂ–ವಿನಯಾತ್ ಯಾತಿ ಪಾತ್ರತಾಂ ಅತ್ಯತ ಧನಮಾಪ್ನೋತಿ ಧನಾತ್ ಧರ್ಮ ಸುಖಂ ಎಂಬುದಾಗಿ. ಅಂದರೆ ವಿದ್ಯೆಯು ಧನವನ್ನು ಕೊಡುವುದರ ಮೂಲಕ ಧರ್ಮವನ್ನು ಕೊಟ್ಟು ಕೊನೆಗೆ ಅತ್ಯಂತವಾದ ಸುಖವನ್ನು ಕೊಡಲು ಸಮರ್ಥವಾದದ್ದು. ವಿವೇಕದಿಂದ ಕೂಡಿದ ವಿದ್ಯೆಯು ಸರ್ವಸ್ವವನ್ನು ಕೊಡುವುದರಿಂದ ಆದರ ಬಲದಿಂದ ಬಂದ ಸಂಪತ್ತು ಸನ್ಮಾರ್ಗಗಾಮಿಯಾಗಿಯೇ ಇರುತ್ತದೆ. ಅಲ್ಲಿ ಯಾವುದೇ ರೀತಿಯಾದ ಧರ್ಮಸಂಕಟಕ್ಕೆ ಅವಕಾಶವಿಲ್ಲ ಎಂಬುದು ಇದರ ತಾತ್ಪರ್ಯ.



ವ್ಯಾಸ ವೀಕ್ಷಿತ

• ಡಾ|| ಕೆ.ಎಸ್.ಕಣ್ಣನ್
ಆಧ್ಯಾತ್ಮ ಚಿಂತಕರು
ಅಷ್ಟಾಂಗಯೋಗ ವಿಜ್ಞಾನಮಂದಿರಂ



ನಗರಗಳನ್ನು ಜಯಿಸಿದ ರಣಧೀರ

ಆಗ ತನ್ನ ಚತುರಂಗಬಲದೊಂದಿಗೆ ತ್ವರಿತವಾಗಿ ತನ್ನ ನಗರದಿಂದಾಚೆ ಬಂದ ಬೃಹಂತನು ಫಾಲ್ಗುನನನ್ನು, ಎಂದರೆ ಅರ್ಜುನನನ್ನು ಕಾಳಗದಲ್ಲಿ ಎದುರಿಸಿದನು. ಹೀಗಾಗಿ ಧನಂಜಯ–ಬೃಹಂತರ ನಡುವೆ ಮಹತ್ತಾದ ಸಂಗರ (ಯುದ್ಧ)ವೇ ಆಯಿತು. ಈ ಪಾಂಡವನ ವಿಕ್ರಮವನ್ನು ಆ ಬೃಹಂತನಾದರೂ ಅದೆಂತು ತಡೆದಾನು?

ಅರ್ಜುನನನ್ನು ಸೋಲಿಸಲಾಗದೆಂಬುದನ್ನು ಮನಗಂಡವನೇ, ಆ ವೀರನಾದ ಪರ್ವತ ರಾಜನಾದ ಬೃಹಂತನು ಯುದ್ಧವನ್ನು ತೊರೆದು ರತ್ನಗಳೊಂದಿಗೆ ಆಗಮಿಸಿದನು. ಇತ್ತ ಅರ್ಜುನನೂ ಆ ರಾಜ್ಯವನ್ನು ಆತನಿಗೇ ಒಪ್ಪಿಸಿ, ಮತ್ತೆ ಉಲೂಕ ರಾಜನನ್ನು ಜೊತೆಮಾಡಿಕೊಂಡು ಸೇನಾಬಿಂದು ಎಂಬ ರಾಜನ ಮೇಲೆ ದಂಡೆತ್ತಿ ಹೋದನು. ಆತನನ್ನು ರಾಜ್ಯದಿಂದ ಚ್ಯುತಿಗೊಳಿಸಲು ಅರ್ಜುನನಿಗೆ ಹೆಚ್ಚು ಸಮಯವು ಬೇಕಾಗಲಿಲ್ಲ. ಆಮೇಲೆ ಮೋದಾಪುರ ಮೊದಲಾದ ಹಲವು ರಾಜ್ಯಗಳನ್ನು ಗೆದ್ದನು. ಬಳಿಕ ಸೇನಾಬಿಂದುವಿನ ರಾಜಧಾನಿಗೇ ಬಂದು, ಚತುರಂಗಬಲವನ್ನು ಮತ್ತೆ ಜೋಡಿಸಿಕೊಂಡು, ಪೌರವ ರಾಜನಾದ ವಿಷ್ವಗಶ್ವನ ಮೇಲೆ ದಂಡೆತ್ತಿದನು. ಅಲ್ಲಿನ ಪರ್ವತಪ್ರದೇಶದ ರಾಜರುಗಳನ್ನು ಸೋಲಿಸಿ ಅವರನ್ನು ವಶಪಡಿಸಿಕೊಂಡನು. ಆ ಪರ್ವತ ಪ್ರಾಂತಗಳಲ್ಲಿ ಉತ್ಸವ ಸಂಕೇತ ಎಂಬ ಹೆಸರಿನ ಏಳು ದಸ್ಯುಗಳು, ಎಂದರೆ ಧರ್ಮದ್ವೇಷಿಗಳಾದ ಚೋರರು, ಇದ್ದರು. ಅವರನ್ನು ಜಯಿಸಿದ್ದೂ ಆಯಿತು. ಆಮೇಲೆ ಕಾಶ್ಮೀರದಲ್ಲಿ ಹತ್ತು ಮಂಡಲಗಳನ್ನು ಮಾಡಿಕೊಂಡಿದ್ದ ಕ್ಷತ್ರಿಯ ವೀರರನ್ನೂ ಲೋಹಿತ ರಾಜನನ್ನೂ ಅರ್ಜುನನು ಜಯಿಸಿದನು.

ಆಮೇಲೆ ತ್ರಿಗರ್ತರು, ದಾರ್ವರು, ಕೋಕನದರು ಮುಂತಾದ ಅನೇಕ ಕ್ಷತ್ರಿಯರು ಎಲ್ಲೆಡೆಯಿಂದಲೂ ಬಂದು ತಾವೇ ಶರಣಾದರು. ರಮ್ಯವಾದ ಅಭಿಸಾರಿಯೆಂಬ ಪುರಿಯನ್ನು ಅರ್ಜುನನು ಗೆದ್ದನು. ಉರಗವೆಂಬ ರಾಜ್ಯದ ಒಡೆಯನಾದ ರೋಚಮಾನ ಎಂಬಾತನನ್ನು ಅರ್ಜುನನು ಜಯಿಸಿದನು. ಚಿತ್ರಾಯುಧನೆಂಬ ರಾಜನಿಂದ ರಕ್ಷಿತವಾಗಿದ ಸಿಂಹಪುರವನ್ನು ಸೈನ್ಯಬಲದಿಂದ ಯುದ್ಧದಲ್ಲಿ ಮೆಟ್ಟಿದನು. ಆಮೇಲೆ ಸುಹ್ಮದೇಶ–ಚೋಲದೇಶಗಳನ್ನು ಸೈನ್ಯಸಹಿತನಾಗಿ ಅರ್ಜುನನು ಮಥನಮಾಡಿಬಿಟ್ಟನು. ಹಾಗೆಯೇ ಬಾಹ್ಲೀಕ–ದರದ–ಕಾಂಭೋಜಗಳ ರಾಜರನ್ನು ಸೋಲಿಸಿದನು. ಈಶಾನ್ಯದಲ್ಲಿ ಕೆಲವು ಪಾಳೆಯಗಾರರಿದ್ದರು; ಅವರನ್ನೂ ಗೆದ್ದನು. ಆಮೇಲೆ ಲೋಹರು–ಪರಮಕಾಂಬೋಜರು–ಉತ್ತರ ಋಷಿಕರು– ಇವರುಗಳನ್ನೆಲ್ಲ ಸೋಲಿಸಿದನು.

ಇವುಗಳಲ್ಲಿ ಬಹಳ ಭಯಂಕರವಾಗಿದ್ದದ್ದೆಂದರೆ ಋಷಿಕರೊಂದಿಗಿನ ಯುದ್ಧ. ಅವರನ್ನು ಅಡಗಿಸಿ, ಗಿಳಿಗಳ ಹೊಟ್ಟೆಯ ಬಣ್ಣವನ್ನು ಹೊಂದಿದ್ದ ಎಂಟು ಕುದುರೆಗಳನ್ನು ಅಲ್ಲಿಂದ ತಂದನು. ಹಾಗೆಯೇ ಕರಕ್ಕೋಸ್ಕರವಾಗಿ ಅನೇಕ ವೇಗಶಾಲಿ ಕುದುರೆಗಳನ್ನು ಪಡೆದನು. ಅವು ನವಿಲಿನ ಬಣ್ಣವನ್ನು ಹೊಂದಿದ್ದವು, ಉತ್ತಮವಾದವು. ಆಮೇಲೆ ಹಿಮವಂತ–ನಿಷ್ಕುಟಗಳ ರಾಜರುಗಳನ್ನು ಗೆದ್ದನು. ಬಳಿಕ ಶ್ವೇತಪರ್ವತಕ್ಕೆ ಹೋಗಿ ಬಿಡಾರ ಹೂಡಿದನು. ಶ್ವೇತಪರ್ವತವನ್ನು ಜಯಿಸಿದ ಬಳಿಕ, ದ್ರುಮಪುತ್ರನೆಂಬ ರಾಜನ ದೇಶವಾದ ಕಿಂಪುರುಷವನ್ನು ಜಯಿಸಿದನು. ಅಲ್ಲಾದ ಯುದ್ಧವು ಘೋರವೇ ಆಗಿತ್ತು. ಕರ ತೆರಬೇಕೆಂಬ ನಿಬಂಧನೆಯ ಮೇಲೆ ಆ ರಾಜ್ಯವನ್ನು ಅವನಿಗೇ ಬಿಟ್ಟುಕೊಟ್ಟನು. ಆಮೇಲೆ ಗುಹ್ಯಕರಿಂದ ರಕ್ಷಿತವಾಗಿದ್ದ ಹಾಟಕ ದೇಶವನ್ನು ಗೆದ್ದನು. ಅಲ್ಲಿ ಯುದ್ಧವು ಬೇಕಾಗಿರಲಿಲ್ಲ. ಸಾಮ ಮಾರ್ಗದಲ್ಲಿಯೇ ಅವರನ್ನು ವಶಪಡಿಸಿಕೊಂಡನು. ಅಲ್ಲಿಂದ ಮುಂದಕ್ಕೆ ಹೋದಾಗ ಸಿಕ್ಕದ್ದು ಶ್ರೇಷ್ಠವಾದ ಮಾನಸ ಸರೋವರ.

ಅದಲ್ಲದೆ, ಅಲ್ಲಿ ಅನೇಕ ಋಷಿ–ಕುಲ್ಯೆಗಳೂ ಇದ್ದವು. ಎಂದರೆ ಋಷಿಗಳ ಹೆಸರುಗಳಿಂದ ಪ್ರಸಿದ್ಧವಾದ ನಾಲೆಗಳು. ಅಲ್ಲೂ ಗಂಧರ್ವರಕ್ಷಿತ ಪ್ರದೇಶಗಳನ್ನು ಗೆದ್ದು, ಅವರಿಂದ ತಿತ್ತಿರ, ಕಲ್ಮಾಷ ಹಾಗೂ ಮಂಡೂಕ ಎಂಬ ಹೆಸರಿನ ಶ್ರೇಷ್ಠವಾದ ಕುದುರೆಗಳನ್ನು ಕರರೂಪದಲ್ಲಿ ಪಡೆದನು.

ತಲೆಹರಟೆ ಸೀನುವಿನ ನೂತನ ಸಚಿವ ಸಲಹೆಗಳು



ವಕ್ರದೃಷ್ಟಿ

• ಎನ್.ರಾಮನಾಥ್
anakuramanath@gmail.com

''ರೌಡಿಗಳನ್ನು ಮಟ್ಟ ಹಾಕಲು ಒಬ್ಬ ಸಚಿವನನ್ನು ನೇಮಿಸುವರಂತೆ'' ಎಂದ ಸೀನು.

'Set a thief to catch a thief ಎಂಬ ಮಾತಿನಂತೆ ಆ ಸಚಿವನೂ ರೌಡಿ ಆಗಿದ್ದರೆ ಒಳ್ಳೆಯದು'' ಎಂದ ಪಾಂಡು.

''ರೌಡಿಯೇ ಸಚಿವನಾಗುವ ಸಾಧ್ಯತೆಗಳಿವೆ. ಹಿಂದಿನ Donಏ ಇಂದಿನ ಮಂತ್ರಿಯಾಗುವುದು ನಮ್ಮಲ್ಲಿ ಸಮ್ಮತವಾಗಿರುವ ವಿಧಾನ. ಸಚಿವನಾಗುವ ನರನು ರೌಡಿಗಳೊಳುತ್ತಮನು ಎಂಬುದೇ ಇಂದಿನ ಪ್ರಜೆಗಳ ವೇದನೆವಾಕ್ಯ.''

''ಉತ್ತಮನೋ, ಅಧಮನೋ?''

''ದುರ್ಯೋಧನನನ್ನು ಕುರುಶ್ರೇಷ್ಠ ಎನ್ನುತ್ತಿದ್ದರು. ಮೈಮೇಲೆ ಏಳುವ ಕುರುವಿನಷ್ಟೇ ಶ್ರೇಷ್ಠನಾಗಿದ್ದ ಅವನಂತೆಯೇ ಇಂದಿನ ರೌಡಿಗಳು ಇರುವುದು. 'ತೊಡೆ ಮುರಿಯೆ ವೀಲ್‌ಚೇರ್ ಇಹುದು ರೌಡಿಗುಮ್ಮ, ಎನ್ನುವುದು ಇಂದಿನವರ ಧೋರಣೆ'' ಎಂದ ಸೀನು, ''ಇನ್ನೂ ಕೆಲವು ಹೊಸ ಖಾತೆಗಳನ್ನು ನಿರ್ಮಿಸಿ ಸಚಿವರನ್ನು ನೇಮಿಸುವುದು ಸೂಕ್ತವೆನಿಸುತ್ತದೆ'' ಎಂದ.

''ಫಾರ್ ಎಕ್ಸಾಂಪಲ್?'' ಕೇಳಿದ ಪಾಂಡು.

''ಹಾಂ! ಎಗ್ ಸ್ಯಾಂಪಲಿಂಗಿಗೇ ಒಬ್ಬ ಸಚಿವನನ್ನು ನೇಮಿಸಬಹುದು. ಶಾಲೆಗಳಲ್ಲಿ ಕೊಡುವ ಮೊಟ್ಟೆಯ ಗುಣಮಟ್ಟ ಯಾವುದು? ಮೊಟ್ಟೆಯ ಕ್ರೀಮ್ ಕಲರ್ ಒರಿಜಿನಲ್ಲೋ, ಕಡಲೆಹಿಟ್ಟಿನಲ್ಲಿ ಅದ್ದಿರುವುದೋ ಎಂದು ಕಂಡುಹಿಡಿಯಲೆಂದು ಒಬ್ಬ 'ಕಡಲೆಹಿಟ್ಟು ಸಚಿವ'ನನ್ನೂ ಮೊಟ್ಟೆ ಸಚಿವನಿಗೆ ಉಪಸಚಿವನನ್ನಾಗಿ ನೇಮಿಸಬಹುದು.''

''ಅದರಲ್ಲಿಯೂ ನಾಟಿಮೊಟ್ಟೆ ಸಚಿವ, ಫಾರಂಮೊಟ್ಟೆ ಸಚಿವ ಎಂಬ ಎರಡು ಉಪಖಾತೆಗಳು, ಉಪಸಚಿವರು ಆಗಬಹುದಲ್ಲವೆ?''

''ಗುಡ್ ಐಡಿಯಾ. ಮೊಟ್ಟೆಗೇ ಇಷ್ಟು ಪ್ರಾಮುಖ್ಯತೆ ನೀಡಿದಾಗ ಕೋಳಿಯನ್ನು ನಿರ್ಲಕ್ಷ್ಯಿಸಲಾದೀತೆ? ನಾಟಿ ಕೋಳಿ, ಫಾರಂ ಕೋಳಿ, ಔಟ್ ಆಫ್ ಫಾರಂ ಕೋಳಿ, ರಿಫಾರ್ಮ್ ಕೋಳಿಗಳಿಗೂ ಪ್ರತ್ಯೇಕ ಸಚಿವರನ್ನು ನೇಮಿಸಬಹುದು.''

''ಔಟ್ ಆಫ್ ಫಾರ್ಮ್, ರಿಫಾರ್ಮ್ ಕೋಳಿಗಳೆಂದರೆ ಯಾವುವು?''

''ಫಾರಮ್ ಎಂದರೆ ಶೇಪ್; ಕೆಲವು ಕೋಳಿಗಳು ಹುಟ್ಟುತ್ತಲೇ ಕಡಿಮೆ ಸೊಟ್ಟಕೊಕ್ಕು, ಚೊತ್ತೆಕಾಲು, ಮೊದಲಾದ ವಿಕಲತೆಗಳನ್ನು ಹೊಂದಿರುತ್ತವಂತೆ. ಅವನ್ನು ಗುರುತಿಸಿ, ಅವುಗಳಿಗೆ ಆಶ್ರಯಧಾಮವನ್ನು ನಿರ್ಮಿಸುವುದು ಔಟ್ ಆಫ್ ಫಾರ್ಮ್ ಸಚಿವರ ಕೆಲಸ. ರಿಫಾರ್ಮ್ ಎಂದರೆ ಅಂತಹ ವಕ್ರತೆಗಳನ್ನು ನೇರಗೊಳಿಸಿ ಮಾಮೂಲಿ ಚಿಕನ್‌ಗಳೊಡನೆ ಅವುಗಳ ಸಹಬಾಳ್ವೆಗೆ ಅನುವು ಮಾಡಿಕೊಡುವುದು'' ಎಂದು ವಿವರಿಸಿದ ಸೀನು.

''ಈ ಖಾತೆಗಳಿಂದ ಸಚಿವರಿಗೆ ಲಾಭವೇನು?''

''ಕೊಕ್ಕೊಕ್ಕೋಳಿಗಳ ಸಾಕಣೆಯಲ್ಲಿ ತಲಾ ಇಷ್ಟು ಎಂದು 'ಕೊಕ್‌ಬ್ಯಾಕ್' ಸಚಿವಾಲಯಕ್ಕೆ ಫಿಕ್ಸ್ ಆಗುತ್ತದೆ.''

''ಆಹಾರಖಾತೆಯಲ್ಲದೆ ಇನ್ನಾವ ಹೊಸ ಖಾತೆಗಳನ್ನು ಸೂಚಿಸಬಹುದು?''

''ನರಕಾಭಿವೃದ್ಧಿ!''

''ಡೂ ಯೂ ಮೀನ್ ನಗರಾಭಿವೃದ್ಧಿ?''

''ಊಹೂಂ. ಸಪಾಟಾದ ರಸ್ತೆಗೆ ಚಿಕನ್ ಪಾಕ್ಸ್ ಬಂದಂತೆ ಕಾಣುವಷ್ಟು ಹಳ್ಳಗಳು; ಮಧ್ಯದಲ್ಲಿ ಗೇಟ್ ಇಡುವಷ್ಟು ಎತ್ತರದ 'ಕಾಂಪೌಂಡ್ ಹಂಪ್'ಗಳು, 'ಹಳ್ಳ ಇದ್ದೆಡೆಗೇ ನೀರು ಹರಿಯುವುದು' ಎಂಬುದನ್ನು ಉದಾಹರಣೆಯ ಸಮೇತ ತೋರಿಸಲೋ ಎಂಬಂತೆ ಲೀಕಿಸಿದ ವಾಟರ್ ಪೈಪ್‌ಗಳು, ಇವೆಲ್ಲವೂ ಇರುವ ಸ್ಥಳವನ್ನು ನಗರವೆನ್ನದೆ ನರಕವೆನ್ನುವುದೇ ಸೂಕ್ತವಾದ್ದರಿಂದ ಅದು ನರಕಾಭಿವೃದ್ಧಿಯೇ.''

''ಈ ಖಾತೆಯ ಜನಗಳ ಕೆಲಸವೇನು?''

''ಪ್ರತಿ ಅನಧಿಕೃತ ಕಟ್ಟಡದ ಫ್ಲೋರ್‌ಗಳ ಸಂಖ್ಯೆ ಎಣಿಸಿ, ಹತ್ತರಿಂದ ಗುಣಿಸಿ, ಅಷ್ಟು ಲಕ್ಷವನ್ನು ಕಿಕ್‌ಬ್ಯಾಕ್ ಆಗಿ ಪಡೆಯುವುದು. ರಾಜಕಾಲುವೆಯ ಮೇಲೆ ಕಟ್ಟಿರುವ ಕಟ್ಟಡಗಳ ವಿಸ್ತೀರ್ಣವನ್ನು ಅಳೆದು ಬಡಾವಣೆಯ ಶ್ರೀಮಂತಿಕೆಗೆ ತಕ್ಕಂತೆ ವಸೂಲಿ ಮಾಡುವುದು. 'ನಮ್ಮ ಬಡಾವಣೆಯಲ್ಲಿ ನೀರಿನ ತೊಂದರೆ' ಎಂದೆಡೆಯಲ್ಲಿ ರಸ್ತೆಯಲ್ಲಿ ನದಿಯಂತೆ ನೀರು ಹರಿಯಲು ವ್ಯವಸ್ಥೆ ಮಾಡುವುದು...''

''ಈ ಬಾಬ್ತಿಗೆ ಕಿಕ್‌ಬ್ಯಾಕ್ ಸಿಗುವುದಿಲ್ಲವಲ್ಲ?''

''ಸೋರು ತಡೆಯ ಗುತ್ತಿಗೆದಾರನು ಮುಂದೆ ಇವರ ಕಿಕ್‌ಬ್ಯಾಕ್ ಸೋರ್ಸ್ ಆಗುತ್ತಾನೆ.''

''ಟ್ರಾಫಿಕ್‌ಗೆ ಸಂಬಂಧಿಸಿದಂತೆಯೂ ಸಚಿವರು ಬೇಕಲ್ಲವೆ?''

''ನಿಶ್ಚಿತವಾಗಿ. ಮಂತ್ರಿಗಳು, ತಂತ್ರಿಗಳು, ಕಂತ್ರಿಗಳು ಓಡಾಡುವಾಗ ಅವರಿಗೆ ಅಡಚಣೆಯಾಗದಂತೆ ನೋಡಿಕೊಳ್ಳಲೊಬ್ಬ 'ಝೀರೋ ಟ್ರಾಫಿಕ್ ಸಚಿವ'; ಟ್ರಾಫಿಕ್ ಜ್ಯಾಮ್ ಆಗಲು ಕಾರಣವಾಗುವ ಎಮ್ಮೆ, ಹಸುಗಳ 'ರಿಲ್ಯಾಕ್ಸಿಂಗ್ ಸೆಂಟರ್'ಗಳನ್ನು ಪಾರ್ಕುಗಳಲ್ಲಿ ನಿರ್ಮಿಸಲೆಂದೊಬ್ಬ 'ಅನಿಮಲ್ ಮಿನಿಸ್ಟರ್'; ಅವುಗಳನ್ನು ರಸ್ತೆಯಿಂದ ನೋವಾಗದಂತೆ ಎಬ್ಬಿಸಿ ರಿಲ್ಯಾಕ್ಸಿಂಗ್ ಸೆಂಟರ್‌ಗೆ ತಲುಪಿಸುವ ಹೊಣೆ ಹೊರಲೆಂದೊಬ್ಬ 'ಜಾನುವಾರು ಸಾರಿಗೆ ಮಂತ್ರಿ' ಬೆಂಗಳೂರಿನಲ್ಲಂತೂ ಅತ್ಯವಶ್ಯ.''

''ಇವೆಲ್ಲಕ್ಕೂ ಮೊದಲು ಒಬ್ಬ ಮಾಲಿನ್ಯ ಮಂತ್ರಿ ಬೇಕಲ್ಲವೆ?''

''ನಿಜ. ಪ್ಲಾಸ್ಟಿಕ್ ಸಚಿವ, ಡೆಬ್ರಿ ಸಚಿವ, ಗಾರ್ಬೇಜ್ ಸಚಿವ ಎಂದು ವಿಂಗಡಿಸುವುದಲ್ಲದೆ ಗಾರ್ಬೇಜ್ ಸಚಿವಾಲಯದಲ್ಲಿ ಎರಡು ಭಾಗಗಳಾಗಿಸಿ ವೆಟ್ ವೇಸ್ಟ್ ಸಚಿವ ಮತ್ತು ಡ್ರೈ ವೇಸ್ಟ್ ಸಚಿವರನ್ನೂ ನೇಮಿಸಬೇಕು. ಡ್ರೈ ವೇಸ್ಟ್ ಸಚಿವರು ಒಣ ಮಾತುಗಳಲ್ಲೇ ಕಾಲ ಕಳೆದರೂ ಸಾಕು. ವೆಟ್ ವೇಸ್ಟ್ ಸಚಿವರು ಮಾತ್ರ ಆಗಾಗ್ಗೆ 'ನಮ್ಜನ ಸಿವಿಕ್ ಸೆನ್ಸೇ ಬಳಸಿಕೊಂಡಿಲ್ಲ' ಎನ್ನುತ್ತಾ ಅತ್ತೂ ಅತ್ತೂ ತನ್ನ ಚೀಕ್ಸನ್ನು ವೆಟ್ ಮಾಡಿಕೊಳ್ಳಬೇಕು'' ಎಂದ ಸೀನು.

''ಜಲಮಾಲಿನ್ಯ ಮಂತ್ರಿ?''

''ಇರುವ ಕೆರೆಗಳನ್ನು ಲೇಔಟ್ ಮಾಡಿಬಿಟ್ಟರೆ ನಗರಗಳಲ್ಲಿ ಜಲಮಾಲಿನ್ಯದ ಬಾಬ್ತು ನಗಣ್ಯವಾಗುತ್ತದೆ. ಹಳ್ಳಿಗಳಲ್ಲಿನ ಜಲಮಾಲಿನ್ಯದ ಬಾಬ್ತಿನಲ್ಲಿ 'ಬಾವಿಮಾಲಿನ್ಯ ಸಚಿವ'ನನ್ನು ನೇಮಿಸಿದರೆ ಬೇಕಾದಷ್ಟನ್ನು ಸೇದಿಕೊಳ್ಳಲೂ, 'ಕೆರೆಮಾಲಿನ್ಯ ಸಚಿವ'ನನ್ನು ನೇಮಿಸಿದರೆ ಯಥಾ ಶಕ್ತಿ ಕೆರೆದು ತಿನ್ನಲೂ ಅನುಕೂಲವಾಗುತ್ತದೆ. ಕೆರೆಯ ಬಾಬ್ತಿನಲ್ಲಿ 'ಹೂಳುಸಚಿವ'ನೊಬ್ಬನ ನೇಮಕಾತಿಗೂ ಅವಕಾಶವಿರುತ್ತದೆ.''

''ಅವನ ಕೆಲಸವೇನು?''

''ಪ್ಲಾಸ್ಟಿಕ್ಕನ್ನು ಹೂಳಿನಿಂದ ಬೇರ್ಪಡಿಸಿ ರಸ್ತೆ ಗುತ್ತಿಗೆದಾರನಿಗೆ ಪ್ಲಾಸ್ಟಿಕ್ಕನ್ನು ಮಾರುವುದರಲ್ಲಿ ಕಿಕ್‌ಬ್ಯಾಕ್ ಪಡೆಯುವುದು.''

''ಹೂಳುಸಚಿವ ಎನ್ನುವುದು ಸ್ಮಶಾನಗಳ ಬಾಬ್ತಿಗೆ ಬರುವುದಲ್ಲವೆ?''

''ಹೆಸರೊಂದೇ ಆದರೂ ಕಾರ್ಯ ಬೇರೆ. ಮಸಣದ ಬಾಬ್ತಿನಲ್ಲಿ 'ಶವಸಚಿವ'ನೊಬ್ಬನನ್ನು ನೇಮಿಸಿ, ಆ ಸಚಿವಾಲಯದಲ್ಲಿ ಸುಡುಸಚಿವ, ಹೂಳುಸಚಿವ ಖಾತೆಗಳು ಹುಟ್ಟಿಕೊಳ್ಳಬಹುದು. ಹೂಳಲೆಂದು ತೆಗೆದ ಹಳ್ಳದ ವಿಸ್ತೀರ್ಣದ ಮೇಲೆ ಇಂತಿಷ್ಟೆಂದು ಆ ಸಚಿವನಿಗೂ, ಸುಡಲೆಂದು ಪೇರಿಸಿದ ಸೌದೆಗಳ ಲೆಕ್ಕದ ಮೇಲೆ ಈ ಸಚಿವನಿಗೂ 'ಪಿಂಡ ಕಾಣಿಕೆ'ಯನ್ನು ಒಪ್ಪಿಸಿದರಾಯ್ತು. ಹಾಗೆಯೇ ಸ್ಮಶಾನದ ಬಾಗಿಲಲ್ಲಿ 'ಗಾರ್ಲೆಂಡ್ ರೀಸೈಕ್ಲಿಂಗ್ ಸೆಂಟರ್' ಸ್ಥಾಪಿಸಿ ಇನ್ನೂ ಫ್ರೆಷ್ ಆಗಿರುವ ಶವದ ಮೇಲಿನ ಹಾರಗಳನ್ನು ಬರಿಗೈಯಲ್ಲಿ ಬಂದ ಮುಂದಿನ ಶವಸಂಬಂಧಿಗಳು ಕೊಂಡು ಏರಿಸಲು ಅನುಕೂಲ ಮಾಡಿಕೊಡಬಹುದು. ಅದಕ್ಕೆ ಸಂಬಂಧಿತವಾದ ಸಚಿವನನ್ನು 'ಶವಮಾಲಾ ಮರುಬಳಕೆ ಸಚಿವ' ಎಂದು ಕರೆಯಬಹುದು.''

''ಶವಸಚಿವರಿದ್ದ ಮೇಲೆ ಶೈಶವ ಸಚಿವರು ಇರಬೇಕಲ್ಲವೆ?''

''ಊಹೂಂ. ಅದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಆಗಲೇ ಸೇರಿಬಿಟ್ಟಿದೆ. ಇನ್ನೂ ತಾರುಣ್ಯದ ಬಾಬ್ತಿಗೆ ಯಾರೂ ಕಾಲಿಟ್ಟಿಲ್ಲ. ಬ್ಯೂಟಿಯ ಲೂಟಿಗೆಂದು ಒಂದು ಸಚಿವಾಲಯ ಸ್ಥಾಪಿಸುವುದು ಸೂಕ್ತ.''

''ಬ್ಯೂಟಿಯ ಲೂಟಿ? ಅಂದರೆ... ಅತ್ಯಾಚಾರ ಸಚಿವನೆ?''

''ಆ ಬಾಬ್ತಿನವನೂ ಕೆಲವು ಕಾಲ ಪ್ರಜ್ವಲಿಸಿ ಜೈಲು ಸೇರಿದನಲ್ಲ! ನಾನು ಆ ಅರ್ಥದಲ್ಲಿ ಹೇಳಲಿಲ್ಲ. ಬ್ಯೂಟಿಯ ಲೂಟಿ ಎಂದರೆ ಬ್ಯೂಟಿ ಪಾರ್ಲರ್‌ಗಳ ಮೇಲೆ ತೆರಿಗೆ ವಿಧಿಸಲೆಂದೇ ಸ್ಥಾಪಿಸಬಹುದಾದ ಸಚಿವಾಲಯ. ಬಂದ ರಮಣಿಯರ ಮುಖದ ಸರ್ಕಂಫರೆನ್ಸಿನ ಆಧಾರದ ಮೇಲೆ 'ಫೇಷಿಯಲ್ ತೆರಿಗೆ'; ನೀಳಕಾಲುಗಳ ಅಳತೆಗೆ ತಕ್ಕಂತೆ 'ವ್ಯಾಕ್ಸಿಂಗ್ ತೆರಿಗೆ', ಕೇಶರಾಶಿಯ ಘನಫಲಕ್ಕೆ ತಕ್ಕಂತೆ 'ಡೈಯಿಂಗ್ ತೆರಿಗೆ' ವಿಧಿಸುವುದು ಈ ಸಚಿವಾಲಯದ ಕೆಲಸ. ಈ ಮಂತ್ರಿಗಿರಿಯನ್ನು ಮಹಿಳೆಯರಿಗೇ ಮೀಸಲಾಗಿಡುವುದು ಸೂಕ್ತ.''

''ಬಾಟ್ಯುಲಿನ್ ಎಕ್ಸ್ ಬಳಸಿದರೆ ಕಣ್ಣಿನ ಹೊಳಪಿನ ಆಧಾರದ ಮೇಲೆ ತೆರಿಗೆ ವಿಧಿಸುವಿರೋ, ಕೆನ್ನೆಯ ನುಣುಪಿನ ಆಧಾರದ ಮೇಲೋ?''

''ಆ ಬಾಬ್ತಿನಲ್ಲಿ ಇನ್ನೂ ಸಂದೇಹವಿದೆ. ಅದಕ್ಕೊಂದು ಆಯೋಗ ರಚಿಸಿ, ಇಂತಹ ಡೌಟುಗಳ ನಿವಾರಣೆಗೆಂದೇ ಒಬ್ಬ ಆಯೋಗ್ಯ ಸಚಿವನನ್ನು... ಕ್ಷಮಿಸು... ಆಯೋಗ ಸಚಿವನನ್ನು ನೇಮಿಸಿರೆಂದು ಸೂಚನೆ ನೀಡೋಣ.''

''ಒಪ್ಪಿದೆ. ನೀರಾವರಿಯ ಬಾಬ್ತಿನಲ್ಲಿ ಹೊಸ ಸಚಿವರಿಗೆ ಅವಕಾಶವಿದೆಯೆ?''

''ನೀರಿಗೆ ಸಂಬಂಧವಿಲ್ಲದ ಹೊಸ ನೀರಾ ವರಿ ಖಾತೆ ಸೃಷ್ಟಿಸಬಹುದು.''

''ಅಂದರೆ?''

''ನೀರಾ ವರಿ ಖಾತೆ. ಇದು ಕೇವಲ ನೀರಾ ಮಾರಾಟಕ್ಕೆ ಸಂಬಂಧಿಸಿದ್ದು.''

''ಇನ್ನಾವ ಖಾತೆಗಳ ಸಚಿವರನ್ನು ಸೂಚಿಸಬಹುದು?''

''ಹಿಂದುಳಿದ ಜನಾಂಗವನ್ನು ಹಿಂದೆಯೇ ಉಳಿಸಲೊಬ್ಬ ಬ್ಯಾಕ್ ವರ್ಡ್ ಸಚಿವ; ಸರ್ಕಾರ ಮಾಡಿದುದನ್ನೆಲ್ಲ ಸಮರ್ಥಿಸುವ ವಾಹಿನಿಗಳನ್ನು ಬೆಂಬಲಿಸಲೊಬ್ಬ ಫಾರ್ವರ್ಡ್ ಸಚಿವ; ಸರ್ಕಾರವನ್ನು ಟೀಕಿಸುವವರನ್ನು ಸುಮ್ಮನಾಗಿಸುವ ಕಲೆಯಲ್ಲಿ ನಿಷ್ಣಾತನಾದ ಒಬ್ಬ ನೋ ವರ್ಡ್ ಸಚಿವ?''

''ಈ ಎಲ್ಲ ಸೂಚನೆಗಳನ್ನು ಸರ್ಕಾರವು ಸ್ವೀಕರಿಸುವುದೆ?''

''ಕಾದು ನೋಡೋಣ. ಕರ್ಮಣ್ಯಾವಾಧಿಕಾರಸ್ತೇ ಮಾ ಫಲೇಷು ಕದಾಚನ!''

ಖಾತೆಗಾಗಿ ರಾಜೀನಾಮೆ ಸಮರ್ಥನೀಯವೇ?

▸ ಡಾ. ಮೈತ್ರಿ ಭಟ್, ವಿಟ್ಲ

> ದಕ್ಷತೆ, ಪ್ರಾಮಾಣಿಕತೆ ಹಾಗೂ ಬದ್ಧತೆ ಇದ್ದರೆ ಯಾವುದೇ ಖಾತೆಯೂ ಜನಪರ ಪರಿವರ್ತನೆಯ ಕೇಂದ್ರವಾಗಬಹುದು.

ರಾಜಕೀಯದ ನಿಜವಾದ ಮೌಲ್ಯ ಅಧಿಕಾರವನ್ನು ಪಡೆಯುವುದರಲ್ಲಿಲ್ಲ; ಅದನ್ನು ಹೇಗೆ ಬಳಸಲಾಗುತ್ತದೆ ಎಂಬುದರಲ್ಲಿದೆ. ಆದರೆ ಇಂದಿನ ರಾಜಕೀಯ ಬೆಳವಣಿಗೆಗಳು ಈ ಸತ್ಯವನ್ನು ಮರೆಮಾಚುತ್ತಿರುವಂತೆ ಕಾಣುತ್ತಿವೆ. ಚುನಾವಣೆಯ ಸಮಯದಲ್ಲಿ ಜನಸೇವೆಯ ಮಾತುಗಳು ಮೊಳಗುತ್ತವೆ; ಅಧಿಕಾರದ ಹಂಚಿಕೆಯ ಸಮಯದಲ್ಲಿ ಖಾತೆಗಳಿಗಾಗಿ ಅಸಮಾಧಾನಗಳು ಕೇಳಿಬರುತ್ತವೆ. ಈ ಎರಡರ ನಡುವಿನ ಅಂತರವೇ ಇಂದಿನ ರಾಜಕೀಯದ ದೊಡ್ಡ ಪ್ರಶ್ನೆಯಾಗಿದೆ.

ಅಧಿಕಾರವು ಸೇವೆಗೆ ಸಾಧನವಾಗಬೇಕೇ ಹೊರತು ಗುರಿಯಾಗಬಾರದು. ಆದರೆ ರಾಜಕೀಯದಲ್ಲಿ ನಡೆಯುವ ಅನೇಕ ಬೆಳವಣಿಗೆಗಳು ಈ ಆದರ್ಶದ ಬಗ್ಗೆ ಅನುಮಾನವನ್ನು ಮೂಡಿಸುತ್ತವೆ. ಪ್ರಜಾಪ್ರಭುತ್ವದಲ್ಲಿ ಜನರು ನಾಯಕರನ್ನು ಖಾತೆಗಾಗಿ ಆಯ್ಕೆ ಮಾಡುವುದಿಲ್ಲ; ಸೇವೆಗಾಗಿ ಆಯ್ಕೆ ಮಾಡುತ್ತಾರೆ. ಆದರೆ ಕೆಲವೊಮ್ಮೆ ನಾಯಕರ ನಡೆ–ನುಡಿಗಳು ಈ ಮೂಲಭೂತ ಸತ್ಯವನ್ನೇ ಪ್ರಶ್ನಿಸುವಂತೆ ಮಾಡುತ್ತವೆ. ಸಚಿವ ಖಾತೆಗಳ ಸುತ್ತ ನಡೆಯುವ ರಾಜಕೀಯ ಕಸರತ್ತುಗಳನ್ನು ನೋಡಿದಾಗ, ಅಧಿಕಾರವು ಸೇವೆಯ ಸಾಧನವಾಗಿದೆಯೇ ಅಥವಾ ಸೇವೆಯೇ ಅಧಿಕಾರದ ಸಾಧನವಾಗಿದೆಯೇ ಎಂಬ ಪ್ರಶ್ನೆ ಮೂಡುವುದು ಸಹಜ. ರಾಜಕೀಯದ ಮಹತ್ವವನ್ನು ನಿರ್ಧರಿಸುವುದು ಹುದ್ದೆಯಲ್ಲ, ಹೊಣೆಗಾರಿಕೆ. ಆದರೂ ಹುದ್ದೆ ಮತ್ತು ಖಾತೆಗಳಿಗಾಗಿ ನಡೆಯುವ ಪೈಪೋಟಿ ರಾಜಕೀಯದ ಆದರ್ಶಗಳನ್ನು ಮಸುಕುಗೊಳಿಸುತ್ತಿದೆ. ಒಬ್ಬ ರಾಜಕಾರಣಿಯ ಕನಸು ಜನರ ಬದುಕನ್ನು ಬದಲಾಯಿಸುವುದಾಗಿರಬೇಕೇ, ಅಥವಾ ಪ್ರಭಾವಿ ಖಾತೆಯನ್ನು ಪಡೆಯುವುದಾಗಿರಬೇಕೇ? ಎಂಬ ಪ್ರಶ್ನೆಯಲ್ಲಿಯೇ ರಾಜಕೀಯದ ನಿಜವಾದ ಅರ್ಥ ಅಡಗಿದೆ. ಜನರ ಬದುಕಿನ ಸಮಸ್ಯೆಗಳಿಗಿಂತ ಖಾತೆಗಳ ಪ್ರಶ್ನೆಯೇ ದೊಡ್ಡ ಸುದ್ದಿಯಾಗುವಾಗ, ರಾಜಕೀಯ ತನ್ನ ಮೂಲ ಧ್ಯೇಯದಿಂದ ಎಷ್ಟು ದೂರ ಸಾಗಿದೆಯೆಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ವಿಶೇಷವಾಗಿ ಸಚಿವ ಸಂಪುಟ ರಚನೆಯ ಸಮಯದಲ್ಲಿ ಅಥವಾ ಖಾತೆ ಹಂಚಿಕೆಯ ಸಂದರ್ಭದಲ್ಲಿ ಕೆಲವು ನಾಯಕರು ತಮಗೆ ಸಿಕ್ಕ ಖಾತೆ ಇಷ್ಟವಾಗಲಿಲ್ಲ ಎಂಬ ಕಾರಣಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸುವುದು, ಕೆಲವೊಮ್ಮೆ ರಾಜೀನಾಮೆಯ ಬೆದರಿಕೆಯನ್ನು ಹಾಕುವುದು ಅಥವಾ ನೇರವಾಗಿ ಹುದ್ದೆಯನ್ನು ತ್ಯಜಿಸುವುದು ಸಾಮಾನ್ಯ ಸಂಗತಿಯಾಗಿಬಿಟ್ಟಿದೆ. ಇಂತಹ ಸಂದರ್ಭಗಳಲ್ಲಿ ಒಂದು ಮೂಲಭೂತ ಪ್ರಶ್ನೆ ಉದ್ಭವಿಸುತ್ತದೆ: 'ನಿಜವಾಗಿಯೂ ಜನಸೇವೆಯೇ ರಾಜಕಾರಣಿಯ ಧ್ಯೇಯವಾಗಿದ್ದರೆ, ಸಿಕ್ಕ ಖಾತೆಯನ್ನು ನಿರಾಕರಿಸಿ ರಾಜೀನಾಮೆಯನ್ನು ನೀಡುವುದು ಸಮರ್ಥನೀಯವೇ?' ಈ ಪ್ರಶ್ನೆಗೆ ಉತ್ತರ ಹುಡುಕಬೇಕಾದರೆ ರಾಜಕೀಯದ ಮೂಲ ಉದ್ದೇಶ, ಸಚಿವರ ಜವಾಬ್ದಾರಿ, ಪ್ರಜಾಪ್ರಭುತ್ವದ ಮೌಲ್ಯಗಳು ಹಾಗೂ ಜನರ ನಿರೀಕ್ಷೆಗಳನ್ನು ಆಳವಾಗಿ ವಿಶ್ಲೇಷಿಸಬೇಕಾಗುತ್ತದೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಮಾನ್ಯ ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವಾಗ ಅವರು ಯಾವ ಖಾತೆಯ ಸಚಿವರಾಗಬೇಕು ಎಂದು ಯೋಚಿಸಿ ಮತಗಳನ್ನು ಹಾಕುವುದಿಲ್ಲ. ಜನರ ಆಶಯ, ಸಮಸ್ಯೆ ಹಾಗೂ ಅಭಿವೃದ್ಧಿಯ ಕನಸುಗಳನ್ನು ಸಾಕಾರಗೊಳಿಸುವ ನಾಯಕತ್ವವನ್ನು ಅವರು ಬಯಸುತ್ತಾರೆ. ಹೀಗಿರುವಾಗ ಒಬ್ಬ ರಾಜಕಾರಣಿ ತಾನು ಬಯಸಿದ ಖಾತೆ ಸಿಗಲಿಲ್ಲ ಎಂಬ ಕಾರಣಕ್ಕೆ ಅಸಮಾಧಾನಗೊಂಡರೆ, ಅದು ಜನಸೇವೆಯ ಬದ್ಧತೆಗಿಂತ ಅಧಿಕಾರದ ಆಕರ್ಷಣೆಯನ್ನೇ ಹೆಚ್ಚು ಬಯಸಿರುವುದನ್ನು ಬಿಂಬಿಸುತ್ತದೆ.

ಯೋಚಿಸಿ ನೋಡಿದರೆ ಒಬ್ಬ ನಿಜವಾದ ಜನನಾಯಕನಿಗೆ ಖಾತೆ ಮುಖ್ಯವಾಗುವುದಿಲ್ಲ; ಬದಲಿಗೆ ಜವಾಬ್ದಾರಿ ಮುಖ್ಯವಾಗುತ್ತದೆ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಸಾರಿಗೆ, ಕೃಷಿ, ಅರಣ್ಯ, ಮೀನುಗಾರಿಕೆ ಹೀಗೆ ಯಾವ ಖಾತೆಯೇ ಆಗಿರಲಿ, ಅದರ ಮೂಲಕ ಜನರ ಬದುಕಿನಲ್ಲಿ ಬದಲಾವಣೆಗಳನ್ನು ತರಲು ಅವಕಾಶವಿದೆ. ಸೇವಾ ಮನೋಭಾವ ಇರುವ ವ್ಯಕ್ತಿಗೆ ಪ್ರತಿಯೊಂದು ಖಾತೆಯೂ ಜನರ ಬದುಕನ್ನು ಬದಲಾಯಿಸಿ ಹೊಸ ರೂಪ ನೀಡುವ ಸಾಧನವಾಗಿರುತ್ತದೆ.

ಈಗೀಗ ಸಚಿವ ಸಂಪುಟ ರಚನೆಯ ನಂತರ ಕೆಲವು ಖಾತೆಗಳನ್ನು 'ಪ್ರಭಾವಿ' ಅಥವಾ 'ಲಾಭದಾಯಕ' ಎಂದು ಪರಿಗಣಿಸಲಾಗುತ್ತದೆ. ಹಣಕಾಸು, ಗೃಹ, ಲೋಕೋಪಯೋಗಿ, ಇಂಧನ, ನಗರಾಭಿವೃದ್ಧಿ ಮೊದಲಾದ ಖಾತೆಗಳು ಹೆಚ್ಚಿನ ಪ್ರಭಾವವನ್ನು ಹೊಂದಿವೆ ಎನ್ನುವ ಕಲ್ಪನೆ ರಾಜಕೀಯದಲ್ಲಿ ಬೇರೂರಿದೆ. ಇಲ್ಲಿ ಒಂದು ನೈತಿಕ ಪ್ರಶ್ನೆ ಉದ್ಭವಿಸುತ್ತದೆ: ನಿಜವಾಗಿಯೂ ಸಮಾಜದ ಅಭಿವೃದ್ಧಿಯೇ ಗುರಿಯಾಗಿದ್ದರೆ ಕೆಲವೇ ಕೆಲವು ಖಾತೆಗಳಿಗಾಗಿ ಮಾತ್ರ ಏಕೆ ಪೈಪೋಟಿ ಬೇಕು? ಅರಣ್ಯ, ಸಮಾಜಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಥವಾ ಸಂಸ್ಕೃತಿ ಖಾತೆಗಳಿಗಾಗಿ ಆದೇಕೆ ಅಂತಹ ಆಸಕ್ತಿ ಕಾಣಿಸುವುದಿಲ್ಲ? ಈ ಪ್ರವೃತ್ತಿಯು ರಾಜಕೀಯದಲ್ಲಿ ಸೇವೆಯ ಆದರ್ಶಕ್ಕಿಂತ ಅಧಿಕಾರದ ಕೇಂದ್ರೀಕರಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಿರುವುದನ್ನು ಸೂಚಿಸುತ್ತದೆ. ಜೊತೆಗೆ ಖಾತೆಯ ಪ್ರತಿಷ್ಠೆಗಾಗಿ ಹೋರಾಡುವ ರಾಜಕಾರಣಿಯು ಜನರ ಸಮಸ್ಯೆಗಳಿಗಿಂತ ಹೆಚ್ಚಾಗಿ ತನ್ನ ರಾಜಕೀಯ ಪ್ರಭಾವದ ಬಗ್ಗೆಯೇ ಹೆಚ್ಚು ಚಿಂತಿಸುತ್ತಿದ್ದಾನೆ ಎಂಬ ಅನುಮಾನ ಮೂಡುತ್ತದೆ. ಹಾಗೆಂದು ತಮಗೆ ಸಿಕ್ಕಿದ ಖಾತೆಯನ್ನು ನಿರಾಕರಿಸಿ ರಾಜೀನಾಮೆಯನ್ನು ನೀಡುವುದು ಎಲ್ಲಾ ಸಂದರ್ಭದಲ್ಲೂ ತಪ್ಪು ಎನ್ನಲಾಗುವುದಿಲ್ಲ. ಕೆಲವು ಸಂದರ್ಭಗಳಲ್ಲಿ ರಾಜೀನಾಮೆಯೇ ಪ್ರಜಾಪ್ರಭುತ್ವದ ನೈತಿಕತೆಯನ್ನು ಕಾಪಾಡುವ ಶಕ್ತಿಶಾಲಿ ಕ್ರಮವೂ ಆಗಿರಬಹುದು. ಉದಾಹರಣೆಗೆ, ಸರ್ಕಾರದ ನೀತಿಗಳೊಂದಿಗೆ ಮೂಲಭೂತ ಭಿನ್ನಾಭಿಪ್ರಾಯಗಳಿದ್ದಾಗ, ಭ್ರಷ್ಟಾಚಾರ ಅಥವಾ ಅನೈತಿಕ ಒತ್ತಡಗಳನ್ನು ವಿರೋಧಿಸಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾದಾಗ, ತನ್ನ ತತ್ವಸಿದ್ಧಾಂತಗಳಿಗೆ ವಿರುದ್ಧವಾದ ನಿರ್ಧಾರಗಳನ್ನು ಒಪ್ಪಿಕೊಳ್ಳಬೇಕಾಗಿ ಬಂದಾಗ, ಸಚಿವ ಸ್ಥಾನ ಕೇವಲ ಹೆಸರಿಗಷ್ಟೇ ಇದ್ದು ಕೆಲಸ ಮಾಡಲು ಅವಕಾಶವೇ ಇಲ್ಲದಿದ್ದಾಗ ರಾಜೀನಾಮೆ ಒಂದು ನೈತಿಕ ಪ್ರತಿಭಟನೆಯಾಗಲೂಬಹುದು.

ಇತಿಹಾಸದಲ್ಲಿ ಅನೇಕ ನಾಯಕರು ತಮ್ಮ ಹುದ್ದೆಯನ್ನು ತ್ಯಜಿಸಿ ತತ್ವಗಳಿಗೆ ಬದ್ಧರಾಗಿರುವ ಉದಾಹರಣೆಗಳಿವೆ. ಅಂತಹ ರಾಜೀನಾಮೆಗಳು ಅಧಿಕಾರಕ್ಕಾಗಿ ಅಲ್ಲ, ಮೌಲ್ಯಗಳಿಗಾಗಿ ನೀಡಲ್ಪಟ್ಟವು. ಆದ್ದರಿಂದ ರಾಜೀನಾಮೆಯ ಹಿಂದಿನ ಉದ್ದೇಶವನ್ನು ಪರಿಶೀಲಿಸುವುದು ಮುಖ್ಯ. ಸಾಮಾನ್ಯ ನಾಗರಿಕನ ದೃಷ್ಟಿಯಿಂದ ನೋಡಿದರೆ, ಚುನಾವಣೆಯ ಸಂದರ್ಭದಲ್ಲಿ ನಾಯಕರು ಜನರ ಸಮಸ್ಯೆಗಳನ್ನು ಪರಿಹರಿಸುವ ಭರವಸೆಗಳನ್ನು ನೀಡುತ್ತಾರೆ. ಆದರೆ ಅಧಿಕಾರಕ್ಕೆ ಬಂದ ನಂತರ ಖಾತೆಗಾಗಿ ಅಸಮಾಧಾನ ವ್ಯಕ್ತಪಡಿಸುವುದು ಜನರಲ್ಲಿ ನಿರಾಶೆಯನ್ನು ಉಂಟುಮಾಡುತ್ತದೆ.

ಇತಿಹಾಸವನ್ನು ಗಮನಿಸಿದರೆ ಕೆಲವು ನಾಯಕರು ಸಣ್ಣ ಅಥವಾ ಕಡಿಮೆ ಪ್ರಭಾವಿ ಎಂದು ಪರಿಗಣಿಸಲಾದ ಖಾತೆಗಳಲ್ಲಿಯೂ ಅಸಾಧಾರಣ ಸಾಧನೆಯನ್ನು ಮಾಡಿದ್ದಾರೆ. ಮತ್ತೊಂದೆಡೆ ಪ್ರಭಾವಿ ಖಾತೆಗಳನ್ನು ನಿರ್ವಹಿಸಿದ ಅನೇಕರು ಗಮನಾರ್ಹ ಕೊಡುಗೆಯನ್ನು ನೀಡಲು ವಿಫಲರಾಗಿದ್ದಾರೆ. ಇದರಿಂದ ತಿಳಿಯಬೇಕಾದುದು ಇಷ್ಟೇ: ಖಾತೆಯು ಯಾವುದೇ ನಾಯಕನನ್ನು ದೊಡ್ಡವನನ್ನಾಗಿಸುವುದಿಲ್ಲ; ಬದಲಿಗೆ ನಾಯಕನೇ ಖಾತೆಯನ್ನು ಶ್ರೇಷ್ಠವಾಗಿಸುತ್ತಾನೆ. ದಕ್ಷತೆ, ದೃಷ್ಟಿಕೋನ, ಪ್ರಾಮಾಣಿಕತೆ ಹಾಗೂ ಬದ್ಧತೆ ಇದ್ದರೆ ಯಾವುದೇ ಖಾತೆಯೂ ಜನಪರ ಪರಿವರ್ತನೆಯ ಕೇಂದ್ರವಾಗಬಹುದು. ಆದ್ದರಿಂದ ಖಾತೆಗಿಂತಲೂ ನಾಯಕತ್ವದ ಗುಣಮಟ್ಟವೇ ಮುಖ್ಯ.

ಎಲ್ಲ ಅಸಮಾಧಾನಗಳನ್ನು ಅಧಿಕಾರದ ದಾಹ ಎಂದೇ ಪರಿಗಣಿಸುವುದು ಸರಿಯಲ್ಲ. ಕೆಲವು ರಾಜಕಾರಣಿಗಳು ತಮ್ಮ ಪರಿಣತಿ, ಅನುಭವ ಅಥವಾ ಕ್ಷೇತ್ರಜ್ಞಾನವನ್ನು ಬಳಸಿಕೊಳ್ಳಲು ಸೂಕ್ತ ಖಾತೆ ಬೇಕೆಂದು ವಾದಿಸಬಹುದು. ಉದಾಹರಣೆಗೆ, ಕೃಷಿ ಕ್ಷೇತ್ರದಲ್ಲಿ ದೀರ್ಘ ಅನುಭವ ಹೊಂದಿರುವ ವ್ಯಕ್ತಿ ಕೃಷಿ ಖಾತೆಯಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು. ಆದರೆ ಅಂತಹ ಸಂದರ್ಭದಲ್ಲಿ ರಾಜೀನಾಮೆ ಎನ್ನುವುದು ಕೊನೆಯ ಆಯ್ಕೆಯಾಗಬೇಕು. ಮೊದಲ ಆದ್ಯತೆ ಸರ್ಕಾರದ ಒಳಗೆ ಚರ್ಚೆ, ಸಮನ್ವಯ ಮತ್ತು ಕಾರ್ಯಕ್ಷಮತೆಯ ಮೂಲಕ ಸಮಸ್ಯೆ ಪರಿಹರಿಸುವುದಾಗಿರಬೇಕು. ಏಕೆಂದರೆ, ಜನರಿಂದ ಪಡೆದ ಜನಾದೇಶವನ್ನು ತಕ್ಷಣವೇ ತ್ಯಜಿಸುವುದು ಪ್ರಜಾಪ್ರಭುತ್ವದ ಹೊಣೆಗಾರಿಕೆಗೆ ಹೊಂದಿಕೆಯಾಗುವುದಿಲ್ಲ.

ಒಬ್ಬ ರಾಜಕಾರಣಿಯ ಜನಸೇವೆಯ ನಿಜವಾದ ಅಳತೆಗೋಲು ಅವನು ಯಾವ ಖಾತೆ ನಿರ್ವಹಿಸಿದ ಎಂಬುದರಲ್ಲಿಲ್ಲ; ಆ ಖಾತೆಯ ಮೂಲಕ ಅವನು ಜನರ ಬದುಕಿನಲ್ಲಿ ಎಷ್ಟು ಸಕಾರಾತ್ಮಕ ಬದಲಾವಣೆಗಳನ್ನು ತಂದಿದ್ದಾನೆ ಎಂಬುದಾಗಿದೆ. ಸಾಮಾನ್ಯ ಜನರು ನೆನಪಿನಲ್ಲಿಡುವುದು ಸಚಿವರ ಖಾತೆಗಳನ್ನು ಅಲ್ಲ; ಕೇವಲ ಅವರ ಕಾರ್ಯಗಳನ್ನು ಮಾತ್ರ. ರಸ್ತೆಗಳನ್ನು ನಿರ್ಮಿಸಿದವರು, ಶಾಲೆಗಳನ್ನು ಸುಧಾರಿಸಿದವರು, ರೈತರ ಸಮಸ್ಯೆಗಳನ್ನು ಪರಿಹರಿಸಿದವರು, ಆರೋಗ್ಯ ಸೇವೆಯನ್ನು ವಿಸ್ತರಿಸಿದವರು ಮೊದಲಾದವರು ಜನರ ಮನಸ್ಸಿನಲ್ಲಿ ಉಳಿಯುತ್ತಾರೆ. ಖಾತೆ ಬದಲಾದರೆ ಏನಂತೆ? ಸೇವೆ ಮಾಡಬಹುದಲ್ಲ? ಆದರೆ ಸೇವಾ ಮನೋಭಾವವೇ ಇಲ್ಲದಿದ್ದರೆ ಅತ್ಯಂತ ಪ್ರಭಾವಿ ಖಾತೆಯೂ ನಿರರ್ಥಕವಾಗುತ್ತದೆ.

ಏನೇ ಆದರೂ ಜನಸೇವಕನನ್ನು ಗುರುತಿಸುವುದು ಅವನಿಗೆ ಸಿಕ್ಕ ಖಾತೆಯಲ್ಲ; ಅವನು ನಿರ್ವಹಿಸಿದ ಕಾರ್ಯಗಳ ಗುಣಮಟ್ಟ. ಸಚಿವಾಲಯದ ಬಾಗಿಲಿನ ಮೇಲೆ ಬರೆದಿರುವ ಖಾತೆಯ ಹೆಸರು ಇತಿಹಾಸವನ್ನು ನಿರ್ಮಿಸುವುದಿಲ್ಲ; ಆ ಬಾಗಿಲಿನ ಒಳಗೆ ಕುಳಿತ ವ್ಯಕ್ತಿಯ ನಿಷ್ಠೆ, ದೃಷ್ಟಿ ಮತ್ತು ಕಾರ್ಯಶೀಲತೆಯೇ ಇತಿಹಾಸವನ್ನು ಸೃಷ್ಟಿಸುತ್ತದೆ.

ಗೂಗಲ್ ಸೊಳ್ಳೆ ಬಿಡುವುದರ ಹಿಂದಿನ ಕಥೆ

ಇತ್ತೀಚೆಗೆ ಗೂಗಲ್‌ನ ಮಾತೃ ಸಂಸ್ಥೆಯಾದ ಅಲ್ಫಾಬೆಟ್ ತನ್ನ ಆರೋಗ್ಯ ತಂತ್ರಜ್ಞಾನ ಯೋಜನೆಯಾದ ಡಿಬಗ್ ಕಾರ್ಯಕ್ರಮದಡಿಯಲ್ಲಿ ಬರೋಬ್ಬರಿ 32 ಮಿಲಿಯನ್ ಅಂದರೆ 3 ಕೋಟಿ 20 ಲಕ್ಷದಷ್ಟು ಸೊಳ್ಳೆಗಳನ್ನು ಪರಿಸರಕ್ಕೆ ಬಿಡುಗಡೆ ಮಾಡಲು ಸರ್ಕಾರದ ಅನುಮತಿಯನ್ನು ಕೋರಿದೆ ಎನ್ನುವಂತದ್ದು ಬಹಳ ದೊಡ್ಡ ಸುದ್ದಿಯಾಗಿ ಜಾಲತಾಣಗಳಲ್ಲಿ ಇದರ ಪರ ವಿರೋಧವಾಗಿ ಬಹಳಷ್ಟು ಚರ್ಚೆಗಳು ನಡೆದಿದ್ದವು.

ವಿಷಯವೆಂದರೆ ಬಹಳಷ್ಟು ಜನರಿಗೆ ಗೂಗಲ್ ಯಾಕೆ ಅಷ್ಟೊಂದು ಪ್ರಮಾಣದಲ್ಲಿ ಸೊಳ್ಳೆಗಳನ್ನು ಪರಿಸರಕ್ಕೆ ಬಿಡಲು ಮುಂದಾಗಿದೆ ಎನ್ನುವ ವಿಚಾರವೇ ತಿಳಿದಿರಲಿಲ್ಲ. ಆದರೂ ವಾದ ವಿವಾದಗಳು ಸಾಗಿದ್ದವು.

ಇದರ ಹಿನ್ನೆಲೆ ಏನು ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳೋಣ. ಅಮೆರಿಕದ ಕ್ಯಾಲಿಫೋರ್ನಿಯ ಮತ್ತು ಫ್ಲೋರಿಡಾ ರಾಜ್ಯಗಳಲ್ಲಿ ಅಡಿಸ್ ಈಜಿಪ್ಟಿ ಎಂಬ ಸೊಳ್ಳೆ ಪ್ರಭೇದವು ಡೆಂಗ್ಯೂ, ಚಿಕನ್ ಗುನ್ಯ ಮೊದಲಾದ ರೋಗಗಳನ್ನು ಹರಡುತ್ತಿದೆ. ಆ ಮೂಲಕ ಇದೊಂದು ದೊಡ್ಡ ಸಮಸ್ಯೆಯಾಗಿ ಮಾರ್ಪಟ್ಟಿದೆ. ಸಾಮಾನ್ಯ ಕೀಟನಾಶಕಗಳನ್ನು ಬಳಸಿ ಇವುಗಳನ್ನು ನಿಯಂತ್ರಿಸುವ ಪ್ರಯೋಗ ಯಶಸ್ವಿಯಾಗುತ್ತಿಲ್ಲ. ಹಾಗಾಗಿ ಹೊಸ ತಂತ್ರಜ್ಞಾನವನ್ನು ಬಳಸಿ ಈ ರೋಗ ಹರಡುವುದನ್ನು ಮತ್ತು ಈ ಸೊಳ್ಳೆಗಳ ಪ್ರಭೇದವನ್ನು ನಿಯಂತ್ರಿಸಬೇಕು ಎನ್ನುವ ಪ್ರಯತ್ನದ ಅಂಗವಾಗಿ ಹಲವಾರು ಪ್ರಯೋಗಗಳನ್ನು ವಿಜ್ಞಾನಿಗಳು ಮಾಡುತ್ತಲೇ ಬಂದಿದ್ದಾರೆ. ಅದರಲ್ಲಿ ಒಂದು ಅಲ್ಫಾಬೆಟ್‌ನ ಡಿ–ಬಗ್ ಯೋಜನೆ. ಸೊಳ್ಳೆಗಳನ್ನು ಸೊಳ್ಳೆಗಳಿಂದಲೇ ನಿರ್ಮೂಲನೆ ಮಾಡಬೇಕು ಎನ್ನುವ ಆಶಯದ ಈ ಯೋಜನೆಯಂತೆ ಪ್ರಯೋಗಾಲಯದಲ್ಲಿ ಗಂಡು ಸೊಳ್ಳೆಗಳನ್ನು ಮಾತ್ರ ಬೆಳವಣಿಗೆ ಮಾಡಲಾಗುತ್ತಿದೆ. ಗೊತ್ತಿರಬೇಕಾದ ಸಂಗತಿ ಎಂದರೆ ಗಂಡು ಸೊಳ್ಳೆಗಳು ಮನುಷ್ಯರನ್ನು ಕಚ್ಚುವುದಿಲ್ಲ. ಹಾಗಾಗಿ ಈ ಗಂಡು ಸೊಳ್ಳೆಗಳಿಂದ ರೋಗ ಹರಡಲು ಸಾಧ್ಯವಿಲ್ಲ.



ಅಷ್ಟಕ್ಕೂ ಈ ಗಂಡು ಸೊಳ್ಳೆಗಳಿಂದ ಹೇಗೆ ನಿಯಂತ್ರಣ ಸಾಧ್ಯ ಎನ್ನುತ್ತೀರಾ? ಈ ಗಂಡು ಸೊಳ್ಳೆಗಳಲ್ಲಿ ಒಂದು ವಿಶಿಷ್ಟವಾದ ಬ್ಯಾಕ್ಟೀರಿಯಾವನ್ನು ಸೇರಿಸಲಾಗುತ್ತದೆ. ಹೀಗೆ ಬ್ಯಾಕ್ಟೀರಿಯಾವನ್ನು ತಮ್ಮೊಳಗೆ ಸೇರಿಸಿಕೊಂಡ ಗಂಡು ಸೊಳ್ಳೆಗಳು ಸಾಮಾನ್ಯ ಹೆಣ್ಣು ಸೊಳ್ಳೆಗಳೊಂದಿಗೆ ಸಂಯೋಗ ಮಾಡುತ್ತವೆ. ಆದರೆ ಅವುಗಳಿಂದ ಉತ್ಪತ್ತಿಯಾಗುವ ಮೊಟ್ಟೆಗಳು ಸರಿಯಾಗಿ ಬೆಳೆಯುವುದಿಲ್ಲ ಅಥವಾ ಬೆಳೆದರೂ ಅದರ ಮರಿಗಳು ಬದುಕುಳಿಯುವ ಪ್ರಮಾಣ ಬಹಳಷ್ಟು ಕಡಿಮೆ ಆಗಿರುತ್ತದೆ. ಇದರ ಪರಿಣಾಮವಾಗಿ ಆ ಪ್ರದೇಶದಲ್ಲಿನ ರೋಗ ಹರಡುವ ಸೊಳ್ಳೆಗಳ ಸಂಖ್ಯೆ ಕ್ರಮೇಣ ಕಡಿಮೆಯಾಗುತ್ತ ಸಾಗುತ್ತದೆ. ಈ ಮೂಲಕ ರೋಗಗಳ ಹರಡುವಿಕೆಯನ್ನು ತಡೆಗಟ್ಟಬಹುದು ಎನ್ನುವುದು ಇದರ ಹಿಂದಿರುವ ಲೆಕ್ಕಾಚಾರ.

ಈಗಾಗಲೇ ಸಿಂಗಾಪುರ ಸೇರಿದಂತೆ ಹಲವು ಪ್ರದೇಶಗಳಲ್ಲಿ ನಡೆದಿದ್ದ ಬೇರೆ ಬೇರೆ ರೀತಿಯ ಪ್ರಯೋಗಗಳಲ್ಲಿ ಈ ಸೊಳ್ಳೆಗಳ ಪ್ರಮಾಣ ಶೇಕಡ 90 ರ ವರೆಗೆ ಕಡಿಮೆಯಾದ ವರದಿಗಳು ಕೂಡ ಇವೆ. ಹಾಗಾಗಿ ಈ ಪ್ರಯೋಗ ಕೂಡ ಖಂಡಿತ ಯಶಸ್ಸು ಸಾಧಿಸುತ್ತದೆ ಎನ್ನುವುದು ವಿಜ್ಞಾನಿಗಳ ಅನಿಸಿಕೆ.

ಆದರ ನಡುವೆ ಪರಿಸರವಾದಿಗಳು ಇದರ ವಿರುದ್ಧ ಕೂಡ ಧ್ವನಿಯೆತ್ತಿದ್ದಾರೆ. ಯಾಕೆಂದರೆ ವಿಜ್ಞಾನಿಗಳು ಇದು ಪರಿಸರ ಸ್ನೇಹಿ ವಿಧಾನ ಎಂದು ಹೇಳಿದರು ಕೂಡ ಈ ಒಂದು ವ್ಯವಸ್ಥೆ ಪರಿಸರ ವ್ಯವಸ್ಥೆಯ ಮೇಲೆ ದೀರ್ಘಕಾಲದ ಪರಿಣಾಮಗಳನ್ನು ಬೀರಬಹುದು ಎನ್ನಲಾಗಿದೆ. ಸೊಳ್ಳೆಗಳನ್ನು ಆಹಾರವಾಗಿ ಬಳಸುವಂತಹ ಪಕ್ಷಿಗಳು ಬಾವಲಿಗಳು ಇತ್ಯಾದಿ ಜೀವಿಗಳ ಮೇಲೆ ಇದು ವ್ಯತಿರಿಕ್ತ ಪರಿಣಾಮ ಬೀರಬಹುದು ಎನ್ನುವ ಆತಂಕವು ಎದುರಾಗಿದೆ.

ಒಟ್ಟಿನಲ್ಲಿ, ಅಲ್ಫಾಬೆಟ್ ಬಿಡುಗಡೆ ಮಾಡಲು ಹೊರಟಿರುವ ಸೊಳ್ಳೆಗಳು ಜನರನ್ನು ಕಚ್ಚಲಂತೂ ಅಲ್ಲ. ಬದಲಾಗಿ ರೋಗಗಳನ್ನು ಹರಡುವ ಸೊಳ್ಳೆಗಳ ಸಂಖ್ಯೆಯನ್ನು ಕಡಿಮೆ ಮಾಡಲು ಬಳಸಲಾಗುತ್ತಿರುವ ಹೊಸ ಜೈವಿಕ ತಂತ್ರಜ್ಞಾನ ಇದು. ಈ ಪ್ರಯೋಗ ಯಶಸ್ವಿಯಾದರೆ ಭವಿಷ್ಯದಲ್ಲಿ ವಿಶ್ವದ ಅನೇಕ ದೇಶಗಳಲ್ಲಿ ಸೊಳ್ಳೆ ನಿಯಂತ್ರಣಕ್ಕೆ ಹೊಸ ದಾರಿ ತೆರೆದುಕೊಳ್ಳಬಹುದು. ಒಂದಂತೂ ಸತ್ಯ ಸೊಳ್ಳೆಗಳನ್ನು ಹೊಡೆದುಕೊಲ್ಲುವುದಕ್ಕಿಂತ ಈ ಮಾರ್ಗವೇ ಉತ್ತಮ ಎನಿಸೀತು.

–ನರೇಂದ್ರ ಎಸ್. ಗಂಗೊಳ್ಳಿ

ವಾಸ್ತವದ ಸವಾಲುಗಳು

ಡಿ.ಕೆ. ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರದ ಹೊಸ ನಿರ್ಧಾರಗಳು ಆಶಾದಾಯಕವಾಗಿವೆ. ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೂ ಉಚಿತ ಬಸ್ ಪಾಸ್ ಸೌಲಭ್ಯ ವಿಸ್ತರಿಸಿರುವುದು ವಿದ್ಯಾರ್ಥಿಗಳ ಶಿಕ್ಷಣದ ವೆಚ್ಚ ತಗ್ಗಿಸುವ ಅತ್ಯುತ್ತಮ ನಿರ್ಧಾರವಾಗಿದೆ. ಹಾಗೆಯೇ ಗ್ರಾಮೀಣ ಭಾಗದ ಯುವಜನರಿಗಾಗಿ 10 ಸಾವಿರ 'ಭಾರತ ಜೋಡೋ' ಯುವಕ ಸಂಘಗಳ ರಚನೆ ಹಾಗೂ ಪ್ರತಿ ಸಂಘಕ್ಕೆ 10 ಲಕ್ಷ ರೂ. ಅನುದಾನ ನೀಡುವ ಆಲೋಚನೆ ಯುವಶಕ್ತಿಯ ನಾಯಕತ್ವ ಗುಣವನ್ನು ಖಂಡಿತವಾಗಿಯೂ ಪ್ರೋತ್ಸಾಹಿಸುತ್ತದೆ. ಜೊತೆಗೆ, ಬೆಂಗಳೂರಿನ 'ಬಿ' ಖಾತೆಯಿಂದ 'ಎ' ಖಾತೆ ಪರಿವರ್ತನಾ ಯೋಜನೆ ಮತ್ತು ಗ್ರಾಮೀಣ ನಿವೇಶನಗಳ ನಿಯಮಿತಗೊಳಿಸುವಿಕೆ ಜನಸಾಮಾನ್ಯರ ಆಸ್ತಿ ಹಕ್ಕನ್ನು ಬಲಪಡಿಸುತ್ತದೆ.

ಆದರೆ ಇಂತಹ ಬೃಹತ್ ಯೋಜನೆಗಳ ನೈತಿಕ ಯಶಸ್ಸು ಕೇವಲ ಘೋಷಣೆಗಳಲ್ಲಿಲ್ಲ ಭ್ರಷ್ಟಾಚಾರ ರಹಿತ ಮತ್ತು ಪಾರದರ್ಶಕ ಅನುಷ್ಠಾನದಲ್ಲಿದೆ. ಕೇವಲ ಉಚಿತ ಸೌಲಭ್ಯಗಳಿಂದಲೇ ಸರ್ವಾಂಗೀಣ ಪ್ರಗತಿ ಸಾಧ್ಯವಿಲ್ಲ ಕೌಶಲ ತರಬೇತಿ ಮತ್ತು ನೈಜ ಉದ್ಯೋಗ ಸೃಷ್ಟಿ ಅತ್ಯಗತ್ಯ. ಸರ್ಕಾರವು ಆಡಳಿತಾತ್ಮಕ ವಿಳಂಬವನ್ನು ತಪ್ಪಿಸಿ ಗ್ರಾಮೀಣ ಮಟ್ಟದಲ್ಲಿ ಈ ಯೋಜನೆಗಳು ಅರ್ಹರಿಗೆ ತಲುಪುವಂತೆ ನೋಡಿಕೊಳ್ಳಬೇಕಿದೆ. ಸಾರ್ವಜನಿಕರ ತೆರಿಗೆ ಹಣದ ಪ್ರತಿ ರೂಪಾಯಿಯೂ ದುರುಪಯೋಗವಾಗದೆ ಜನಕಲ್ಯಾಣಕ್ಕೆ ಬಳಕೆಯಾದಾಗ ಮಾತ್ರ ಪ್ರಗತಿ ಸಾಧ್ಯ.

–ಡಾ. ವಿಜಯಕುಮಾರ್



ಹಲವು ಯೋಜನೆಗಳಿಗೆ ಚಾಲನೆ ನೀಡಿದ ಬಳಿಕ ಪ್ರಧಾನಿ ನರೇಂದ್ರ ಮೋದಿಯವರು ದಮನ್‌ನಲ್ಲಿ ಗುರುವಾರ ರಾತ್ರಿ ರೋಡ್ ಶೋನಲ್ಲಿ ಭಾಗವಹಿಸಿದ ಕ್ಷಣ.

ಕೊಲ್ಲಿಯಲ್ಲಿ ಮತ್ತೆ ಉದ್ವಿಗ್ನತೆ | ಕದನ ವಿರಾಮದ ಭವಿಷ್ಯ ಪ್ರಶ್ನಾರ್ಥಕ

ಇರಾನ್-ಅಮೆರಿಕ ಮತ್ತೆ ಕ್ಷಿಪಣಿ ಸಮರ

ಕೈರೋ/ವಾಷಿಂಗ್ಟನ್: ಪರ್ಷಿಯನ್ ಕೊಲ್ಲಿಯಲ್ಲಿ ಇರಾನ್ ಮತ್ತು ಅಮೆರಿಕ ನಡುವಿನ ಉದ್ವಿಗ್ನತೆ ಮತ್ತೊಮ್ಮೆ ತೀವ್ರಗೊಂಡಿದ್ದು, ಕದನ ವಿರಾಮದ ಸ್ಥಿರತೆಯ ಬಗ್ಗೆ ಹೊಸ ಆತಂಕಗಳು ಮೂಡಿವೆ. ಶನಿವಾರ ಮುಂಜಾನೆ ಇರಾನ್ ಬಹ್ರೇನ್ ಹಾಗೂ ಕುವೈತ್ ಕಡೆಗೆ ಬ್ಯಾಲಿಸ್ಟಿಕ್ ಕ್ಷಿಪಣಿಗಳು ಮತ್ತು ಡ್ರೋನ್‌ಗಳನ್ನು ಉಡಾಯಿಸಿದ್ದು, ಅವುಗಳನ್ನು ಮಧ್ಯದಲ್ಲೇ ಹೊಡೆದುರುಳಿಸಲಾಗಿದೆ ಎಂದು ಬಹ್ರೇನ್ ಸರ್ಕಾರ ತಿಳಿಸಿದೆ.

ಇದನ್ನು ಪ್ರಾದೇಶಿಕ ಭದ್ರತೆಗೆ ಗಂಭೀರ ಬೆದರಿಕೆ ಎಂದು ಬಣ್ಣಿಸಿರುವ ಬಹ್ರೇನ್, ತನ್ನ ನೆರೆ ರಾಷ್ಟ್ರಗಳ ಮೇಲಿನ ದಾಳಿಯನ್ನು ತಕ್ಷಣವೇ ನಿಲ್ಲಿಸುವಂತೆ ಇರಾನ್‌ಗೆ ಎಚ್ಚರಿಕೆ ನೀಡಿದೆ. ಇದರ ಬೆನ್ನಲ್ಲೇ ಅಮೆರಿಕವು ಕ್ವೆಶ್ಮ್ ದ್ವೀಪ ಹಾಗೂ ಸಿರಿಕ್ ಸಮೀಪದ ಇರಾನ್‌ನ ನಿಗಾ ಕೇಂದ್ರಗಳ ಮೇಲೆ ದಾಳಿ ನಡೆಸಿದೆ ಎಂದು ಇರಾನ್ ವಿದೇಶಾಂಗ ಸಚಿವಾಲಯ ಆರೋಪಿಸಿದೆ. ಅಂತಾರಾಷ್ಟ್ರೀಯ ಜಲಮಾರ್ಗಗಳ ಭದ್ರತೆ, ಗಡಿ ಕಾವಲಿಗಾಗಿ ಬಳಸಲಾಗುತ್ತಿದ್ದ ಕೇಂದ್ರಗಳ ಮೇಲೆ ದಾಳಿ ನಡೆಸಿರುವುದು ಕದನ ವಿರಾಮದ ಉಲ್ಲಂಘನೆಯಾಗಿದೆ ಎಂದು ಇರಾನ್ ಹೇಳಿದೆ.

ಅಮೆರಿಕದ ಸೆಂಟ್ರಲ್ ಕಮಾಂಡ್ ಪ್ರಕಾರ, ಹೋರ್ಮುಜ್ ಜಲಸಂಧಿ ಮತ್ತು ಕೊಲ್ಲಿಯ ಮಿತ್ರ ರಾಷ್ಟ್ರಗಳತ್ತ ಹೊರಟಿದ್ದ ಹಲವು ಇರಾನಿ ಕ್ಷಿಪಣಿಗಳು ಹಾಗೂ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಸಮುದ್ರ ಸಂಚಾರಕ್ಕೆ ತಕ್ಷಣದ ಅಪಾಯ ಉಂಟಾಗಿದ್ದ ಹಿನ್ನೆಲೆಯಲ್ಲಿ ಪ್ರತಿಕ್ರಿಯಾತ್ಮಕ ಕ್ರಮವಾಗಿ ಕರಾವಳಿ ನಿಗಾ ರಾಡಾರ್ ಕೇಂದ್ರಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಅದು ತಿಳಿಸಿದೆ.

ಇರಾನ್‌ನ ರೆವಲ್ಯೂಷನರಿ ಗಾರ್ಡ್ ಪಡೆ, ಕುವೈತ್‌ನಲ್ಲಿರುವ ಅಮೆರಿಕ ಸೇನೆಯ ಅಲಿ ಅಲ್ ಸಲೇಮ್ ವಾಯುನೆಲೆ ಹಾಗೂ ಬಹ್ರೇನ್‌ನಲ್ಲಿರುವ ಅಮೆರಿಕ ನೌಕಾಪಡೆಯ 5ನೇ ಫ್ಲೀಟ್ ಕೇಂದ್ರವನ್ನು ಗುರಿಯಾಗಿಸಿಕೊಂಡಿದ್ದೇವೆ ಎಂದು ಹೇಳಿದೆ. ಆದರೆ ಅಮೆರಿಕದ ಸೈನಿಕ ಸಿಬ್ಬಂದಿಗೆ ಯಾವುದೇ ಹಾನಿಯಾಗಿಲ್ಲ ಎಂದು ಅಮೆರಿಕ ಸ್ಪಷ್ಟಪಡಿಸಿದೆ. ಈ ವಾರದ ಆರಂಭದಲ್ಲಿ ಇರಾನಿ ಡ್ರೋನ್ ದಾಳಿಯಿಂದ ಕುವೈತ್‌ನ ಪ್ರಮುಖ ವಿಮಾನ ನಿಲ್ದಾಣದ



ಪ್ರಮುಖ ಬೆಳವಣಿಗೆಗಳು

- ಬಹ್ರೇನ್ ಮತ್ತು ಕುವೈತ್ ಕಡೆಗೆ ಇರಾನ್‌ನಿಂದ ಕ್ಷಿಪಣಿ ಹಾಗೂ ಡ್ರೋನ್ ದಾಳಿ
- ಹಲವು ಕ್ಷಿಪಣಿಗಳನ್ನು ಹೊಡೆದುರುಳಿಸಿದ್ದಾಗಿ ಅಮೆರಿಕದ ಸೇನೆ ಹೇಳಿಕೆ
- ಇರಾನ್‌ನ ಕರಾವಳಿ ನಿಗಾ ಕೇಂದ್ರಗಳ ಮೇಲೆ ಅಮೆರಿಕದ ಪ್ರತಿದಾಳಿ
- ಹೋರ್ಮುಜ್ ಜಲಸಂಧಿ ಸುತ್ತ ಭದ್ರತಾ ಬಿಕ್ಕಟ್ಟು ತೀವ್ರ

ಪ್ರಯಾಣಿಕರ ಟರ್ಮಿನಲ್‌ಗೆ ಭಾರೀ ಹಾನಿಯಾಗಿದ್ದು, ಒಬ್ಬರು ಸಾವನ್ನಪ್ಪಿ ಹಲವರು ಗಾಯಗೊಂಡಿದ್ದರು. ಇದರ ನಡುವೆ ಜಾಗತಿಕ ತೈಲ ಮತ್ತು ನೈಸರ್ಗಿಕ ಅನಿಲ ಸಾಗಣೆಗೆ ಅತ್ಯಂತ ಮಹತ್ವದ ಹೋರ್ಮುಜ್ ಜಲಸಂಧಿಯ ಮೇಲೆ ಇರಾನ್ ಒತ್ತಡ ಹೆಚ್ಚಿಸಿರುವುದರಿಂದ ಇಂಧನ ಬೆಲೆಗಳು ಏರಿಕೆಯಾಗಿದ್ದು, ಜಾಗತಿಕ ಆರ್ಥಿಕತೆಯ ಮೇಲೂ ಪರಿಣಾಮ ಬೀಳುತ್ತಿದೆ.

ಲೆಬನಾನ್ ಸಂಘರ್ಷವೂ ಸವಾಲು: ಇದೇ ವೇಳೆ ಲೆಬನಾನ್‌ನಲ್ಲೂ ಸಂಘರ್ಷ ಮುಂದುವರಿದಿದ್ದು, ದಕ್ಷಿಣ ಲೆಬನಾನ್‌ನಲ್ಲಿ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಒಂಬತ್ತು ಮಂದಿ ಸಾವನ್ನಪ್ಪಿದ್ದಾರೆ. ಇವರಲ್ಲಿ ಲೆಬನಾನ್ ಸೇನೆಯ ಮೂವರು ಯೋಧರೂ ಸೇರಿದ್ದಾರೆ ಎಂದು ವರದಿಯಾಗಿದೆ. ಈ ಬೆಳವಣಿಗೆಗಳು ಇರಾನ್-ಅಮೆರಿಕ ಕದನ ವಿರಾಮದ ಪ್ರಯತ್ನಗಳಿಗೆ ಮತ್ತಷ್ಟು ಸವಾಲು ತಂದಿದ್ದು, ಪಶ್ಚಿಮ ಏಷ್ಯಾದಲ್ಲಿ ಮತ್ತೆ ಯುದ್ಧದ ಕಾರ್ಮೋಡಗಳು ಕವಿದಂತಾಗಿವೆ.

ಆರ್‌ಬಿಐನಿಂದ ಪಾಲಿಮರ್ ಬ್ಯಾಂಕ್ ನೋಟುಗಳ ಅಳವಡಿಕೆಗೆ ಚಿಂತನೆ



ಸಾಂಪ್ರದಾಯಿಕ ಕಾಗದದ ನೋಟುಗಳ ಬದಲಿಗೆ ಪಾಲಿಮರ್ ಕರೆನ್ಸಿ ನೋಟುಗಳನ್ನು ಚಲಾವಣೆಗೆ ತರುವ ಪ್ರಸ್ತಾಪವನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಪರಿಶೀಲಿಸುತ್ತಿದೆ. ಪ್ಲಾಸ್ಟಿಕ್ ಕರೆನ್ಸಿ ಯೋಜನೆಯ ಸಾಧಕ-ಬಾಧಕಗಳನ್ನು ಕೇಂದ್ರ ಬ್ಯಾಂಕ್ ಆರಂಭಿಕ ಹಂತದಲ್ಲಿ ಪರಿಶೀಲಿಸುತ್ತಿದೆ ಎಂದು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ಗವರ್ನರ್ ಸಂಜಯ್ ಮಲ್ಹೋತ್ರಾ ಶುಕ್ರವಾರ ಮಾಹಿತಿ ನೀಡಿದ್ದರು. ಏನಿದು ಪ್ಲಾಸ್ಟಿಕ್ ನೋಟು? ಇದರ ಚಲಾವಣೆಯಿಂದ ಉಪಯೋಗ ವೇನು? ಎಂಬಿತ್ಯಾದಿ ವಿಚಾರಗಳ ಬಗ್ಗೆ ಮಾಹಿತಿ ಇಲ್ಲಿದೆ.

ಸುದ್ದಿ ಸಮಗ್ರ

ಪ್ಲಾಸ್ಟಿಕ್ ನೋಟು ಯುಗಾರಂಭ?

ಪ್ರಸ್ತಾವಿತ ನೀತಿ ಹಿನ್ನೆಲೆ

ಜೂನ್ 5 ರಂದು ನಡೆದ ಹಣಕಾಸು ನೀತಿ ಸಮಿತಿ ಸಭೆಯ ನಂತರ ಮಾಧ್ಯಮಗಳನ್ನುದ್ದೇಶಿಸಿ ಮಾತನಾಡಿದ ಸಂದರ್ಭದಲ್ಲಿ ಈ ಪ್ರಕಟಣೆ ಹೊರಬಿದ್ದಿದೆ.

ಪಾಲಿಮರ್ ಕರೆನ್ಸಿ ವೈಶಿಷ್ಟ್ಯಗಳು

ಪಾಲಿಮರ್ ಬ್ಯಾಂಕ್ ನೋಟುಗಳು, ಪ್ರಸ್ತುತ ಭಾರತೀಯ ಮುಖಬೆಲೆಯ ನೋಟುಗಳಿಗೆ ಬಳಸಲಾಗುವ ಸಾಂಪ್ರದಾಯಿಕ ಹತ್ತಿ-ತಿರುಳಿನ ಕಾಗದದ ಮಿಶ್ರಣದ ಬದಲಿಗೆ ವಿಶೇಷ ಪ್ಲಾಸ್ಟಿಕ್ ಹೊಂದಿರುತ್ತವೆ.

ಮುದ್ರಣ ವೆಚ್ಚ ಕಡಿತ

ಚಲಾವಣೆಯಿಂದ ತೆಗೆದುಹಾಕಲಾದ ಹರಿದ ನೋಟುಗಳಲ್ಲಿ 100-ರೂ. ಮತ್ತು 500 ರೂ. ಮುಖಬೆಲೆಯ ನೋಟುಗಳ ಪಾಲೇ ಹೆಚ್ಚು. ಅಂತಾರಾಷ್ಟ್ರೀಯ ಅಧ್ಯಯನಗಳು ಪಾಲಿಮರ್ ಆಧಾರಿತ ನೋಟುಗಳು ಪ್ರಮಾಣಿತ ಹತ್ತಿ-ತಿರುಳಿನ ನೋಟುಗಳಿಗಿಂತ ಎರಡರಿಂದ ಐದು ಪಟ್ಟು ಹೆಚ್ಚು ಆಯುಷ್ಯ ಹೊಂದಿವೆ ಎಂದು ಸಾಬೀತುಪಡಿಸಿವೆ. ಇದು ಕೇಂದ್ರ ಬ್ಯಾಂಕುಗಳ ಮುದ್ರಣ ಮತ್ತು ಇತರ ವೆಚ್ಚಗಳನ್ನು ಕಡಿಮೆ ಮಾಡುತ್ತದೆ.

ನಕಲಿ ನೋಟು ತಡೆ

ಪ್ಲಾಸ್ಟಿಕ್ ಬ್ಯಾಂಕ್‌ನೋಟುಗಳ ಜಾರಿ, ನಕಲಿ ಕರೆನ್ಸಿ ಚಲಾವಣೆಯನ್ನು ಕಡಿಮೆ ಮಾಡುವ ಕಾರ್ಯತಂತ್ರದ ಕ್ರಮ. ಪಾಲಿಮರ್ ವಸ್ತು ಸಾಂಪ್ರದಾಯಿಕ ಕಾಗದದ ಪದರಗಳ ಮೇಲೆ ನಕಲು ಮಾಡಲು ಅಸಾಧ್ಯವಾದ ಭದ್ರತಾ ವೈಶಿಷ್ಟ್ಯಗಳನ್ನು ಬಳಸಲು ಅನುಮತಿಸುತ್ತದೆ. ಈ ವಿಶೇಷ ಭದ್ರತಾ ಕ್ರಮಗಳು, ಪಾರದರ್ಶಕತೆ, ಹೊಲೊಗ್ರಾಮ್‌ಗಳು ಮತ್ತು ವಿಭಿನ್ನ ಬಣ್ಣ-ಬದಲಾಯಿಸುವ ಅಂಶಗಳನ್ನು ಒಳಗೊಂಡಿವೆ. ದೇಶೀಯ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಇತ್ತೀಚೆಗೆ ಹೆಚ್ಚಿನ ಮುಖಬೆಲೆಯ ನಕಲಿ ನೋಟುಗಳ ಪತ್ತೆ ಹೆಚ್ಚಾಗಿದ್ದು, ಅದರಲ್ಲಿ 500-ರೂ. ನೋಟುಗಳು ಪ್ರಮುಖ ಗುರಿಯಾಗಿವೆ ಎಂದು ಕೇಂದ್ರ ಬ್ಯಾಂಕ್ ಸೂಚಿಸುತ್ತದೆ. ನಕಲಿ ನೋಟು ಚಲಾವಣೆ ಭಾರೀ ಇಳಿಕೆ 1990ರ ದಶಕದ ಮಧ್ಯಭಾಗದಲ್ಲಿ ಪಾಲಿಮರ್ ಕರೆನ್ಸಿಗೆ ಸಂಪೂರ್ಣವಾಗಿ ಬದಲಾದ ಆಸ್ಟ್ರೇಲಿಯಾದಂತಹ ವಿದೇಶಗಳು, ಈ ಬಹು-ಪದರದ ಭದ್ರತಾ ವೈಶಿಷ್ಟ್ಯಗಳಿಂದಾಗಿ ನಕಲಿ ನೋಟುಗಳ ಚಲಾವಣೆಯಲ್ಲಿ ಭಾರೀ ಇಳಿಕೆ ವರದಿ ಮಾಡಿವೆ.

ಆರ್‌ಬಿಐ ಪಾಲಿಮರ್ ಕರೆನ್ಸಿಯ ಸಾಧಕ-ಬಾಧಕಗಳು

ಸಾಂಪ್ರದಾಯಿಕ ನೋಟುಗಳಿಗಿಂತ ಎರಡು ರಿಂದ ಐದು ಪಟ್ಟು ಹೆಚ್ಚು ಬಾಳಿಕೆ ಪ್ರತಿ ವರ್ಷ ಸುಮಾರು ಎರಡು ಲಕ್ಷ ಹಾನಿಗೊಳಗಾದ ಬ್ಯಾಂಕ್‌ನೋಟುಗಳನ್ನು ಆರ್‌ಬಿಐ ಹಿಂಪಡೆಯುತ್ತದೆ ಪಾರದರ್ಶಕತೆ ಮತ್ತು ಹೊಲೊಗ್ರಾಮ್‌ಗಳಂತಹ ವೈಶಿಷ್ಟ್ಯಗಳು ನಕಲು ತಡೆಯುತ್ತವೆ. ಈ ಹಿಂದೆ ಭಾರತದ ಐದು ನಗರಗಳಲ್ಲಿ 10-ರೂಪಾಯಿ ಪಾಲಿಮರ್ ನೋಟುಗಳ ಪ್ರಯೋಗ ನಡೆದಿತ್ತು.

ಪ್ಲಾಸ್ಟಿಕ್ ಕರೆನ್ಸಿಗೆ ಆಸೀಸ್ ಮೂಲ

ಈ ನಿರ್ದಿಷ್ಟ ಕರೆನ್ಸಿ ತಂತ್ರಜ್ಞಾನವನ್ನು ಮೂಲತಃ ಆಸ್ಟ್ರೇಲಿಯಾದಲ್ಲಿ ಅಭಿವೃದ್ಧಿಪಡಿಸಲಾಗಿತ್ತು. ಇದರ ಆರಂಭಿಕ ಅಭಿವೃದ್ಧಿಯ ನಂತರ, ಯುಕೆ, ಕೆನಡಾ, ನ್ಯೂಜಿಲ್ಯಾಂಡ್ ಮತ್ತು ಸಿಂಗಾಪುರ ಸೇರಿದಂತೆ ಹಲವಾರು ಜಾಗತಿಕ ಆರ್ಥಿಕತೆಗಳು ಈ ವಸ್ತುವಿಗೆ ಸಂಪೂರ್ಣವಾಗಿ ಅಥವಾ ಭಾಗಶಃ ರೂಪಾಂತರಗೊಂಡಿವೆ. ಈ ವಸ್ತುವಿನ ಸಂಯೋಜನೆ, ಬ್ಯಾಂಕ್‌ನೋಟುಗಳನ್ನು ತೇವಾಂಶ ಮತ್ತು ಕೊಳಕಿನಿಂದ ಸಂಪೂರ್ಣವಾಗಿ ನಿರೋಧಕವಾಗಿಸುತ್ತದೆ. ಇದು ಕಾಗದದ ನೋಟುಗಳಲ್ಲಿ ಕಂಡುಬರುವ ಅಕಾಲಿಕ ಹಾನಿಯನ್ನು ತಡೆಯುತ್ತದೆ.

ನಿರ್ವಹಣೆಯ ಪ್ರಯೋಜನಗಳು

ಕೇಂದ್ರ ಬ್ಯಾಂಕಿನ ಪ್ರಾಥಮಿಕ ಕಾರ್ಯಾಚರಣೆಯ ಉದ್ದೇಶ, ದೇಶದ ವೈವಿಧ್ಯಮಯ ಹವಾಮಾನ ಪರಿಸ್ಥಿತಿಗಳು ಮತ್ತು ನಿರಂತರ ಬಳಕೆಯಿಂದಾಗಿ ಕಾಗದದ ಕರೆನ್ಸಿ ಬೇಗ ಹಾಳಾಗುವುದನ್ನು ತಡೆಯುವುದಾಗಿದೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಅಧಿಕೃತ ಮಾಹಿತಿಯ ಪ್ರಕಾರ, ಪ್ರತಿ ವರ್ಷ ಸುಮಾರು ಎರಡು ಲಕ್ಷ ಹಾನಿಗೊಳಗಾದ ಕರೆನ್ಸಿ ನೋಟುಗಳನ್ನು ವ್ಯವಸ್ಥಿತವಾಗಿ ಹಿಂಪಡೆದು ನಾಶಪಡಿಸಲಾಗುತ್ತಿದೆ.



ಭಾರತೀಯ ಪಾಲಿಮರ್ ನೋಟಿನ ಯೋಜನೆ- ಟೈಮ್‌ಲೈನ್

ಪ್ರಸ್ತುತ ಮೌಲ್ಯಮಾಪನ, ಪ್ಲಾಸ್ಟಿಕ್ ಕರೆನ್ಸಿಗೆ ಸಂಬಂಧಿಸಿದಂತೆ ಕಳೆದ ಎರಡು ದಶಕಗಳ ನಿಯತಕಾಲಿಕ ಸಾಂಸ್ಥಿಕ ಯೋಜನೆಗಳ ಮುಂದುವರಿಕೆಯಷ್ಟೇ. ಕೇಂದ್ರ ಬ್ಯಾಂಕ್ ಮೂಲತಃ 2007 ರಲ್ಲಿ ಪಾಲಿಮರ್ ನೋಟುಗಳನ್ನು ಔಪಚಾರಿಕವಾಗಿ ಪರಿಚಯಿಸಿತು. ಈ ಆರಂಭಿಕ ಯೋಜನೆ, ಜೈಪುರ, ಶಿಮ್ಲಾ, ಭುವನೇಶ್ವರ, ಮೈಸೂರು ಮತ್ತು ಕೊಚ್ಚಿ ಸೇರಿದಂತೆ ದೇಶದ ಐದು ಆಯ್ದ ನಗರಗಳಲ್ಲಿ 10-ರೂಪಾಯಿಯ ಪಾಲಿಮರ್ ನೋಟುಗಳನ್ನು ಬಳಸಿಕೊಂಡು ಪ್ರಾಯೋಗಿಕ ಯೋಜನೆಗಳನ್ನು ಕಾರ್ಯಗತಗೊಳಿಸುವ ಪ್ರಕಟಣೆಗೆ ಕಾರಣವಾಯಿತು. ಬಹು ಖರೀದಿ ಟೆಂಡರ್‌ಗಳು ಮತ್ತು ಕಾರ್ಯಸಾಧ್ಯತಾ ಅಧ್ಯಯನಗಳನ್ನು ಪ್ರಾರಂಭಿಸಲಾಗಿದ್ದರೂ, ರಾಷ್ಟ್ರವ್ಯಾಪಿ ಅನುಷ್ಠಾನ ಆರಂಭಿಕ ಯೋಜನೆಗಳ ಹಂತವನ್ನು ಮೀರಿ ಕಾರ್ಯರೂಪಕ್ಕೆ ಬರಲಿಲ್ಲ.

ಸರ್ಕಾರದ ಮುಂದಿನ ಕ್ರಮಗಳು



ಪರ್ಯಾಯ ಕರೆನ್ಸಿಗಾಗಿ ಸಾಂಸ್ಥಿಕ ಒತ್ತಡ 2016 ರಲ್ಲಿ ಆರಂಭವಾಯಿತು, ಆಗ ಪಾಲಿಮರ್ ನೋಟುಗಳ ಅಧಿಕೃತ ಖರೀದಿ ಪ್ರಕ್ರಿಯೆಗಳು ಪ್ರಾರಂಭವಾಗಿವೆ ಎಂದು ಕೇಂದ್ರ ಸರ್ಕಾರ ಸಂಸತ್ತಿಗೆ ಔಪಚಾರಿಕವಾಗಿ ತಿಳಿಸಿತು. ಈ ಶಾಸಕಾಂಗ ನವೀಕರಣದ ಹೊರತಾಗಿಯೂ, ರಾಷ್ಟ್ರವ್ಯಾಪಿ ವಿತರಣೆ ನಡೆಯಲೇ ಇಲ್ಲ. ನಂತರದ ವರ್ಷಗಳಲ್ಲಿ, ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ತನ್ನ ಅಲ್ಪಾವಧಿಯ ಪ್ರಯತ್ನಗಳನ್ನು ವಾರ್ನಿಷ್ ಮಾಡಿದ ಬ್ಯಾಂಕ್‌ನೋಟುಗಳ ಪ್ರಯೋಗದ ಕಡೆಗೆ ತಿರುಗಿಸಿತು. ಇವು ಸಾಂಪ್ರದಾಯಿಕ ಹತ್ತಿ ಆಧಾರಿತ ಕಾಗದದ ನೋಟುಗಳಾಗಿದ್ದು, ಸಂಪೂರ್ಣ ವಸ್ತುವಿನ ಬದಲಾವಣೆ ಇಲ್ಲದೆ, ಬಾಳ್ವಿಕೆ ವಿಸ್ತರಿಸಲು ರಕ್ಷಣಾತ್ಮಕ ಪಾಲಿಮರ್ ಪದರವನ್ನು ಲೇಪಿಸಲಾಗಿರುತ್ತದೆ.

ಕಿರುಸುದ್ದಿ

ಸ್ವದೇಶಿ ಎಐ ಸೈಬರ್ ಡಿಫೆನ್ಸ್ ಅಭಿವೃದ್ಧಿಗೆ ಡಿಆರ್‌ಡಿಒ ಒತ್ತು

ಹೊಸದಿಲ್ಲಿ: ತನ್ನದೇ ಆದ ಮಿಲಿಟರಿ ಕೃತಕ ಬುದ್ಧಿಮತ್ತೆ (ಎಐ)ಯನ್ನು ಉತ್ತೇಜಿಸುವ ನಿಟ್ಟಿನಲ್ಲಿ, ರಕ್ಷಣಾ ಸಂಶೋಧನೆ, ಅಭಿವೃದ್ಧಿ ಸಂಸ್ಥೆಯು(ಡಿಆರ್‌ಡಿಒ) ಸೈಬರ್ ಯುದ್ಧ, ದುರ್ಬಲತೆಯ ಆವಿಷ್ಕಾರ, ಮಾಲ್‌ವೇರ್ ವಿಶ್ಲೇಷಣೆ ಮತ್ತು ಬೆದರಿಕೆ ಗುಪ್ತಚರ ಮಾಹಿತಿಗಾಗಿ ವಿಶೇಷ ವಿನ್ಯಾಸಗೊಳಿಸಲಾದ ಎಐ ಸೊಲ್ಯುಶನ್ ಅಭಿವೃದ್ಧಿ ಕಾರ್ಯ ಆರಂಭಿಸಿದೆ. ಸೂಕ್ಷ್ಮ ರಾಷ್ಟ್ರೀಯ ಭದ್ರತಾ ಅನ್ವಯಿಕೆಗಳಿಗಾಗಿ ವಿದೇಶಿ ಕೃತಕ ಬುದ್ಧಿಮತ್ತೆ ಮಾದರಿಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಮೂಲಕ ಸಂಪೂರ್ಣವಾಗಿ ಸುರಕ್ಷಿತ ಮಿಲಿಟರಿ ಜಾಲಗಳೊಳಗೆ ಕಾರ್ಯನಿರ್ವಹಿಸಬಹುದಾದ ರಕ್ಷಣಾ ದರ್ಜೆಯ ಕೃತಕ ಬುದ್ಧಿಮತ್ತೆ ಸಾಮರ್ಥ್ಯವನ್ನು ಸೃಷ್ಟಿಸುವ ಗುರಿಯನ್ನು ಈ ಯೋಜನೆಯು ಹೊಂದಿದೆ. ಅಧಿಕಾರಿಗಳ ಪ್ರಕಾರ, ಈ ವ್ಯವಸ್ಥೆಯು ಶತ್ರುಗಳು ದುರ್ಬಲತೆಗಳನ್ನು ಬಳಸಿಕೊಳ್ಳುವ ಮೊದಲು ಅವುಗಳನ್ನು ಗುರುತಿಸಲು ಸಹಾಯ ಮಾಡುವ ಮೂಲಕ ರಕ್ಷಣಾ ಜಾಲಗಳ ಸೈಬರ್ ಸುರಕ್ಷತೆಯನ್ನು ಹೆಚ್ಚಿಸುತ್ತದೆ.

ವಿದೇಶದಿಂದ ಯುವಕರ ದಾರಿ ತಪ್ಪಿಸಲು ಆಗಲ್ಲ

ಹೊಸದಿಲ್ಲಿ: ಜಂತರ್ ಮಂತರ್‌ನಲ್ಲಿ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ನೇತೃತ್ವದಲ್ಲಿ ನಡೆದ ಪ್ರತಿಭಟನೆಗೆ ಪ್ರತಿಕ್ರಿಯೆ ನೀಡಿರುವ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ವಿದೇಶದಲ್ಲಿದ್ದು ಭಾರತದ ಯುವಕರನ್ನು ದಾರಿ ತಪ್ಪಿಸುವ ಪ್ರಯತ್ನಗಳು ಯಶಸ್ವಿಯಾಗುವುದಿಲ್ಲ ಎಂದು ಪರೋಕ್ಷವಾಗಿ ಸಿಜೆಪಿ ಸಂಸ್ಥಾಪಕ ಅಭಿಜಿತ್ ದಿಪ್ಕೆ ವಿರುದ್ಧ ವಾಗ್ದಾಳಿ ನಡೆಸಿದರು. ಕೆಲವರು ವಿದೇಶದಲ್ಲಿ ಕುಳಿತು ಭಾರತದ ಯುವಕರಿಗೆ ದಿಕ್ಕು ತೋರಿಸಬಹುದು ಎಂದು ಭಾವಿಸುತ್ತಿದ್ದಾರೆ. ಆದರೆ ಭಾರತದ ಯುವಕರು ಹಳ್ಳಿಗಳಲ್ಲಿ ರೈತರೊಂದಿಗೆ, ತರಬೇತಿ ಕೇಂದ್ರಗಳಲ್ಲಿ, ಕಾಲೇಜು ಕ್ಯಾಂಪಸ್‌ಗಳಲ್ಲಿ ಬದುಕುತ್ತಿದ್ದಾರೆ. ಕೆಲವರ ಕೈಗೊಂಬೆಯಾಗುವುದರಿಂದ ದೇಶದ ಯುವಕರು ಮುಂದೆ ಸಾಗುವುದಿಲ್ಲ' ಎಂದು ನವೀನ್ ಹೇಳಿದರು. ಅಮೆರಿಕದಿಂದ ಭಾರತಕ್ಕೆ ಆಗಮಿಸಿದ ಸಿಜೆಪಿ ಸಂಸ್ಥಾಪಕ ಅಭಿಜಿತ್ ದಿಪ್ಕೆ ಪ್ರತಿಭಟನೆಯಲ್ಲಿ ಭಾಗವಹಿಸಿ, ಸರ್ಕಾರ ಯುವಕರ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಆಗ್ರಹಿಸಿದರು. ಪ್ರತಿಭಟನೆಗೆ ವಿದ್ಯಾರ್ಥಿಗಳು, ಉದ್ಯೋಗಾಕಾಂಕ್ಷಿಗಳು ಹಾಗೂ ವಿವಿಧ ಸಾಮಾಜಿಕ ಕಾರ್ಯಕರ್ತರ ಬೆಂಬಲ ವ್ಯಕ್ತವಾಯಿತು.

ಸುಳ್ಳು ಪ್ರಚಾರದಿಂದ ಸತ್ಯವೆಂದು ಬದಲಾಗದು

ನ್ಯೂಯಾರ್ಕ್: ವಿಶ್ವಸಂಸ್ಥೆಯ ಮಹಾಸಭೆಯ ಚರ್ಚೆಯ ಸಂದರ್ಭದಲ್ಲಿ ಪಾಕಿಸ್ತಾನ ಜಮ್ಮು ಮತ್ತು ಕಾಶ್ಮೀರ ಕುರಿತು ಪ್ರಸ್ತಾಪಿಸಿದ್ದಕ್ಕೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಈ ವಿಷಯ ಸಂಪೂರ್ಣವಾಗಿ ಭಾರತದ ಆಂತರಿಕ ವಿಷಯ ಎಂದು ಹೇಳಿದೆ.

ಕಾಕ್ರೋಚ್ ಪಾರ್ಟಿ ವಿರುದ್ಧ ಎಫ್‌ಐಆರ್

ಹೊಸದಿಲ್ಲಿ: ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆಗೆ ಆಗ್ರಹಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಭಾರೀ ಪ್ರತಿಭಟನೆ ನಡೆಸಿದ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ವಿರುದ್ಧ ದೇಶವಿರೋಧಿ ಚಟುವಟಿಕೆಗಳಲ್ಲಿ ತೊಡಗಿದೆ ಎಂದು ಆರೋಪಿಸಿ ಎಫ್‌ಐಆರ್ ದಾಖಲಿಸಲಾಗಿದೆ.

ಪ್ರತಿಭಟನೆ ವೇಳೆ ದೇಶ ದ್ರೋಹಿ ಚಟುವಟಿಕೆ ಆರೋಪ

ಸಿಜೆಪಿ ಸಂಘಟನೆಯ ಸಂಸ್ಥಾಪಕ ಅಭಿಜಿತ್ ದೀಪ್ಕೆ ನೇತೃತ್ವದಲ್ಲಿ ಶನಿವಾರ ದೆಹಲಿಯಲ್ಲಿ ಪ್ರತಿಭಟನೆ ನಡೆಯಿತು. ಶಿಕ್ಷಣ ಕ್ಷೇತ್ರದಲ್ಲಿನ ಅಕ್ರಮಗಳು, ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣಗಳು ಹಾಗೂ ಮೌಲ್ಯಮಾಪನ ದೋಷಗಳ ಬಗ್ಗೆ ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು. ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕು ಎಂಬುದು ಪ್ರತಿಭಟನೆಯ ಪ್ರಮುಖ ಬೇಡಿಕೆಯಾಗಿತ್ತು. ಪ್ರತಿಭಟನೆಯ ನಂತರ ಸಂಘಟನೆಯ ವಿರುದ್ಧ ದೇಶವಿರೋಧಿ ಚಟುವಟಿಕೆಗಳನ್ನು ಉತ್ತೇಜಿಸುವುದು, ಸಾರ್ವಜನಿಕ ಶಾಂತಿ ಕದಡುವ ಪ್ರಯತ್ನ ಹಾಗೂ ಕೆಲವು ಆಕ್ಷೇಪಾರ್ಹ ಹೇಳಿಕೆಗಳಿಗೆ ಸಂಬಂಧಿಸಿದಂತೆ ದೂರು ದಾಖಲಿಸಲಾಗಿದ್ದು, ಅದರ ಆಧಾರದ ಮೇಲೆ ಎಫ್‌ಐಆರ್ ದಾಖಲಾಗಿದೆ ಎಂದು ವರದಿಗಳು ತಿಳಿಸಿವೆ. ಪ್ರಕರಣದ ಕುರಿತು ಪೊಲೀಸರು ತನಿಖೆ ಆರಂಭಿಸಿದ್ದಾರೆ. ಇತ್ತ, ತಮ್ಮ ಸಂಘಟನೆ ಸಂಪೂರ್ಣವಾಗಿ ಶಾಂತಿಯುತ ಮತ್ತು ಸಂವಿಧಾನಬದ್ಧ ಹೋರಾಟ ನಡೆಸುತ್ತಿದೆ ಎಂದು ಅಭಿಜಿತ್ ದೀಪ್ಕೆ ಸ್ಪಷ್ಟಪಡಿಸಿದ್ದಾರೆ. ಯುವಕರ ಸಮಸ್ಯೆಗಳು, ಉದ್ಯೋಗ ಕೊರತೆ ಹಾಗೂ ಶಿಕ್ಷಣ ವ್ಯವಸ್ಥೆಯ ವೈಫಲ್ಯಗಳ ವಿರುದ್ಧ ಧ್ವನಿ ಎತ್ತುವುದು ಮಾತ್ರ ತಮ್ಮ ಉದ್ದೇಶ ಎಂದು ಅವರು ಹೇಳಿದ್ದಾರೆ.

ರೈಲು ಮೂಲಸೌಕರ್ಯ: 1 ಲಕ್ಷ ಕೋಟಿ ರೂ. ಅಸ್ತು

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ 1 ಲಕ್ಷ ಕೋಟಿ. ರೂ.ಗೂ ಹೆಚ್ಚು ಮೌಲ್ಯದ ಹಲವಾರು ರೈಲ್ವೆ ಮೂಲಸೌಕರ್ಯ ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳು ಉತ್ತರ ಮತ್ತು ದಕ್ಷಿಣ ಬಂಗಾಳದಾದ್ಯಂತ ಉಪನಗರ ಮತ್ತು ಮುಖ್ಯ ರೈಲು ಸಂಪರ್ಕವನ್ನು ಗಮನಾರ್ಹವಾಗಿ ಹೆಚ್ಚಿಸುವ ನಿರೀಕ್ಷೆಯಿದ್ದು, ಬಾಕಿ ಇರುವ ಹಲವಾರು ಹಳಿ-ಸಂಬಂಧಿತ ಕಾಮಗಾರಿಗಳನ್ನು ತ್ವರಿತಗೊಳಿಸುತ್ತವೆ.

ಅಂತೆಯೇ ಕೇಂದ್ರ ರೈಲ್ವೆ ಸಚಿವರಾದ ಅಶ್ವಿನಿ ವೈಷ್ಣವ್ ಅವರು ಕೋಲ್ಕತ್ತಾ ಮೆಟ್ರೋದಲ್ಲಿ ಜೈ ಹಿಂದ್ ನಿಲ್ದಾಣದಿಂದ ನೋಪಾರಾ ನಿಲ್ದಾಣದವರೆಗೆ ಪ್ರಯಾಣಿಸಿದ್ದಾರೆ. ಸಹ ಪ್ರಯಾಣಿಕರೊಂದಿಗೆ ಅವರ ಪ್ರಯಾಣದ ಅನುಭವವನ್ನು ಅರ್ಥಮಾಡಿಕೊಳ್ಳಲು ಮತ್ತು ಮೆಟ್ರೋ ಸೇವೆಗಳ ಬಗ್ಗೆ ಪ್ರತಿಕ್ರಿಯೆ ಸಂಗ್ರಹಿಸಲು ಸಂವಾದ ನಡೆಸಿದ್ದಾರೆ. ಮುಂದಿನ ನಾಲ್ಕು-ಐದು ವರ್ಷಗಳಲ್ಲಿ ಸುಮಾರು 60 ಹೊಸ ತಲೆಮಾರಿನ ಮೆಟ್ರೋ ರೈಲುಗಳನ್ನು ಕೋಲ್ಕತ್ತಾ ಮೆಟ್ರೋ ಜಾಲಕ್ಕೆ ಸೇರಿಸಲಾಗುವುದು ಎಂದು ಭೇಟಿ ವೇಳೆ ಅಶ್ವಿನಿ ವೈಷ್ಣವ್ ಘೋಷಿಸಿದರು.

ಹೊಸ ರೈಲುಗಳು ಮೆಟ್ರೋ ಸೇವೆಗಳನ್ನು ಆಧುನೀಕರಿಸುತ್ತವೆ ಮತ್ತು ನಗರದಲ್ಲಿ ನಗರ ಸಂಚಾರವನ್ನು ಮತ್ತಷ್ಟು ಬಲಪಡಿಸುತ್ತವೆ ಎಂದು ಅವರು ಹೇಳಿದರು. ರಾಜ್ಯದಲ್ಲಿ ನಡೆಯುತ್ತಿರುವ ಎಲ್ಲಾ ರೈಲ್ವೆ ಯೋಜನೆಗಳ ತ್ವರಿತ ಅನುಷ್ಠಾನ ಮತ್ತು ಪೂರ್ಣಗೊಳಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಜಂಟಿಯಾಗಿ ಪರಿಶೀಲಿಸುವಂತೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರನ್ನು ವಿನಂತಿಸಿರುವುದಾಗಿ ರೈಲ್ವೆ ಸಚಿವರು ಹೇಳಿದರು.

ಲಂಡನ್ ಕಾಲೇಜಲ್ಲಿ ಸಿಜೆಐ ಉಪನ್ಯಾಸಕ್ಕೆ ಅಡ್ಡಿ, ಖಂಡನೆ

ಹೊಸದಿಲ್ಲಿ: ಲಂಡನ್‌ನ ಬಿರ್ಕ್‌ಬೆಕ್ ಕಾಲೇಜಿನಲ್ಲಿ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ನೀಡಿದ ಉಪನ್ಯಾಸಕ್ಕೆ ಅಡ್ಡಿಪಡಿಸಿದ ಘಟನೆಯನ್ನು ಲಂಡನ್‌ನ ಭಾರತೀಯ ಹೈಕಮಿಷನ್ ಖಂಡಿಸಿದೆ.

ಭಾರತೀಯ ದೂತಾವಾಸ ಕಚೇರಿ ಈ ಘಟನೆಯನ್ನು ಪ್ರೇಕ್ಷಕರ ಸ್ವೀಕಾರಾರ್ಹವಲ್ಲದ ವರ್ತನೆ ಎಂದು ಉಲ್ಲೇಖಿಸಿದ್ದು, ಭಿನ್ನಾಭಿಪ್ರಾಯಗಳನ್ನು ಸೌಜನ್ಯಯುತ ಮತ್ತು ಗೌರವಯುತವಾಗಿ ವ್ಯಕ್ತಪಡಿಸಬೇಕು ಎಂದು ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ಜೂ.4ರಂದು ಕೃತಕ ಬುದ್ಧಿಮತ್ತೆ ಮತ್ತು ಅಂತಾರಾಷ್ಟ್ರೀಯ ಕಾನೂನು ವಿಷಯದ ಕುರಿತು ಉಪನ್ಯಾಸ ನೀಡಿದ್ದರು. ಪ್ರಶ್ನೋತ್ತರ ಅವಧಿಯಲ್ಲಿ ಕೆಲವರು ಭಾರತದಲ್ಲಿ ಭಿನ್ನಾಭಿಪ್ರಾಯಗಳ ದಮನಕ್ಕೆ ಸಂಬಂಧಿಸಿದ ಆರೋಪಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿದರು. ಅಲ್ಲದೆ, ಅವರ ಇತ್ತೀಚಿನ ಜಿರಳೆ ಕುರಿತ ಹೇಳಿಕೆಯ ಬಗ್ಗೆಯೂ ಪ್ರಶ್ನಿಸಲು ಪ್ರಯತ್ನಿಸಿದರು. ಆಯೋಜಕರು ಈ ಪ್ರಶ್ನೆಗಳನ್ನು ವಿಷಯದ ವ್ಯಾಪ್ತಿಗೆ ಸೇರುವುದಿಲ್ಲವೆಂದು ಹೇಳಿ ಮಧ್ಯದಲ್ಲೇ ನಿಲ್ಲಿಸಿದರು. ಕಾರ್ಯಕ್ರಮದ ವಿಷಯ ಕೃತಕ ಬುದ್ಧಿಮತ್ತೆ ಮತ್ತು ಅಂತಾರಾಷ್ಟ್ರೀಯ ಕಾನೂನಿಗೆ ಸೀಮಿತವಾಗಿದೆ ಎಂದು ಅವರು ತಿಳಿಸಿದರು. ಘಟನೆಯ ವಿಡಿಯೊಗಳು ಬಳಿಕ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿದ್ದವು.

ತಮ್ಮ ಉಪನ್ಯಾಸದಲ್ಲಿ ಸೂರ್ಯ ಕಾಂತ್ ಕೃತಕ ಬುದ್ಧಿಮತ್ತೆಯನ್ನು ಆಡಳಿತ, ವಾಣಿಜ್ಯ, ಯುದ್ಧ, ಸಂವಹನ, ಸಾರ್ವಜನಿಕ ಆಡಳಿತ ಹಾಗೂ ನ್ಯಾಯಾಂಗ ಮತ್ತು ಸಾರ್ವಭೌಮ ಅಧಿಕಾರಗಳ ಮೇಲೆ ಪರಿಣಾಮ ಬೀರುವ ವಾಸ್ತವಿಕ ಶಕ್ತಿ ಎಂದು ವಿವರಿಸಿದರು.

ಕೇರಳದಲ್ಲಿ ಮಳೆಗೆ 7 ಸಾವು: 5 ಜಿಲ್ಲೆಗಳಲ್ಲಿ ರೆಡ್ ಅಲರ್ಟ್

ತಿರುವನಂತಪುರಂ: ಕೇರಳದೆಲ್ಲೆಡೆ ಭಾರೀ ಮಳೆ ಸುರಿಯುತ್ತಿದ್ದು, ಮಳೆ ಸಂಬಂಧಿತ ದುರ್ಘಟನೆಗಳಲ್ಲಿ 7 ಮಂದಿ ಮೃತಪಟ್ಟಿದ್ದಾರೆ. ರಸ್ತೆ ಅಪಘಾತ, ಮುಳುಗುವುದು, ವಿದ್ಯುತ್ ಶಾಕ್, ಮರ ಬೀಳುವುದು ಇತ್ಯಾದಿ ಮಳೆ ಸಂಬಂಧಿತ ದುರ್ಘಟನೆಗಳಲ್ಲಿ ಜನರು ಪ್ರಾಣ ಕಳೆದುಕೊಂಡಿದ್ದಾರೆ.



ಐದು ಜಿಲ್ಲೆಗಳಲ್ಲಿ ರೆಡ್ ಅಲರ್ಟ್: ಮಲಪ್ಪುರಂ, ಕೋಝಿಕ್ಕೋಡ್, ವಯನಾಡ್, ಕಣ್ಣೂರ್ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇರುವುದರಿಂದ ಭಾರತೀಯ ಹವಾಮಾನ ಇಲಾಖೆ(ಐಎಂಡಿ) ರೆಡ್ ಅಲರ್ಟ್ ಘೋಷಿಸಿದೆ. ಪಟ್ಟಣಂತಿಟ್ಟ, ಕೊಟ್ಟಾಯಂ, ಎರ್ನಾಕುಲಂ, ಇಡುಕ್ಕಿ, ತ್ರಿಶೂರ್ ಮತ್ತು ಪಾಲಕ್ಕಾಡ್ ಜಿಲ್ಲೆಗಳಲ್ಲಿ ಐಎಂಡಿ ಆರೆಂಜ್ ಅಲರ್ಟ್ ಘೋಷಿಸಿದೆ. ಕಾಸರಗೋಡು, ಕಣ್ಣೂರು, ವಯನಾಡ್, ಕೋಝಿಕ್ಕೋಡ್ ಜಿಲ್ಲೆಗಳಲ್ಲಿ ಶಾಲಾ-ಕಾಲೇಜುಗಳಿಗೆ ಶನಿವಾರ ರಜೆ ಘೋಷಿಸಲಾಗಿತ್ತು.


ದೋವಲ್-ನೇಪಾಳ ವಿದೇಶಾಂಗ ಸಚಿವರ ಮಧ್ಯೆ ಮಾತುಕತೆ

ಭಾರತ-ನೇಪಾಳ ಸಂಬಂಧ ವೃದ್ಧಿಗೆ ಆದ್ಯತೆ

ಹೊಸದಿಲ್ಲಿ: ಏಷ್ಯಾ ಉಪಖಂಡದಲ್ಲಿ ಹೊಸ ರಾಜತಾಂತ್ರಿಕ ಸಮೀಕರಣಕ್ಕೆ ಸಂಕೇತ ನೀಡುವ ಮಹತ್ವದ ಬೆಳವಣಿಗೆಯೊಂದರಲ್ಲಿ, ಭಾರತದ ರಾಷ್ಟ್ರೀಯ ಭದ್ರತಾ ಸಲಹೆಗಾರ (ಎನ್‌ಎಸ್‌ಎ) ಅಜಿತ್ ದೋವಲ್ ಅವರು ದಿಲ್ಲಿಯಲ್ಲಿ ನೇಪಾಳದ ನೂತನ ವಿದೇಶಾಂಗ ಸಚಿವ ಶಿಶಿರ್ ಖನಾಲ್ ಅವರೊಂದಿಗೆ ಶನಿವಾರ ಉನ್ನತ ಮಟ್ಟದ ಮಾತುಕತೆ ನಡೆಸಿದರು.

ಭಾರತ-ನೇಪಾಳ ದ್ವಿಪಕ್ಷೀಯ ಸಂಬಂಧದಲ್ಲಿನ ಧನಾತ್ಮಕ ಬೆಳವಣಿಗೆ ಸೂಚಿಸುವ ಮಹತ್ವದ ಭೇಟಿ ಇದಾಗಿದ್ದು, 2026ರ ಮಾರ್ಚ್‌ನಲ್ಲಿ ನೇಪಾಳದಲ್ಲಿ ಅಧಿಕಾರಕ್ಕೆ ಬಂದ ಪ್ರಧಾನಿ ಬಾಲೇನ್ ಶಾ ನೇತೃತ್ವದ ಹೊಸ ಸರ್ಕಾರದ ಪರ ಸಚಿವರೊಬ್ಬರು ಭಾರತಕ್ಕೆ ಕೈಗೊಂಡ ಮೊದಲ ಅಧಿಕೃತ ದ್ವಿಪಕ್ಷೀಯ ಭೇಟಿಯಾಗಿದೆ. ಉನ್ನತ ಮಟ್ಟದ ಸರ್ಕಾರಿ ಮೂಲಗಳ ಪ್ರಕಾರ, ರಾಷ್ಟ್ರೀಯ ಭದ್ರತಾ ಸಲಹೆಗಾರರ ಮಟ್ಟದಲ್ಲೇ ನಡೆಸಿದ ಈ ಆರಂಭಿಕ ಮಾತುಕತೆಯು ಸ್ಥಿರ, ಸಮೃದ್ಧ ಹಾಗೂ ಪರಸ್ಪರ ಪ್ರಾಚೀನ ಸಂಬಂಧ ಹೊಂದಿರುವ ನೆರೆಹೊರೆಯ ರಾಷ್ಟ್ರಗಳೊಂದಿಗೆ ಸಂಬಂಧಗಳನ್ನು ಬಲಪಡಿಸುವುದಕ್ಕೆ ಭಾರತ ನೀಡುತ್ತಿರುವ ಆದ್ಯತೆಯನ್ನು ಪ್ರತಿಬಿಂಬಿಸುತ್ತದೆ.

ನೆರೆಹೊರೆಯೇ ಮೊದಲ ಆದ್ಯತೆ: ಈ ಮಾರುಕತೆಯಿಂದ ಭದ್ರತಾ ಸಹಕಾರವನ್ನು ಮತ್ತಷ್ಟು ವಿಸ್ತರಿಸುವುದು, ಗಡಿ ದಾಟುವ ಮೂಲಸೌಕರ್ಯ ಯೋಜನೆಗಳಿಗೆ ವೇಗ



ನೀಡುವುದು ಹಾಗೂ ಆರ್ಥಿಕ ಏಕೀಕರಣವನ್ನು ಬಲಪಡಿಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಗಿ ಪರಿಗಣಿಸಲಾಗಿದೆ. ಇದು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೆರೆಹೊರೆಯೇ ಮೊದಲ ಆದ್ಯತೆ ಎಂಬ ಮೂಲಭೂತ ನೀತಿಯ ಭಾಗವಾಗಿದ್ದು, ಭಾರತ-ನೇಪಾಳ ಸಂಬಂಧವನ್ನು ಇನ್ನಷ್ಟು ಗಟ್ಟಿಗೊಳಿಸುವ ಉದ್ದೇಶ ಹೊಂದಿದೆ.

ಭದ್ರತೆ ಮತ್ತು ಸಂಪರ್ಕ: ಉಭಯ ರಾಷ್ಟ್ರಗಳ ನಡುವೆ ಭದ್ರತಾ ಸಹಕಾರ ಇನ್ನಷ್ಟು ಹೆಚ್ಚಿಸಲು, ಗಡಿ ನಿರ್ವಹಣೆ ಮತ್ತು ಗುಪ್ತಚರ ಮಾಹಿತಿ ಹಂಚಿಕೆಯ ಕುರಿತಾಗಿ ನಿರಂತರ ಸಂವಾದ ಮುಂದುವರಿಸಲು ನೀಡುವ ಸಹಯೋಗವನ್ನು ಅಜಿತ್ ದೋವಲ್, ಶಿಶಿರ್ ಖನಾಲ್ ಪುನರುಚ್ಚರಿಸಿದ್ದಾರೆ. ಈ ಮೂಲಕ ಭಾರತ-ನೇಪಾಳ ತಮ್ಮ ಗಡಿ ಭದ್ರತೆ ಮತ್ತು ಪ್ರಾದೇಶಿಕ ಸ್ಥಿರತೆಯನ್ನು ಮತ್ತಷ್ಟು ಬಲಪಡಿಸುವ ಉದ್ದೇಶ ವ್ಯಕ್ತಪಡಿಸಿವೆ.

ಜೂ.8ರ ಸಭೆಗೆ ಸಿಪಿಎಂ, ಜೆಎಂಎಂ, ಡಿಎಂಕೆ ಗೈರು ಸಾಧ್ಯತೆ

ಇಂಡಿ ಮೈತ್ರಿಕೂಟದಲ್ಲಿ ಬಿರುಕು

ಹೊಸದಿಲ್ಲಿ: ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ವಿರುದ್ಧ ರಚನೆಯಾಗಿದ್ದ ಇಂಡಿ ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯಗಳು ಮತ್ತಷ್ಟು ತೀವ್ರಗೊಂಡಿರುವ ಲಕ್ಷಣಗಳು ಗೋಚರಿಸಿವೆ. ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಜೂ.8ರಂದು ನಡೆಯಲಿರುವ ಮೈತ್ರಿಕೂಟದ ಸಭೆಯನ್ನು ಕೆಲವು ಪ್ರಮುಖ ಮಿತ್ರಪಕ್ಷಗಳು ಬಹಿಷ್ಕರಿಸುವ ಸಾಧ್ಯತೆ ಎದುರಾಗಿದೆ.

ಮೂಲಗಳ ಪ್ರಕಾರ, ಭಾರತೀಯ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ), ಜಾರ್ಖಂಡ್ ಮುಕ್ತಿ ಮೋರ್ಚಾ ಹಾಗೂ ದ್ರಾವಿಡ ಮುನ್ನೇತ್ರ ಕಳಗಂ ಪಕ್ಷಗಳು ಸಭೆಯಿಂದ ಹಿಂದೆ ಸರಿಯುವ ಸುಳಿವು ನೀಡಿವೆ. ಇದರ ಪರಿಣಾಮವಾಗಿ ಇಂಡಿ ಮೈತ್ರಿಕೂಟದೊಳಗಿನ ಭಿನ್ನಮತಗಳು ಬಹಿರಂಗವಾಗಿವೆ. ವಿಶೇಷವಾಗಿ ತ.ನಾಡಿನ ರಾಜಕೀಯ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಾಗೂ ಡಿಎಂಕೆ ನಡುವಿನ ಸಂಬಂಧ ಹದಗೆಟ್ಟಿದೆ ಎನ್ನಲಾಗಿದೆ. ಡಿಎಂಕೆ ನಾಯಕರು ಇಂಡಿ ಮೈತ್ರಿಕೂಟದ ಚಟುವಟಿಕೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದು, ಜೂ. 8ರ ಸಭೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಕಡಿಮೆ ಎಂದು ತಿಳಿದುಬಂದಿದೆ.

ಇನ್ನೊಂದೆಡೆ, ಕೇರಳದಲ್ಲಿ ಕಾಂಗ್ರೆಸ್ ಹಾಗೂ ಸಿಪಿಎಂ ನಡುವಿನ ರಾಜಕೀಯ ಸಂಘರ್ಷ ತೀವ್ರಗೊಂಡಿದೆ. ಇತ್ತೀಚಿನ ಕೆಲವು ಹೇಳಿಕೆಗಳು ಮತ್ತು ಆರೋಪ-ಪ್ರತ್ಯಾರೋಪಗಳಿಂದಾಗಿ

ಮೈತ್ರಿಕೂಟದಲ್ಲಿ ಅಸಮಾಧಾನಕ್ಕೆ ಕಾರಣವೇನು?

- ಕಾಂಗ್ರೆಸ್-ಡಿಎಂಕೆ ನಡುವಿನ ಸಂಬಂಧದಲ್ಲಿ ಬಿರುಕು
- ಕೇರಳದಲ್ಲಿ ಕಾಂಗ್ರೆಸ್-ಸಿಪಿಎಂ ಸಂಘರ್ಷ
- ಮೈತ್ರಿಕೂಟದ ಕಾರ್ಯವೈಖರಿ ಕುರಿತು ಮಿತ್ರಪಕ್ಷಗಳ ಅಸಮಾಧಾನ
- ನಾಯಕತ್ವ ಮತ್ತು ಭವಿಷ್ಯದ ರಾಜಕೀಯ ತಂತ್ರಗಳ ಕುರಿತ ಭಿನ್ನಾಭಿಪ್ರಾಯ
- ಜೂ.8ರ ಸಭೆಗೆ ಪ್ರಮುಖ ಪಕ್ಷಗಳ ಗೈರುಹಾಜರಿ ಸಾಧ್ಯತೆ

ಎರಡೂ ಪಕ್ಷಗಳ ನಡುವೆ ಉದ್ವಿಗ್ನತೆ ಹೆಚ್ಚಿದ್ದು, ಅದರ ಪರಿಣಾಮ ಮೈತ್ರಿಕೂಟದ ಮಟ್ಟದಲ್ಲಿಯೂ ಕಾಣಿಸಿಕೊಳ್ಳುತ್ತಿದೆ.

ಜಾರ್ಖಂಡ್ ಮುಕ್ತಿ ಮೋರ್ಚಾ ಕೂಡ ಸಭೆಯಲ್ಲಿ ಭಾಗವಹಿಸುವ ಬಗ್ಗೆ ಅಂತಿಮ ನಿರ್ಧಾರ ಕೈಗೊಂಡಿಲ್ಲ ಎಂದು ಮೂಲಗಳು ತಿಳಿಸಿವೆ. ಇದರಿಂದ ಜೂನ್ 8ರ ಸಭೆಯ ಯಶಸ್ಸಿನ ಬಗ್ಗೆ ಅನಿಶ್ಚಿತತೆ ಉಂಟಾಗಿದೆ. ಜಾರ್ಖಂಡ್‌ನಲ್ಲಿ ಜೆಎಂಎಂ ಗಮನಕ್ಕೆ ತಾರದೇ ಕಾಂಗ್ರೆಸ್ ರಾಜ್ಯಸಭೆ ಚುನಾವಣೆಗೆ ಅಭ್ಯರ್ಥಿ ಹಾಕಿದ್ದು, ಇದು ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ಗೋವು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಲು ಮುಸ್ಲಿಮರ ಒತ್ತಾಯ

ಹಾನಗಲ್ಲ: ಬಹುಸಂಖ್ಯಾತ ಹಿಂದೂಗಳ ಧಾರ್ಮಿಕ ಭಾವನೆಗಳನ್ನು ಗೌರವಿಸುವ ನಿಟ್ಟಿನಲ್ಲಿ ಗೋವನ್ನು ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಬೇಕು. ಇದಕ್ಕೆ ರಾಜ್ಯ ಸರ್ಕಾರ ಕೇಂದ್ರಕ್ಕೆ ಶಿಫಾರಸು ಮಾಡಬೇಕು ಎಂದು ಒತ್ತಾಯಿಸಿ ಶನಿವಾರ ಹಾನಗಲ್ಲ ಅಂಜುಮನ್ ಕಮಿಟಿ ನೇತೃತ್ವದಲ್ಲಿ ತಾಲೂಕಿನ ವಿವಿಧ ಅಂಜುಮನ ಕಮಿಟಿಗಳಿಂದ ಮೌನ ಮೆರವಣಿಗೆ ನಡೆಯಿತು.



ಇಲ್ಲಿನ ಕಾಶ್ಮೀರಿ ದರ್ಗಾ ಆವರಣದಿಂದ ಆರಂಭಗೊಂಡ ಮೌನ ಮೆರವಣಿಗೆ ಮುಖ್ಯ ರಸ್ತೆಯ ಮೂಲಕ ಗಾಂಧಿ ವೃತ್ತ ತಲುಪಿತು. ತಾಲೂಕಿನ ವಿವಿಧ ಗ್ರಾಮಗಳ ಮುಸ್ಲಿಂ ಸಮುದಾಯದ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಗಾಂಧಿ ವೃತ್ತದಲ್ಲಿ ಮಾತನಾಡಿದ ಅಂಜುಮನ್ ಹಾನಗಲ್ಲ ಕಮಿಟಿ ಅಧ್ಯಕ್ಷ ನಜೀರ್‌ಅಹ್ಮದ್ ಸವಣೂರ, ಗೋಹತ್ಯೆ ನೆಪದಲ್ಲಿ ಅಮಾಯಕರ ಮೇಲೆ ನಡೆಯುತ್ತಿರುವ ಕಾನೂನು ಬಾಹಿರ ಹಲ್ಲೆ, ಗುಂಪು ಹತ್ಯೆಗಳು ರಾಜಕೀಯ ಶೋಷಣೆ, ಸಾಮಾಜಿಕ ದೌರ್ಜನ್ಯ ನಿಲ್ಲಬೇಕು ಎಂದರು.

ಮುಸ್ಲಿಂ ಸಮುದಾಯದ ಧರ್ಮ ಗುರುಗಳ ಆದೇಶ ಮೇರೆಗೆ ರಾಷ್ಟ್ರವ್ಯಾಪ್ತಿ ಅಭಿಯಾನ ನಡೆಯುತ್ತಿದೆ. ತಾಲೂಕಿನ ಸಮಸ್ತ ಮುಸ್ಲಿಂ ಭಾಂಧವರ ಪರವಾಗಿ ನಾವು ಗೋವು ರಾಷ್ಟ್ರೀಯ ಪ್ರಾಣಿ ಎಂದು ಘೋಷಣೆಗೆ ಒತ್ತಾಯಿಸುತ್ತಿದ್ದೇವೆ. ತಾಲೂಕಿನಲ್ಲಿ ಗೋ ಹತ್ಯೆ ನಿಷೇಧಕ್ಕಾಗಿ ಎಲ್ಲ ಮಂಜುಮನ್ ಕಮಿಟಿಗಳನ್ನು ಒಳಗೊಂಡು ಒಕ್ಕೂಟ ರಚನೆಗೊಳ್ಳುತ್ತಿದೆ. ಗೋ ರಕ್ಷಣೆ ಇನ್ನು ಮುಂದೆ ನಮ್ಮ ಹೊಣೆ ಎಂದರು.

ಅಕ್ಕಿಆಲೂರ ಅಂಜುಮನ ಕಮಿಟಿ ಕಾರ್ಯದರ್ಶಿ ಯಾಸೀರ್‌ಅರಾಫತ್ ಮಕಂದಾರ್ ಮಾತನಾಡಿ, ಗೋವು ಹೆಸರಿನಲ್ಲಿ ಚುನಾವಣೆ ಎದುರಿಸಿ ಅಧಿಕಾರಕ್ಕೆ ಬಂದವರಿಂದ ಇಂದು ಗೋವಿಗೆ ರಾಷ್ಟ್ರೀಯ ಪ್ರಾಣಿ ಸ್ಥಾನ ನೀಡಿ ರಕ್ಷಿಸುವ ಬದ್ಧತೆ ಇಲ್ಲ. ಇದಕ್ಕಾಗಿ ಮುಸ್ಲಿಮರೇ ಬರಬೇಕಾಗಿದೆ. ಈಗ ಮುಸ್ಲಿಂ ಸಮುದಾಯ ಎಚ್ಚೆತ್ತುಕೊಂಡಿದೆ. ಗೋವು ಹೆಸರಿನಲ್ಲಿ ರಾಜಕಾರಣ ಮಾಡುವವರಿಂದ ಗೋವಿಗೆ ನ್ಯಾಯ ಕೊಡಿಸಲು ಆಗುತ್ತಿಲ್ಲ. ಇನ್ಮುಂದೆ ಗೋವು ರಕ್ಷಣೆ ಮುಸ್ಲಿಮರ ಜವಾಬ್ದಾರಿ ಎಂದರು. ಸ್ಥಳಕ್ಕೆ ಆಗಮಿಸಿದ ತಹಶೀಲ್ದಾರ್ ವಿಠ್ಠಲ ಚೌಗಲಾ ಅವರಿಗೆ ಮನವಿ ಸಲ್ಲಿಸಲಾಯಿತು.

ನ್ಯಾಯವಾದಿ ಎಂ.ಎನ್.ನೆಗಳೂರ, ವಿವಿಧ ಅಂಜುಮನ್ ಕಮಿಟಿಯ ಮೆಹಬೂಬಲಿ ಬ್ಯಾಡಗಿ, ಶಫಿವುಲ್ಲಾ ಹಂಚಿನಮನಿ, ಮಹ್ಮದ್ ಇಕ್ಬಾಲ್ ಮುಲ್ಲಾ, ಭಷೀರ್ ನಾಲಬಂದ್, ಮರ್ದಾನ್‌ಅಲಿ ಅರಿಶಿಣಗುಪ್ಪಿ, ಗಫಾರಸಾಬ್ ಮಾಳಾಪೂರ, ನಿಸಾರ್ ಅಹ್ಮದ್ ಗೌಂಡಿ, ನಿಸಾರ್‌ಅಹ್ಮದ್ ಖಾಜಿ, ಅಬ್ದುಲ್‌ರೆಹಮಾನ್ ನರೇಗಲ್, ಅರ್ಪೋಜ್‌ಅಹ್ಮದ್ ರಾಣೆಬೆನ್ನೂರ, ಖುರ್ಷಿದ್ ಹುಲ್ಲತ್ತಿ, ನಿಸಾರ್‌ಅಹ್ಮದ್ ಪಾನವಾಲೆ, ನವೀದ್ ಯಾವಗಲ್, ಇರ್ಫಾನ್ ಸೌದಾಗರ್, ಮುನೀರ್ ಅಹ್ಮದ್ ಪಾಳಾ,ಹುಸೇನ್‌ಮಿಯಾ ಸುರಳೇಶ್ವರ, ಸಲೀಂ ಸಮನಹಳ್ಳಿ ಮತ್ತಿತರರು ಇದ್ದರು.

ಪಕ್ಷದ ನಿರ್ಣಯಕ್ಕೆ ಬದ್ಧ: ಶಾಸಕ ಶ್ರೀನಿವಾಸ ಮಾನೆ

ಹಾನಗಲ್ಲ: ಜೀವನದಲ್ಲಿ ಎಂದೂ ಸಹ ಜಾತಿ ರಾಜಕಾರಣ ಮಾಡಿಲ್ಲ. ಜಾತಿ ಕೋಟಾದಡಿ ಸಚಿವ ಸ್ಥಾನವನ್ನೂ ಕೇಳುತ್ತಿಲ್ಲ. ಸಚಿವ ಸ್ಥಾನ ನೀಡುವಾಗ ವಯಸ್ಸು, ಆರೋಗ್ಯ ಎಂಬೆಲ್ಲ ಸಂಗತಿಗಳು ಅನ್ವಯಿಸುವುದೇ ಇಲ್ಲ. ವೈಯಕ್ತಿಕ ಟೀಕೆ, ಟಿಪ್ಪಣಿ, ಅಪಪ್ರಚಾರ ಮಾಡಿ ಸಚಿವ ಸ್ಥಾನ ಗಿಟ್ಟಿಸುವ ಜಾಯಮಾನ ನನ್ನದಲ್ಲ. ನಾನೊಬ್ಬ ಕಾಂಗ್ರೆಸ್ ಪಕ್ಷದ ಶಿಸ್ತಿನ ಸಿಪಾಯಿ. ಪಕ್ಷ ಏನೇ ನಿರ್ಣಯ ಕೈಗೊಂಡರೂ ಬದ್ಧ ಎಂದು ಶಾಸಕ ಶ್ರೀನಿವಾಸ ಮಾನೆ ಸ್ಪಷ್ಟಪಡಿಸಿದರು.



ಶನಿವಾರ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು. ಬ್ಯಾಡಗಿಯ ಶಾಸಕರಾದ ಬಸವರಾಜ ಶಿವಣ್ಣನವರ ಅವರಿಗೆ ಸಚಿವ ಸ್ಥಾನ ತಪ್ಪಿಸಲು ನಾನು ಪ್ರಯತ್ನಿಸಿಲ್ಲ. ಯಾರ ಬಳಿಯೂ ಅವರ ಬಗ್ಗೆ ಅಪಪ್ರಚಾರ ಮಾಡಿಲ್ಲ. ಅಂಥ ಮನಸ್ಥಿತಿಯವನೂ ನಾನಲ್ಲ. ಕಳೆದ 17 ವರ್ಷಗಳಿಂದ ಸದನದಲ್ಲಿದ್ದೇನೆ. ಆದರೂ ಕೂಡ ಇದುವರೆಗೆ ನನಗೆ ಯಾವುದೇ ಹುದ್ದೆ ಅಲಂಕರಿಸುವ ಸೌಭಾಗ್ಯ ಒದಗಿ ಬಂದಿಲ್ಲ.

ಈ ಬಗ್ಗೆ ನಾನು ಯಾರನ್ನೂ ದೂರುವುದಿಲ್ಲ. ಅದು ನನ್ನ ಹಣೆಬರಹ. ಹಿರಿಯರಾದ ಬಸವರಾಜ ಶಿವಣ್ಣನವರ ಅವರದ್ದು ಸಹ ಸದನದಲ್ಲಿ 18 ವರ್ಷಗಳ ಸೇವೆ ಇದೆ. ಅವರ ಅದೃಷ್ಟ ಚೆನ್ನಾಗಿತ್ತು. ಶಾಸಕರಾದ ಕೇವಲ ಮೂರೇ ವರ್ಷಕ್ಕೆ ಸಚಿವರಾಗುವ ಅವಕಾಶ ಅವರಿಗೆ ಸಿಕ್ಕಿತ್ತು. ಈಗಲೂ ಅವರಿಗೆ ಅವಕಾಶ ಸಿಕ್ಕರೆ ಖುಷಿ ಪಡುತ್ತೇನೆ. ಅಲ್ಲದೇ ಎಲ್ಲ ರೀತಿಯ ಸಹಕಾರ ಸಹ ನೀಡುತ್ತೇನೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಜಿಲ್ಲೆಯ ಆರೂ ಜನ ಶಾಸಕರೂ ಸಚಿವ ಸ್ಥಾನಕ್ಕೆ ಅರ್ಹರೇ. ಈ ಪೈಕಿ ನಾವು ಮೂವರು ಮಾತ್ರ ಮುಂಚೂಣಿಯಲ್ಲಿ ಸಚಿವ ಸ್ಥಾನಕ್ಕೆ ಪ್ರಯತ್ನಿಸುತ್ತಿದ್ದೇವೆ. ಪ್ರಯತ್ನಿಸಿದವರನ್ನು ಬಿಟ್ಟು ಇನ್ನುಳಿದ ಮೂವರ ಪೈಕಿ ಯಾರಿಗಾದರೂ ಸಚಿವ ಸ್ಥಾನ ಸಿಕ್ಕರೂ ಆಶ್ಚರ್ಯವಿಲ್ಲ. ಪ್ರಯತ್ನ ಮಾಡಿದರಷ್ಟೆ ಸಚಿವ ಸ್ಥಾನ ಸಿಗಲಿದೆ ಎನ್ನುವುದೆಲ್ಲ ಸುಳ್ಳು. ಹಿಂದೆ 2013 ರಿಂದ 2018 ರ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳಿದ್ದಾಗ ಜಿಲ್ಲೆಯ ಬಹಳಷ್ಟು ಆಕಾಂಕ್ಷಿ ಶಾಸಕರು ದೆಹಲಿಗೆ ತೆರಳಿ ಪ್ರಯತ್ನಿಸಿದ್ದರು. ಆದರೆ ಜಿಲ್ಲೆಯಲ್ಲಿಯೇ ಉಳಿದಿದ್ದ ರುದ್ರಪ್ಪ ಲಮಾಣಿ ಅವರಿಗೆ ಸಚಿವ ಸ್ಥಾನ ಸಿಕ್ಕಿದ್ದನ್ನು ಶಾಸಕ ಮಾನೆ ನೆನಪಿಸಿದರು.

ನೀರಾವರಿ ಕಚೇರಿ ಮೇಲೆ ಲೋಕಾ ದಾಳಿ

ಧಾರವಾಡ: ಸಣ್ಣ ನೀರಾವರಿ ಇಲಾಖೆಯ ಕಾರ್ಯನಿರ್ವಾಹಕ ಎಂಜಿನಿಯರ್ (ಇ.ಇ) ದೇವರಾಜ ಶಿಗ್ಗಾವಿ ಹಾಗೂ ಅವರ ಆಪ್ತರ ಕಚೇರಿಗಳ ಮೇಲೆ ಶನಿವಾರ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಜಂಟಿ ದಾಳಿ ನಡೆಸಿದ್ದಾರೆ.

2018ರಿಂದ 2023ರವರೆಗೆ ಸಣ್ಣ ನೀರಾವರಿ ಇಲಾಖೆಯಲ್ಲಿ ನಡೆದ ವಿವಿಧ ಕಾಮಗಾರಿಗಳಲ್ಲಿ ವ್ಯಾಪಕ ಅವ್ಯವಹಾರ, ಸರ್ಕಾರಕ್ಕೆ ಭಾರೀ ಪ್ರಮಾಣದ ಆರ್ಥಿಕ ನಷ್ಟ ಉಂಟು ಮಾಡಿದ ಆರೋಪದ ಮೇರೆಗೆ ದಾಳಿ ನಡೆಸಲಾಗಿದೆ. ಧಾರವಾಡ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಸಿದ್ದಲಿಂಗಪ್ಪ ನೇತೃತ್ವದಲ್ಲಿ ದಾಳಿ ನಡೆಸಿದ ಅಧಿಕಾರಿಗಳ ತಂಡ, ಏಕಕಾಲದಲ್ಲಿ ದಾಳಿ ನಡೆಸಿ ತಡರಾತ್ರಿಯವರೆಗೂ ಮಹತ್ವದ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿ ಕಲೆ ಹಾಕಿದೆ. ಇ.ಇ ದೇವರಾಜ ಶಿಗ್ಗಾವಿ ಅವರ ಕಚೇರಿ ಮಾತ್ರವಲ್ಲದೆ, ಅವರ ಅಳಿಯ ಹಾಗೂ ಗುತ್ತಿಗೆದಾರರಾಗಿರುವ ಶ್ರೀಕೃಷ್ಣ ಗಾಡಿವಡ್ಡರ ಮತ್ತು ಕ್ಲಾಸ್ ಒನ್ ಗುತ್ತಿಗೆದಾರ ಸುಮೀತ್ ಹೆಗಡೆ ಅವರ ಕಚೇರಿಗಳ ಮೇಲೂ ದಾಳಿ ನಡೆಸಲಾಗಿದೆ. ಇಲಾಖೆಯ ಕಾಮಗಾರಿಗಳಿಗೆ ಸಂಬಂಧಿಸಿದ ಹಲವು ಪ್ರಮುಖ ಕಡತಗಳು ಮತ್ತು ಅಕ್ರಮಕ್ಕೆ ಪುಷ್ಟಿ ನೀಡಿದ ದಾಖಲೆಗಳನ್ನು ವಶಕ್ಕೆ ಪಡೆದ ಲೋಕಾಯುಕ್ತ ಅಧಿಕಾರಿ ತಂಡ ಪ್ರಕರಣದ ಹೆಚ್ಚಿನ ತನಿಖೆಯನ್ನು ಕೂಡ ಮುಂದುವರಿಸಿದೆ.

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ಕನಿಷ್ಠ (ಕ್ವಿಂ)	₹ಗರಿಷ್ಠ (ಕ್ವಿಂ)
ಕಡಲೆಕಾಳು	1629	6136
ಉದ್ದಿನಕಾಳು	2899	7329
ಒಣ ಮೆಣಸಿನಕಾಯಿ	4499	54790
ಹೆಸರುಕಾಳು	1330	7919
ಜೋಳ	1812	4616
ಮಡಿಕೆ (ಮಟಕಿ)	1210	15219
ಈರುಳ್ಳಿ	500	1800
ಆಲೂಗಡ್ಡೆ	1200	1500
ಕುಸುಬೆ	4521	5326
ತೊಗರಿ	4329	4690

ಕರ್ನಾಟಕ ಸರ್ಕಾರ

ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ–582101

ಜಿಲ್ಲಾ: ಗದಗ ರಾಜ್ಯ: ಕರ್ನಾಟಕ
ದೂ:08372–259932 ಇ–ಮೇಲ್: ka.gadag.betageri.cmc@gmail.com

ನಂ.ಗಬೆನಸ/ಶಾಂ.ವಿ/ಸನ್26–27/SFC ಕು.ನೀ/ನ.ಅನುದಾನ/ಪಪಿ/ಟೆಂಡರ್/2026–27
ದಿನಾಂಕ: 06–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ **1999–2000**ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ ಗದಗ–ಬೆಟಗೇರಿ ನಗರಸಭೆಯ ಸನ್ **2026–27**ನೇ ಸಾಲಿನ ಎಸ್.ಎಫ್.ಸಿ. ಕುಡಿಯುವ ನೀರು ಅನುದಾನದಲ್ಲಿ ಎಸ್.ಸಿ.ಎಸ್.ಪಿ. **(SCSP)** ಎಸ್.ಸಿ ಯೋಜನೆಯಡಿ ಬಿಡುಗಡೆಯಾದ ಅನುದಾನದಲ್ಲಿ ಹಾಗೂ ನಗರಸಭೆ ಅನುದಾನದಲ್ಲಿ ಒಟ್ಟು 04 ಕಾಮಗಾರಿಗಳನ್ನು **ಅಂದಾಜು ಮೊತ್ತ ರೂ.77.56 ಲಕ್ಷಗಳಿಗೆ** ತಯಾರಿಸಿದ್ದು ಕಾಮಗಾರಿಗೆ 2ನೇ ಕರೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ, **1)DMA/2026-27/OW/WORK_INDENT-58003 SC (CALL-2), 2)DMA/2026-27/OW/WORK_INDENT:59227, 3)DMA/2026-27/OW/WORK_INDENT:59225, 4)DMA/2026-27/OW/WORK_INDENT:59205** ಕಾಮಗಾರಿಗಳ ಇಂಡೆಂಟ್‌ಗಳಿಗೆ **http://kppp.karnataka.gov.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು **Electronic** ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿ ಪಡಿಸಿದ ದಿನಾಂಕಗಳಂದು ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	**17-06-2026 Up to 16.00 Hours**
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	**18-06-2026 Up to 16.30 Hours**

ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ **kppp portal** ನಲ್ಲಿ ಪ್ರಕಟಿಸಲಾಗುವುದು. ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಪೌರಾಯುಕ್ತರು
ನಗರಸಭೆ ಗದಗ–ಬೆಟಗೇರಿ

ವಾ.ಸಾ.ಸಂ.ಇ/ಗದಗ/108/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ

ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ ವಿಜಯಪುರ.

ಐ.ಎಫ್.ಟಿ.ಸಂ: ಕಾ.ನಿ.ಇಂ./ಲೋ.ಇ/ವಿ.ಜೆ.ಪಿ/ಪಿ.ಬಿ/CMIDP/2026–27/701
ದಿನಾಂಕ:04.06.2026

ಅಲ್ಪಾವಧಿ ಗುತ್ತಿಗೆ ಆಹ್ವಾನ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಇಂಜಿನಿಯರರು ಲೋಕೋಪಯೋಗಿ ಇಲಾಖೆ ವಿಭಾಗ, ವಿಜಯಪುರ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ–ಪ್ರೋಕ್ಯೂರವೆಂಟನಲ್ಲಿ ನೋಂದಾಯಿತ ಗುತ್ತಿಗೆದಾರರು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಣಿ ಮತ್ತು ನವೀಕರಣ ಪ್ರಮಾಣ ಪತ್ರದ ದಾಖಲೆಗಳನ್ನು ಗೆಜೆಟೆಡ್ ಅಧಿಕಾರಿಯಿಂದ ಪ್ರಮಾಣೀಕರಿಸಿ ಟೆಂಡರ್‌ನೊಂದಿಗೆ ಸಲ್ಲಿಸುವುದು ಮತ್ತು ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4ರಲ್ಲಿ ಲೆಕ್ಕ ಶೀರ್ಷಿಕೆ 4059–80–051–0–60–132 ಮುಖ್ಯಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ ಅಡಿಯಲ್ಲಿನ ಒಟ್ಟು 1 ಕಾಮಗಾರಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು, ಅದರಲ್ಲಿ ಗರಿಷ್ಠ ಮತ್ತು ಕನಿಷ್ಠ ಅಂದಾಜು ಮೊತ್ತ ರೂ. 200.00 ಲಕ್ಷಗಳು, ಮುಂಗಡ ಠೇವಣಿ ಗರಿಷ್ಠ ಮತ್ತು ಕನಿಷ್ಠ ಮೊತ್ತ ರೂ.3,00,000/–ಸದರ ಕಾಮಾಗಾರಿಯ ಗುತ್ತಿಗೆ ಮೊತ್ತಕ್ಕೆ ಅನುಗುಣವಾಗಿ ಜಿ.ಎಸ್.ಟಿ ಪ್ರತ್ಯೇಕವಾಗಿ ನೀಡಲಾಗುವದು. ಹಾಗೂ ವಿಸ್ತೃತ ಗುತ್ತಿಗೆ ಅವಧಿಯಲ್ಲಿ, ಗುತ್ತಿಗೆ ಅವಧಿಯು ಗುತ್ತಿಗೆದಾರರ ವಿಳಂಭದಿಂದ ಉಂಟಾದಲ್ಲಿ ಆ ಅವಧಿಯಲ್ಲಿ ಜಿ.ಎಸ್.ಟಿ ದರಗಳಲ್ಲಿ ಹೆಚ್ಚಾಳವಾದಲ್ಲಿ ಇದನ್ನು ಗುತ್ತಿಗೆದಾರರೇ ಭರಿಸುವದು. 1) ಗುತ್ತಿಗೆದಾರರ ಪೂರ್ವ ಭಾವಿ ಸಭೆ ದಿನಾಂಕ:– 08.06.2026ರ ಮುಂಜಾನೆ 11.00 ಗಂಟೆಗೆ 2) ಟೆಂಡರಗಳನ್ನು ಸ್ವೀಕರಿಸುವ ದಿನಾಂಕ:–15.06.2026ರ ಸಂಜೆ 4.30 ಗಂಟೆಯವರೆಗೆ, 3) ಟೆಂಡರಗಳ ತಾಂತ್ರಿಕ್ ಬೀಡ್‌ಗಳನ್ನು ತೆರೆಯುವ ದಿನಾಂಕ: 16.06.2026 ರ ಸಂಜೆ 4.31 ಗಂಟೆಗೆ 4) ಟೆಂಡರಗಳ ಆರ್ಥಿಕ ಬೀಡ್‌ಗಳನ್ನು ತೆರೆಯುವ ದಿನಾಂಕ.17.06.2026.ರ ಸಂಜೆ 4.31 ಗಂಟೆಯ ನಂತರ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ಹಾಗೂ ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ https://kppp.karnataka.gov.in (ಪೋನ್ ನಂ. 91 80 46010000, +91 80 68948777) ರಲ್ಲಿ ಪಡೆಯಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ವಿಭಾಗ,
ವಿಜಯಪುರ

ವಾಸಾಸಂಇ/ವಿಜಯಪುರ/140/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು
ತಾಲೂಕಾ ಸಾರ್ವಜನಿಕ ಆಸ್ಪತ್ರೆ ಗೋಕಾಕ ಜಿಲ್ಲಾ:ಬೆಳಗಾವಿ

Email:ghgkk2010@gmail.com Ph:08332-225083

ಕ್ರಸಂ:ತಾಆ/ಗೋಕಾಕ/ಟೆಂಡರ/ವಿವ–01/2026–27 ದಿನಾಂಕ:06–06–2026

ಇ–ಟೆಂಡರ್ ಪ್ರಕಟಣೆ

ವಿಷಯ: ತಾಲೂಕಾ ಸಾರ್ವಜನಿಕ ಆಸ್ಪತ್ರೆ ಗೋಕಾಕ ಇಲ್ಲಿಹೊರಗುತ್ತಿಗೆ ಮೂಲಕ 2026–27 ನೇ ಸಾಲಿನಲ್ಲಿ ಗ್ರೂಪ್ "ಡಿ" ಸಿಬ್ಬಂದಿ ಸೇವೆಯನ್ನು ಪಡೆಯಲು ಇ–ಟೆಂಡರ ಆವ್ಹಾನಿಸುವ ಕುರಿತು.

ಉಲ್ಲೇಖ:ಮಾನ್ಯ ಜಿಲ್ಲಾಧಿಕಾರಿಗಳು ಬೆಳಗಾವಿ ಇವರ ಟಿಪ್ಪಣಿ ಅನುಮೋದನೆ ದಿ:03–06–2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999–2000 ಮತ್ತು ಸರಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಷರತ್ತುಗಳನ್ವಯ ನೊಂದಾಯಿತ ಅರ್ಹ ಸಂಸ್ಥೆಗಳಿಂದ ತಾಲೂಕಾ ಸಾರ್ವಜನಿಕ ಆಸ್ಪತ್ರೆ ಗೋಕಾಕ ಇಲ್ಲಿಗೆ ಸನ್ 2026–27 ನೇ ಸಾಲಿಗಾಗಿ ಗ್ರೂಪ್ "ಡಿ" ಸಿಬ್ಬಂದಿಗಳನ್ನು ಹೊರ ಗುತ್ತಿಗೆ ಒಪ್ಪಂದದ ಮೇಲೆ ಒದಗಿಸಲು ಇ–ಪ್ರೊಕ್ಯೂರಮೆಂಟ್ ಮೂಲಕ ದ್ವಿ–ಲಕೋಟಿ ಪದ್ಧತಿಯಲ್ಲಿ ಟೆಂಡರ ಆಹ್ವಾನಿಸಲಾಗಿದೆ.

1.ಟೆಂಡರ ಪ್ರಕಟಣೆಯ ದಿನಾಂಕ:06–06–2026 2.ಟೆಂಡರ ಫಾರ್ಮ ಅಪ್‌ಲೋಡ ಮಾಡಲು ಪ್ರಾರಂಭಿಸುವ ದಿನಾಂಕ:08–06–2026 3.ಟೆಂಡರ ಫಾರ್ಮ ಅಪ್‌ಲೋಡ ಮಾಡಲು ಕೊನೆಯ ದಿನಾಂಕ:22–06–2026 4.ತಾಂತ್ರಿಕ ದಾಖಲಾತಿಗಳನ್ನು ತೆರೆಯುವ ದಿನಾಂಕ ಮತ್ತು ಸಮಯ:24–06–2026 12.00 ಘಂಟೆ 5.ಹಣಕಾಸಿನ ದಾಖಲಾತಿಗಳನ್ನು ತೆರೆಯುವ ದಿನಾಂಕ ಮತ್ತು ವೇಳೆ ನಂತರ ತಿಳಿಸಲಾಗುವದು 6.ಟೆಂಡರನ ಒಟ್ಟು ಮೊತ್ತ ರೂ.39,17,071.32 6.ಪಾವತಿಸಬೇಕಾದ ಇಎಮ್‌ಡಿ ಮೊತ್ತ.97,927.007ಟೆಂಡರ ಅರ್ಜಿ ಶುಲ್ಕ ಇ–ಪೋರ್ಟಲ್ ನಿಯಮದಂತೆ ಪಾವತಿಸುವದು. 8.ಸಂಪರ್ಕಿಸಬೇಕಾದ ವಿಳಾಸ ಮತ್ತು ದೂರವಾಣಿ ಸಂಖ್ಯೆತಾಲೂಕಾ ಸಾರ್ವಜನಿಕ ಆಸ್ಪತ್ರೆ ಗೋಕಾಕ ಜಿಲ್ಲೆ:ಬೆಳಗಾವಿ 08332–225083 9902852690

ಸೂಚನೆ: ಒಂದು ವೇಳೆ ತಾಂತ್ರಿಕ ಹಾಗೂ ಹಣಕಾಸು ಲಕೋಟೆಯನ್ನು ತೆರೆಯುವ ದಿನಾಂಕದಂದು ಸರಕಾರಿ ರಜೆ ಘೋಷಣೆಯಾದಲ್ಲಿ, ಆಡಳಿತಾತ್ಮಕ ಹಾಗೂ ತಾಂತ್ರಿಕ ತೊಂದರೆಯಾದಲ್ಲಿ, ಮುಂದಿನ ಕರ್ತವ್ಯದ ದಿನದಂದು ಟೆಂಡರ ತೆರೆಯಲಾಗುವದು

ಸಹಿ/–ಮುಖ್ಯ ವೈದ್ಯಾಧಿಕಾರಿಗಳು
ತಾಲೂಕಾ ಸಾರ್ವಜನಿಕ ಆಸ್ಪತೆ ಗೋಕಾಕ
ತಾ: ಗೋಕಾಕ ಜಿ: ಬೆಳಗಾವಿ

DIPR/BGM/RO-NO-378/KSMCA/2026-27

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ,
ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು – 560024.
ಇ–ಮೇಲ್: commissionerahvs@gmail.com ಫೋನ್: 080–23412767

ನಂ: ಆಪಸಂ/ವಿಎಂಎಸ್/ವಿವ–51/ಕ.ನಿ&ಭ/ಟೆಂಡರ್/2026–27 ದಿನಾಂಕ: 06–06–2026

ಅಲ್ಪಾವಧಿ ಮರು ಟೆಂಡರ್ ನೋಟಿಫಿಕೇಷನ್

(ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

2026–27 ನೇ ಸಾಲಿನಲ್ಲಿ ಆಯುಕ್ತಾಲಯ ಪಶು ಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ಪಶುಪಾಲನಾ ಭವನದ ಕಟ್ಟಡದ ನಿರ್ವಹಣೆ, ತೋಟಗಾರಿಕೆ ಸೇವೆ, ಭದ್ರತಾ ಸೇವೆ, ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಸೇವೆಗಳನ್ನು **Work Contract** ಆಧಾರದ ಮೇಲೆ ಪಡೆಯುವ ಸಲುವಾಗಿ ಕೆಪಿಪಿ ಪೋರ್ಟಲ್ ನ ಮೂಲಕ ಒಂದು ವರ್ಷದ ಅವಧಿಗೆ ಟೆಂಡರ್‌ನ್ನು ಕರೆಯಲಾಗಿದೆ. ಟೆಂಡರ್‌ಗೆ ನಿಗದಿ ಪಡಿಸಿದ ಮೊತ್ತ ರೂ. 45.00 ಲಕ್ಷಗಳು.

ಪೂರ್ಣ ಟೆಂಡರ್ ದಾಖಲೆಗಳನ್ನು https://kppp.karnataka.gov.in ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 06.06.2026 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ನಲ್ಲಿ ದಿನಾಂಕ: 06.06.2026 ರಿಂದ 15.06.2026 ರವರೆಗೆ 17.30 ಗಂಟೆಯೊಳಗೆ ಅಪ್‌ಲೋಡ್ ಮಾಡಬಹುದಾಗಿದೆ.

ಹೆಚ್ಚಿನ ವಿವರಗಳಿಗಾಗಿ ಕೆಪಿಪಿ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಟೆಂಡರ್‌ಗೆ ಸಂಬಂಧಿಸಿದ ಅಧಿಕಾರಿಗಳನ್ನು ಸಂಪರ್ಕಿಸಬಹುದು.

ಸಹಿ/– ಉಪ ನಿರ್ದೇಶಕರು ಪಶುವೈದ್ಯಕೀಯ ಔಷಧಿ ಭಂಢಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ

DIPR/CP/1015/NR/2026-27

ಕರ್ನಾಟಕ ಸರ್ಕಾರ

ರಾಯಚೂರು ಮಹಾನಗರ ಪಾಲಿಕೆ

E-mail:itstaff_ulb_raichurn@yahoo.com Website:-www.raichurcity.gov.in
Phone No:08532-226768 Fax No:08532-226316

ಸಂ:ರಾಮಪ/ತಾಂತ್ರಿಕ/ಮ.ನಿ/2026–27 ದಿನಾಂಕ: 05–06–2026.

ಮರು ಟೆಂಡರ್ / ಟೆಂಡರ್ ಪ್ರಕಟಣೆ (ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ).

ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗಿನ ಅನುದಾನದಲ್ಲಿ ಈ ಕೆಳಗೆ ತೋರಿಸಿದ ಇಂಡೆಂಟ್ ನಂಬರ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ 2.0 ಪದ್ಧತಿ ಅಡಿಯಲ್ಲಿ ಮರು ಟೆಂಡರ್ / ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದ್ದು, ಸದರಿ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಅರ್ಹ ಸರಬರಾಜುದಾರರು / ಗುತ್ತಿಗೆದಾರರು WWW.KPPP.Karnataka.gov.in ವೆಬ್‌ಸೈಟ್ ಮೂಲಕ ಭಾಗವಹಿಸತಕ್ಕದ್ದು, ಹಾಗೂ ಹೆಚ್ಚಿನ ವಿವರಗಳಿಗಾಗಿ ಮಹಾನಗರ ಪಾಲಿಕೆಯ ವೆಬ್‌ಸೈಟ್WWW.raichurcity.mrc.gov.in ರಲ್ಲಿ ಹೆಚ್ಚಿನ ಮಾಹಿತಿ ಪಡೆಯಬಹುದಾಗಿದೆ.

Sl. No	Grant Details	Name of Work	Indent Number
1	ಮಹಾನಗರ ಪಾಲಿಕೆ ಅನುದಾನದಲಿ	Operation and Maintenance of Robotic UGD Machine hole Cleaning System (Bandicoot Robot). **Estimate Cost Rs. 50,00,000/-**	DMA/2026-27/SE7902/CALL-2
2		Animal Birth Control ABC Surgery for Stray Dogs and ARV Vaccination Animal Birth Control Programme In Various Places Raichur City Corporation Limits **Estimate Cost Rs. 27,50,000/-**	DMA/2025-26/SE7607
3		Procurement of Vehicles for Official Use, Field Inspection, Monitoring and Administrative Functions of Various Departments of Raichur City Corporation. **Estimate Cost Rs. 72,00,000/-**	DMA/2026-27/IND6334

ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ರಾಯಚೂರು.

DIP/RCR/101/KSMCA/103/2026-27

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ

ಸತ್ತಿ ರಸ್ತೆ, ಚಾಮರಾಜನಗರ–571313
ಇ–ಮೇಲ್ :apmccrnagar@rediffmail.com,apmccrnagar@gmail.com ದೂ: 08226-222103,225665
ಸಂಖ್ಯೆ:ಕೃಉಮಾಸ(ಚಾ): 93:2026-27, ದಿನಾಂಕ: 03/06/2026

ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪದ್ಧತಿಯಲ್ಲಿ ಮಾತ್ರ)

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಕಾಯಿದೆ 1999 ಮತ್ತು ನಿಯಮ 2000 ಹಾಗೂ ತತ್ಸಂಬಂಧವಾಗಿ ಹೊರಡಿಸಿರುವ ಸರ್ಕಾರದ ಆದೇಶ, ಸುತ್ತೋಲೆಗಳಂತೆ ಈ ಕೆಳಕಂಡ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರುಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ನೊಂದಾಯಿತ ಹಾಗೂ Standard Tender Documents KW-4 Clause 3 (with latest amendments) ನಲ್ಲಿ ಅರ್ಹರಿರುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಅಡಿಯಲ್ಲಿ ಸಲ್ಲಿಸಲು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ.1 ಕಾಮಗಾರಿಯ ಹೆಸರು: ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ 2025–26ನೇ ಸಾಲಿನ ನಬಾರ್ಡ್ ಆರ್‌ಐಡಿಎಫ್–31 ಯೋಜನೆಯಡಿ ಅನುಮೋದಿತ ಸಂತೇಮರಳ್ಳಿ ಉಪ ಮಾರುಕಟ್ಟೆ ಪ್ರಾಂಗಣದಲ್ಲಿನ ತೆಂಗಿನಕಾಯಿ ಮಾರುಕಟ್ಟೆಗೆ ಮೂಲಭೂತ ಸೌಕರ್ಯ ಒದಗಿಸುವ ಕಾಮಗಾರಿ. (ಐಟಂವಾರು ಟೆಂಡರ್), ಟೆಂಡರಿಗಿಟ್ಟ ಮೊತ್ತ ರೂ.ಗಳಲ್ಲಿ -418,22,896=18 ಇ.ಎಂ.ಡಿ ಮೊಬಲಗು ರೂ.ಶೇಕಡ 1.50 ರಂತೆ ಅಥವಾ ಕನಿಷ್ಠ (ಇ ಪೇಮೆಂಟ್)-6,28,000=00 ಕೆಲಸ ಪೂರೈಸಲು ನಿಗಧಿಪಡಿಸಿದ ಅವಧಿ (ಮಳೆಗಾಲ ಹೊರತು ಪಡಿಸಿ) 6 ತಿಂಗಳು, ಅರ್ಹ ಗುತ್ತಿಗೆದಾರರ ದರ್ಜೆ– ಕೆ.ಡಬ್ಲ್ಯು-4 ಕ್ಲಾಸ್-3 ರಲ್ಲಿ ಅರ್ಹರಿರುವ ಮತ್ತು ಲೋ.ಇ.ಯಲ್ಲಿ ನೋಂದಾಯಿತ ಸಿವಿಲ್ ಗುತ್ತಿಗೆದಾರರು, ಇ ಪ್ರೊಸೆಸಿಂಗ್ ಫೀ (ಇ ಪೇಮೆಂಟ್)– ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಂತೆ

ಟೆಂಡರ್ ಪ್ರಕ್ರಿಯೆ ವೇಳಾಪಟ್ಟಿ :

1) ಫ್ರೀ ಬಿಡ್ ಮೀಟಿಂಗ್ ದಿನಾಂಕ: 15/06/2026, ಬೆಳಿಗ್ಗೆ: 11-00 ಘಂಟೆಗೆ
2) ಭರ್ತಿ ಮಾಡಿದ ತಾಂತ್ರಿಕ ಮತ್ತು ಆರ್ಥಿಕ ಟೆಂಡರ್ ದಾಖಲೆಗಳನ್ನು ಸ್ವೀಕರಿಸುವ ಕೊನೆ ದಿನಾಂಕ:17/06/2026 ಮತ್ತು ವೇಳೆ: ಮಧ್ಯಾಹ್ನ 4.00ಗಂಟೆಗೆ
3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 19/06/2026 ಮತ್ತು ವೇಳೆ : ಬೆಳಿಗ್ಗೆ 11-00 ಗಂಟೆಗೆ
4) ಆರ್ಥಿಕ ಬಿಡ್ ತೆರೆಯುವ ದಿನಾಂಕ:25/06/2026 ಮತ್ತು ವೇಳೆ : ಬೆಳಿಗ್ಗೆ 11-00 ಗಂಟೆಗೆ ನಂತರ

Tender documents may be downloaded from Government of Karnataka e-Procurement website https://kppp.karnataka.gov.in/#/portal/portal-home under login for Contractors

ಟೆಂಡರುಗಳನ್ನು ತೆರೆಯುವ ಸ್ಥಳ : ಕಾರ್ಯದರ್ಶಿಯವರ ಕಛೇರಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ,
ಪತ್ರ ವ್ಯವಹಾರದ ವಿಳಾಸ : : ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ,

ಸಹಿ/- (ಬಿ. ಜಗದೀಶ್)
ಕಾರ್ಯದರ್ಶಿ, ಕೃಉಮಾಸ, ಚಾಮರಾಜನಗರ

ಸಹಿ/- (ಗುರುಸ್ವಾಮಿ. ಎಂ. ಬಿ)
ಅಧ್ಯಕ್ಷರು, ಕೃಉಮಾಸ, ಚಾಮರಾಜನಗರ

ಸಂ:ವಾಸಾಸಂಇ: ಚಾ.ನಗರ:154:2026-27

ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ

☎ 0836-2956097, 2224195, 2224274, 2222161

ಕ್ರ ಸಂ: ಹು.ಧಾ.ನ.ಪ್ರಾ.ಸಂ;ಯೋ.ವಿ/ಭೂ.ಬ/35,36/2026–27 ದಿನಾಂಕ : 06–06–2026

ಪತ್ರಿಕಾ ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗ ಬದಲಾವಣೆ ಮಾಡಲು ಅರ್ಜಿದಾರರು ಮನವಿ ಸಲ್ಲಿಸಿದ್ದು, ಜಮೀನು ವಿವರಣೆ ಈ ಕೆಳಗಿನಂತೆ ಇರುತ್ತದೆ. ಸದರಿ ಜಮೀನು ಮಹಾಯೋಜನೆ ಪರಿಷ್ಕೃತ–II ಯೋಜನೆಯಲ್ಲಿ ಉದ್ಯಾನವನ(ಬಯಲುಜಾಗೆ) ಉದ್ದೇಶಕ್ಕಾಗಿ ಕಾಯ್ದಿರಿಸಿರುತ್ತದೆ. ಜಮೀನುಗಳ ಹಾಲಿ ರಸ್ತೆ ಸಂಪರ್ಕ ಹೊಂದಿರುತ್ತದೆ. ಪ್ರಸ್ತಾಪಿತ ಜಾಗೆಯನ್ನು ಅರ್ಜಿದಾರರು ವಸತಿ ಹಾಗೂ ವಾಣಿಜ್ಯ ಉದ್ದೇಶಕ್ಕಾಗಿ ಭೂ ಉಪಯೋಗ ನಿಗದಿಪಡಿಸುವಂತೆ ಕೋರಿರುತ್ತಾರೆ. ಸದರಿ ಜಮೀನಿನಲ್ಲಿ ವಸತಿ ವಿನ್ಯಾಸಕ್ಕೆ ಅನುಮೋದನೆ ಪಡೆಯುವುದಾಗಿ ಹಾಗೂ ವಾಣಿಜ್ಯ ಚಟುವಟಿಕೆ ಮಾಡುವುದರಿಂದ ಸಾರ್ವಜನಿಕರಿಗೆ ಉದ್ಯೋಗ ಲಭಿಸುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ತಿದ್ದುಪಡಿ ಸಂಖ್ಯೆ:ಸಂವ್ಯಶಾಇ:24:ಶಾಸನ:2015, ಬೆಂಗಳೂರು ದಿ:10–09–2015 ರನ್ವಯ ಉದ್ಯಾನವನ(ಬಯಲುಜಾಗೆ) ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ನಿಗದಿಪಡಿಸಲು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 69(2) ತಿದ್ದುಪಡಿ ಪ್ರಕಾರ ಪತ್ರಿಕಾ ಪ್ರಕಟಣೆ ಮಾಡಿ ಸಾರ್ವಜನಿಕ ಆಕ್ಷೇಪಣೆಗಳು/ಸಲಹೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗೆ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ, ಹುಬ್ಬಳ್ಳಿ–580025 ಇವರಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ	ಹೆಸರು	ಗ್ರಾಮ	ರಿ.ಸ. ನಂ/ ಬ್ಲಾಕ ನಂ.	ಕ್ಷೇತ್ರ	ಹಾಲಿ ಉಪಯೋಗ	ಭೂ ಉಪಯೋಗ ನಿಗದಿಪಡಿಸಲು ಕೋರಿರುವ ಉದ್ದೇಶ
1	ಶ್ರೀಷ ರೆಸಿಡೆನ್ಸಿ ತರ್ಫೆ ಪಾಲುದಾರರಾದ ಶ್ರೀನಿವಾಸ ತಂದೆ ಅಶೋಕ ನಾಯ್ದು	ನರೇಂದ್ರ	370/3 370/4	1ಎಕರೆ ಪೈಕಿ 05ಗುಂಟೆ 1ಎಕರೆ ಪೈಕಿ 05ಗುಂಟೆ	ಉದ್ಯಾನವನ (ಬಯಲುಜಾಗೆ)	ವಸತಿ
2	ಶ್ರೀ ಸುಧೀರ ಶಿವಪ್ಪ ಮುದ್ದಿ	ರಾಯನಾಳ	114/8	2ಎಕರೆ–21ಗುಂ	ಉದ್ಯಾನವನ (ಬಯಲುಜಾಗೆ)	ವಾಣಿಜ್ಯ

ಸಹಿ/– ಆಯುಕ್ತರು,
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ.

ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/270/2026–27

ಸರ್ಕಾರಿ ಸಾರ್ವಜನಿಕ ತಾಲುಕಾ ಆಸ್ಪತ್ರೆ ಸುರಪುರ ಜಿ: ಯಾದಗಿರಿ.

ದೂರವಾಣಿ ಸಂಖ್ಯೆ: 08443–256113 ಮಿಂಚಂಚೆ : cmogghshorapuryadgiri@gmail.com

ಸಂ: ಸ.ಸಾ.ತಾ.ಆ.ಸು/ಟೆಂಡರ್/ಪಥ್ಯಾಹಾರ/: :2026–27 ದಿನಾಂಕ:–05/06/2026

ಪ್ರಕಟಣೆ

1.) ಸರ್ಕಾರಿ ಸಾರ್ವಜನಿಕ ತಾಲುಕಾ ಆಸ್ಪತ್ರೆ, ಸುರಪುರ ಇಲ್ಲಿಗೆ 2026–27ನೇ ಸಾಲಿಗೆ ಪಥ್ಯಾಹಾರ ಹಾಗೂ ಉತ್ತಮ ದರ್ಜೆಯ ಬ್ರೆಡ್ ಸರಬರಾಜಿಗಾಗಿ ಇ–ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆಯಲ್ಲಿ ಮರು ಟೆಂಡರ್ ಆಹ್ವಾನಿಸಲಾಗಿದೆ. 2) ಟೆಂಡರ್ ಫಾರಂನ್ನು ವಿತರಿಸುವ ದಿನಾಂಕ: 08–06–2026 ರಿಂದ 25–06–2026 ರವರೆಗೆ. 3) ಇ–ಪ್ರಕ್ಯೂರ್‌ಮೆಂಟ್ ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 25–06–2026 ರಂದು ಸಂಜೆ 4 ಘಂಟೆಗೆ. 4) ದಿನಾಂಕ: 29–06–2026 ರಂದು ಬೆಳಿಗ್ಗೆ 11:00 ಘಂಟೆಗೆ ದಾಖಲಾತಿಯ ತಾಂತ್ರಿಕ ಲಕೋಟೆಯನ್ನು ತೆರೆಯಲಾಗುವುದು. 5) ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದು. ಫೋನಂ. 08443–256113 ವೆಬ್ ಸೈಟ್ ಸಂಖ್ಯೆ: http://www.eproc.karnataka.gov.in 6) Indent No: DHFWS/2026-27/IND2501.

ಸಹಿ/– ಆಡಳಿತ ವೈದ್ಯಾಧಿಕಾರಿಗಳು
ಸರಕಾರಿ ಸಾರ್ವಜನಿಕ ತಾಲುಕಾ ಆಸ್ಪತ್ರೆ
ಸುರಪುರ ಜಿ॥ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/101/ಕೆ.ಎಸ್.ಎಂ.ಸಿ.ಎ/2026–27

ಹುಬ್ಬಳ್ಳಿ – ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ

ನವನಗರ, ಹುಬ್ಬಳ್ಳಿ – 580 025
0836–2956097, 2224195, 2224274, 2222161

ಹುಧಾನಪ್ರಾ;ಯೋ.ವಿ/ಭೂ.ಬ/29/2026–27/1519 ದಿ: 05/06/2026

ಪ್ರಕಟಣೆ

ಹುಬ್ಬಳ್ಳಿ–ಧಾರವಾಡ ಸ್ಥಳೀಯ ಯೋಜನಾ ಪ್ರದೇಶದ ಮಹಾಯೋಜನೆ ಪರಿಷ್ಕೃತ–II ರ ವ್ಯಾಪ್ತಿಯಲ್ಲಿ ಬರುವ ಈ ಕೆಳಗೆ ವಿವರಿಸಿದ ಜಮೀನಿನ ಭೂ ಉಪಯೋಗ ಬದಲಾವಣೆ ಮಾಡಲು ಕೆಟಿಸಿಪಿ ಕಾಯ್ದೆ 1961 ಕಲಂ 14(ಎ) ರನ್ವಯ ಅರ್ಜಿದಾರರು ಮನವಿ ಸಲ್ಲಿಸಿರುತ್ತಾರೆ.

ಅ.ನಂ	ಜಮೀನಿನ ಮಾಲೀಕರ ಹೆಸರು	ಗ್ರಾಮ	ರಿಸನಂ/ ಬ್ಲಾಕನಂ	ಕ್ಷೇತ್ರ	ಮ.ಯೋ. ಪ–II ರಂತೆ ಹಾಲಿ ಉಪಯೋಗ	ಭೂ ಉಪಯೋಗ ಬದಲಾವಣೆಗೆ ಕೋರಿರುವ ಉದ್ದೇಶ	ಸಾರ್ವಜನಿಕ ಹಿತಾಸಕ್ತಿ
1	ಶ್ರೀಮತಿ ಅನುಷಾ ಕೋಂ ಸಿಎಚ್‌ವಿಎಸ್‌ವಿ ಪ್ರಸಾದ	ಎಂ. ಆರಳಿಕಟ್ಟಿ	74/1ಅ 74/1ಬ	01ಎ–26ಗುಂ 01ಎ–26ಗುಂ ಒಟ್ಟು 03ಎ–12ಗುಂ	ವಸತಿ	ವಾಣಿಜ್ಯ	ಸಾರ್ವಜನಿಕರಿಗೆ ಉದ್ಯೋಗ ಕಲ್ಪಿಸಿ ಕೊಡುವುದಾಗಿ ತಿಳಿಸಿರುತ್ತಾರೆ

ಸದರಿ ಜಮೀನುಗಳನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಕಾಯ್ದೆ 1961 ರ ಕಲಂ 14 (ಎ) ರನ್ವಯ ಭೂ ಉಪಯೋಗ ಬದಲಾವಣೆ ಮಾಡುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿ, ಸಾರ್ವಜನಿಕ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ಈ ಪ್ರಕಟಣೆ ಆದ ದಿನಾಂಕದಿಂದ 16 ದಿನದೊಳಗಾಗಿ ಆಯುಕ್ತರು, ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ನವನಗರ ಹುಬ್ಬಳ್ಳಿ–580025 ಇವರಿಗೆ ಸಂಬಂಧಪಟ್ಟ ದಾಖಲೆಗಳೊಂದಿಗೆ ಲಿಖಿತವಾಗಿ ಸಲ್ಲಿಸಲು ಕೋರಲಾಗಿದೆ. ಅವಧಿ ಮುಗಿದ ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– ಆಯುಕ್ತರು
ಹುಬ್ಬಳ್ಳಿ–ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ
ಹುಬ್ಬಳ್ಳಿ

ವಾ.ಸಾ.ಸಂ.ಇ/ಧಾರವಾಡ/269/ದೇಶಪಾಂಡೆಪಬ್ಲಿಸಿಟಿ/2026–27

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಇಂಜಿನೀಯರ ರವರ ಕಚೇರಿ ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಜಿಲ್ಲೆ–591302

ಸಂಖ್ಯೆ, ಕನೀನಿನಿ/ಕಯೋವಿ/ಖಾ/ಪಿಬಿ/ಅ.ಟೆಂ.ಪ್ರ/2026–27/ ದಿನಾಂಕ: 06.06.2026

"ಅಲ್ಪಾವಧಿ ಶೇಕಡಾವಾರು ಟೆಂಡರ ಪ್ರಕಟಣೆ" (ಕೆಪಿಪಿ–ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರ್, ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ ಕಚೇರಿ ಅಡಿಯಲ್ಲಿ ಬರುವ ಈ ಕೆಳಗಿನ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರರಿಂದ (ದರ್ಜೆ 1 ಮತ್ತು ಮೇಲ್ಪಟ್ಟು) ಶೇಕಡಾವಾರು ಟೆಂಡರಗಳನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಕೆಪಿಪಿ–ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

ಕ್ರ ಸಂ	ಕಾಮಗಾರಿಯ ಹೆಸರು	ಟೆಂಡರ್‌ಗೆ ಇಟ್ಟ ಮೊತ್ತ ಜಿ.ಎಸ್.ಟಿ. ಹೊರತುಪಡಿಸಿ (ರೂ. ಲಕ್ಷಗಳಲ್ಲಿ)
1	Construction of a Bridge Cum Barrage across the Malaprabha River at Chikkahattiholi village, Khanapur taluk, Belagavi District along with allied works including Sopanam, Left Bank Protection and Connecting Roads from Chikkahattiholi and Karvinkoppa villages together with Operation and Maintenance for a period of 5 years. (KNNL/2025-26/BB/WORK_INDENT3888/Call-2)	4139.45

https://kppp.karnataka.gov.in ನಲ್ಲಿ ಅರ್ಜಿ ಡೌನಲೋಡ ಮಾಡಿಕೊಳ್ಳಬಹುದು/ ಭರ್ತಿಮಾಡಿದ ಟೆಂಡರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 19.06.2026ರಂದು ಸಂಜೆ 4.00 ಘಂಟೆ ವರೆಗೆ ಸಲ್ಲಿಸಬಹುದು. ಪ್ರಿ–ಬಿಡ್ ಸಭೆಯನ್ನು ದಿನಾಂಕ: 12.06.2026ರಂದು ಮುಂಜಾನೆ 11.00 ಘಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ, ಕನೀನಿನಿ, ಕಳಸಾ ಯೋಜನಾ ವಿಭಾಗ, ಖಾನಾಪೂರ ಕಚೇರಿಯಲ್ಲಿ ಆಯೋಜಿಸಲಾಗಿದೆ. ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 20.06.2026 ಸಂಜೆ 4.30 ಘಂಟೆಗೆ. ಪೂರ್ವಾರ್ಹತೆ ಕುರಿತಂತೆ ಇ.ಎಂ.ಡಿ. ವಿವರ, ಟೆಂಡರ ಷರತ್ತುಗಳು ಹಾಗೂ ಇತರೆ ವಿವರಗಳನ್ನು ಕೆಪಿಪಿ–ಪೋರ್ಟಲ್ ಮುಖಾಂತರ https://kppp.karnataka.gov.in ಪಡೆಯಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂಖ್ಯೆ: 08336–222163 ಸಂಪರ್ಕಿಸುವದು.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ
ಕನೀನಿನಿ, ಕಳಸಾ ಯೋಜನೆ ವಿಭಾಗ, ಖಾನಾಪೂರ, ಬೆಳಗಾವಿ

DIPR/BGM/RO-NO-383/KSMCA/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.
ದೂರವಾಣಿ: 08426–281027.ಇ–ಮೇಲ್: dam_division@rediffmail.com

ಸಂ:ಕೃಭಾಜನಿನಿ/ಆವಿ/ಪಿಬಿ/ಟೆಂಡರ್/2026–27/459 ದಿನಾಂಕ:04.06.2026

ಕೊಟೇಶನ್ ದರವನ್ನು ಪಡೆಯುವ ಕುರಿತು

ಆಲಮಟ್ಟಿ ಆಣೆಕಟ್ಟು ಮತ್ತು ಉದ್ಯಾನವನಗಳಿಗೆ ಸಂಬಂಧಿಸಿದ ಈ ಕೆಳಕಂಡ ಕೆಲಸಗಳನ್ನು ನಿರ್ವಹಿಸಲು ದರಪಟ್ಟಿಯನ್ನು ಪ್ರತ್ಯೇಕವಾಗಿ ಸಲ್ಲಿಸಲು ಕೋರಲಾಗಿದೆ. ಕೆಲಸದ ವಿವರ ಈ ಕೆಳಗಿನಂತಿದೆ.

S.No	Name of Work
1	Maintenance of hydraulic power packs of the spillway gates of Almatti Dam.
2	Maintenance of the security patrolling boat and dewatering slurry pump in the drainage gallery of Almatti Dam.
3	Providing illumination in the drainage gallery and electrification to the spillway gates of Almatti Dam.
4	Maintenance of water supply jackwell to the dam site colony.
5	Operation & Maintenance Musical Dancing Fountain & Multimedia Laser show & 3D Projection Mapping inside Landscape garden at Almatti D/S.
6	Operation and Maintenance of Science Park by repairing, repainting of science models & supplying Guides etc
7	Operation and Maintenance of Color Static Moghal Garden Fountains
8	Operation & Maintenance of Lazy River fountains, Dome, Surprise, Fun, Fast Action, Rocky & Marble fountains inside Landscape garden.
9	Repairs and Renovation of Existing 7D theatre and Mirror Maze theme Park at Rock Garden inside Landscape Garden of Almatti Dam Site.

ಮೇಲೆ ಹೇಳಿರುವ ಕೆಲಸಗಳ ವಿವರವಾದ ಮಾಹಿತಿಗಾಗಿ ಹಾಗೂ ಇನ್ನಿತರ ಮಾಹಿತಿಗಾಗಿ ಖುದ್ದಾಗಿ ಈ ಕಚೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದಾಗಿದೆ. ದರಪಟ್ಟಿಯನ್ನು ನೀಡುವದಕ್ಕಿಂತ ಮೊದಲು ಸ್ಥಳ ಪರಿಶೀಲಿಸಲು ವಿನಂತಿಸಲಾಗಿದೆ. ದರಪಟ್ಟಿ ಕವರಗಳ ಮೇಲೆ ಸ್ಪಷ್ಟವಾಗಿ ದರಪಟ್ಟಿ ಎಂದು ಮೋಹರಬಂದ ಆಗಿರಬೇಕು. ಯಾವುದೇ ದರಪಟ್ಟಿ ಸ್ವೀಕರಿಸುವ ಮತ್ತು ರದ್ದುಪಡಿಸುವ ಹಕ್ಕು ಈ ಕಚೇರಿಗೆ ಇರುತ್ತದೆ. ನಿಮ್ಮ ಶಿಲ್ಡ್ ಕೋಟೇಶನ್‌ಗಳನ್ನು ಪಡೆಯುವ ಕೊನೆಯ ದಿನಾಂಕ: 12.06.2026

ಸಂಪರ್ಕಿಸುವ e-mail ವಿಳಾಸ: dam_division@rediffmail.com, aeegates26@gmail.com
ಸಂಪರ್ಕಿಸುವ ದೂರವಾಣಿ ಸಂಖ್ಯೆ: Sri K.jayanna, EE Mob No: 94480 25208,
Sri. S.I.Matpati,A.E. Ph.No.9742492132, Sri.Vithal Jadhav,A.E. Ph.No. 9480165309.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಆಣೆಕಟ್ಟು ಸುರಕ್ಷತಾ ಘಟಕ–2, ಆಲಮಟ್ಟಿ.

ವಾಸಾಸಂಇ/ವಿಜಯಪುರ/133/ಕೆಎಸ್‌ಎಂಸಿಎ/2026–27

ಕಿರುಸುದ್ದಿ

ಇರಾನ್ ತಂಡಕ್ಕೆ ಅಮೆರಿಕ ವೀಸಾ

ವಾಷಿಂಗ್ಟನ್: ಅಮೆರಿಕವು ವಿಶ್ವಕಪ್ ಫುಟ್ಬಾಲ್‌ನಲ್ಲಿ ಪಾಲ್ಗೊಳ್ಳಲಿರುವ ಇರಾನ್ ತಂಡಕ್ಕೆ ವೀಸಾ ನೀಡಿದೆ. ಇದರಿಂದಾಗಿ ಇರಾನ್ ತಂಡವು ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲು ಇರುವ ಸಂದಿಗ್ಧತೆ ಕೊನೆಗೊಂಡಿದೆ. ಪ್ರಸ್ತುತ ಇರಾನ್ ಮತ್ತು ಅಮೆರಿಕ ಮಧ್ಯೆ ಸಮರ ನಡೆಯುತ್ತಿರುವುದರಿಂದ ಇರಾನ್ ಫುಟ್ಬಾಲ್ ತಂಡಕ್ಕೆ ಅಮೆರಿಕವು ವೀಸಾ ನೀಡುವುದೆ ಇಲ್ಲವೆ ಎಂಬ ಅನುಮಾನಗಳು ತಲೆದೋರಿದ್ದವು. ಇರಾನ್ ತನ್ನ ಪಂದ್ಯಗಳನ್ನು ಅಮೆರಿಕದಲ್ಲಿ ಆಡಬೇಕಾಗಿದೆ. ಇರಾನ್ ತನ್ನ ಮೊದಲ ಪಂದ್ಯವನ್ನು ಜೂನ್ 15ರಂದು ಲಾಸ್ ಏಂಜಲಿಸ್‌ನಲ್ಲಿ ನ್ಯೂಜಿಲೆಂಡ್ ವಿರುದ್ಧ ಆಡಲಿದೆ.

ಶುಭ ಹಾರೈಸಿದ ಸೂರ್ಯಕುಮಾರ್

ಮುಂಬೈ: ಟಿ20 ತಂಡದಿಂದ ಕೈಬಿಡಲ್ಪಟ್ಟ ಮಾಜಿ ನಾಯಕ ಸೂರ್ಯಕುಮಾರ್ ಯಾದವ್ ನೂತನ ತಂಡಕ್ಕೆ ಶುಭ ಹಾರೈಸಿದ್ದಾರೆ. ಶ್ರೇಷ್ಠ ಕೌಶಲ ಹೊಂದಿರುವ ನೂತನ ತಂಡವು ತನ್ನ ಮುಂದಿರುವ ಸವಾಲುಗಳನ್ನು ಎದುರಿಸಿ ಗೆಲ್ಲಲಿ ಎಂದು ಅವರು ಸಾಮಾಜಿಕ ಜಾಲತಾಣದಲ್ಲಿ ಬರೆದಿದ್ದಾರೆ. ವೈಭವ್ ಸೂರ್ಯವಂಶಿಗೆ ಅವರು ವಿಶೇಷವಾಗಿ ಶುಭ ಹಾರೈಸಿದ್ದಾರೆ. ನಿನ್ನ ಕ್ರಿಕೆಟ್ ಪಯಣ ಕಾಣಲು ಉತ್ಸುಕನಾಗಿರುವುದಾಗಿ ಹೇಳಿದ್ದಾರೆ.

ಅಥ್ಲೆಟಿಕ್ಸ್: 3 ಪದಕ ಗೆದ್ದ ಕರ್ನಾಟಕದ ಪುಷ್ಪಲತಾ

ಬೆಂಗಳೂರು: ಗೋವಾದ ಬಂಬೋಲಿಮ್ ಕ್ರೀಡಾಂಗಣದಲ್ಲಿ ಮೇ 30-31ರಂದು ನಡೆದ ಮೂರನೇ ರಾಷ್ಟ್ರೀಯ ಮಾಸ್ಟರ್ ಅಥ್ಲೆಟಿಕ್ ಚಾಂಪಿಯನ್ ಶಿಪ್-2026ರಲ್ಲಿ ಬೆಂಗಳೂರಿನ ಪುಷ್ಪಲತಾ ಮಹಾಳಂಕ ಅವರು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ 3 ಪದಕಗಳನ್ನು ಗೆದ್ದುಕೊಂಡಿದ್ದಾರೆ.



ಅಥ್ಲೆಟಿಕ್ ಚಾಂಪಿಯನ್ ಶಿಪ್‌ನ 5 ಕಿ.ಮೀ. ರೇಸ್ ವಾಕ್ ಸ್ಪರ್ಧೆಯಲ್ಲಿ ಸ್ವರ್ಣ, 4 400 ಮೀ. ರಿಲೇಯಲ್ಲಿ ರಜತ ಪದಕ ಹಾಗೂ 4 100 ಮೀ. ರಿಲೇಯಲ್ಲಿ ಕಂಚಿನ ಪದಕವನ್ನು ಗೆದ್ದುಕೊಂಡಿದ್ದಾರೆ. ಬೆಂಗಳೂರಿನಲ್ಲಿ ಗಣಿತಶಾಸ್ತ್ರ ಸಂಶೋಧಕಿ ಆಗಿರುವ ಟರ್ಕಿಯ ಉಲುದಾಘ್ ವಿಶ್ವವಿದ್ಯಾಲಯದ ಜತೆ ಗಣಿತಶಾಸ್ತ್ರದಲ್ಲಿ ಸಹಯೋಗಿ ಸಂಶೋಧನೆ ನಡೆಸುತ್ತಿದ್ದಾರೆ. ಹಲವು ಅಥ್ಲೆಟಿಕ್ ಕೂಟಗಳಲ್ಲಿ ಭಾರತ ಮತ್ತು ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಹಲವು ಪದಕಗಳನ್ನು ಗೆದ್ದುಕೊಂಡಿದ್ದಾರೆ.

ನಾರ್ವೆ ಚೆಸ್ ಪ್ರಶಸ್ತಿ ಗೆದ್ದ ಮೊದಲ ಭಾರತೀಯ

ಪ್ರಜ್ಞಾನಂದಗೆ ನಾರ್ವೆ ಕಿರೀಟ



ಓಸ್ಲೋ: ಭಾರತದ ಗ್ರಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಅವರೀಗ ಪ್ರತಿಷ್ಠಿತ ನಾರ್ವೆ ಚೆಸ್ ಪ್ರಶಸ್ತಿ ಗೆಲ್ಲುವ ಮೂಲಕ ಈ ಪ್ರಶಸ್ತಿ ಗೆದ್ದ ಮೊದಲ ಭಾರತೀಯನೆಂಬ ಹಿರಿಮೆಗೆ ಪಾತ್ರರಾಗಿದ್ದಾರೆ.

ಅಂತಿಮ ಸುತ್ತಿನ ಸ್ಪರ್ಧೆಯಲ್ಲಿ ಪ್ರಜ್ಞಾನಂದ ಅವರು ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿ ಅಗ್ರಸ್ಥಾನಿಯಾಗಿ ಮೂಡಿಬಂದರು. ಕೊನೆಯ ದಿನದ ಪಂದ್ಯಗಳು ಆರಂಭವಾಗುವಾಗ 15 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದ ಪ್ರಜ್ಞಾನಂದ ಕೊನೆಯ ಕ್ಲಾಸಿಕಲ್ ಪಂದ್ಯದ ಗೆಲುವಿನಿಂದ 3 ಅಂಕ ಗಳಿಸಿ ತಮ್ಮ ಅಂಕವನ್ನು 18ಕ್ಕೇರಿಸಿ ಅಗ್ರಸ್ಥಾನಿಯಾದರು.

15.5 ಅಂಕಗಳೊಂದಿಗೆ ಮುನ್ನಡೆಯಲ್ಲಿದ್ದ ಅಮೆರಿಕದ ಗ್ರಾಂಡ್‌ಮಾಸ್ಟರ್ ವೆಸ್ಲಿ ಸೋ ತಮ್ಮ ಕೊನೆಯ ಪಂದ್ಯದಲ್ಲಿ ಡ್ರಾ ಸಾಧಿಸಲಷ್ಟೆ ಶಕ್ತವಾದುದು ಪ್ರಜ್ಞಾನಂದರಿಗೆ ವರದಾನವಾಯಿತು. ಈ ಬಾರಿಯ ನಾರ್ವೆ ಟೂರ್ನಿಯಲ್ಲಿ ವಿಶ್ವದ ಘಟಾನುಘಟಿ ಆಟಗಾರರು ಪಾಲ್ಗೊಂಡಿದ್ದು, ಪ್ರಜ್ಞಾನಂದರ ಈ ಗೆಲುವು ಅತ್ಯಂತ ಮಹತ್ವದ್ದಾಗಿದೆ. 2013ರಲ್ಲಿ ಆರಂಭವಾದ ಈ ಪ್ರತಿಷ್ಠಿತ ಟೂರ್ನಿಯನ್ನು ಭಾರತೀಯರಾರೂ ಇದುವರೆಗೆ ಗೆದ್ದುದಿಲ್ಲ. ಪ್ರಜ್ಞಾನಂದ ಈ ಟೂರ್ನಿಯಲ್ಲಿ ಎರಡನೇ ಬಾರಿ ಸ್ಪರ್ಧಿಸುತ್ತಿದ್ದು ತಮ್ಮ ಎರಡನೇ ಪ್ರಯತ್ನದಲ್ಲೇ ಪ್ರಶಸಿ ಗೆದ್ದು ಬೀಗಿದರು.

ಪ್ರಜ್ಞಾನಂದ ಈ ಟೂರ್ನಿಯಲ್ಲಿ ನಿಧಾನ ಪ್ರಗತಿ ಸಾಧಿಸಿದ್ದರು. ಅರ್ಧದಷ್ಟು ಟೂರ್ನಿ ಮುಗಿಯುವಾಗ ಅವರು ಅಂಕಪಟ್ಟಿಯಲ್ಲಿ ತುಸು ಕೆಳಗೇ ಇದ್ದರು. ಆದರೆ ದ್ವಿತೀಯಾರ್ಧದಲ್ಲಿ ಕೆಲವು ಅತ್ಯುತ್ತಮ ನಿರ್ವಹಣೆ ಪ್ರದರ್ಶಿಸಿದರು. ವಿಶ್ವದ ನಂಬರ್ 1 ಆಟಗಾರ ಹಾಗೂ ನಾರ್ವೆ ಚೆಸ್ ಪ್ರಶಸ್ತಿಯನ್ನು 7 ಬಾರಿ ಗೆದ್ದಿರುವ ಮ್ಯಾಗ್ನಸ್ ಕಾರ್ಲ್ಸನ್ ಅವರನ್ನು ಎರಡು ಬಾರಿ ಸೋಲಿಸಿದ್ದಂತೂ ಪ್ರಜ್ಞಾನಂದರ ಅಸೀಮ ಸಾಧನೆ. ಎರಡು ಬಾರಿಯೂ ಕ್ಲಾಸಿಕಲ್ ಆಟದಲ್ಲೇ ಅವರು ಕಾರ್ಲ್ಸನ್‌ರನ್ನು ಸೋಲಿಸಿದ್ದರು. ವಿ.ಆನಂದ್ ಹೊರತು ಪಡಿಸಿದರೆ ಬೇರಾವ ಭಾರತೀಯನೂ ಕಾರ್ಲ್ಸನ್ ಅವರನ್ನು ಕ್ಲಾಸಿಕಲ್ ಪಂದ್ಯದಲ್ಲಿ ಸೋಲಿಸಿದ್ದಿಲ್ಲ. ಹಾಲಿ ವಿಶ್ವಚಾಂಪಿಯನ್ ಡಿ.ಗುಕೇಶ್ ವಿರುದ್ಧ ಕೂಡಾ ಪ್ರಜ್ಞಾನಂದ ಗೆಲುವು ಸಾಧಿಸಿದ್ದರು.

ಬಿಬಿಸಾರ ಮಹಿಳಾ ಚಾಂಪಿಯನ್: ಮಹಿಳೆಯರ ವಿಭಾಗದಲ್ಲಿ 16.5 ಅಂಕಗಳನ್ನು ಸಂಪಾದಿಸಿದ ಖಜಕಿಸ್ತಾನಿ ಗ್ರ್ಯಾಂಡ್‌ಮಾಸ್ಟರ್ ಬಿಬಿಸಾರ ಅಸ್ಸಾವುಬಯೇವ ಕೊನೆಯ ಸುತ್ತು ಉಳಿದಿದ್ದಾಗಲೇ ನಾರ್ವೆ ಚೆಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಪ್ರಧಾನಿ ಅಭಿನಂದನೆ

ಪ್ರಜ್ಞಾನಂದ ನಾರ್ವೆ ಚೆಸ್ ಪ್ರಶಸ್ತಿ ಗೆದ್ದಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿ ಅಭಿನಂದನೆ ಸೂಚಿಸಿದ್ದು, ಇದು ಮಹತ್ವದ ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ತಮಿಳುನಾಡು ಮುಖ್ಯಮಂತ್ರಿ ಸಿ.ಜೋಸೆಫ್ ವಿಜಯ್, ತಮಿಳುನಾಡಿನ ಯುವ ನಾಯಕ ಕೆ.ಅಣ್ಣಾಮಲೈ, ಚೆಸ್ ದಂತಕತೆ ಗ್ರ್ಯಾಂಡ್ ಮಾಸ್ಟರ್ ವಿಶ್ವನಾಥನ್ ಆನಂದ್ ಸೇರಿದಂತೆ ಹಲವು ಗಣ್ಯರು ನಾರ್ವೆ ಚೆಸ್ ಪ್ರಶಸ್ತಿ ಗೆದ್ದು ಇತಿಹಾಸ ಬರೆದ ಪ್ರಜ್ಞಾನಂದ ಅವರಿಗೆ ಅಭಿನಂದಿಸಿದ್ದಾರೆ.

ಪಂತ್, ಸುದರ್ಶನ್ ಶತಕಾರ್ಧ | ಭಾರತ 368ಕ್ಕೆ 3

ಗಿಲ್, ರಾಹುಲ್ ಶತಕ ಭಾರತದ ಸ್ಥಿತಿ ಸುಭದ್ರ







ಮುಲ್ಲನ್‌ಪುರ (ಚಂಡೀಗಢ): ಕೆ.ಎಲ್. ರಾಹುಲ್ ಹಾಗೂ ನಾಯಕ ಶುಬ್ಮನ್ ಗಿಲ್ ಅವರ ಶತಕದ ನೆರವಿನಿಂದ ಮತ್ತು ರಿಷಬ್ ಪಂತ್ ಹಾಗೂ ಸಾಯಿ ಸುದರ್ಶನ್ ಶತಕಾರ್ಧಗಳ ನೆರವಿನಿಂದ ಭಾರತವು ಅಫ್ಘಾನಿಸ್ತಾನದ ವಿರುದ್ಧದ ಏಕೈಕ ಟೆಸ್ಟ್ ಪಂದ್ಯದಲ್ಲಿ ಮೊದಲ ದಿನ ತನ್ನ ನೆಲೆಯನ್ನು ಭದ್ರಪಡಿಸಿಕೊಂಡಿದೆ.

ಮೊದಲ ದಿನದ ಅಂತ್ಯಕ್ಕೆ ಭಾರತವು 3 ವಿಕೆಟ್ ನಷ್ಟದಲ್ಲಿ 368 ರನ್ ಗಳಿಸಿತು. ಟೆಸ್ಟ್‌ನಲ್ಲಿ ಇನ್ನೂ ಅನನುಭವಿಯಾಗಿರುವ ಅಫ್ಘಾನಿಸ್ತಾನದ ಬೌಲರುಗಳು ಭಾರತೀಯ ಬ್ಯಾಟರ್‌ಗಳ ಮೇಲೆ ಹೆಚ್ಚಿನ ಪರಿಣಾಮ ಬೀರಲು ವಿಫಲರಾದರು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಭಾರತಕ್ಕೆ ರಾಹುಲ್ ಮತ್ತು ಯಶಸ್ವಿ ಜೈಸ್ವಾಲ್ ನಿಧಾನಗತಿಯ ಆರಂಭ ನೀಡಿದರಾದರೂ, 24 ರನ್ ಗಳಿಸಿದ ಜೈಸ್ವಾಲ್ ವಿಕೆಟ್ ಒಪ್ಪಿಸಿದ ಬಳಿಕ ರಾಹುಲ್ ಮತ್ತು ಸಾಯಿ ಸುದರ್ಶನ್ ಜತೆಯಾಟದಲ್ಲಿ ರನ್‌ಗತಿ ಬಿರುಸು ಕಂಡಿತು. ಸಾಯಿ ಸುದರ್ಶನ್ ಕೆಲವು ಆಕ್ರಮಣಕಾರಿ ಹೊಡೆತಗಳನ್ನು ಪ್ರದರ್ಶಿಸಿದರು. ರಾಹುಲ್ ಜತೆ 139 ರನ್‌ಗಳ ಜತೆಗಾರಿಕೆ ನೀಡಿದ ಅವರು, 104 ಎಸೆತಗಳಿಂದ 81 ರನ್ ಗಳಿಸಿದರು. ಬಳಿಕ ರಾಹುಲ್ ಮತ್ತು ಗಿಲ್ ಮತ್ತೊಂದು ದೀರ್ಘ ಜತೆಯಾಟಕ್ಕೆ ಸಾಕ್ಷಿಯಾದರು. ಕೆ.ಎಲ್. ರಾಹುಲ್ ಸರಿಯಾಗಿ ನೂರು ರನ್ ಗಳಿಸಿದ ಬಳಿಕ ಔಟಾದರು. ಅವರು ತಮ್ಮ ಶತಕಕ್ಕೆ 165 ಎಸೆತಗಳನ್ನು ಎದುರಿಸಿದ್ದರು. ಆದರೆ ಎರಡು ಜೀವದಾನಗಳನ್ನೂ ಪಡೆದುದು ಅವರಿಗೆ ನೆರವಾಯಿತು. ಇದು ಅವರ 12ನೇ ಟೆಸ್ಟ್ ಶತಕವಾಗಿದೆ. ನಾಯಕ ಗಿಲ್ ಮತ್ತು ರಿಷಬ್ ಪಂತ್ ಬಳಿಕ ಅಫಘಾನ್ ಬೌಲರುಗಳನ್ನು ಕಾಡಿದರು. ಕೊನೆಯ ಅವಧಿಯಲ್ಲಿ ಭಾರತಕ್ಕೆ 159 ರನ್‌ಗಳು ಹರಿದುಬಂದವು. ದಿನದಂತ್ಯಕ್ಕೆ ಗಿಲ್ ಶತಕ ಪೂರೈಸಿ ಔಟಾಗದೆ ಉಳಿದರು. ಅವರು 163 ಎಸೆತಗಳನ್ನು ಎದುರಿಸಿದ್ದು, 103 ರನ್‌ಗಳೊಂದಿಗೆ ಮರುದಿನಕ್ಕೆ ಆಟ ಕಾಯ್ದಿರಿಸಿಕೊಂಡರು. ಇದು ಅವರ 11ನೇ ಟೆಸ್ಟ್ ಶತಕವಾಗಿದೆ. ರಿಷಬ್ ತಮ್ಮ ಎಂದಿನ ಆಕ್ರಮಣಕಾರಿ ಶೈಲಿಯ ಆಟವಾಡಿ 50 ರನ್‌ಗಳೊಂದಿಗೆ ಔಟಾಗದೆ ಉಳಿದರು. ಅವರ ಇನ್ನಿಂಗ್ಸ್‌ನಲ್ಲಿ 2 ಬೌಂಡರಿ ಹಾಗೂ 3 ಸಿಕ್ಸರ್ ಗಳಿದ್ದವು. ಅಫ್ಘಾನಿಸ್ತಾನದ ಪರವಾಗಿ ಮೊಹಮ್ಮದ್ ಸಲೀಮ್ 2 ವಿಕೆಟ್ ಗಳಿಸಿದರು. ಜಿಯಾಉರ್ ರೆಹಮಾನ್‌ಗೆ 1 ವಿಕೆಟ್ ಲಭಿಸಿತು.

ಮಾನವ್ ಸುತಾರ್ ಪದಾರ್ಪಣೆ

ಭಾರತದ ಪರವಾಗಿ ಮಾನವ್ ಸುತಾರ್ ಟೆಸ್ಟ್‌ಗೆ ಪದಾರ್ಪಣೆ ಮಾಡಿದರು. ರಾಜಸ್ಥಾನದ ಈ ಆಲ್‌ರೌಂಡರ್ ಭಾರತವನ್ನು ಟೆಸ್ಟಿನಲ್ಲಿ ಪ್ರತಿನಿಧಿಸುತ್ತಿರುವ 319ನೇ ಆಟಗಾರನಾಗಿ ದಾಖಲಾದರು. ಕುಲದೀಪ್ ಯಾದವ್ ಅವರು ಸುತಾರ್‌ಗೆ ಭಾರತೀಯ ಕ್ಯಾಪ್ ನೀಡಿದರು. 23ರ ಹರಯದ ಸುತಾರ್ 2022ರಲ್ಲಿ ರಾಜಸ್ಥಾನ ಪರವಾಗಿ ಪ್ರಥಮ ದರ್ಜೆ ಕ್ರಿಕೆಟ್ ಆಡಲಾರಂಭಿಸಿದ್ದರು. ಬೌಲಿಂಗಿನಲ್ಲಿ ಅವರು ಎಡಗೈ ಸ್ಪಿನ್ನರ್ ಆಗಿದ್ದಾರೆ.

ಸ್ಕೋರು ವಿವರ

ಭಾರತ ಮೊದಲ ಇನ್ನಿಂಗ್ಸ್

ಜೈಸ್ವಾಲ್ ಸಿ ಅಫ್ಸರ್ ಬಿ ಸಲೀಮ್	24
ರಾಹುಲ್ ಸಿ ರಹ್ಮತುಲ್ಲಾ ಬಿ ರೆಹಮಾನ್	100
ಸುದರ್ಶನ್ ಸಿ ಅಫ್ಸರ್ ಬಿ ಸಲೀಮ್	83
ಶುಬ್ಮನ್ ಗಿಲ್ ಔಟಾಗದೆ	103
ರಿಷಬ್ ಪಂತ್ ಔಟಾಗದೆ	50
ಇತರ	10
ಒಟ್ಟು 3 ವಿಕೆಟ್ ನಷ್ಟಕ್ಕೆ	368

ವಿಕೆಟ್ ಪತನ: 1-41, 2-180, 3-247

ಬೌಲಿಂಗ್ ವಿವರ

ರೆಹಮಾನ್	15-2-61-1
ಒಮರ್ಜಾಯಿ	14-3-42-0
ಸಲೀಮ್	13-1-67-2
ಖರೋಟೆ	20-0-95-0
ಅಬ್ದುಲ್ ಮಲಿಕ್	6-0-37-0
ಶಾಹಿದ್	17-0-61-0

ರಿಷಬ್ ಪಂತ್ 50ನೇ ಟೆಸ್ಟ್

ರಿಷಬ್ ಪಂತ್ ಅವರು ವಿಕೆಟ್ ಕೀಪರ್ ಆಗಿ 50ನೇ ಟೆಸ್ಟ್ ಪಂದ್ಯ ಆಡುವ ಹಿರಿಮೆಗೆ ಪಾತ್ರರಾದರು.



ಅವರನ್ನು ಹೊರತುಪಡಿಸಿದರೆ ಇಬ್ಬರು ವಿಕೆಟ್ ಕೀಪರ್‌ಗಳಷ್ಟೇ 50ಕ್ಕಿಂತ ಹೆಚ್ಚು ಪಂದ್ಯಗಳನ್ನು ಭಾರತದ ಪರ ಆಡಿದ್ದಾರೆ. ಅವರೆಂದರೆ ಧೋನಿ (90 ಟೆಸ್ಟ್) ಮತ್ತು ಸೈಯದ್ ಕೀರ್ಮಾನಿ (88 ಟೆಸ್ಟ್).

ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಚಾಂಪಿಯನ್‌ಶಿಪ್ ಫೈನಲ್

ಆಂಡ್ರೀವಾಗೆ ಫ್ರೆಂಚ್ ಓಪನ್ ಕಿರೀಟ

ಪ್ಯಾರಿಸ್: ರಷ್ಯಾದ ಯುವ ಟೆನಿಸ್ ತಾರೆ ಮಿರ್ರಾ ಆಂಡ್ರೀವಾ ಫ್ರೆಂಚ್ ಓಪನ್ ಮಹಿಳಾ ಸಿಂಗಲ್ಸ್ ಪ್ರಶಸ್ತಿಯನ್ನು ಗೆದ್ದು ತಮ್ಮ ಮೊದಲ ಗ್ರ್ಯಾಂಡ್‌ಸ್ಲ್ಯಾಮ್ ಕಿರೀಟವನ್ನು ಮುಡಿಗೇರಿಸಿಕೊಂಡಿದ್ದಾರೆ. ಶನಿವಾರ ನಡೆದ ಫೈನಲ್‌ನಲ್ಲಿ 19 ವರ್ಷದ ಆಂಡ್ರೀವಾ, ಪೋಲೆಂಡ್‌ನ ಅರ್ಹತಾ ಸುತ್ತಿನ ಆಟಗಾರ್ತಿ ಮಾಯಾ ಖ್ವಾಲಿನ್ಸ್ಕಾ ಅವರನ್ನು 6-3, 6-2 ನೇರ ಸೆಟ್‌ಗಳಿಂದ ಮಣಿಸಿದರು.

ಟೂರ್ನಿ ಆರಂಭಕ್ಕೂ ಮುನ್ನ ಭಾರೀ ಅಚ್ಚರಿ ಅಭ್ಯರ್ಥಿಯಾಗಿ ಪರಿಗಣಿಸಲ್ಪಟ್ಟಿದ್ದ ಖ್ವಾಲಿನ್ಸ್ಕಾ ಅವರ ಕನಸಿನ ಓಟವನ್ನು ಅಂತಿಮ ಹಂತದಲ್ಲಿ ಆಂಡ್ರೀವಾ ಕೊನೆಗೊಳಿಸಿದರು. ಈ ಗೆಲುವಿನೊಂದಿಗೆ 1992ರಲ್ಲಿ ಮೋನಿಕಾ ಸೆಲೆಸ್ ಬಳಿಕ ಫ್ರೆಂಚ್ ಓಪನ್ ಪ್ರಶಸ್ತಿ ಗೆದ್ದ ಅತ್ಯಂತ ಕಿರಿಯ ಆಟಗಾರ್ತಿ ಎಂಬ ದಾಖಲೆಯನ್ನು ಆಂಡ್ರೀವಾ ರಚಿಸಿದರು. ಒಂದು ಗಂಟೆ 22 ನಿಮಿಷಗಳ ಕಾಲ ನಡೆದ ಫೈನಲ್‌ನಲ್ಲಿ ಆರಂಭದಲ್ಲಿ ಇಬ್ಬರೂ ಆಟಗಾರ್ತಿಯರು ಒತ್ತಡಕ್ಕೆ ಒಳಗಾದರೂ, ಬಳಿಕ ಆಂಡ್ರೀವಾ ಪಂದ್ಯದ ಮೇಲೆ ಹಿಡಿತ ಸಾಧಿಸಿದರು. ಮೊದಲ ಸೆಟ್‌ನಲ್ಲಿ 3-3 ಸಮಬಲದ ಬಳಿಕ ಸತತವಾಗಿ ಒಂಬತ್ತು ಗೇಮ್‌ಗಳನ್ನು ಗೆದ್ದು ಪಂದ್ಯದಲ್ಲಿ ಸಂಪೂರ್ಣ ಮೇಲುಗೈ ಸಾಧಿಸಿದರು. ಗೆಲುವಿನ ಕ್ಷಣದಲ್ಲಿ ಭಾವೋದ್ವೇಗಕ್ಕೆ ಒಳಗಾದ ಆಂಡ್ರೀವಾ ಕೋರ್ಟ್‌ನಲ್ಲೇ ಸಂಭ್ರಮಾಚರಣೆ ನಡೆಸಿ, ಬಳಿಕ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ತಮ್ಮ ಕೋಚ್ ಕಾನ್ಚಿತಾ ಮಾರ್ಟಿನೆಜ್ ಅವರನ್ನು ಅಪ್ಪಿಕೊಂಡರು. ನಾನು ಬಾಲ್ಯದಿಂದಲೇ ನಾನು ಫ್ರೆಂಚ್ ಓಪನ್ ನೋಡುತ್ತಿದ್ದೆ. ಈ ಟ್ರೋಫಿ ಗೆಲ್ಲುವುದು ನನ್ನ ಕನಸಾಗಿತ್ತು ಎಂದು ಹೇಳಿದರು.



ಇಂದು ಪುರುಷರ ಫೈನಲ್: ಜ್ವೆರೆವ್-ಫ್ಲೇವಿಯೋ ಸೆಣಸು

ಪ್ಯಾರಿಸ್: ಫ್ರೆಂಚ್ ಓಪನ್‌ನ ಪುರುಷರ ಫೈನಲ್ ಪಂದ್ಯವು ಇಂದು ಜರ್ಮನಿಯ ಅಲೆಕ್ಸಾಂಡರ್ ಜ್ವೆರೆವ್ ಮತ್ತು ಇಟಲಿಯ ಫ್ಲೇವಿಯೋ ಕೊಬೊಲ್ಲಿ ನಡುವೆ ನಡೆಯಲಿದೆ. ಜ್ವೆರೆವ್ ಅವರು ಸೆಮಿಫೈನಲಿನಲ್ಲಿ ಮೆನ್ಸಿಕ್ ಅವರನ್ನು ಪರಾಭವಗೊಳಿಸಿ ಫೈನಲಿಗೇರಿದರೆ, ಫ್ಲೇವಿಯೋಗೆ ಸೆಮಿಫೈನಲ್ ಆಡಬೇಕಾದ ಅಗತ್ಯವೇ ಬರಲಿಲ್ಲ. ಅವರ ಎದುರಾಳಿಯಾದ ಅವರದೇ ದೇಶದ ಮ್ಯಾಟ್ಟಿಯೋ ಅರ್ನಾಲ್ಡಿ ಅಸೌಖ್ಯದ ಕಾರಣದಿಂದಾಗಿ ಸೆಮಿಫೈನಲಿನಿಂದ ಹಿಂದೆ ಸರಿದರು. ಜ್ವೆರೆವ್ ಮತ್ತು ಫ್ಲೇವಿಯೋ ಇಬ್ಬರೂ ಮೊದಲ ಗ್ರಾಂಡ್‌ಸ್ಲಾಮ್ ಪ್ರಶಸ್ತಿ ಗೆಲ್ಲಲು ಸೆಣಸಾಡುತ್ತಿದ್ದಾರೆ. 29ರ ಹರಯದ ಜ್ವೆರೆವ್ ಈ ಮೊದಲು ಮೂರು ಭಾರಿ ಗ್ರಾಂಡ್‌ಸ್ಲಾಮ್ ಫೈನಲಿಗೆ ಏರಿಬಂದಿದ್ದರೂ ಪ್ರಶಸ್ತಿ ಗೆಲ್ಲಲಾಗಿರಲಿಲ್ಲ. ಆದರೆ ಈ ಬಾರಿ ಅವರಿಗಿರುವ ಎದುರಾಳಿ ಅಷ್ಟೇನೂ ಪ್ರಬಲರಲ್ಲರಾಗಿರುವುದರಿಂದ ಮೊದಲ ಗ್ರಾಂಡ್‌ಸ್ಲಾಮ್ ಗೆಲ್ಲುವ ನಿರೀಕ್ಷೆಯಲ್ಲಿದ್ದಾರೆ.

ಟಿ20 ತಂಡಕ್ಕೆ ಅಯ್ಯರ್ ನಾಯಕ





ಹೊಸದಿಲ್ಲಿ: ಮುಂಬರುವ ಒಲಿಂಪಿಕ್ಸ್‌ಗೆ ಮತ್ತು 2028ರ ಟಿ20 ವಿಶ್ವಕಪ್‌ಗೆ ಸುಸಜ್ಜಿತ ಭಾರತೀಯ ತಂಡವೊಂದನ್ನು ಕಟ್ಟುವ ಹಂತವಾಗಿ ಟಿ20 ತಂಡಕ್ಕೆ ಹೊಸ ಸಾರಥಿಯನ್ನು ನೇಮಿಸಲಾಗಿದೆ. ಶ್ರೇಯಸ್ ಅಯ್ಯರ್ ಅವರು ಮುಂಬರುವ ಇಂಗ್ಲೆಂಡ್ ಮತ್ತು ಐರ್ಲೆಂಡ್ ಪ್ರವಾಸಗಳಿಗೆ ಹಾಗೂ ವರ್ಷಾಂತ್ಯದ ಏಷ್ಯನ್ ಗೇಮ್ಸ್‌ಗೆ ಟಿ20 ತಂಡದ ನಾಯಕನಾಗಿ ನೇಮಿಸಲ್ಪಟ್ಟಿದ್ದಾರೆ.

ಉಪನಾಯಕನಾಗಿ ಅಕ್ಷರ್ ಪಟೇಲ್ ಬದಲಿಗೆ ತಿಲಕ್ ವರ್ಮಾರನ್ನು ನೇಮಿಸಲಾಗಿದೆ.

ಮಾರ್ಚ್‌ನಲ್ಲಿ ನಡೆದ ಟಿ20 ವಿಶ್ವಕಪ್‌ನಲ್ಲಿ ಭಾರತವು ಪ್ರಶಸ್ತಿ ಗೆಲ್ಲುವಲ್ಲಿ ನಾಯಕತ್ವ ವಹಿಸಿದ್ದ 35ರ ಹರಯದ ಸೂರ್ಯಕುಮಾರ್ ಯಾದವ್‌ಗೆ ತಂಡದಿಂದಲೇ ಕೊಕ್ ನೀಡಲಾಗಿದೆ. ವಿಶ್ವಕಪ್‌ನಲ್ಲಾಗಲಿ, ಬಳಿಕ ಐಪಿಎಲ್‌ನಲ್ಲಾಗಲಿ ಅವರು ಬ್ಯಾಟಿಂಗಿನಲ್ಲಿ ಮಿಂಚಲು ವಿಫಲರಾಗಿದ್ದರು. ವಿಶ್ವಕಪ್ ತಂಡದಲ್ಲಿದ್ದ ರಿಂಕು ಸಿಂಗ್ ಮತ್ತು ಕುಲದೀಪ್ ಯಾದವ್ ಕೂಡಾ ಕೈಬಿಡಲ್ಪಟ್ಟಿದ್ದಾರೆ.

ಸೂರ್ಯವಂಶಿ ಸೇರ್ಪಡೆ, ಸೂರ್ಯಗೆ ಕೊಕ್

ಸೂರ್ಯವಂಶಿ ಸೇರ್ಪಡೆ

ಐಪಿಎಲ್‌ನಲ್ಲಿ ಅಸಾಮಾನ್ಯ ಬ್ಯಾಟಿಂಗ್ ಪ್ರದರ್ಶನ ನೀಡಿದ 15ರ ಹರಯದ ವೈಭವ್ ಸೂರ್ಯವಂಶಿ ಎಲ್ಲರ ನಿರೀಕ್ಷೆಯಂತೆ ತಂಡಕ್ಕೆ ಕರೆ ಪಡೆದು ಭಾರತವನ್ನು ಪ್ರತಿನಿಧಿಸುವ ಅವಕಾಶ ಪಡೆದಿದ್ದಾರೆ. ಒಂದು ವೇಳೆ, ಐರ್ಲೆಂಡ್ ಅಥವಾ ಇಂಗ್ಲೆಂಡ್ ಪ್ರವಾಸದಲ್ಲಿ ಅವರು ಆಡುವ ಅವಕಾಶ ಪಡೆದರೆ 16ರ ಕೆಳಹರಯದಲ್ಲೇ ಭಾರತವನ್ನು ಪ್ರತಿನಿಧಿಸಿದ ಮೊದಲ ಆಟಗಾರನಾಗಿ ಹೆಸರು ಮಾಡಲಿದ್ದಾರೆ. ತೆಂಡುಲ್ಕರ್ ಟೆಸ್ಟ್ ಪಂದ್ಯ ಆಡಿದಾಗ ಅವರ ವಯಸ್ಸು 16 ವರ್ಷ 205 ದಿನಗಳಾಗಿದ್ದವು. ಏಕದಿನ ಕ್ರಿಕೆಟಿಗೆ ಪದಾರ್ಪಣೆ ಮಾಡುವಾಗ 16 ವರ್ಷ 238 ದಿನಗಳಾಗಿದ್ದವು. ವಾಷಿಂಗ್ಟನ್ ಸುಂದರ್ ಟಿ20ಯಲ್ಲಿ ಭಾರತವನ್ನು ಪ್ರತಿನಿಧಿಸಿದ ಕಿರಿಯ ಆಟಗಾರ. ಅವರು ಭಾರತದ ಪರ ಪದಾರ್ಪಣೆ ಮಾಡಿದಾಗ ಅವರಿಗೆ 18 ವರ್ಷ 80 ದಿನಗಳಾಗಿದ್ದವು. ಮಹಿಳಾ ಟಿ20ಯಲ್ಲಿ ಶೆಫಾಲಿ ವರ್ಮಾ ಭಾರತವನ್ನು ಪ್ರತಿನಿಧಿಸಿದಾಗ ಆಕೆಯ ವಯಸ್ಸು 15 ವರ್ಷ 239 ದಿನಗಳು.

ಇಂಗ್ಲೆಂಡ್-ಐರ್ಲೆಂಡ್ ಪ್ರವಾಸಕ್ಕೆ ತಂಡ

ಶ್ರೇಯಸ್ ಅಯ್ಯರ್(ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಶಿವಂ ದುಬೆ, ತಿಲಕ್ ವರ್ಮಾ, ನಿತೀಶ್ ರೆಡ್ಡಿ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ಮೊಹಮ್ಮದ್ ಸಿರಾಜ್, ಅರ್ಶದೀಪ್ ಸಿಂಗ್, ಪ್ರಿನ್ಸ್ ಯಾದವ್, ವೈಭವ್ ಸೂರ್ಯವಂಶಿ.

ಬೂಮ್ರಾ, ಹಾರ್ದಿಕ್‌ಗೆ ವಿಶ್ರಾಂತಿ

ಬೂಮ್ರಾ ಅವರು ಟೆಸ್ಟ್ ಬೌಲಿಂಗ್‌ನಲ್ಲಿ ಭಾರೀ ಹೊಣೆ ಹೊರಬೇಕಾಗಿರುವ ಕಾರಣದಿಂದಾಗಿ ಅವರಿಗೆ ಇಂಗ್ಲೆಂಡ್ ಮತ್ತು ಐರ್ಲೆಂಡ್ ಪ್ರವಾಸಗಳಿಗೆ ವಿಶ್ರಾಂತಿ ನೀಡಲಾಗಿದೆ. ಆದರೆ ಏಶ್ಯನ್ ಗೇಮ್ಸ್ ತಂಡಕ್ಕೆ ಸೇರಿಸಲಾಗಿದೆ. ಆದರೆ ಗಾಯಾಳಾಗಿರುವ ಹಾರ್ದಿಕ್ ಪಾಂಡ್ಯಾರನ್ನು ಆಯ್ಕೆಗೆ ಪರಿಗಣಿಸಲಾಗಿಲ್ಲ. ಶ್ರೇಯಸ್ ಅಯ್ಯರ್ ಕೊನೆಯದಾಗಿ ಭಾರತದ ಪರವಾಗಿ ಟಿ20 ಪಂದ್ಯವಾಡಿದ್ದು 2023ರ ಡಿಸೆಂಬರ್‌ನಲ್ಲಿ, ಆ ಬಳಿಕ ಭಾರತವನ್ನು ಪ್ರತಿನಿಧಿಸಿಲ್ಲ. ಆದರೆ ಅವರು ಐಪಿಎಲ್‌ನಲ್ಲಿ ಉತ್ತಮ ನಾಯಕತ್ವ ಗುಣ ಪ್ರದರ್ಶಿಸಿರುವುದಲ್ಲದೆ ವೈಯಕ್ತಿಕವಾಗಿಯೂ ಬ್ಯಾಟಿಂಗಿನಲ್ಲಿ ಮಿಂಚಿದ್ದಾರೆ. 2024ರಲ್ಲಿ ಅವರ ನೇತೃತ್ವದ ಕೆಕೆಆರ್ ಪ್ರಶಸ್ತಿ ಗೆದ್ದಿತ್ತು. ಕಳೆದ ವರ್ಷದ ಐಪಿಎಲ್‌ನಲ್ಲಿ ಅವರ ನೇತೃತ್ವದ ಪಂಜಾಬ್ ತಂಡವು ಫೈನಲಿಗೇರಿತ್ತು. ಈ ಬಾರಿ ಪ್ಲೇಆಫ್‌ಗೆ ಏರದಿದ್ದರೂ ಉತ್ತಮ ನಿರ್ವಹಣೆ ನೀಡಿತ್ತು. ಭಾರತವು ಐರ್ಲೆಂಡ್ ವಿರುದ್ಧ ಜೂನ್ 26 ಮತ್ತು 28ರಂದು ಆಡಲಿದ್ದರೆ, ಇಂಗ್ಲೆಂಡ್ ವಿರುದ್ಧ ಜುಲೈ 1ರಿಂದ 11ರ ವರೆಗೆ 5 ಪಂದ್ಯಗಳನ್ನು ಆಡಲಿದೆ.

ಏಷ್ಯನ್ ಗೇಮ್ಸ್‌ಗೆ ತಂಡ

ಶ್ರೇಯಸ್ ಅಯ್ಯರ್(ನಾಯಕ), ಅಭಿಷೇಕ್ ಶರ್ಮಾ, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಶಿವಂ ದುಬೆ, ತಿಲಕ್ ವರ್ಮಾ, ನಿತೀಶ್ ರೆಡ್ಡಿ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ವರುಣ್ ಚಕ್ರವರ್ತಿ, ರವಿ ಬಿಷ್ಣೋಯಿ, ಹರ್ಷಿತ್ ರಾಣಾ, ಅರ್ಶದೀಪ್ ಸಿಂಗ್, ವೈಭವ್ ಸೂರ್ಯವಂಶಿ, ಬೂಮ್ರಾ.

ಏಷ್ಯಾ ಕಪ್ ಹಾಕಿ: ಭಾರತ ಚಾಂಪಿಯನ್



ಕಾಕಾಮಿಗಾಹಾರ: 18ರ ಕೆಳಹರೆಯದ ಏಷ್ಯಾ ಕಪ್ ಹಾಕಿಯಲ್ಲಿ ಭಾರತೀಯ ಪುರುಷರ ತಂಡವು ದಾಖಲೆಯ ಮೂರನೇ ಬಾರಿಗೆ ಪ್ರಶಸ್ತಿ ಗೆದ್ದಿದೆ.


ಪುರುಷರ ತಂಡವು ಫೈನಲ್ ಪಂದ್ಯದಲ್ಲಿ ಆತಿಥೇಯ ಜಪಾನ ತಂಡವನ್ನು 4-1 ಗೋಲುಗಳ ಅಂತರದಿಂದ ಸೋಲಿಸಿತು. ಇದೇವೇಳೆ ಭಾರತೀಯ ಮಹಿಳಾ ತಂಡವು ಕಂಚಿನ ಪದಕ ಗಳಿಸಿದೆ. ಆಶಿಶ್ ತಾನಿ ಪೂರ್ತಿ ಬಾರಿಸಿದ ಹ್ಯಾಟ್ರಿಕ್ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು. ಅವರು 2, 28 ಮತ್ತು 34ನೇ ನಿಮಿಷದಲ್ಲಿ ಗೋಲು ಬಾರಿಸಿದರು. ಮತ್ತೊಂದು ಗೋಲು ನಾಯಕ ಕೇತನ್ ಕುಶ್ವಾಹಾ ಅವರಿಂದ ದಾಖಲಾಯಿತು. ಜಪಾನ್ 52ನೇ ನಿಮಿಷದಲ್ಲಿ ಒಂದು ಗೋಲು ಬಾರಿಸಿ ತುಸು ಸಮಾಧಾನ ಪಟ್ಟುಕೊಂಡಿತು. ತಾನಿ ಪೂರ್ತಿ ಅರ್ಹವಾಗಿ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ತಾನಿ ಪಂದ್ಯಾವಳಿಯಲ್ಲಿ ಭಾರತದ ಪರ ಒಟ್ಟು 13 ಗೋಲ್ ದಾಖಲಿಸಿದ್ದಾರೆ. ಮಹಿಳಾ ತಂಡವು ಕಂಚಿನ ಪದಕಕ್ಕೆ ನಡೆದ ಪಂದ್ಯದಲ್ಲಿ ದ.ಕೊರಿಯಾವನ್ನು 3-0 ಗೋಲುಗಳಿಂದ ಪರಾಭವಗೊಳಿಸಿತು. ಮಹಿಳೆಯರ ಪರ ನೌಶೀನ್ ನಾಜ್ 12 ಗೋಲ್‌ಗಳನ್ನು ದಾಖಲಿಸಿದ್ದಾರೆ. ಪ್ರಧಾನಿ ಮೋದಿಯವರು ಎರಡೂ ತಂಡಗಳನ್ನು ಅವರ ಸಾಧನೆಗಾಗಿ ಅಭಿನಂದಿಸಿದ್ದಾರೆ.

ನಗದು ಬಹುಮಾನ

ಸ್ವರ್ಣ ಪದಕ ಗೆದ್ದ ಆಟಗಾರರಿಗೆ ತಲಾ 3 ಲಕ್ಷ ರೂ. ಹಾಗೂ ತಂಡದ ಸಿಬ್ಬಂದಿಗೆ ತಲಾ 1.5 ಲಕ್ಷ ರೂ. ನಗದು ಬಹುಮಾನವನ್ನು ಹಾಕಿ ಇಂಡಿಯಾ ಘೋಷಿಸಿದೆ. ಕಂಚಿನ ಪದಕ ಗೆದ್ದ 18 ವರ್ಷದೊಳಗಿನ ವನಿತೆಯರಿಗೆ ತಲಾ 1 ಲಕ್ಷ ರೂ. ಮತ್ತು ಸಹಾಯಕ ಸಿಬ್ಬಂದಿಗೆ ತಲಾ 50,000 ರೂ. ನಗದು ಬಹುಮಾನವನ್ನು ಫೆಡರೇಷನ್ ಶನಿವಾರ ಘೋಷಿಸಿದೆ.

ಪದಬಂಧ

ರಾಜಾ ಸಂಗಮೇಶ ಹಿರೇಮಠ



6007

ಎಡದಿಂದ ಬಲಕ್ಕೆ
2.ಭಾರವಾದ ಉಸಿರಾಡುವಿಕೆ (4)
4.ಹತ್ತೂರಲ್ಲೂ ನೆಲೆಸಿರುವ ಶಿವ (2)
5.ಚರದ ನಡುವೆ ಬುದ್ಧಿವಂತನಿದ್ದಾನೆ (3)
6.ತಪದ ನಡುವೆ ಎಳೆಯ ಬಿಸಿಲು ಮೂಡಿದೆ (5)
9. ಸಣ್ಣ ಗಂಟೆಗಳ ಕಾಲಿನ ಆಭರಣ (4)
10.ಭಗವಂತನ ಸೇವಕ ಚಲನಚಿತ್ರವಾಗಿದ್ದಾನೆ (4)
13. ವಿಷ್ಣು ಹತ್ತು ಬಾರಿ ಧರೆಗಿಳಿದದ್ದು (5)
15.ನೀರಿನಲ್ಲಿ ಚಲಿಸುವ ಯಾಂತ್ರಿಕ ಸಾಧನ (4)
17.ಎಚ್ಚರಿಕೆಯನ್ನು ಸೂಚಿಸುವ ಪದ (2)
18.ಕಾಸು ಕೊಟ್ಟು ದಾರ ಖರೀದಿಸಿದ ಕುದುರೆಯ ಸೇವಕ (4)

ಮೇಲಿನಿಂದ ಕೆಳಕ್ಕೆ
1.ಮಲಗಲು ಉಪಯೋಗಿಸುವ ಸಾಧನ (2)
2.ಶೋಭಾಯಾತ್ರೆಯ ಸಮೂಹ ಸಂಚಾರ (5)
3.ಧನ-ಕನಕಗಳನ್ನು ಹೊಂದಿರುವ ಸ್ಥಿತಿ (4)
4.ಆಯುಧಗಳ ಅಲಗು ಹೀಗೆ ಚೂಪಾಗಿದೆ (3)
7.ವ್ಯಕ್ತಿ-ವಸ್ತುವಿನ ಸುತ್ತಲಿನ ಸ್ಥಿತಿ (4)
8. ಸಾಲ ಪಡೆದವ-ಋಣಿಗ (4)
11.ಬಲವಾದ ರಕ್ಷಣೆ-ದೃಢವಾದ ಗೂಡು (5)
12.ನಿಷ್ಕಪಟ-ಸೌಮ್ಯವಾದ ನಗು (4)
14.ಹೆಚ್ಚು ಕಾಲ ಬಹು ದಿನ ಬಾಳಿಕೆ ಬರುವುದು (3)
16.ತಲೆಯ ಮೇಲಿನ ಶಿಖೆ (2)

6006 ಉತ್ತರ

ಎಡದಿಂದ ಬಲಕ್ಕೆ:
1.ದಾರಿಕಾಯು 3.ಚಕ್ರಧರ
5.ದಾಸಾರಿಹಾವು 6.ಪದಕ
7.ರತ್ನ 8.ದಾಳಿ 12.ಸಾಹಸ
14.ದಾಕ್ಷಿಣ್ಯಪರ
16.ನಮಸ್ಕಾರ
17.ಮೋಸಗಾರ

ಮೇಲಿನಿಂದ ಕೆಳಕ್ಕೆ
: 1.ದಾರಿದೀಪ
2.ಕರುಣಾಕರ 3.ಸವಾರ
4.ಚಮ್ಮಾವುಗೆ 5.ದಾಟು
9.ದಾಸಾನುದಾಸ
10.ಮಂದಾಸನ 11.ನೇರ
13.ಸರದಾರ 15.ಪಗಾರ

ಕಿರುಸುದ್ದಿ

ಔಷಧಿ ಉಚಿತ ವಿತರಣೆ

• ಗಜೇಂದ್ರಗಡ: ನಗರದ ಚೆಕ್ಕೇದ ಭಾವನಾವರ ದರ್ಗಾದ ಸನ್ನಿಧಿಯಲ್ಲಿ ಜೂ.8ರಂದು ಕೆಮ್ಮು ದಮ್ಮು ಅಸ್ತಮಾ, ಅಲರ್ಜಿಯಿಂದ ಬಳಲುವವರಿಗೆ ದರ್ಗಾದ ಪೀಠಾಧಿಪತಿ ಹಜರತ ಸಯ್ಯದ್ ನಿಜಾಮುದ್ದೀನ್ ಶಾ ಅರ್ಷಫಿ ಮಕಾನದಾರ ಬಾವಾನವರು ಉಚಿತ ಔಷಧಿ ವಿತರಿಸುವರು. ಮಧ್ಯಾಹ್ನ 12 ಗಂಟೆಗೆ ಭಾವೈಕ್ಯ ಪೀಠಕ್ಕೆ ಹಾಜರಿರಬೇಕು. ಕಾರ್ಯಕ್ರಮದಲ್ಲಿ ಶಿವರಾಜ ಘೋರ್ಪಡೆ, ರಾಜು ಸಾಂಗ್ಲೀಕರ, ರಹಿಮ ಕೊರಗಲ್ಲ, ಶ್ರೀಧರ ಬಿದರಳ್ಳಿ, ಮುರ್ತುಜಾ ಡಾಲಾಯತ, ಹಸನ ತಟಗಾರ, ಮಾಸುಮಲಿ ಮಕಾನದಾರ ಸೇರಿದಂತೆ ಅನೇಕರು ಉಪಸ್ಥಿತರುವವರು ಹಾಗೂ ಹೆಚ್ಚಿನ ಮಾಹಿತಿಗಾಗಿ 9019934185, 9945487892 ಸಂಖ್ಯೆಗೆ ಕರೆ ಮಾಡಿ ನೋಂದಣಿ ಮಾಡಿಕೊಳ್ಳಬೇಕು ಎನ್ನಿದ್ದಾರೆ.

ಆರ್ಥಿಕ ಅಸಮತೋಲನ



• ಗದಗ: ರಾಜ್ಯದ ಕಾಂಗ್ರೆಸ್ ಸರ್ಕಾರವು ಬೇಜವಾಬ್ದಾರಿತನದಿಂದ ವಿದ್ಯಾರ್ಥಿಗಳ ಭವಿಷ್ಯದ ಜೊತೆ ಚೆಲ್ಲಾಟವಾಡುತ್ತಿದ್ದು, ತೀವ್ರ ಆರ್ಥಿಕ ಅಸಮತೋಲನ ಸೃಷ್ಟಿಸಿದೆ ಎಂದು ಜಿಲ್ಲಾ ಬಿಜೆಪಿ ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸಂತೋಷ ಅಕ್ಕಿ ಆರೋಪಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಉಚಿತ ಬಸ್ ಪಾಸ್, ಉದ್ಯೋಗ ವಿನಿಮಯ ಕೇಂದ್ರ ಮತ್ತು 10,000 ಯುವ ಕ್ಲಬ್‌ಗಳಂತಹ ಹೊಸ ಆರು ಯೋಜನೆಗಳ ಜಾರಿಗೆ ಸುಮಾರು 40,000 ಕೋಟಿ ರೂಪಾಯಿ ಅಗತ್ಯವಿದ್ದು, ಈ ಬಾರಿ ಹಣವನ್ನು ಸರ್ಕಾರ ಎಲ್ಲಿಂದ ತರುತ್ತದೆ?. ಹಳೆಯ ಯೋಜನೆಗಳಿಗೆ ಹಣವಿಲ್ಲದೆ ಈಗಾಗಲೇ ಅಭಿವೃದ್ಧಿ ಕುಂಠಿತಗೊಂಡಿರುವಾಗ, ಈ ಹೊಸ ಘೋಷಣೆಗಳು ಕೇವಲ ರಾಜಕೀಯ ಗಿಮಿಕ್ ಆಗಿವೆ ಎಂದು ದೂರಿದರು.

ಜಿಲ್ಲೆಯ ನಗರದ ಮತ್ತು ಕೆಲವು ಹಳ್ಳಿಗಳ ಪಂಚಾಯಿತಿಗಳಿಗೆ ನೀಡಬೇಕಾದ ನಗರೋತ್ಥಾನ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಅನುದಾನವನ್ನು ಸಂಪೂರ್ಣವಾಗಿ ತಡೆಹಿಡಿಯಲಾಗಿದೆ. ಗದಗ ನಗರ ಜನರ ಬಹುದಿನಗಳ ಕನಸಾದ 24X7 ನಿರಂತರ ಕುಡಿಯುವ ನೀರಿನ ಯೋಜನೆ ಈಗಲೂ ಅನುಗುದಿನ ಬಿದ್ದಿದ್ದು, ಕೇವಲ ಭರವಸೆಯಾಗಿಯೇ ಉಳಿದಿದೆ ಎಂದರು.

ಜಿಲ್ಲಾ ಸಮಿತಿ ಸಭೆ

• ಗದಗ: ಇಂದಿನ ಬೇಡಿಕೆಗನುಸಾರವಾಗಿ ಪಿಎಮ್ ಎಫ್ ಎಮ್‌ಇ ಯೋಜನೆಯಡಿ ವಿವಿಧ ಹೊಸ ಘಟಕಗಳನ್ನು ಗುರುತಿಸುವ ಹಾಗೂ ಸ್ಥಾಪಿಸುವ ಅವಶ್ಯಕತೆಯಿದೆ ಎಂದು ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪಿಎಂಎಫ್‌ಎಂಇ ಯೋಜನೆಯ ಜಿಲ್ಲಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಹಾಗೂ ಆತ್ಮ ನಿರ್ಭರ ಭಾರತ ಅಭಿಯಾನದ ಅಂಗವಾಗಿ ಪ್ರಧಾನಮಂತ್ರಿಗಳ ಕಿರು ಆಹಾರ ಸಂಸ್ಕರಣ ಉದ್ದಿಮೆಗಳ ನಿಯಮಬದ್ಧಗೊಳಿಸುವಿಕೆ ಯೋಜನೆಯಡಿ ಬೇಕರಿ ಘಟಕದಡಿ ತಯಾರಿಸಲಾದ ಕೇಕನ್ನು ಕತ್ತರಿಸಿ ಸಭೆ ಉದ್ಘಾಟಿಸಿ ಮಾತನಾಡಿದರು. ಹೆಸರು, ಕಡಲೆ, ಮೆಣಸಿನಕಾಯಿ ಸಂಸ್ಕರಣೆ ಹಾಗೂ ಮೌಲ್ಯವರ್ಧನೆಗೆ, ವಿವಿಧ ತರಕಾರಿಗಳನ್ನು ಒಣಗಿಸಿ ಪುಡಿ ಮಾಡುವ ಘಟಕಗಳನ್ನು ಆರಂಭಿಸಬೇಕು. ಉಪ್ಪಿನಕಾಯಿ, ಅವಲಕ್ಕಿ, ಸೂಪ್ ತಯಾರಿಸಲು ಬೇಕಾಗುವ ಎಲ್ಲಾ ತರಕಾರಿಗಳ ಒಣಗಿಸಿದ ಪುಡಿ, ಬೆಲ್ಲದ ಉತ್ಪನ್ನಗಳು ಈರುಳ್ಳಿ ಪೇಸ್ಟ್ ಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಒಳ್ಳೆಯ ಪ್ಯಾಕಿಂಗ್ ಮತ್ತು ಬ್ರಾಂಡಿಂಗ್‌ನೊಂದಿಗೆ ಒಳ್ಳೆಯ ಮಾರುಕಟ್ಟೆಯ ಬೆಲೆಯನ್ನು ಪಡೆದು ಅಧಿಕ ಆದಾಯ ಪಡೆಯಲು ಸಾಧ್ಯವಿದೆ ಎಂದರು.

ಜಂಟಿ ಕೃಷಿ ನಿರ್ದೇಶಕ ಚೇತನಾ ಪಾಟೀಲ ಮಾತನಾಡಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಯಿಂದ ರೈತರು ಆದಾಯ ದ್ವಿಗುಣಗೊಳಿಸಲು ಶೇ.50 ರ ಸಹಾಯಧನ ಹಾಗೂ ಶೇ.50 ರಷ್ಟು ಬ್ಯಾಂಕ್ ಮೂಲಕ ಸಾಲ ಪಡೆದು ಹೊಸದಾಗಿ ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆ ಅಥವಾ ಈಗಾಗಲೇ ಇರುವ ಆಹಾರ ಸಂಸ್ಕರಣ ಘಟಕಗಳ ಉನ್ನತೀಕರಣ ಮಾಡಲು ಸೆಪ್ಟೆಂಬರ್ 2026 ರವರೆಗೆ ಅವಕಾಶವಿದೆ ಎಂದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	5056-8172
ಅಲಸಂದಿ	1009-7069
ಕಡಲೆ	2387-6185
ಉದ್ದು	4644-6165
ಹವಿಜ	4069-6869
ಒಣಮೆಣಸಿನಕಾಯಿ	1599-38699
ಹೆಸರು	1569-8112
ಹುರಳಿ	1508-4849
ಜೋಳ	1379-2130
ಗೋವಿನಜೋಳ	1739-2130
ಮಡಕಿ	9099-9099
ಸಾಸವಿ	4629-4711
ಕುಸುಬಿ	2021-5315
ಸೂರ್ಯಕಾಂತಿ	6807-7150
ತೊಗರಿ	3117-5524
ಗೋಧಿ	1379-5044



ಗಜೇಂದ್ರಗಡ: ಪಟ್ಟಣದ ಎಸ್.ಎಂ.ಭೂಮರಡ್ಡಿ ಸಂಯುಕ್ತ ಪ್ರೌಢಶಾಲೆ ಹಾಗೂ ಶ್ರೀ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿ ನೆಡಲಾಯಿತು. ಪರಿಸರ ಜಾಗೃತಿ ಕುರಿತು ಪ್ರಬಂಧ ಸ್ಪರ್ಧೆ ಏರ್ಪಡಿಸಲಾಗಿದ್ದು, ವಿಜೇತರಿಗೆ ಬಹುಮಾನ ನೀಡಲಾಯಿತು. ಮುಖ್ಯ ಶಿಕ್ಷಕ ಸಿ.ಎಸ್. ಮೂರಶಿಳ್ಳಿ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೇಲ್ವಿಚಾರಕ ಹಾಲೇಶದಾರ, ಬಿ.ವಿ. ಮುನವಳ್ಳಿ ಎಂ.ಎಲ್. ಕಟ್ಟಿ, ಎಂ.ಎಂ. ಕರೆಪಟ್ಟಣ್ಣನವರ, ಆರ್.ಎಸ್. ರಾಠೋಡ, ಎಸ್.ಎಸ್. ವಾಲಿಕಾರ, ಎಂ. ಲಕ್ಷ್ಮೀದೇವಿ, ಎಸ್.ಸಿ. ಹುಗಾರ, ಎಸ್.ಎಸ್. ನರೇಗಲ್ಲ, ಡಿ.ಎಸ್. ಭಜಂತ್ರಿ, ಪಿ.ಎಂ. ಜಾಲವಾದಿ ಇತರರಿದ್ದರು.

ನಿಮ್ಮ ಜನ್ಮದಿನದಂದು ಸಸಿ ನೆಟ್ಟು ಪೋಷಿಸಿ

• ಶಿರಹಟ್ಟಿ: ಪ್ರತಿಯೊಬ್ಬರೂ ತಮ್ಮ ಜನ್ಮದಿನದಂದು ಒಂದು ಸಸಿ ನೆಟ್ಟು ಪೋಷಿಸಿದರೆ ಅಲ್ಪ ದಿನದಲ್ಲಿ ಊರು ಸುಂದರ ವನವಾಗುತ್ತದೆ. ಭವಿಷ್ಯದಲ್ಲಿ ರಕ್ಷಿತ ವೃಕ್ಷವೃಕ್ಷ ಸಕಲ ಜೀವ ಸಂಕುಲವನ್ನು ರಕ್ಷಿಸುತ್ತದೆ ಎಂದು ಎಫ್.ಎಂ. ಡಬಾಲಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಐ.ಬಿ. ಬೆನಕೊಪ್ಪ ಹೇಳಿದರು. ಸ್ಥಳೀಯ ಎಫ್.ಎಮ್ ಡಬಾಲಿ ಕಾಲೇಜು ಆವರಣದಲ್ಲಿ ಸಾಮಾಜಿಕ ವಲಯ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ 100 ಸಸಿ ನೆಡುವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಪ್ರಾಚಾರ್ಯ ಎಂ.ಸಿ. ಭಜಂತ್ರಿ ಮಾತನಾಡಿ, ಮನುಷ್ಯನ ದುರಾಸೆಯಿಂದ ಪರಿಸರ ಹಾಳಾಗುತ್ತಿದೆ. ಪ್ಲಾಸ್ಟಿಕ್ ಬಳಕೆ ಮತ್ತು ಮರಗಳ ಮಾರಣಹೋಮ ಮೊದಲು ನಿಲ್ಲಬೇಕು ಎಂದರು.ಸಾಮಾಜಿಕ ವಲಯ ಅರಣ್ಯ ಅಧಿಕಾರಿ ರಂಗಪ್ಪ ಕಂಬಳಿ ಮಾತನಾಡಿ, 4-5 ವರ್ಷಗಳಿಂದ ನೂರಾರು ಸಸಿಗಳನ್ನು ಈ ಕಾಲೇಜಿಗೆ ನೀಡಿದ್ದು, ಈಗ ಅವು ಬೆಳೆದು ನಿಂತಿವೆ. ಇದೇ ಉದ್ದೇಶದಿಂದ ಮತ್ತೆ ಕಾಲೇಜು ಆವರಣದಲ್ಲಿ 100 ಸಸಿಗಳನ್ನು ನೆಡಲಾಗಿದೆ ಎಂದರು. ಶಿವನಗೌಡ.ಪಾಟೀಲ, ಹಜರತಬಿ, ಸುಧಾ ಹುಚ್ಚಣ್ಣವರ, ರೇಣುಕಾ ಜಂಗಣ್ಣವರ, ಎನ್.ಹನಮರಡ್ಡಿ, ಪಠಾಣ, ಕುಲಕರ್ಣಿ, ಎಂ.ಎಂ.ನಧಾಫ, ಎಫ್.ಎ.ಬಾಬುಖಾನ್ನವರ, ಎಫ್.ಎಂ. ಹಳ್ಳೆಪ್ಪನವರ, ಆರ್.ಎಫ್.ಬಟಗುರ್ಕಿ, ನೌಶಾದ ಶಿಗ್ಗಿ, ಎನ್.ಆರ್.ಉಡಚಗೌಂಡರ, ಗಂಗಮ್ಮ ಕರಡಣ್ಣವರ, ಡಿ.ಐ.ಖವಾಸ, ಎಲ್.ಪಿ. ನಾಯಕ, ಸುನೀಲ ಎಮ್ಮಿಕ, ಕೃಷ್ಣ ವಿ. ಗೌಡರ, ಪಿ.ವಿ. ಹೊಸೂರ, ಗಣೇಶ ಬಡಿಗಣ್ಣವರ, ನಂದೀಶ ಕಾಳಗಿ, ಸುಮಾ ಹಾವಣಗೇರೆ, ಗೀತಾ ಶೇಳಕೆ, ನೀಲಕಂಠ ಎಸ್. ಕಂಕಣವಾಡ ಇದ್ದರು.



ಶಿರಹಟ್ಟಿ : ಸ್ಥಳೀಯ ಎಫ್.ಎಮ್ ಡಬಾಲಿ ಕಾಲೇಜು ಆವರಣದಲ್ಲಿ ಸಾಮಾಜಿಕ ವಲಯ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನಾಚರಣೆಯ ಪ್ರಯುಕ್ತ 100 ಸಸಿ ನೆಡುವ ಕಾರ್ಯಕ್ರಮವನ್ನು ಎಫ್.ಎಂ. ಡಬಾಲಿ ವಿದ್ಯಾಸಂಸ್ಥೆಯ ಆಡಳಿತಾಧಿಕಾರಿ ಐ.ಬಿ. ಬೆನಕೋಪ್ಪ ಉದ್ಘಾಟಿದರು.

ಮಹಿಳಾ ಸಬಲೀಕರಣಕ್ಕೆ ಮತ್ಸ್ಯ ಸಂಜೀವಿನಿ ಯೋಜನೆ ಮಾದರಿ

ಮೀನುಗಾರಿಕೆಯಿಂದ ಉತ್ತಮ ಆದಾಯ



> ಇಂದು ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ತಮ್ಮದೇ ಆದ ಉದ್ಯಮವನ್ನು ಯಶಸ್ವಿಯಾಗಿ ನಡೆಸುತ್ತಿರುವ ಹೆಮ್ಮೆ ಹೊಂದಿದ್ದು, ಇವರ ಸಾಧನೆ ಜಿಲ್ಲೆಯ ಇತರ ಮಹಿಳೆಯರಿಗೂ ಸ್ಫೂರ್ತಿಯಾಗಿದೆ.
> ■ **ನಾಗರಾಜ ಚಳ್ಳಜ್ಜಿಮನೆ,** ಜಿಲ್ಲಾ ಮೀನುಗಾರಿಕೆ ಇಲಾಖೆ ಉಪನಿರ್ದೇಶಕ

ಸ್ವಂತ ಆದಾಯ

ಹಿಂದೆ ನಮ್ಮ ಕುಟುಂಬದ ಆದಾಯ ತುಂಬಾ ಕಡಿಮೆಯಾಗಿತ್ತು. ಸಂಜೀವಿನಿ ಯೋಜನೆಯಡಿ ದೊರೆತ ತರಬೇತಿ ಮತ್ತು ಅವಕಾಶದಿಂದ ಮೀನುಗಾರಿಕೆಯನ್ನು ಕಲಿತು ಇಂದು ಸ್ವಂತ ಆದಾಯ ಗಳಿಸುತ್ತಿದ್ದೇವೆ. ಮಕ್ಕಳ ಶಿಕ್ಷಣ ಹಾಗೂ ಕುಟುಂಬದ ಅಗತ್ಯಗಳನ್ನು ಆತ್ಮವಿಶ್ವಾಸದಿಂದ ಪೂರೈಸುತ್ತಿದ್ದೇವೆ. ನಮ್ಮ ಬದುಕಿನಲ್ಲಿ ಮತ್ಸ್ಯ ಸಂಜೀವಿನಿ ಯೋಜನೆ ಹೊಸ ಬೆಳಕು ತಂದಿದೆ ಎನ್ನುತ್ತಾರೆ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯೆ ಶಿವಲೀಲಾ ಹರಿಜನ.

▸ ರುದ್ರಗೌಡ ಪಾಟೀಲ

• ಗದಗ: ಗ್ರಾಮೀಣ ಮಹಿಳೆಯರಿಗೆ ಪರ್ಯಾಯ ಜೀವನೋಪಾಯ ಕಲ್ಪಿಸುವ ಉದ್ದೇಶದಿಂದ ಆರಂಭವಾದ ಮತ್ಸ್ಯ ಸಂಜೀವಿನಿ ಯೋಜನೆ ಇಂದು ಜಿಲ್ಲೆಯಲ್ಲಿ ಮಹಿಳಾ ಸಬಲೀಕರಣದ ಯಶಸ್ವಿ ಮಾದರಿಯಾಗಿ ಹೊರಹೊಮ್ಮಿದ್ದು, ಮಹಿಳೆಯರ ಬದುಕಿನಲ್ಲಿ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಗೌರವವನ್ನು ಹೆಚ್ಚಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ.

ತಾಲೂಕಿನ ಹಾತಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಸಂಬಾಪುರ ಗ್ರಾಮದ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಮೀನು ಸಾಕಾಣಿಕೆ ಮೂಲಕ ಉತ್ತಮ ಆದಾಯ ಗಳಿಸಿ ಇತರ ಮಹಿಳೆಯರಿಗೆ ಮಾದರಿಯಾಗಿದ್ದಾರೆ. ಜಿಲ್ಲೆಯಾದ್ಯಂತ 16 ಗ್ರಾಮ ಪಂಚಾಯತ್ ಮಟ್ಟದ ಕೆರೆಗಳನ್ನು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಮೂಲಕ ಗುತ್ತಿಗೆ ಪಡೆದು ಸ್ವಸಹಾಯ ಸಂಘಗಳ ಸದಸ್ಯರಿಗೆ ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಮಹತ್ವಾಕಾಂಕ್ಷಿ ಯೋಜನೆಯಡಿ ಹಾತಲಗೇರಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟ ಹಾಗೂ ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಕೈಜೋಡಿಸಿ ಯಶಸ್ಸುಗೊಳಿಸಿದ್ದಾರೆ.

- ಹಾತಲಗೇರಿ ಗ್ರಾಪಂ ವ್ಯಾಪ್ತಿಯ ಅಮೃತ ಸರೋವರ ಯೋಜನೆಯಡಿ ನಿರ್ಮಿಸಲಾದ ಕೆರೆ ನಿಯಮಾನುಸಾರ ಗುತ್ತಿಗೆ ಪಡೆದ ಗ್ರಾಪಂ ಮಟ್ಟದ ಒಕ್ಕೂಟ
- ಒಕ್ಕೂಟ ಮತ್ತು ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ನಡುವೆ ಒಪ್ಪಂದ ಮಾಡಿಕೊಂಡು ಮೀನುಗಾರಿಕೆ ಚಟುವಟಿಕೆಗೆ ಚಾಲನೆ
- ಕೆರೆಗೆ ಸೇರಿದ ಸುಮಾರು 12,000 ಕಟ್ಲಾ ಮತ್ತು ರೋಹು ಮೀನು ಮರಿಗಳು
- ಸುಮಾರು 8-9 ತಿಂಗಳ ನಂತರ ಕೆರೆಯಲ್ಲಿ ಬೆಳೆದ ಮೀನುಗಳ ಕೊಯ್ಲು
- ಕೊಯ್ಲಿನಲ್ಲಿ 60 ಕೆಜಿ ಮೀನು ಸಂಗ್ರಹಿಸಿ ಸ್ಥಳೀಯ ಮಾರುಕಟ್ಟೆಯಲ್ಲಿ ಕೆಜಿಗೆ 65 ದರದಲ್ಲಿ ಮಾರಾಟ
- ಮೀನುಗಳ ತೂಕ ಸರಾಸರಿ 700 ಗ್ರಾಂನಿಂದ 1 ಕೆಜಿವರೆಗೆ ಇತ್ತು

ಹೊಸ ಜೀವನೋಪಾಯದ ಅವಕಾಶ

ಪ್ರಕೃತಿ ಸಂಜೀವಿನಿ ಮಹಿಳಾ ಸ್ವಸಹಾಯ ಸಂಘದ ಸದಸ್ಯರು ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ಸೇರಿದವರಾಗಿದ್ದು, ಅಲ್ಪ ಪ್ರಮಾಣದ ಕೃಷಿ ಹಾಗೂ ಕೂಲಿ ಕೆಲಸಗಳನ್ನೇ ಅವಲಂಬಿಸಿ ಜೀವನ ಸಾಗಿಸುತ್ತಿದ್ದರು. ಕುಟುಂಬದ ಅಗತ್ಯ ಪೂರೈಸುವುದು ಕೂಡ ಸವಾಲಾಗಿದ್ದ ಸಂದರ್ಭದಲ್ಲಿ ಸಂಜೀವಿನಿ ಯೋಜನೆಯಡಿ ಅವರನ್ನು ಗುರುತಿಸಿ ಹೊಸ ಜೀವನೋಪಾಯದ ಅವಕಾಶ ಒದಗಿಸಲಾಯಿತು. ತರಬೇತಿಯಲ್ಲಿ ಮೀನು ಸಾಕಾಣಿಕೆಯ ವೈಜ್ಞಾನಿಕ ವಿಧಾನಗಳು, ಕೆರೆ ನಿರ್ವಹಣೆ, ಮೀನುಗಳ ಪೋಷಣೆ, ಆಹಾರ ನಿರ್ವಹಣೆ ಹಾಗೂ ಮಾರುಕಟ್ಟೆ ಸಂಪರ್ಕದ ಕುರಿತು ಮಾಹಿತಿ ನೀಡಿದ್ದರು.

ದಿಗಂತ ವಿಶೇಷ



ದುರಸ್ತಿ ಆಗದ ಆಡಳಿತಸೌಧದ ಮೇಲ್ಛಾವಣಿ

▸ ಯಲ್ಲಪ್ಪ (ಉಮೇಶ) ನವಲಗುಂದ

• ನರೇಗಲ್ಲ: ಜಕ್ಕಲಿ ಗ್ರಾಮದ ಆಡಳಿತಸೌಧದ ಮೇಲ್ಛಾವಣಿ ಕಿತ್ತು ಹೋಗಿ ಎರಡು ತಿಂಗಳು ಆಗುತ್ತಾ ಬಂದರೂ ಅದನ್ನು ಸರಿಪಡಿಸದೆ ಅಧಿಕಾರಿಗಳು ಹಾರಿಕೆ ಉತ್ತರ ನಿಡುತ್ತಾ ನಿರ್ಲಕ್ಷ್ಯ ಧೋರಣೆ ತೋರುತ್ತಿದ್ದಾರೆ ಎಂದು ಸಾರ್ವಜನಿಕರು ಆರೋಪಿಸುತ್ತಿದ್ದಾರೆ.

1955ರಲ್ಲಿ ಸ್ಥಾಪನೆಯಾಗಿದ್ದ ಈ ಐತಿಹಾಸಿಕ ಕಟ್ಟಡಕ್ಕೆ 71 ವರ್ಷಗಳ ಇತಿಹಾಸ ಹೊಂದಿದೆ ಹಾಗೂ ಗ್ರಾಮದ ಪ್ರಗತಿಯ ಕೇಂದ್ರ ಬಿಂದುವಾಗಿದ್ದ ಪಂಚಾಯಿತಿ ಕಟ್ಟಡವು ಇತ್ತೀಚೆಗೆ ಸುರಿದ ಬಿರುಗಾಳಿ ಸಹಿತ ಗಾಳಿ ಮಳೆಗೆ ಕಟ್ಟಡದ ಮೇಲ್ಛಾವಣಿ ಹಾರಿಹೋಗಿದ್ದು, ಕಚೇರಿಯು ಅನಾಥ ಸ್ಥಿತಿಯಲ್ಲಿದೆ. ಮೇಲ್ಛಾವಣಿಯ ತಗಡುಗಳು ಸಂಪೂರ್ಣವಾಗಿ ಕಿತ್ತು ಹೋಗಿವೆ. ಪ್ರಸ್ತುತ ಕಚೇರಿಯೊಳಗೆ ಸಿಬ್ಬಂದಿ ಕುಳಿತು ಕೆಲಸ ಮಾಡಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಮಳೆಯಿಂದ ರಕ್ಷಿಸಿಕೊಳ್ಳಲು ತಾತ್ಕಾಲಿಕವಾಗಿ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಲಾಗಿದೆ. ಗ್ರಾಮಸ್ಥರು ಹಾಗೂ ಜನಪ್ರತಿನಿಧಿಗಳು ಹಲವು ಬಾರಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ (ಇಒ) ಅವರ ಗಮನಕ್ಕೆ ವಿಷಯ ತಂದಿದ್ದರೂ, ಪ್ರತಿ ಬಾರಿ ಬೇರೆ ಬೇರೆ ಕಾರಣಗಳನ್ನು ನೀಡಿ ಸಮಸ್ಯೆಯಿಂದ ದೂರ ಉಳಿಯುತ್ತಿದ್ದಾರೆ ಎಂಬ ಆರೋಪ ಕೇಳಿ ಬಂದಿದೆ. ಮಳೆಗಾಲ ಆರಂಭವಾಗಿರುವ ಕಾರಣ ತುರ್ತಾಗಿ ದುರಸ್ಥಿ ಕಾರ್ಯ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ. ಕರ್ನಾಟಕದ ಏಕೀಕರಣ ರೂವಾರಿ ಸ್ವಾತಂತ್ರ್ಯ ಹೋರಾಟಗಾರರು ಅಂದಾನಪ್ಪ ದೊಡ್ಡಮೇಟಿ ಹಾಗೂ ಜ್ಞಾನದೇವ ದೊಡ್ಡ ಮೇಟಿ ಅವರು ಶಾಸಕರಾದಂತ ಈ ಜಕ್ಕಲಿ ಗ್ರಾಮಕ್ಕೆ ಇಂತಹ ಪರಿಸ್ಥಿತಿ ಒದಗಿರುವುದು ದುರಂತವೇ ಸರಿ ಎಂದು ಗ್ರಾಮಸ್ಥರು ಬೇಸರಿಸುತ್ತಿದ್ದಾರೆ.

> ಸ್ಥಳೀಯವಾಗಿ ಪರಿಶೀಲನೆ ಮಾಡಲಾಗಿದ್ದು, ಅದಕ್ಕೆ ಬೇಕಾದ ಅನುದಾನ ನಮ್ಮಲ್ಲಿಲ್ಲ. ಶಾಸಕರ ಜೊತೆ ಮಾತನಾಡಿ ವಿಶೇಷ ಅನುದಾನದಲ್ಲಿ ಬಿಡುಗಡೆ ಮಾಡಲು ಕೇಳಿಕೊಂಡಿದ್ದೇವೆ. ಅದು ಬಂದ ತಕ್ಷಣ ಜಕ್ಕಲಿ ಗ್ರಾಮ ಪಂಚಾಯತ್ ದುರಸ್ತಿ ಆಗಲಿದೆ.
> ■ **ಚಂದ್ರಶೇಖರ ಕಂದಕೂರ,** ರೋಣ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ

ದಿಗಂತ ವಿಶೇಷ



ಜಲ ಜೀವನ ಮಿಷನ್ ಕಾಮಗಾರಿ ಅಸಮರ್ಪಕ: ಆರೋಪ

• ಗದಗ: ತಾಲೂಕಿನ ಲಕ್ಕುಂಡಿ ಗ್ರಾಮದ ಪ್ರತಿ ಮನೆ ಮನೆಗೂ ಕುಡಿಯುವ ನೀರು ಪೂರೈಕೆ ಜಲ ಜೀವನ ಮಿಷನ್ ಕಾಮಗಾರಿ ಅಸಮರ್ಪಕ ಹಾಗೂ ಗ್ರಾಮದಲ್ಲಿ ಕುಡಿಯುವ ನೀರಿನ ಪೂರೈಕೆ ಮಾಡುವಲ್ಲಿ ಗ್ರಾಮ ಪಂಚಾಯತಿ ತಾರತಮ್ಯ ಮಾಡುತ್ತಿದೆ ಎಂದು ಗ್ರಾಮಸ್ಥರು ಆರೋಪಿಸಿದರು.

ಲಕ್ಕುಂಡಿ ಗ್ರಾಮದ ಅನ್ನದಾನೀಶ್ವರ ಸಭಾಭವನದಲ್ಲಿ ಗ್ರಾಮ ಪಂಚಾಯತಿಯು ಕರೆಯಲಾಗಿದ್ದ ವಿಶೇಷ ಗ್ರಾಮ ಸಭೆಯಲ್ಲಿ ಮಹಿಳೆಯರು, ಯುವಕರು ಮಾತನಾಡಿ, ಕಳೆದ ಹಲವು ವರ್ಷಗಳಿಂದ ಗ್ರಾಮದಲ್ಲಿ ಕೇವಲ 5 ವಾರ್ಡ್‌ಗಳಲ್ಲಿ ಮಾತ್ರ ಸಮರ್ಪಕವಾದ ನೀರು ಪೂರೈಕೆಯಾಗುತ್ತಿದೆ. ಆದರೆ 6,7,8,9 ಮತ್ತು 10 ನೇ ವಾರ್ಡ್‌ಗಳಲ್ಲಿ 8-12 ದಿನಕ್ಕೆ ನೀರು ಪೂರೈಸುತ್ತಿದ್ದು ಜನ ಮತ್ತು ಜಾನುವಾರುಗಳಿಗೆ ತೀವ್ರ ತೊಂದರೆಯಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನೀರು ಪೂರೈಕೆ ಮಾಡುವ ವಾಲ್ ಮನ್‌ರನ್ನು ಸಭೆಗೆ ಕರೆಯಿಸಿದ ಆಡಳಿತಾಧಿಕಾರಿ ಶರಣು ಗೋಗೇರಿ ಅವರು ವಾಲ್‌ಮನ್‌ರನ್ನು ತರಾಟೆಗೆ ತೆಗೆದುಕೊಂಡು ಸಮರ್ಪಕವಾದ ನೀರು ಪೂರೈಸಲು ಬೇಕಾಗುವ ಆರ್ಥಿಕ ಸಂಪನ್ಮೂಲವನ್ನು ಒದಗಿಸಲಾಗುತ್ತಿದೆ. ಇರುವ ಸಮಸ್ಯೆಯನ್ನು ನಮಗೆ ಗಮನಕ್ಕೆ ತರಬೇಕು. ನಿಷ್ಕಾಳಜಿ ವಹಿಸಿದ್ದಲ್ಲಿ ಸೂಕ್ತ ಕ್ರಮ ಜರುಗಿಸಬೇಕಾಗುತ್ತದೆ ಎಂದು ಎಚ್ಚರಿಸಿದರು. ಕುಡಿಯುವ ನೀರು ಪೂರೈಕೆ ಮಾಡುವ ಜೆಜೆಎಂ ಯೋಜನೆಯ ಕಾಮಗಾರಿಯು ಅಸಮರ್ಪಕವಾಗಿದ್ದು ಕಾಮಗಾರಿ ಮುಗಿದರೂ ಈವರೆಗೂ ನೀರು ಪೂರೈಕೆಯಾಗುತ್ತಿಲ್ಲ. ಸುಮಾರು 4 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿಯು ಪೂರ್ಣಗೊಂಡಿದೆ ಎಂದು ಗ್ರಾಮ ಪಂಚಾಯತಿಯು ಹೇಳುತ್ತಿದೆ. ಆದರೆ ಈ ವರೆಗೂ ಯಾಕೆ ನೀರು ಪೂರೈಕೆಯಾಗುತ್ತಿಲ್ಲ. ಇದಕ್ಕೆ ಸಂಭಂದಪಟ್ಟ ಎಂಜಿನಿಯರ್, ಗುತ್ತಿಗೆದಾರರ ವಿರುದ್ಧ ಲೋಕಾಯುಕ್ತಕಚೇರಿಗೆದೂರುಸಲ್ಲಿಸಲಾಗುವುದು ಎಂದು ತಾಪಂ ಮಾಜಿ ಅಧ್ಯಕ್ಷ ಎಂ.ಎನ್. ಉಮಚಗಿ. ಎನ್.ಐ.ಕಿರಿಟಗೇರಿ ದೂರಿದರು. ಅಧ್ಯಕ್ಷತೆ ವಹಿಸಿದ್ದ ಆಡಳಿತಾಧಿಕಾರಿ ಲಕ್ಕುಂಡಿ ಪಾರಂಪರಿಕ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ಮಾತನಾಡಿ, 101 ದೇವಸ್ಥಾನ ಹಾಗೂ ಭಾವಿಗಳನ್ನು ಹೊಂದಿರುವ ಲಕ್ಕುಂಡಿ ಗ್ರಾಮವು ವಿಶ್ವ ಪರಂಪರೆ ಪಟ್ಟಿಗೆ ಸೇರಿಸಲು ಪ್ರವಾಸೋದ್ಯಮ ಮಾಜಿ ಸಚಿವ ಹಾಗೂ ಹಾಲಿ ಶಾಸಕ ಎಚ್.ಕೆ. ಪಾಟೀಲ ಹಾಗೂ ಶಾಸಕ ಸಿ.ಸಿ.ಪಾಟೀಲ ಅವರು ಶ್ರಮ ವಹಿಸುತ್ತಿದ್ದು ತಮ್ಮೂರಿನ ಪರಿಸರವನ್ನು ಪ್ರವಾಸಿಗರನ್ನು ಸೆಳೆಯಲು ಸ್ವಚ್ಛ ಹಾಗೂ ಸುಂದರವಾಗಿ ಕಾಣಲು ಗ್ರಾಮ ಪಂಚಾಯತಿಯೊಂದಿಗೆ ಕೈಜೋಡಿಸಬೇಕು ಎಂದರು.

ಸಭೆಯ ಅನುಷ್ಠಾನ ಅಧಿಕಾರಿ ಮನೇರೆಗಾ ಯೋಜನೆಯ ಸಹಾಯಕ ನಿರ್ದೇಶಕ ಕುಮಾರ ಪೂಜಾರ, ಗ್ರಾಮೀಣ ವಿಶ್ವ ವಿದ್ಯಾಲಯದ ಸಂಯೋಜಕ ಸೋಮಲಿಂಗ ಕರ್ಣೆ, ಪಿಡಿಒ ಡಾ.ಅಮೀರನಾಯಕ, ಕಾರ್ಯದರ್ಶಿ ಎಂ.ಎ. ಗಾಜಿ ಇದ್ದರು.



ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ: ಡಿ.ಎನ್.ದೊಡ್ಡಮನಿ

• ಲಕ್ಷ್ಮೇಶ್ವರ: ಇದೀಗ ಶೈಕ್ಷಣಿಕ ವರ್ಷ ಪ್ರಾರಂಭವಾಗಿದ್ದು, ಈ ಹಿನ್ನೆಲೆಯಲ್ಲಿ ಪಾಲಕರು ತಮ್ಮ ಮಕ್ಕಳನ್ನು ಸರಿಯಾಗಿ ಶಾಲೆಗೆ ಕಳುಹಿಸಿ ಮತ್ತೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬೇಕು ಎಂದು ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ ನಂ.1 ರ ಮುಖ್ಯೋಪಾಧ್ಯಾಯ ಡಿ.ಎನ್.ದೊಡ್ಡಮನಿ ಹೇಳಿದರು.

ಅವರು ಶನಿವಾರ ಪಟ್ಟಣದ ಸುಮಾರು 150ಕ್ಕೂ ಹೆಚ್ಚು ವರ್ಷಗಳ ಪುರಾತನ ಇತಿಹಾಸ ಹೊಂದಿರುವ ಸರ್ಕಾರಿ ಹಿರಿಯ ಮಾದರಿ ಪ್ರಾಥಮಿಕ ಶಾಲೆ ನಂ.1ರ ವತಿಯಿಂದ ಎಸ್‌ಡಿಎಂಸಿ ಸಹಕಾರದೊಂದಿಗೆ ದಾಖಲಾತಿ ಆಂದೋಲನದಲ್ಲಿ ಮಕ್ಕಳೊಂದಿಗೆ ಪ್ರಭಾತಪೇರಿಯಲ್ಲಿ ಪಾಲ್ಗೊಂಡು ಮಾತನಾಡಿದರು. ಸರ್ಕಾರಿ ಶಾಲೆಗಳಲ್ಲಿ ಮಕ್ಕಳಿಗೆ ಎಲ್ಲ ಸೌಲಭ್ಯಗಳು ಉಚಿತವಾಗಿ ದೊರೆಯುತ್ತಿದ್ದು, ಇದೀಗ ನಮ್ಮ ಶಾಲೆಯಲ್ಲಿ ಕಳೆದ ವರ್ಷದಿಂದ ಇಂಗ್ಲೀಷ ಮಾಧ್ಯಮದಲ್ಲಿಯೂ ಉಚಿತ ಶಿಕ್ಷಣ ಪ್ರಾರಂಭವಾಗಿದ್ದು, ಬಿಸಿಯೂಟ, ಸಮವಸ್ತ್ರ, ಕ್ಷೀರಭಾಗ್ಯ, ಪಠ್ಯಪುಸ್ತಕ ಹೀಗೆ ಎಲ್ಲ ಸೌಲಭ್ಯಗಳು ಉಚಿತವಾಗಿ ದೊರೆಯುತ್ತಿದ್ದು, ಉತ್ತಮ ಶಿಕ್ಷಣವನ್ನು ನೀಡುವ ನುರಿತ ಶಿಕ್ಷಕರು ಇರುವುದರಿಂದ ಪಾಲಕರು ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಮುಂದಾಗಬೇಕು ಎಂದರು.

ಎಸ್‌ಡಿಎಂಸಿ ಅಧ್ಯಕ್ಷ ಯಲ್ಲಪ್ಪ ಶಿರಬಡಗಿ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ಕಲಿತ ಮಕ್ಕಳು ಇಂದು ನಾಡಿನ ಅನೇಕ ಉನ್ನತ ಸ್ಥಾನಗಳಲ್ಲಿದ್ದಾರೆ. ಸರ್ಕಾರಿ ಶಾಲೆಗಳಲ್ಲಿಯೂ ಖಾಸಗಿ ಶಾಲೆಗಳಿಗೆ ಕಡಿಮೆ ಇಲ್ಲದಂತೆ ಉನ್ನತ ಶಿಕ್ಷಣವನ್ನು ನೀಡಲಾಗುತ್ತಿದ್ದು, ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಕನ್ನಡ ಶಾಲೆಗಳಿಗೆ ಮಕ್ಕಳನ್ನು ಸೇರಿಸಿ ಇಲ್ಲಿ ಇಂಗ್ಲಿಷ್, ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ವ್ಯವಸ್ಥೆಯಿದೆ ಎಂದರು.

ಶಾಲೆಯ ಶಿಕ್ಷಕರಾದ ಎಸ್.ಎನ್.ಲಮಾಣಿ, ರಾಜೇಶ್ವರಿ ಅಡರಕಟ್ಟಿ, ಇ.ಎಚ್ .ಪೀಟರ್, ಎಸ್.ಎಸ್.ಮಹಾಲಿಂಗಶೆಟ್ಟರ, ಸವಿತಾ ಬೋಮಲೆ ಮತ್ತಿತರರಿದ್ದರು.



ಪುರಸಭೆಯ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಸದಸ್ಯರ ಭೇಟಿ

• ನರಗುಂದ: ಶನಿವಾರ ಪುರಸಭೆಯ ಘನತ್ಯಾಜ್ಯ ನಿರ್ವಹಣಾ ಘಟಕಕ್ಕೆ ಭೇಟಿ ನೀಡಿದ ಪಟ್ಟಣದ ಸ್ನೇಹವೃಂದ ಸರ್ಕಾರೇತರ ಸಂಸ್ಥೆ ಮತ್ತು ಸ್ವ-ಸಹಾಯ ಸಂಘ ಗಳ ಗುಂಪಿನ ಸದಸ್ಯರಿಗೆ ಹಿರಿಯ ಆರೋಗ್ಯ ನಿರೀಕ್ಷಕ ಸಂಗಮೇಶ ಬ್ಯಾಳಿ ಅವರು ಪಟ್ಟಣದಲ್ಲಿ ಪ್ರತಿನಿತ್ಯ ಉತ್ಪಾದನೆಯಾಗುವ 14 ಟನ್ ತ್ಯಾಜ್ಯವನ್ನು ಘಟಕದಲ್ಲಿನ ಹಸಿಕಸವನ್ನು ಬಯೋಗ್ಯಾಸ್ ಘಟಕ, ಎರೆಹುಳು ಗೊಬ್ಬರ ಘಟಕ ಮತ್ತು ವಿಂಡೋ ಘಟಕದಲ್ಲಿ ಸಂಸ್ಕರಣೆ ಮಾಡುತ್ತಿರುವುದನ್ನು ವಿವರಿಸಿದರು.

ತಿ ಒಣಕಸವನ್ನು ಎಮ್‌ಆರ್‌ಎಫ್ ಘಟಕದಲ್ಲಿ ಸಂಸ್ಕರಣೆ ಮಾಡುವುದನ್ನು ಮತ್ತು ಈ ಹಿಂದಿನ ಪಾರಂಪರಿಕ ತ್ಯಾಜ್ಯವನ್ನು ಬಯೋ ರೇಮಿಡಿಯೇಶನ್ ಮಾಡಿ ವಿಲೇವಾರಿ ಮಾಡುತ್ತಿರುವುದನ್ನು ಪ್ರಾತ್ಯಕ್ಷತೆ ತೋರಿಸಲಾಯಿತು. ಮೂಲದಲ್ಲಿಯೇ ತ್ಯಾಜ್ಯವನ್ನು ಹಸಿಕಸ, ಒಣಕಸ, ಅಪಾಯಕಾರಿ ತ್ಯಾಜ್ಯ ಮತ್ತು ವಿಶೇಷ ಕಾಳಜಿ ತ್ಯಾಜ್ಯವಾಗಿ ನಾಲ್ಕು ವಿಭಾಗಗಳಾಗಿ ಪುರಸಭೆಯ ವಾಹನಗಳಿಗೆ ನೀಡಿದಲ್ಲಿ ತ್ಯಾಜ್ಯ ವಿಲೇವಾರಿ ಸುಲಭವಾಗುವ ಬಗ್ಗೆ ತಿಳಿ ಹೇಳಿದರು. ಘಟಕಕ್ಕೆ ಭೇಟಿ ನೀಡಿದ ಸ್ನೇಹವೃಂದ ಗುಂಪಿನ ಸದಸ್ಯರುಗಳಾದ ಮಂಗಳಾ ಪಾಟೀಲ, ಅನಿತಾ ಗುಡಿಸಾಗರ, ದಿವ್ಯಾ ಸುಳ್ಳದ, ಶ್ವೇತಾ ತೋಗಿಹಾಳ, ರೂಪಾ ಗಾಣಿಗೇರ ಹಾಗೂ ಇತರೆ ಮಹಿಳಾ ಸದಸ್ಯರಿಗೆ ಎರೆಹುಳು ಗೊಬ್ಬರ ವಿತರಿಸಲಾಯಿತು. ಪುರಸಭೆಯ ಗಿರೀಶ ನರಗುಂದ, ಕಿರಿಯ ಆರೋಗ್ಯ ನಿರೀಕ್ಷಕ ಬಸವರಾಜ ಶಲವಡಿ, ಕಂದಾಯ ಅಧಿಕಾರಿ ರವೀಂದ್ರನಾಥ ಮಳೇಕರ, ಕಂದಾಯ ನಿರೀಕ್ಷಕ ಮಲ್ಲಿಕಾರ್ಜುನ ಕೋಲಕಾರ, ರಾಚಪ್ಪ ಕೆರೂರ, ಮಹಾದೇವಪ್ಪ ಜೋಗಣ್ಣವರ, ರಾಜೇಸಾಬ ಈಟಿ, ಶಿವಾನಂದ ಬೇವಿನಗಿಡದ, ಬಸವರಾಜ ಚಲವಾದಿ, ಮಾರುತಿ ದಂಡಾಪೂರ, ಆನಂದ ದಿಬ್ಬದಮನಿ ಹಾಗೂ ಕವಿತಾ, ಅಂಜಲಿ, ಸವಿತಾ, ಪ್ರಿಯಾಂಕಾ, ರಾಜೇಶ್ವರಿ ಸಮುದಾಯ ಸಂಚಾಲಕರು ಉಪಸ್ಥಿತರಿದ್ದರು.



ಪರಿಸರ ರಕ್ಷಣೆ ಪ್ರತಿಯೊಬ್ಬರ ಹೊಣೆ



• ರೋಣ: ಪರಿಸರ ಉಳಿಸುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ ಎಂದು ಆರ್ ಜಿಎಸ್ ಶಿಕ್ಷಣ ಸಂಸ್ಥೆಯ ಬಿಇಡಿ ವಿದ್ಯಾಲಯದ ಪ್ರಾಚಾರ್ಯ ಡಾ. ವೈ.ಎನ್.ಪಾಪಣ್ಣವರ ಹೇಳಿದರು.

ಅವರು ವಿಶ್ವ ಪರಿಸರ ದಿನಚಾರಣೆ ಅಂಗವಾಗಿ ಆರ್‌ಜಿಎಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಎನ್‌ಎಸ್‌ಎಸ್ ಕೋಶ ಹಾಗೂ ಬಿಇಡಿ ವಿದ್ಯಾರ್ಥಿಗಳ ಸಂಯೋಗದಲ್ಲಿ ಸಸಿಗಳನ್ನು ನೆಡುವ ಮೂಲಕ ಮಾತನಾಡಿದರು. ಸಸಿಗಳನ್ನು ನೆಟ್ಟು ಅವುಗಳನ್ನು ಹಾಗೆ ಬಿಡುವುದಲ್ಲ ಬದಲಾಗಿ ಅವುಗಳ ಸಂರಕ್ಷಣೆಯಲ್ಲಿ ತೊಡಗಿಕೊಳ್ಳಬೇಕು. ಓರ್ವ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ತಲಾ ಒಂದು ಸಸಿಯನ್ನು ನಾನು ಸ್ವಯಂ ಪ್ರೇರಣೆಯಿಂದ ಬೆಳೆಸುತ್ತೇನೆ ಎಂದು ಪ್ರಮಾಣ ಮಾಡಿ ಸಸಿಗಳನ್ನು ನಡಬೇಕು. ಬೆಳೆದ ಮರಗಳು ನಮಗೆ ನೆರಳನ್ನು ಒದಗಿಸುತ್ತವೆ ಎಂದರು. ಮರ ಗಿಡಗಳನ್ನು ಕಡಿಯುವ ಬದಲು ಅವುಗಳ ಪೋಷಣೆ ಮಾಡುವುದು ಮಾನವನ ಕೆಲಸವಾಗಬೇಕು ಎಂದರು. ಎನ್.ಆರ್.ಐಹೊಳ್ಳಿ, ಎಚ್.ಆರ್.ದೊಡ್ಡಮನಿ, ಎನ್.ಎಸ್. ಗೋದಿ, ಎಸ್.ಎಸ್.ಗೌಡರ, ಎಂ.ಎಂ.ಗುಂಡಗೋಪುರ, ಜೆ.ಐ.ವೀರಾಪೂರ ಸೇರಿದಂತೆ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಇದ್ದರು.

ಸಾಮಾಜಿಕ ಜವಾಬ್ದಾರಿ ಅವಶ್ಯ: ಬಳಗಾನೂರ

• ಗಜೇಂದ್ರಗಡ: ಪರಿಸರ ಸಂರಕ್ಷಣೆಯಲ್ಲಿ ಆರೋಗ್ಯಯುತ ಸಮಾಜ ನಿರ್ಮಾಣ ಅಡಗಿದೆ. ಈ ನಿಟ್ಟಿನಲ್ಲಿ ಪರಿಸರ ಉಳಿಸುವ ಸಾಮಾಜಿಕ ಜವಾಬ್ದಾರಿ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಪುಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಹೇಳಿದರು.

ಪಟ್ಟಣದ ಪುರಸಭೆ ಉದ್ಯಾನವನದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವರ್ಷದಿಂದ ವರ್ಷಕ್ಕೆ ಹಸಿರು ಸಂಪತ್ತು ಕಡಿಮೆಯಾಗುತ್ತಿದೆ. ನಿರಂತರವಾಗಿ ಮರಗಳ ಮಾರಣ ಹೋಮ ನಡೆಯುತ್ತಲೇ ಇದೆ. ಆದರೂ ಈ ಬಗ್ಗೆ ಯಾರೂ ಜಾಗರೂಕತೆ ವಹಿಸುತ್ತಿಲ್ಲ ಗಿಡಗಳನ್ನು ನೆಡುವುದಕ್ಕೆ ಅಭಿಪ್ಸೆ ತೋರುತ್ತಿಲ್ಲ. ಇದರಿಂದಾಗಿ ಪರಿಸರದಲ್ಲಿ ಹಲವು ವ್ಯತಿರಿಕ್ತ ಬದಲಾವಣೆಗಳಾಗಿವೆ. ದುರಾಸೆಗೆ ಮೇಲೆ ದೌರ್ಜನ್ಯ ಎಸಗುತ್ತಿರುವುದರಾದಿ ಮುಂದಿನ ಪೀಳಿಗೆಗೆ ನೈಸರ್ಗಿಕ ಸಂಪನ್ಮೂಲಗಳು ಸಂಪೂರ್ಣವಾಗಿ ಬರಿದಾಗುವ ಸಾಧ್ಯತೆಯಿದ್ದು, ಎಲ್ಲರೂ ಸಸಿ ನೆಡುವ ಸಂಕಲ್ಪ ಮಾಡಬೇಕಿದೆ ಎಂದರು.

ಪುರಸಭೆ ಆರೋಗ್ಯ ಅಧಿಕಾರಿ ಶಿವಕುಮಾರ ಇಲ್ಲಾಳ ಮಾತನಾಡಿದರು. ಪುರಸಭೆ ಸಿಬ್ಬಂದಿ ನಜೀರಸಾಬ್ ಸಾಂಗ್ಲಿಕಾರ, ಶಿವಪ್ಪ ಮಾದರ, ಮಂಜುನಾಥ ಬೆಳವಣಿಕಿ, ಉಮಾ ಚವ್ಹಾಣ, ಸುಕನ್ಯಾ ರಣದೇವ, ಶಾರದಾ ಡೊಳ್ಳಿನ, ನಂದಿನ ಕುಡೂರ, ಸವಿತಾ ಹಾಳಕೇರಿ, ವಿಜಯಲಕ್ಷ್ಮಿ ಹಾಳಕೇರಿ, ಅಶ್ವಿನಿ ರಾಠೋಡ ಸೇರಿದಂತೆ ಇನ್ನಿತರರಿದ್ದರು.



ಸರ್ಕಾರಿ ಶಾಲೆಯಲ್ಲಿ ಪರಿಸರ ದಿನಾಚರಣೆ



• ಮುಂಡರಗಿ: ನಮ್ಮ ಮುಂದಿನ ದೊಡ್ಡ ಸಂಪತ್ತೆಂದರೆ ಕಾಡು. ಅದನ್ನು ನಾವು ಉಳಿಸಿ ಬೆಳೆಸಿದರೆ ಮಾತ್ರ ನಮ್ಮ ಮುಂದಿನ ಪೀಳಿಗೆ ನೆಮ್ಮದಿಯಿಂದ ಜೀವನ ಸಾಗಿಸಲು ಸಾಧ್ಯ ಎಂದು ವೀರೇಶ ಶಾಸ್ತ್ರಿಮಠ ಹೇಳಿದರು.

ಅವರು ತಾಲೂಕಿನ ಹೆಸರೂರು ಗ್ರಾಮದ ಸರ್ಕಾರಿ ಪ್ರೌಢಶಾಲೆಯಲ್ಲಿ ಜರುಗಿದ ಪರಿಸರ ದಿನಾಚರಣೆಯಲ್ಲಿ ಮಾತನಾಡಿದರು. ಕೃಷಿ ಪಂಡಿತ ಪ್ರಶಸ್ತಿ ಪುರಸ್ಕೃತ ರೈತ ಗರುಡಪ್ಪ ಜಂತ್ಲಿ ಮಾತನಾಡಿ, ಆಹಾರ , ಆರೋಗ್ಯ ಮತ್ತು ನಮಗೆ ಬೇಕಾದ ಎಲ್ಲ ರೀತಿಯ ಮನರಂಜನೆಯನ್ನು ಒದಗಿಸುವ ಸುಂದರ ತಾಣ ಕಾಡು. ಗಿಡಮರಗಳು ನಮ್ಮ ಭೂಮಿಯನ್ನು ಜೀವ ಸ್ನೇಹಿಯಾಗಿ ಪರಿವರ್ತನೆ ಮಾಡುತ್ತವೆ. ಅವುಗಳನ್ನು ರಕ್ಷಿಸಿ ನಮ್ಮ ಆರೋಗ್ಯ ಕಾಪಾಡಿಕೊಳ್ಳೋಣ ಎಂದರು. ಎಸ್.ಡಿ.ಎಂ.ಸಿ. ಅಧ್ಯಕ್ಷೆ ಶ್ರುತಿ ಆರೇರ ಅಧ್ಯಕ್ಷತೆ ವಹಿಸಿದ್ದರು. ಮುಖ್ಯೋಪಾಧ್ಯಾಯ ಎಸ್.ಸಿ. ಹರ್ತಿ ಸ್ವಾಗತಿಸಿದರು. ಮುಂಡರಗಿ ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ನಾಗರಾಜ ಹಳ್ಳಿಕೇರಿ ಪ್ರಾಸ್ತಾವಿಸಿದರು. ವೀರಣ್ಣ ಕವಲೂರ, ಶರಣಪ್ಪ ಹಳ್ಳಿಗುಡಿ, ಶಾಂತಾ ಇಮ್ರಾಪುರ, ಎಚ್.ಎನ್ ಹಿರೇಮಠ ಇದ್ದರು. ಮಹೇಶ ಎಸ್. ಎಚ್. ನಿರ್ವಹಿಸಿದರು. ರವಿ ದೇವರಡ್ಡಿ ವಂದಿಸಿದರು.

ಗಿಡಗಳ ಆರೈಕೆಗೂ ಗಮನ ನೀಡಿ

• ಮುಂಡರಗಿ: ನಾವೆಲ್ಲರೂ ಪರಿಸರವನ್ನು ಸಂರಕ್ಷಿಸಿದರೆ ನಮ್ಮನ್ನು ಪರಿಸರ ಸಂರಕ್ಷಿಸುತ್ತದೆ ಹಾಗೂ ಗಿಡಗಳನ್ನು ಕೇವಲ ಪರಿಸರ ದಿನಾಚರಣೆಯ ದಿನ ಹಚ್ಚಿ ಬಿಡುವುದಲ್ಲ, ಅದನ್ನು ಪ್ರತಿದಿನ ನೀರು ಹಾಕಿ ಬೆರೆಸಿ ಸಂರಕ್ಷಿಸಿ ಆರೈಕೆ ಮಾಡಿ ಬೆಳೆಸಬೇಕು ಎಂದು ಭುವನೇಶ್ವರಿ ವಿದ್ಯಾವರ್ಧಕ ಸಮಿತಿಯ ಗೌರವಕಾರ್ಯದರ್ಶಿ ಪ್ರೊ.ಎ.ವೈ.ನವಲಗುಂದ ಹೇಳಿದರು.

ಅವರು ಜೆ.ಟಿ. ಕೋಟೆ ಪ್ರೌಢಶಾಲೆಯಲ್ಲಿ 2026-27ನೇ ಸಾಲಿನ ಪರಿಸರ ದಿನಾಚರಣೆಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭುವನೇಶ್ವರಿ ವಿದ್ಯಾವರ್ಧಕ ಸಮಿತಿಯ ಸದಸ್ಯ ಬಿ.ವಿ. ಮುದ್ದಿ ಉದ್ಘಾಟಿಸಿ ಮಾತನಾಡಿ, ನಮ್ಮ ತಾಲೂಕಿನಲ್ಲಿ ಸಿ.ಎಸ್.ಅರಸನಾಳ ಅವರು ಸಾಕಷ್ಟು ಮರಗಳನ್ನು ನೆಟ್ಟು ಪರಿಸರ ಸಂರಕ್ಷಣೆ ಮಾಡಿದ್ದಾರೆ. ಅವರು ಬರೆದ ಪರಿಸರದ ವಚನಗಳು ಮಾರ್ಮಿಕವಾಗಿವೆ. ವಿದ್ಯಾರ್ಥಿಗಳು ಪರಿಸದ ವಚನಗಳನ್ನು ಕಂಠಪಾಠಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಿ.ಎಸ್. ಅರಸನಾಳ ಮಾತನಾಡಿ, 50 ವರ್ಷದ ಒಂದು ಗಿಡ 14.70 ಲಕ್ಷ ರೂ.ಗಳಷ್ಟು ಸಮಾಜಸೇವೆ ಮಾಡುತ್ತದೆ. ಗಿಡಗಳನ್ನು ನೆಟ್ಟು ಬೆಳೆಸುವುದರಿಂದ ನಿಮ್ಮ ಸೇವೆಯೂ ಇತರರಿಗೆ ಸಲ್ಲುತ್ತದೆ ಎಂದರು. ಸಂಸ್ಥೆಯ ಸದಸ್ಯ ಆರ್.ಬಿ.ಹಕ್ಕಂಡಿ ಹಾಗೂ ಅನೇಕ ವಿದ್ಯಾರ್ಥಿಗಳು ಮಾತನಾಡಿದರು. ಶಿಕ್ಷಕರಾದ ಎಂ.ಟಿ.ಮಳಾಪೂರ, ಆರ್.ವಿ.ಅರ್ಕಸಾಲಿ, ಶಶಿಧರ ಅಡರಕಟ್ಟಿ, ಪ್ರದೀಪ ನಾಯಕ, ಸುಧಾ ಹಾಲನಗೌಡರ ಇದ್ದರು. ಶಾಲೆಯ ಮುಖ್ಯೋಪಾಧ್ಯಾಯ ಮಂಜುನಾಥ ತೆಗ್ಗಿನಮನಿ ಸ್ವಾಗತಿಸಿದರು. ವಿದ್ಯಾರ್ಥಿ ನೀಲಮ್ಮ ಚಿಕ್ಕಣ್ಣವರ ನಿರೂಪಿಸಿದರು. ಪೂರ್ಣಿಮಾ ಮೋರನಾಳ ವಂದಿಸಿದರು.



ಕಿರುಸುದ್ದಿ

ಸಿಇಟಿಯಲ್ಲಿ ಅನ್ಮೋಲ್ ಪ್ರಭು ಸಾಧನೆ



ಧಾರವಾಡ: ಇತ್ತೀಚಿಗೆ ನಡೆದ ವೃತ್ತಿ ಶಿಕ್ಷಣ ಪದವಿ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆ(ಸಿಇಟಿ) ಶನಿವಾರ ಫಲಿತಾಂಶ ಪ್ರಕಟಗೊಂಡಿದ್ದು, ಅರ್ಜುನ ಕಾಲೇಜಿನ ವಿದ್ಯಾರ್ಥಿ ಅನ್ಮೋಲ್ ಪ್ರಭು ಉತ್ತಮ ಸಾಧನೆಗೈದು ಜಿಲ್ಲೆಗೆ ಕೀರ್ತಿ ತಂದಿದ್ದಾನೆ. ವಿವಿಧ ವೃತ್ತಿಪರ ಕೋರ್ಸ್‌ಗಳ ರ‍್ಯಾಂಕಿಂಗ್‌ನಲ್ಲಿ ಅನ್ಮೋಲ್ ಪ್ರಭು ಅತ್ಯುನ್ನತ ಸ್ಥಾನಗಳನ್ನು ಮುಡಿಗೇರಿಸಿಕೊಂಡಿದ್ದು, ಬಿಎಸ್ಸಿ ಕೃಷಿಯಲ್ಲಿ 2ನೇ ರ‍್ಯಾಂಕ್, ಬಿ ಮತ್ತು ಡಿ ಫಾರ್ಮ 8ನೇ, ಯೋಗ ಮತ್ತು ಪ್ರಕೃತಿ ವಿಜ್ಞಾನದಲ್ಲಿ 9ನೇ ರ‍್ಯಾಂಕ್ ಪಡೆದಿದ್ದಾನೆ. ಇದಲ್ಲದೇ, ಪಶು ವೈದ್ಯಕೀಯ ವಿಜ್ಞಾನ ಹಾಗೂ ಬಿಎಸ್ಸಿ ನರ್ಸಿಂಗ್‌ನಲ್ಲೂ ಸಹ 10ನೇ ರ‍್ಯಾಂಕ್ ಪಡೆದಿದ್ದಾನೆ. ಅನ್ಮೋಲ್ ಅವರ ಈ ಅಸಾಧಾರಣ ಸಾಧನೆಗೆ ಅರ್ಜುನ ವಿಜ್ಞಾನ ಪದವಿಪೂರ್ವ ಕಾಲೇಜಿನ ಆಡಳಿತ ಮಂಡಳಿ, ಪ್ರಾಚಾರ್ಯರು ಅಭಿನಂದಿಸಿದ್ದಾರೆ. ರಾಜ್ಯ ಮಟ್ಟದಲ್ಲಿ ಏಕಕಾಲಕ್ಕೆ ಹಲವು ವಿಭಾಗಗಳಲ್ಲಿ ಟಾಪ್ ರ‍್ಯಾಂಕ್ ಪಡೆದ ಅನ್ಮೋಲ್ ಪ್ರಭು ಹಾಗೂ ಅವರ ಪಾಲಕರಿಗೆ ಸಾರ್ವಜನಿಕರಿಂದ ಮತ್ತು ಶಿಕ್ಷಣ ಪ್ರೇಮಿಗಳಿಂದ ಅಭಿನಂದನೆ ಮಹಾಪೂರ ಹರಿದು ಬರುತ್ತಿದ್ದು, ಹಿತೈಷಿಗಳು ಶುಭ ಹಾರೈಸಿದ್ದಾರೆ.

ಇಂದು ವೃಕ್ಷಾರೋಪಣ ಅಭಿಯಾನ

ಸಿದ್ದಾಪುರ: ತಾಲೂಕಿನ ಶ್ರೀಮನ್ನೆಲೆಮಾವಿನ ಮಠದಲ್ಲಿ ಬೇಡ್ತಿ-ಅಘನಾಶಿನಿ ಕೊಳ್ಳ ಸಂರಕ್ಷಣಾ ಸಮಿತಿ ಇವರ ಆಶ್ರಯದಲ್ಲಿ ಬೇಡ್ತಿ-ಅಘನಾಶಿನಿ ನದಿ ತಿರುವು ಯೋಜನೆ ಕೈಬಿಡಲು ಒತ್ತಾಯಿಸಿ ವೃಕ್ಷಾರೋಪಣ ಅಭಿಯಾನ ಜೂ.7ರಂದು ಮಧ್ಯಾಹ್ನ 3.30ಕ್ಕೆ ನಡೆಯಲಿದೆ. ಶ್ರೀಮನ್ನೆಲೆಮಾವು ಮಠದ ಸಮೀಪದ ಅಘನಾಶಿನಿ ನದಿ ತೀರದಲ್ಲಿ ವೃಕ್ಷಾರೋಪಣ ಕಾರ್ಯಕ್ರಮಕ್ಕೆ ಸ್ವರ್ಣವಲ್ಲಿ ಗಂಗಾಧರೇಂದ್ರ ಸರಸ್ವತಿ ಮಹಾಸ್ವಾಮಿಗಳು ಹಾಗೂ ಶ್ರೀಮನ್ನೆಲೆಮಾವ ಮಠದ ಮಾಧವಾನಂದ ಭಾರತಿ ಸ್ವಾಮಿಗಳು ಚಾಲನೆ ನೀಡಲಿದ್ದಾರೆ. ನಂತರ ಮಠದ ಸಭಾಭವನದಲ್ಲಿ ಸಭಾಕಾರ್ಯಕ್ರಮ ನಡೆಯಲಿದೆ ಎಂದು ಸಂಘಟಕರು ತಿಳಿಸಿದ್ದಾರೆ.

ಎಸ್ಡಿಎಂ ವಿವಿ 4ನೇ ಘಟಿಕೋತ್ಸವ | ಡಾ.ಡಿ.ವೀರೇಂದ್ರ ಹೆಗ್ಗಡೆ ಅಭಿಮತ

ಜ್ಞಾನದೊಂದಿಗೆ ನೈತಿಕತೆ ಮುಖ್ಯ



ಧಾರವಾಡ: ಶಿಕ್ಷಣ ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗಬಾರದು. ಅದು ಜೀವನದ ಮೌಲ್ಯಗಳನ್ನು ಕಲಿಸಬೇಕು. ಪ್ರತಿಯೊಬ್ಬ ವ್ಯಕ್ತಿಗೂ ಜ್ಞಾನದೊಂದಿಗೆ ನೈತಿಕತೆ ಮುಖ್ಯ ಎಂದು ಎಸ್ಡಿಎಂ ವಿವಿಯ ಕುಲಪತಿ ಡಾ.ಡಿ.ವೀರೇಂದ್ರ ಹೆಗ್ಗಡೆ ಹೇಳಿದರು.

ಸ್ಥಳೀಯ ಸತ್ತೂರಿನ ಡಿ.ವೀರೇಂದ್ರ ಹೆಗ್ಗಡೆ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯದ ನಾಲ್ಕನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, ಶಿಕ್ಷಕರ ಶೈಕ್ಷಣಿಕ ಜ್ಞಾನ ವಿದ್ಯಾರ್ಥಿಗಳು ಪಡೆಯಬೇಕು ಎಂದರು.

ಸೇವೆಯ ಮನೋಭಾವ: ವೈದ್ಯಕೀಯ ಮತ್ತು ಉನ್ನತ ಶಿಕ್ಷಣ ಮುಗಿಸಿ, ಹೊರ ಹೋಗುತ್ತಿರುವ ಯುವ ಪೀಳಿಗೆಯು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಪ್ರೀತಿ ಹಾಗೂ ಕರುಣೆಯಿಂದ ಸೇವೆ ಸಲ್ಲಿಸಬೇಕು ಎಂದು ಖಾವಂದರು ಕಿವಿಮಾತು ಹೇಳಿದರು.

ನೈತಿಕ ಮೌಲ್ಯಗಳು: ವೃತ್ತಿ ಬದುಕಿನಲ್ಲಿ ಎಷ್ಟೇ ಎತ್ತರಕ್ಕೆ ಬೆಳೆದರೂ, ನೈತಿಕತೆ ಹಾಗೂ ಪ್ರಾಮಾಣಿಕತೆ ಬಿಡಬಾರದು. ಹಣ ಸಂಪಾದನೆಗೆ ಮಹತ್ವ ನೀಡಬಾರದು. ಸತ್ಯದ ಹಾದಿಯಲ್ಲಿ ನಡೆದರೆ ಯಶಸ್ಸು, ಕೀರ್ತಿ ಹಾಗೂ ಹಣ ತಾನಾಗಿ ಬರಲಿದೆ ಎಂದರು.

ಘಟಿಕೋತ್ಸವ ಭಾಷಣ ಮಾಡಿದ ವಿಜಯಪುರದ ಬಿ.ಎಲ್.ಡಿ.ಇ ವಿಶ್ವವಿದ್ಯಾಲಯ ಉಪಕುಲಪತಿಗಳಾದ ಡಾ.ಅರುಣ ಇನಾಮದಾರ, ಇಂದಿನ ತಂತ್ರಜ್ಞಾನದ ಜೊತೆ ವೈದ್ಯಕೀಯ ಕ್ಷೇತ್ರದ ಸವಾಲುಗಳು ಹಾಗೂ ಜವಾಬ್ದಾರಿಗಳ ಕುರಿತಂತೆ ಬೆಳಕು ಚೆಲ್ಲಿಸಿದರು.

ತಂತ್ರಜ್ಞಾನದ ಸದ್ಬಳಕೆ: ವೈದ್ಯಕೀಯ ಕ್ಷೇತ್ರ ದಿನದಿಂದ ದಿನಕ್ಕೆ ಬದಲಾಗುತ್ತಿದ್ದು, ಪದವಿ ಪಡೆದ ಬಳಿಕವೂ ನಿರಂತರ ಕಲಿಕೆ ಮತ್ತು ಸಂಶೋಧನೆಗಳಲ್ಲಿ ತೊಡಬೇಕು. ಆಧುನಿಕ ತಂತ್ರಜ್ಞಾನ ರೋಗಿಗಳ ಗುಣಮುಖಕ್ಕೆ ಪೂರಕವಾಗಿ ಬಳಸಬೇಕು ಎಂದು ಡಾ.ಅರುಣ ಸಲಹೆ ನೀಡಿದರು.

ಶಿಸ್ತು-ಬದ್ಧತೆ ಸೂತ್ರ: ಎಸ್ಡಿಎಂ ಸಂಸ್ಥೆಯ ಉಪಾಧ್ಯಕ್ಷ ಡಿ.ಸುರೇಂದ್ರಕುಮಾರ ಮಾತನಾಡಿ, ಸಂಸ್ಥೆಯು ಗುಣಮಟ್ಟದ ಶಿಕ್ಷಣ ನೀಡಲು ಬದ್ಧ. ಯುವ ವೃತ್ತಿಪರರು ಜೀವನದಲ್ಲಿ ಕಠಿಣ ಪರಿಶ್ರಮ, ಶಿಸ್ತಿನ ಜೊತೆ ಸಮಯ ಪ್ರಜ್ಞೆ ರೂಢಿಸಿಕೊಳ್ಳುವಂತೆಯೂ ಕಿವಿಮಾತು ಹೇಳಿದರು.

ವಿದ್ಯಾರ್ಥಿಗಳು ವೃತ್ತಿ ಬದುಕಿಗೆ ಹೆಜ್ಜೆ ಇಡುವ ಮುನ್ನ ಭವಿಷ್ಯದ ಜವಾಬ್ದಾರಿಯ ಪ್ರಮಾಣ ವಚನ ಸ್ವೀಕರಿಸಿದರು. ಪದ್ಮಲತಾ ನಿರಂಜನ್, ವಿ.ಜೀವಂದರಕುಮಾರ್, ಸಾಕೇತ ಶೆಟ್ಟಿ, ಡಾ.ನೈದಿಲ ಶೆಟ್ಟಿ, ವಿ.ಜಿ.ಪ್ರಭು, ಡಾ.ಬಲರಾಮ ನಾಯ್ಕ ಅನೇಕರು ಇದ್ದರು.

ಏಳು ಡಾಕ್ಟರೇಟ್ ಪದವಿ ಪ್ರದಾನ

ಘಟಿಕೋತ್ಸವದಲ್ಲಿ 397 ಸ್ನಾತಕ ಪದವಿ, 180 ಸ್ನಾತಕೋತ್ತರ ಪದವಿ ಹಾಗೂ ಏಳು ಡಾಕ್ಟರೇಟ್ ಪದವಿ ಜೊತೆಗೆ 10 ಜನ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕಗಳು, ಪಾರಿತೋಷಕ ಹಾಗೂ ನಗದು ಬಹುಮಾನ ಗಣ್ಯರು ಪ್ರದಾನ ಮಾಡಿದರು.

2028ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿಯೇ ಚುನಾವಣೆ: ಎಂಬಿಪಾ



ವಿಜಯಪುರ: 2028ರಲ್ಲಿ ಸಿದ್ದರಾಮಯ್ಯನವರ ನೇತೃತ್ವದಲ್ಲಿಯೇ ಚುನಾವಣೆಗೆ ಹೋಗುತ್ತೇವೆ. ಈಗಾಗಲೇ ಇದನ್ನ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಸ್ಪಷ್ಟಪಡಿಸಿದ್ದಾರೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಈ ಕುರಿತು ನಗರದಲ್ಲಿ ಪ್ರತಿಕ್ರಿಯಿಸಿದ ಅವರು, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯುವ ಮುಖಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ ವಿನಃ, ಇವತ್ತಿಗೂ ಸಿದ್ದರಾಮಯ್ಯನವರು ರಾಜ್ಯವಷ್ಟೇ ಅಲ್ಲ ರಾಷ್ಟ್ರ ಕಂಡ ಓರ್ವ ಶ್ರೇಷ್ಠ ನಾಯಕ ಎಂದರು.

ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಜನಾಕ್ರೋಶದ ಫಲ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿಕೆ ವಿಚಾರಕ್ಕೆ, ಜನಾಕ್ರೋಶವಲ್ಲ, ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂಟು ವರ್ಷ ಕಾಲ ನೇತೃತ್ವ ವಹಿಸಿಕೊಂಡು ಬಡವರ ಸಲುವಾಗಿ ಶೋಷಿತರು, ರೈತರ ಪರವಾಗಿ ದೃಢ ಸಂಕಲ್ಪ ಮಾಡಿ ಕೆಲಸ ಮಾಡಿದ್ದಾರೆ. ಹಸಿದವರಿಗೆ ಅನ್ನ ಕೊಟ್ಟಂತವರು ಸಿದ್ದರಾಮಯ್ಯನವರು. ಯಾರು ಅವರಿಂದ ಬೇಸರವಾಗಿಲ್ಲ ಎಂದರು.

ಕಾಂಗ್ರೆಸ್ ಸರ್ಕಾರ ಒಂದು ವಿಕೆಟ್ ಪತನ ಆಗಿದೆ. 20 ತಿಂಗಳು ಸರ್ಕಾರ ನಡೆಯಲ. ಬಿಜೆಪಿಗರ ಆರೋಪ ವಿಚಾರಕ್ಕೆ, ಯಡಿಯೂರಪ್ಪನವರಿಗೆ ಪಾಪ ಅವಧಿ ಪೂರ್ಣ ಮಾಡಲು ಬಿಡಲಿಲ್ಲ. ಸಿದ್ದರಾಮಯ್ಯನವರಿಗೆ ಐದು ವರ್ಷ ಪೂರ್ಣ, ಸದ್ಯ 3 ವರ್ಷ ಅಧಿಕಾರ ಮಾಡಿದ್ದು, ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿದ್ದು ಸಿದ್ದರಾಮಯ್ಯನವರು. ಬಿಜೆಪಿಯಲ್ಲಿ ಏನಾಯಿತು, ಎರಡು ವರ್ಷಕ್ಕೆ ಯಡಿಯೂರಪ್ಪ ಹಟಾವೋ ಮಾಡಿದರು. ಮೂರು ಜನ ಮುಖ್ಯಮಂತ್ರಿಗಳಾದರು. ಇವರೇನು ನಮಗೆ ಬುದ್ಧಿವಾದ ಹೇಳುತ್ತಾರೆ ಎಂದರು.

ಮಧ್ಯಂತರ ಚುನಾವಣೆ ಬರುತ್ತೆ ಎಂದು ವಿಜಯೇಂದ್ರ ಹೇಳಿಕೆಗೆ ಪ್ರತಿಕ್ರಿಯಿಸಿ, ಮಧ್ಯಂತರ ಚುನಾವಣೆ ಬಂದರೆ ಫಸ್ಟ್ ವಿಜಯೇಂದ್ರ ಸೋಲುತ್ತಾರೆ ಎಂದರು.

ಸಿದ್ದರಾಮಯ್ಯ ಸೈಲೆಂಟ್ ಆಗಿ ರಾಜೀನಾಮೆ ಕೊಡಲು ಆಪ್ತ ಸಚಿವರು ಬೆಂಬಲಕ್ಕೆ ಬರಲಿಲ್ಲ ಎಂಬ ವಿಚಾರಕ್ಕೆ, ಕಾರ್ಯಕರ್ತರು, ಡಿ.ಕೆ.ಶಿವಕುಮಾರ್ ಸೇರಿದಂತೆ ಹೈಕಮಾಂಡ್ ಸಿದ್ದರಾಮಯ್ಯ ಜೊತೆಗೆ ಇದ್ದೇವೆ. ಸಿದ್ದರಾಮಯ್ಯ ಬಗ್ಗೆ ಅಪಾರವಾದ ಅಭಿಮಾನವಿದೆ ಎಂದರು.

ವಿಜಯನಗರ ತಿರುಗಾಟ ತಂಡದಿಂದ ಸಂಶೋಧನೆ

ಹೊಯ್ಸಳರ ಕಾಲದ ಅಪ್ರಕಟಿತ ದಾನ ಶಾಸನ ಪತ್ತೆ

ವಿಜಯನಗರ: ಹೊಸಪೇಟೆ ತಾಲೂಕಿನ ಗುಂಡ್ಲವದ್ದಿಗೇರಿ ಗ್ರಾಮದ ಚಂದ್ರಯ್ಯ ಸ್ವಾಮಿ ಅವರ ಹೊಲವೊಂದರಲ್ಲಿದ್ದ ಹೊಯ್ಸಳ ಕಾಲದ ಅಪ್ರಕಟಿತ ದಾನ ಶಾಸನ ಪತ್ತೆಯಾಗಿದೆ.

ಈ ಶಾಸನವನ್ನು ತುಮಕೂರು ಶಶಿಕುಮಾರ ನಾಯಕ ಅವರ ಮಾರ್ಗದರ್ಶನದಲ್ಲಿ ಗುಂಡ್ಲವದ್ದಿಗೆರೆ ಗ್ರಾಮದ ಗೌರವ ಶಿಕ್ಷಕರಾದ ಮಂಕಾಳಪ್ಪ, ಮಲ್ಲನಗೌಡ, ಗಂಗಾಧರ ಅವರ ಸಹಕಾರದಿಂದ ವಿಜಯನಗರ ತಿರುಗಾಟ ಸಂಶೋಧನ ತಂಡದ ಸದಸ್ಯರಾದ ಡಾ.ಗೋವಿಂದ, ಪ್ರೊ.ತಿಪ್ಪೇಸ್ವಾಮಿ, ಡಾ.ಕೃಷ್ಣೆಗೌಡ, ಇಸ್ಮಾಯಿಲ್ ಸಿದ್ದಿಕ್, ಅಶೋಕ ತಲೇಖಾನ್ ಅವರು ಪತ್ತೆ ಹಚ್ಚಿದ್ದಾರೆ.

ಈ ಶಾಸನವು ಗ್ರಾನೈಟ್ ಕಲ್ಲಿನಲ್ಲಿ ಬರೆಯಲಾಗಿದೆ. ಹದಿನೈದು ಸಾಲುಗಳುಳ್ಳ ಶಾಸನ ಎಂಟು ಅಡಿ ಎತ್ತರವಾಗಿದ್ದು, ಒಂದೂವರೆ ಅಡಿ ಅಗಲವಾಗಿದೆ. ಮೊದಲ ಸಾಲಿನಲ್ಲೇ ರಾಜನ ಹೆಸರನ್ನು ನಮೂದಿಸಲಾಗಿದೆ. ಹೊಯ್ಸಳರ ನಾರಸಿಂಹ ಚಕ್ರವರ್ತಿಯ ಕಾಲಾವಧಿಯಲ್ಲಿ ಗುಂಡ್ಲವದ್ದಿಗೆರೆಯನ್ನು ಕಾಸಿಗೌಡನು ಆಳ್ವಿಕೆ ನಡೆಸುತ್ತಿದ್ದನು. ಆತನು ಒಂದು ಕೆರೆಯನ್ನು ಕಟ್ಟಿಸಿದುದಲ್ಲದೇ ದೇಗುಲಕ್ಕೆ ಜಾಗಟೆ, ಕೊಳಗ ನೀಡಿರುವ ಕುರಿತಾಗಿದೆ.

ಇದರಿಂದ ಜಿಲ್ಲೆಯಲ್ಲಿ ಹೊಯ್ಸಳ ಅರಸರ ಆಳ್ವಿಕೆ ಇತ್ತೆಂದು ತಿಳಿದುಬರುತ್ತದೆ ಎಂದು ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಎಚ್.ತಿಪ್ಪೇಸ್ವಾಮಿ ತಿಳಿಸಿದ್ದಾರೆ.

ಈ ದಾನ ಶಾಸನದಲ್ಲಿ ವಿಶೇಷವಾಗಿ ಬಡಗೇರರ ವೃತ್ತಿ ಉಲ್ಲೇಖವಿದೆ. ಕಾಸಿಗೌಡನು ಸಣಿಯನ ಮಗನಾದ ಬಡಗಿ ನಾಗಭೋಜನಿಗೆ ಹೊಲವೊಂದನ್ನು ದಾನ ನೀಡಿರುವ ವಿವರವಿದೆ. ಶಾಸನದಲ್ಲಿ ಸರ್ವಮಾನ್ಯ ಹೊಲ ಎಂದಿರುವುದರಿಂದ ಯಾವುದೇ ರೀತಿಯ ತೆರಿಗೆ ಕಟ್ಟುವಂತಿರಲಿಲ್ಲ ಎಂದು ತಿಳಿಯುತ್ತದೆ.

ಜೊತೆಗೆ ಸೂರ್ಯ ಚಂದ್ರ ನಕ್ಷತ್ರ ಇರುವವರೆಗೂ ಶಾಸನ ಇರಲಿ ಎಂದು ಶಾಪಾಶಯವು, ಹಾಗೇನೆ ದಾನ ನೀಡುವುದನ್ನು ತಪ್ಪಿಸಬಾರದೆಂಬ ಸಾಲುಗಳು ಶಾಸನದಲ್ಲಿ ಬರೆಸಲಾಗಿದೆ. ಇದೇ ರೀತಿಯಾಗಿ ಕಾಕುಬಾಳು ಕ್ರಾಸ್‌ನ ಗುಂಡ್ಲವದ್ದಿಗೆರೆಯ ಚಂದ್ರಪ್ಪನವರ ಹೊಲವೊಂದರಲ್ಲಿ ಕುಂಬಾರ ಪೊನ್ನಿಮಯ್ಯನ ಮಗ ಯಂಕಬಿಯನ ಹೆಸರಲಿ ಕಟ್ಟಿಸಿದ ಕೆರೆ ಎಂಬ ಅಪ್ರಕಟಿತ ದಾನ ಶಾಸನವನ್ನು ವಿಜಯನಗರ ತಿರುಗಾಟ ಸಂಶೋಧನ ತಂಡವು ಈ ಹಿಂದೆ ಪತ್ತೆ ಮಾಡಲಾಗಿತ್ತು. ಆ ಶಾಸನದಲ್ಲಿ ಕುಂಬಾರರ ವೃತ್ತಿ ಪ್ರಸ್ತಾಪಿಸಲಾಗಿದೆ.

ಶಾಸನ ಇರುವ ಅನತಿ ದೂರದಲ್ಲಿಯೇ ಕೆರೆಯ ಕುರುವು ಇದೆ. ಇದರಿಂದ ಆಗ ಮಳೆ ನೀರು ಪೋಲಾಗದಂತೆ ಕೆರೆಗಳನ್ನು ನಿರ್ಮಿಸಿರಬೇಕೆಂದು ಹಾಗೇನೆ ಗ್ರಾಮದಲ್ಲಿ ಅತ್ಯಂತ ಸುಂದರವಾದ ಈಶ್ವರ ದೇಗುಲವೊಂದಿದೆ. ಬಹುಷಃ ಶಾಸನದಲ್ಲಿ ತಿಳಿಸಿದಂತೆ ಗಂಟೆ, ಜಾಗಟೆಯನ್ನು ಇದೇ ದೇವಾಲಯಕ್ಕೆ ದಾನ ನೀಡಿರಬೇಕು ಹಾಗೇನೆ ಇದರ ರಚನೆಯನ್ನು ಗಮನಿಸಿದರೆ ಹೊಯ್ಸಳ ಕಾಲಾವಧಿಯ ಗುಡಿ ಇರಬೇಕು ಎಂದು ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ಹಿರಿಯ ಶ್ರೇಣಿ ಸಹಾಯಕ ಪ್ರಾಧ್ಯಾಪಕ ಡಾ.ಗೋವಿಂದ ತಿಳಿಸಿದ್ದಾರೆ.

ಈ ಶಾಸನವು ಬಿಸಿಲು ಗಾಳಿ ಮಳೆಯಿಂದ ರಕ್ಷಣೆ ಇಲ್ಲದೇ ಇರುವುದರಿಂದ ಅಕ್ಷರಗಳು ಸವೆದು ಹೋಗಿವೆ. ಮುಂಬರುವ ದಿನಗಳಲ್ಲಿ ಸಂಬಂಧಪಟ್ಟ ಇಲಾಖೆಯು ಇಂತಹ ನಿರ್ಲಕ್ಷಿತ ಶಾಸನಗಳ ರಕ್ಷಣೆ ಮಾಡಬೇಕೆಂದು ಡಾ.ಕೃಷ್ಣೆಗೌಡ ತಿಳಿಸಿದ್ದಾರೆ.



» ಶಾಸನವು ಗ್ರಾನೈಟ್ ಕಲ್ಲಿನಲ್ಲಿ ಬರೆಯಲಾಗಿದೆ. 15 ಸಾಲುಗಳುಳ್ಳ ಶಾಸನ ಎಂಟು ಅಡಿ ಎತ್ತರ, ಒಂದೂವರೆ ಅಡಿ ಅಗಲವಾಗಿದೆ.

ಪ್ರೇಯಸಿಯ ಜನ್ಮ ದಿನದಂದೇ ಜೀವನ ಅಂತ್ಯ

ಪ್ರೇಯಸಿಯ ಮರ್ಯಾದಾ ಹತ್ಯೆ: ಪ್ರಿಯಕರ ಆತ್ಮಹತ್ಯೆ

ಬೆಳಗಾವಿ: ಜಿಲ್ಲೆಯ ರಾಯಬಾಗ ತಾಲೂಕಿನ ಹುಬ್ಬರವಾಡಿ ಗ್ರಾಮದ ಕೃಷ್ಣಾ ಪಾಟೀಲ ಎಂಬ ಯುವಕ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಕೃಷ್ಣಾ ಪಾಟೀಲ ಹಾಗೂ ಹುಕ್ಕೇರಿ ತಾಲೂಕಿನ ಸತ್ಯವ್ವ ಹೆಳವಿ ಪರಸ್ಪರ ಪ್ರೀತಿಸುತ್ತಿದ್ದು, ಒಪ್ಪಿಗೆಯಿಂದ ಮನೆ ಬಿಟ್ಟು ಹೋಗಿದ್ದರು. ಬಳಿಕ ಪೊಲೀಸರು ಅವರನ್ನು ಪತ್ತೆ ಹಚ್ಚಿ ಮನೆಗಳಿಗೆ ಕಳುಹಿಸಿದ್ದರು.

ಬಳಿಕ ಸತ್ಯವ್ವಳ ತವರು ಮನೆಯವರು ಆಕೆಯನ್ನು ಮಹಾರಾಷ್ಟ್ರದ ಅರಗ ಗ್ರಾಮಕ್ಕೆ ಕರೆದೊಯ್ದು ಬೇರೆ ಮದುವೆಯಾಗುವಂತೆ ಒತ್ತಾಯಿಸಿದ್ದರು.

ಆದರೆ, ಕೃಷ್ಣಾನನ್ನು ಬಿಟ್ಟು ಬೇರೆ ಮದುವೆಯಾಗುವುದಿಲ್ಲ ಎಂದು ಸತ್ಯವ್ವ ಪಟ್ಟು ಹಿಡಿದಿದ್ದ ಹಿನ್ನೆಲೆಯಲ್ಲಿ ಕುಟುಂಬಸ್ಥರೇ ಆಕೆಯನ್ನು ಮರ್ಯಾದಾ ಹತ್ಯೆ ಮಾಡಿರುವ ಆರೋಪ ಕೇಳಿಬಂದಿತ್ತು.

ಈ ಸಂಬಂಧ ಕೃಷ್ಣಾ ಪಾಟೀಲ ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದನು. ತನಿಖೆ ನಡೆಸಿದ ಪೊಲೀಸರು ಮೂವರು ಆರೋಪಿಗಳನ್ನು ಬಂಧಿಸಿ, ಪ್ರಕರಣವನ್ನು ಮಹಾರಾಷ್ಟ್ರದ ಮಿರಜ ಗ್ರಾಮೀಣ ಪೊಲೀಸ್ ಠಾಣೆಗೆ ವರ್ಗಾಯಿಸಿದ್ದರು.

ಪ್ರೇಯಸಿಯ ಸಾವಿನ ಆಘಾತ ಮತ್ತು ಪ್ರಕರಣದ ನೋವಿನಿಂದ ಮನನೊಂದಿದ್ದ ಕೃಷ್ಣಾ, ಸತ್ಯವ್ವಳ ಜನ್ಮದಿನದಂದೇ ತನ್ನ ಮನೆಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಈ ಕುರಿತು ಯಮಕನಮರಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಎಡದಂಡೆ ಕಾಲುವೆಗೆ ನೀರು ಬಿಡುಗಡೆ



ಬಾದಾಮಿ: ಶಾಸಕರಾದ ಭೀಮಸೇನ ಚಿಮ್ಮನಕಟ್ಟಿ ಅವರ ನಿರ್ದೇಶನದ ಮೇರೆಗೆ ನವಿಲುತೀರ್ಥ ಜಲಾಶಯ (ಮಲಪ್ರಭಾ ನದಿ)ದ ಎಡದಂಡೆ ಕಾಲುವೆಗೆ 800 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಲಾಗಿದೆ.

ಈ ವರ್ಷ ಮುಂಗಾರು ಮಳೆ ಸಮರ್ಪಕವಾಗಿ ಆರಂಭವಾಗದ ಹಿನ್ನೆಲೆಯಲ್ಲಿ ಬಾದಾಮಿ ತಾಲೂಕಿನ, ಹಾಗೂ ಪಾತ್ರದ ರೈತರು ಬಿತ್ತನೆ ಕಾರ್ಯ ಕೈಗೊಳ್ಳಲು ತೊಂದರೆ ಅನುಭವಿಸುತ್ತಿದ್ದರು. ರೈತರ ಸಂಕಷ್ಟವನ್ನು ಅರಿತು ತಕ್ಷಣ ಸ್ಪಂದಿಸಿದ ಶಾಸಕರು, ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗುವಂತೆ ನೀರು ಬಿಡುಗಡೆ ಮಾಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ಈ ನೀರಿನ ಬಿಡುಗಡೆಯಿಂದ ಕಾಲುವೆ ವ್ಯಾಪ್ತಿಯ ಕೃಷಿ ಭೂಮಿಗಳಿಗೆ ತೇವಾಂಶ ಲಭ್ಯವಾಗಲಿದ್ದು, ಬಿತ್ತನೆ ಕಾರ್ಯಗಳಿಗೆ ವೇಗ ಸಿಗುವ ನಿರೀಕ್ಷೆಯಿದೆ. ಜೊತೆಗೆ, ನದಿ ಹಾಗೂ ಕಾಲುವೆ ವ್ಯಾಪ್ತಿಯ ಬಾವಿಗಳು, ಕೊಳವೆಬಾವಿಗಳಲ್ಲಿ ನೀರಿನ ಮಟ್ಟ ಹೆಚ್ಚಳವಾಗಿ ಕುಡಿಯುವ ನೀರು ಮತ್ತು ಜಾನುವಾರುಗಳ ನೀರಿನ ಅಗತ್ಯಕ್ಕೂ ಸಹಕಾರಿಯಾಗಲಿದೆ.

ರೈತರ ಹಿತಾಸಕ್ತಿಗೆ ಸದಾ ಆದ್ಯತೆ ನೀಡುತ್ತಿರುವ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರು, ಕ್ಷೇತ್ರದ ಕೃಷಿ ಅಭಿವೃದ್ಧಿ ಹಾಗೂ ನೀರಾವರಿ ಸೌಲಭ್ಯಗಳ ವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿದ್ದು, ನೀರು ಬಿಡುಗಡೆಯ ಈ ಕ್ರಮವನ್ನು ರೈತ ಸಮುದಾಯ ಸ್ವಾಗತಿಸಿದೆ.

ಸಂಶೋಧನಾ ವಿದ್ಯಾರ್ಥಿಗೆ ಕಿರುಕುಳ: ಆರೋಪ

ಧಾರವಾಡ: ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಯುವತಿಯ ವಿಚಾರವಾಗಿ ತಮ್ಮ ಬಳಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗೆ ಪ್ರಾಧ್ಯಾಪಕರೊಬ್ಬರು ಕಿರುಕುಳ ನೀಡಿದ ಆರೋಪ ಕೇಳಿಬಂದಿದೆ. ಸಂತ್ರಸ್ತ ವಿದ್ಯಾರ್ಥಿ ಕುಲಪತಿಗೆ ಲಿಖಿತ ದೂರು ನೀಡಿದ್ದಾರೆ. ಸಸ್ಯಶಾಸ್ತ್ರ ವಿಭಾಗದ ಪ್ರೊ.ದೇವರಾಜನ್ ತೆಂಗು ದೊರೈ ವಿರುದ್ಧವೇ ಕಿರುಕುಳದ ಆರೋಪ ಕೇಳಿಬಂದಿದೆ.

ಪ್ರೊ.ದೇವರಾಜನ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿ ವೇದವ್ಯಾಸ ಚವ್ಹಾಣ ಪಿಎಚ್‌ಡಿ ಮಾಡುತ್ತಿದ್ದು, ಈ ಮೊದಲು ಪ್ರೊ.ದೇವರಾಜನ್ ಹತ್ತಿರ ಸಂಶೋಧನೆ ಮಾಡುತ್ತಿದ್ದ ನನ್ನದೇ ಊರಿನ ವಿದ್ಯಾರ್ಥಿನಿಯ ಸಂಪರ್ಕ ಸಾಧಿಸಿ ಕೊಡುವಂತೆ ಒತ್ತಾಯಿಸಿದ್ದಾರೆ.

ಸಂಪರ್ಕ ಸಾಧಿಸಿ ಕೊಡದಿದ್ದರೆ ಸಂಶೋಧನೆ ಮುಗಿಯದಂತೆ ಮಾಡುವುದಾಗಿ ಪ್ರೊ. ದೇವರಾಜನ್ ಬೆದರಿಕೆ ಹಾಕುತ್ತಿದ್ದಾಗಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ಈ ಕುರಿತು ಕವಿವಿಯ ಕುಲಪತಿಗಳ ಕೂಡ ತನಿಖೆ ನಡೆಸಲು ಸಮಿತಿ ರಚಿಸಿದ್ದಾಗಿ ತಿಳಿಸಿದ್ದಾರೆ.

ಕೃಷಿ ಅಧಿಕಾರಿಗಳ ದಾಳಿ: 14 ಮಳಿಗೆಗಳ ಮಾರಾಟಕ್ಕೆ ತಡೆ



ಕಲಬುರಗಿ: ರೈತರಿಗೆ ರಸಗೊಬ್ಬರಗಳನ್ನು ನಿಗದಿತ ಬೆಲೆಗಿಂತ ಹೆಚ್ಚಿನ ದರದಲ್ಲಿ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳು ಬಂದ ಹಿನ್ನೆಲೆಯಲ್ಲಿ ಕೃಷಿ ಇಲಾಖೆ ಅಧಿಕಾರಿಗಳು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಶನಿವಾರ ಅನಿರೀಕ್ಷಿತ ದಾಳಿ ನಡೆಸಿದರು.

ಜಂಟಿ ಕೃಷಿ ನಿರ್ದೇಶಕ ಸಮದ್ ಪಟೇಲ್ ನೇತೃತ್ವದಲ್ಲಿ ಉಪ ಕೃಷಿ ನಿರ್ದೇಶಕಿ ಅನಸೂಯಾ ಹೂಗಾರ, ಸಹಾಯಕ ಕೃಷಿ ನಿರ್ದೇಶಕರು ಹಾಗೂ ಕೃಷಿ ಅಧಿಕಾರಿಗಳ ತಂಡ ಕಲಬುರಗಿ, ಆಳಂದ, ಅಫಜಲಪುರ, ಚಿಂಚೋಳಿ ಮತ್ತು ಚಿತ್ತಾಪುರ ತಾಲೂಕಿನ ಕೃಷಿ ಪರಿಕರ ಹಾಗೂ ರಸಗೊಬ್ಬರ ಮಾರಾಟ ಮಳಿಗೆಗಳನ್ನು ಪರಿಶೀಲಿಸಿದರು.

ಒಟ್ಟು 78 ಮಳಿಗೆಗಳನ್ನು ತಪಾಸಣೆ ನಡೆಸಲಾಗಿದ್ದು, ನಿಯಮ ಉಲ್ಲಂಘನೆ ಕಂಡುಬಂದ 42 ಮಳಿಗೆಗಳಿಗೆ ನೋಟಿಸ್ ಜಾರಿಗೊಳಿಸಲಾಗಿದೆ. ಅಲ್ಲದೆ, 14 ಮಳಿಗೆಗಳ ವಿರುದ್ಧ ಮಾರಾಟ ತಡೆ ಆದೇಶ ಹೊರಡಿಸಲಾಗಿದ್ದು, 352.77 ಟನ್ ರಸಗೊಬ್ಬರ ದಾಸ್ತಾನು ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ. ಇದರ ಮೌಲ್ಯ ಸುಮಾರು ರೂ.20.52 ಲಕ್ಷ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಲಬುರಗಿ ತಾಲೂಕಿನಲ್ಲಿ 44 ಮಳಿಗೆಗಳನ್ನು ಪರಿಶೀಲಿಸಿ 33 ಮಳಿಗೆಗಳಿಗೆ ನೋಟಿಸ್ ನೀಡಲಾಗಿದ್ದು, 2 ಮಳಿಗೆಗಳ ಮಾರಾಟಕ್ಕೆ ತಡೆ ವಿಧಿಸಲಾಗಿದೆ. ಆಳಂದ ತಾಲೂಕಿನಲ್ಲಿ 25 ಮಳಿಗೆಗಳ ಪರಿಶೀಲನೆ ವೇಳೆ 5 ಮಳಿಗೆಗಳಿಗೆ ನೋಟಿಸ್ ಹಾಗೂ 12 ಮಳಿಗೆಗಳ ವಿರುದ್ಧ ಮಾರಾಟ ತಡೆ ಕ್ರಮ ಕೈಗೊಳ್ಳಲಾಗಿದೆ. ಚಿಂಚೋಳಿ ಮತ್ತು ಚಿತ್ತಾಪುರದಲ್ಲಿ ತಲಾ 2 ಮಳಿಗೆಗಳಿಗೆ ನೋಟಿಸ್ ನೀಡಲಾಗಿದೆ.

ದಾಳಿಯ ವೇಳೆ K-KISAN ತಂತ್ರಾಂಶದ ಮೂಲಕ ಯೂರಿಯಾ ವಿತರಣೆ, ಪಿಒಎಸ್ ದಾಖಲೆಗಳು ಹಾಗೂ ಗೋದಾಮುಗಳ ದಾಸ್ತಾನು ಪರಿಶೀಲಿಸಲಾಯಿತು. ರಸಗೊಬ್ಬರ ನಿಯಂತ್ರಣ ಆದೇಶ (FCO1985) ಉಲ್ಲಂಘಿಸಿರುವ ಮಾರಾಟಗಾರರ ವಿರುದ್ಧ ಮುಂದಿನ ದಿನಗಳಲ್ಲಿ ಕಾನೂನು ಕ್ರಮಕ್ಕೆಗೊಳ್ಳಲಾಗುವುದು ಎಂದು ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

> ರೈತರಿಂದ ನಿಗದಿತ ಬೆಲೆಗಿಂತ ಹೆಚ್ಚಿನ ಹಣ ವಸೂಲಿ ಮಾಡುವವರ ವಿರುದ್ಧ ರಸಗೊಬ್ಬರ ನಿಯಂತ್ರಣ ಆದೇಶ ಹಾಗೂ ಅಗತ್ಯ ವಸ್ತುಗಳ ಕಾಯ್ದೆಯಡಿ ಕಠಿಣ ಕ್ರಮ ಜರುಗಿಸಲಾಗುವುದು.
> ■ ಸಮದ್ ಪಟೇಲ್, ಜಂಟಿ ಕೃಷಿ ನಿರ್ದೇಶಕ, ಕಲಬುರಗಿ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರುಸುದ್ದಿ

ವಿಶ್ವ ಪರಿಸರ ದಿನಾಚರಣೆ



ಮುಂಡಗೋಡ: ತಾಲೂಕಿನ ಕುರ್ಲಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಡುವ ಮೂಲಕ ವಿದ್ಯಾರ್ಥಿಗಳು ಅರ್ಥಪೂರ್ಣವಾಗಿ ವಿಶ್ವ ಪರಿಸರ ದಿನಾಚರಣೆ ಆಚರಿಸಿದರು. ಮಳಗಿಯ ಕೇದಾರ್ ನರ್ಸರಿಯ ಮಾಲೀಕ ನಾಗರಾಜ ಹೆಗಡೆ ಅವರು ಶಾಲೆಗೆ ದೇಣಿಗೆಯಾಗಿ ನೀಡಿದ ಕೋಕಂ, ರಾಮ್ ಭೂಟಾನ್, ಸ್ಟಾರ್ ಫ್ರೂಟ್ ಸೇರಿದಂತೆ ವಿವಿಧ ಜಾತಿಯ ಸಸಿಗಳನ್ನು ನೆಡಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ನಾಗರಾಜ ಕೊರ್ಸೆ, ಸದಸ್ಯ ರಾಘವೇಂದ್ರ ನಾಯ್ಕ, ಶಾಲಾ ಮುಖ್ಯೋಪಾಧ್ಯಾಯಿನಿ ಮಮತಾ ರಾಘವೇಂದ್ರ, ಸಹ ಶಿಕ್ಷಕಿಯರಾದ ವಾಣಿ ಭಟ್, ಸಂಧ್ಯಾ ಭಂಡಾರಿ ಹಾಗೂ ಶಾಲೆಯ ಎಲ್ಲ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಜ್ಞಾ ಪಟಗಾರ ದ್ವಿತೀಯ

ಗೋಕರ್ಣ: ಎಸ್ಸೆಸ್ಸೆಲ್ಸಿ ಪರೀಕ್ಷೆಯ ಮರುಮೌಲ್ಯಮಾಪನದಲ್ಲಿ ಇಲ್ಲಿನ ನೆಲಗುಣಿಯ ಮಾರ್ಡನ್ ಎಜ್ಯುಕೇಶನ್ ಪ್ರೌಢಶಾಲೆಯ ವಿದ್ಯಾರ್ಥಿನಿ ಪ್ರಜ್ಞಾ ಜನಾರ್ಧನ ಪಟಗಾರ 606 ಅಂಕದಿಂದ 614 ಹೆಚ್ಚಿನ ಅಂಕ ಪಡೆದು ಶಾಲೆಗೆ ದ್ವಿತೀಯ ಸ್ಥಾನ ಪಡೆದು ಕೀರ್ತಿ ತಂದಿದ್ದಾಳೆ. ಹನೇಹಳ್ಳಿ ಸೇವಾ ಸಹಕಾರಿ ಸಂಘದ ಮುಖ್ಯಕಾರ್ಯನಿರ್ವಾಹಕ ಜನಾರ್ಧನ ಪಟಾರ ಪುತ್ರಿಯಾಗಿದ್ದು, ವಿದ್ಯಾರ್ಥಿನಿ ಸಾಧನೆಗೆ ಮುಖ್ಯಾಧ್ಯಾಪಕರು, ಶಿಕ್ಷವೃಂದ , ಆಡಳಿತ ವರ್ಗ, ಪಾಲಕರು ಅಭಿನಂದಿಸಿದ್ದಾರೆ.



ಇಂದು ಏಕವ್ಯಕ್ತಿ ತಾಳಮದ್ದಳೆ, ಸನ್ಮಾನ

ಸಿದ್ದಾಪುರ: ಯಕ್ಷಚಂದನ ದಂಟಕಲ್ ಇದರ ವಾರ್ಷಿಕೋತ್ಸವದ ಅಂಗವಾಗಿ ಏಕವ್ಯಕ್ತಿ ತಾಳಮದ್ದಳೆ, ಸನ್ಮಾನ ಹಾಗೂ ಯಕ್ಷಗಾನ ಪ್ರದರ್ಶನ ಸಿದ್ದಾಪುರ ತಾಲೂಕಿನ ವಾಜಗದ್ದೆ ದುರ್ಗಾವಿನಾಯಕ ದೇವಸ್ಥಾನದ ಸಭಾಭವನದಲ್ಲಿ ಜೂ.7ರಂದು ಸಂಜೆ 4ರಿಂದ ನಡೆಯಲಿದೆ.ದಿವಾಕರ ಹೆಗಡೆ ಕೆರೆಹೊಂಡ ಅವರಿಂದ ಅರಮನೆಯ ಚಾಡಿ ಏಕವ್ಯಕ್ತಿ ಯಕ್ಷಗಾನ ತಾಳಮದ್ದಳೆ ನಡೆಯಲಿದ್ದು, ಹಿಮ್ಮೇಳದಲ್ಲಿ ಸತೀಶ ಹೆಗಡೆ ದಂಟಕಲ್, ಶರತ್ ಹೆಗಡೆ ಜಾನಕೈ ಹಾಗೂ ರಘುಪತಿ ಹೆಗಡೆ ಹೂಡೆಹದ್ದ ಸಹಕರಿಲಿದ್ದಾರೆ. ನಂತರ ಸಂಜೆ 5.30ರಿಂದ ಹಿರಿಯ ಯಕ್ಷಗಾನ ಮದ್ದಳೆಗಾರರಾದ ಶಂಕರ ಭಾಗವತ ಯಲ್ಲಾಪುರ ಅವರನ್ನು ಸನ್ಮಾನಿಸಲಾಗುತ್ತದೆ. ಶಾಸಕ ಭೀಮಣ್ಣ ನಾಯ್ಕ ಕಾರ್ಯಕ್ರಮ ಉದ್ಘಾಟಿಸುವರು. ಸಿದ್ದಾಪುರ ಟಿಎಂಎಸ್ ಅಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಅಧ್ಯಕ್ಷತೆವಹಿಸಲಿದ್ದಾರೆ. ಶಿಕ್ಷಣ ಪ್ರಸಾರಕ ಸಮಿತಿ ಅಧ್ಯಕ್ಷ ಶಶಿಭೂಷಣ ಹೆಗಡೆ ದೊಡ್ಮನೆ, ಟಿಸಿಎಸ್ ನಿರ್ದೇಶಕ ರವೀಂದ್ರ ಹೆಗಡೆ ಹಿರೇಕೈ, ಶಿರಸಿ ಮಾರಿಗುಡಿ ಅಧ್ಯಕ್ಷ ರವೀಂದ್ರ ನಾಯ್ಕ, ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರಾಘವೇಂದ್ರ ಶಾಸ್ತ್ರಿ, ದುರ್ಗಾವಿನಾಯಕ ದೇವಸ್ಥಾನದ ಮೊಕ್ತೇಸರ ಎಸ್.ಎಂ.ಹೆಗಡೆ ಪೆಟೇಸರ ಉಪಸ್ಥಿತರಿರುತ್ತಾರೆ. ರಾತ್ರಿ 7.30ರಿಂದ 'ರತ್ನಾವತಿ ಕಲ್ಯಾಣ' ಯಕ್ಷಗಾನ ಪ್ರದರ್ಶನಗೊಳ್ಳಲಿದೆ ಎಂದು ಸಂಘಟಕರು ತಿಳಿಸಿದ್ದು ಕಲಾಸಕ್ತರು ಪಾಲ್ಗೊಳ್ಳುವಂತೆ ಕೋರಿದ್ದಾರೆ.



ಗೋಕರ್ಣ: ಕಳೆದ ಎರಡು ದಿನಗಳಿಂದ ಕೋಟಿತೀರ್ಥಕಟ್ಟೆಯ ಮುಖ್ಯ ರಸ್ತೆಯ ಮಧ್ಯದಲ್ಲಿ ಮರದ ಟೊಂಗೆ ಕಡಿದು ರಾಶಿ ಹಾಕಿದ್ದು, ವಾಹನ ಸಂಚಾರಕ್ಕೆ ತೀವ್ರ ತೊಂದರೆಯಾಗುತ್ತಿದ್ದು, ಇದನ್ನ ತೆಗೆದು ಸ್ವಚ್ಛಗೊಳಿಸುವಂತೆ ಸಾರ್ವಜನಿಕರು ಆಗ್ರಹಿಸಿದ್ದಾರೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	61089	68399
ಬಿಳಿಗೋಟು	26919	36200
ಕೆಂಪುಗೋಟು	26899	35118
ಬೆಟ್ಟೆ	40001	50909
ರಾಶಿ	51099	52989
ಚಾಲಿ	44200	48599



ಶಿರಸಿ: ಇಲ್ಲಿನ ಶಾಲ್ಮಲಾ ಶಿಲ್ಪವನದಲ್ಲಿ ವಿಶ್ವ ಪರಿಸರ ದಿನಾಚರಣೆಅಂಗವಾಗಿ ಶಿರಸಿ ವಲಯದಿಂದ ವನಮಹೋತ್ಸವ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು. ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್. ಹರೀಶ್,ವಲಯ ಅರಣ್ಯಾಧಿಕಾರಿ ಗಿರೀಶ್ ನಾಯ್ಕ, ಜೋಗಣ್ಣನವರ್ ಮತ್ತಿತರರಿದ್ದರು.

ಶಿರಸಿ ವಲಯದ ವನಮಹೋತ್ಸವ ಯಶಸ್ವಿ

ಶಿರಸಿ: ಇಲ್ಲಿನ ಶಾಲ್ಮಲಾ ಶಿಲ್ಪವನದಲ್ಲಿ ವಿಶ್ವ ಪರಿಸರ ದಿನಾಚರಣೆಅಂಗವಾಗಿ ಶಿರಸಿ ವಲಯದಿಂದ ವನಮಹೋತ್ಸವ ಕಾರ್ಯಕ್ರಮ ಅತ್ಯಂತ ಯಶಸ್ವಿಯಾಗಿ ನಡೆಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಶಿರಸಿಯ ಪ್ರಧಾನ ಸಿವಿಲ್ ನ್ಯಾಯಾಧೀಶ ಅಲ್ತಾಫ್ ಹುಸೇನ್ ಕಣಗಾವಿ ಸಸಿಗಳನ್ನು ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪರಿಸರವನ್ನು ಕಾಪಾಡುವುದು ಕೇವಲ ಸರ್ಕಾರದ ಕೆಲಸವಲ್ಲ, ಅದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಪೋಷಿಸಬೇಕು ಎಂದು ಹೇಳಿದರು.ಕೆನರಾ ವೃತ್ತದ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಟಿ. ಹೀರಾಲಾಲ್ ಮಾತನಾಡಿ, ಪರಿಸರ ಸಂರಕ್ಷಣೆ ಎಂದರೆ ಕೇವಲ ಗಿಡ ನೆಡುವುದಷ್ಟೇ ಅಲ್ಲ ಪ್ಲಾಸ್ಟಿಕ್ ಮಾಲಿನ್ಯವನ್ನು ಸಂಪೂರ್ಣವಾಗಿ ತಡೆಗಟ್ಟುವುದು, ಜೈವಿಕ ವೈವಿಧ್ಯತೆ ಹಾಗೂ ನೈಸರ್ಗಿಕ ಸಂಪತ್ತನ್ನು ಸಂರಕ್ಷಿಸುವುದು ಮತ್ತು ಸಾರ್ವಜನಿಕರಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವುದಾಗಿದೆ ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಂದೀಪ್ ಸೂರ್ಯವಂಶಿ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎನ್. ಹರೀಶ್,ವಲಯ ಅರಣ್ಯಾಧಿಕಾರಿ ಗಿರೀಶ್ ನಾಯ್ಕ, ಸರ್ಕಾರಿ ಅಭಿಯೋಜಕ ರಾಜೇಶ್ ಮಳಗೀಕರ್, ಸಹಾಯಕ ಸರ್ಕಾರಿ ಅಭಿಯೋಜಕ ಶಿವಕುಮಾರ್ ಜೋಗಣ್ಣನವರ್, ಲಯನ್ಸ್ ಶಾಲೆಯ ಸ್ಕೌಟ್ಸ್ ಮತ್ತು ಗೈಡ್ಸ್ ಮಾರ್ಗದರ್ಶಕರಾದ ವಿನಯ್ ಧೀರನ್, ವಿ.ಹೆಚ್. ಭಟ್ಕಳ, ಚೇತನಾ ಪವಾಸ್ಕರ್, ಶಾಲಾ ಮಕ್ಕಳು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.



ಮುಂಡಗೋಡ: ಮಳೆಗಾಲ ಪ್ರಾರಂಭವಾಗುವ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಪಪಂ ಪೌರ ಕಾರ್ಮಿಕರು ಪಟ್ಟಣ ವ್ಯಾಪ್ತಿಯ ಚರಂಡಿಗಳನ್ನು ಸ್ವಚ್ಛಗೊಳಿಸಿದ್ದರು.ಪಟ್ಟಣ ವ್ಯಾಪ್ತಿಯ 19 ವಾರ್ಡ್ ಇದ್ದು ಇದರಲ್ಲಿ ಈಗಾಗಲೇ 16 ವಾರ್ಡಿನ ಚರಂಡಿಗಳನ್ನು ಸ್ವಚ್ಛಗೊಳಿಸಲಾಗಿದೆ. ಉಳಿದ ಮೂರು ಒಣಿಯ ಚರಂಡಿಯನ್ನು ಸ್ವಚ್ಛಗೊಳಿಸುವ ಕಾರ್ಯದಲ್ಲಿ ಪೌರಕಾರ್ಮಿಕರು ತೊಡಗಿದ್ದಾರೆ ಎಂದು ಪಪಂ ಮುಖ್ಯಾಧಿಕಾರಿ ಸಂತೋಷಕುಮಾರ ಎಚ್ ಹೇಳಿದರು.

ಮಾಸಿಕ ಪ್ರಗತಿ ಪರಿಶೀಲನಾ ಸಭೆ | ಲತಾ ನಾಯಕ ಹೇಳಿಕೆ

ಮಕ್ಕಳ ಸುರಕ್ಷತೆಗೆ ಶೀಘ್ರ ಗಮನಹರಿಸಿ

ಅಂಕೋಲಾ: ಮಳೆಗಾಲದಲ್ಲಿ ತಲೆದೋರಬಹುದಾದ ಸಮಸ್ಯೆಗಳಿಗೆ ಶೀಘ್ರಗತಿಯಲ್ಲಿ ಸ್ಪಂದಿಸುವ ಕಾರ್ಯ ಪ್ರತಿಯೊಂದು ಇಲಾಖೆಗಳಿಂದ ಆಗಬೇಕಿದ್ದು ಸಾರ್ವಜನಿಕರ, ಶಾಲಾ ಮಕ್ಕಳ ಸುರಕ್ಷತೆಗೆ ಅಧಿಕಾರಿಗಳು ಗಮನಹರಿಸಬೇಕು ಎಂದು ತಾಪಂ ಆಡಳಿತಾಧಿಕಾರಿ ಲತಾ ನಾಯಕ ಹೇಳಿದರು.

ತಾಲೂಕು ಪಂಚಾಯತ್ ಸಭಾಭವನದಲ್ಲಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖಾವಾರು ವರದಿ ಆಲಿಸಿಮಾತನಾಡಿದಅವರು ಮಳೆಗಾಲದಸಂದರ್ಭದಲ್ಲಿ ಜನರ ಸುರಕ್ಷತೆಗೆ ಆದ್ಯತೆ ನೀಡುವ ದಿಶೆಯಲ್ಲಿ ಎಲ್ಲ ಇಲಾಖೆಗಳ ಅಧಿಕಾರಿಗಳು ಸಜ್ಜಾಗಿರಬೇಕು ಎಂದರು.

ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳ ಕುರಿತು ಮಾಹಿತಿ ನೀಡಿದ ಕ್ಷೇತ್ರ ಶಿಕ್ಷಣಾಧಿಕಾರಿ ಮಂಗಳಲಕ್ಷ್ಮೀ ಪಾಟೀಲ್ ತಾಲೂಕಿನ 18 ಶಾಲೆಗಳ 32 ಕೊಠಡಿಗಳು ಶಿಥಿಲಾವಸ್ಥೆಯಲ್ಲಿ ಇದ್ದು ಆ ಕೊಠಡಿಗಳಲ್ಲಿ ಮಕ್ಕಳು ಪ್ರವೇಶಿಸದಂತೆ ಕ್ರಮ ಕೈಗೊಳ್ಳಲಾಗಿದೆ ಎಂದರು.

ಶಾಲೆಗಳ ಮೇಲೆ ಅಪಾಯಕಾರಿ ರೀತಿಯಲ್ಲಿ ಮರಗಳು ಬಂದಿರುವುದನ್ನು ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರಿಂದ ಮರಗಳ ರೆಂಬೆ ಕತ್ತರಿಸುವ ಕೆಲಸ ಮಾಡಲಾಗಿದೆ ಆದರೆ ಕೆಲವು ಖಾಸಗಿಯವರ ಜಾಗದಲ್ಲಿರುವ ಮರಗಳನ್ನು ಕತ್ತರಿಸಲು ಮಾಲಿಕರು ತಕರಾರು ಮಾಡುತ್ತಿದ್ದಾರೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದರು.

ಅಪಾಯಕಾರಿ ಸ್ಥಿತಿಯಲ್ಲಿರುವ ಮರಗಳನ್ನು ಅಥವಾ ರೆಂಬೆಗಳನ್ನು ಮಕ್ಕಳ ಹಿತದೃಷ್ಟಿಯಿಂದ ತೆರೆಯಬೇಕಿದ್ದು ತಕರಾರು ಇದ್ದರೆ ತಾಲೂಕು ದಂಡಾಧಿಕಾರಿಗಳ ಗಮನಕ್ಕೆ ತರುವಂತೆ ತಾಪಂ ಕಾರ್ಯ ನಿರ್ವಾಹಣಾಧಿಕಾರಿ ರಾಮು ಗುನಗಿ ಸೂಚಿಸಿದರು.

ಶಾಲಾ ಆವರಣಗಳ ಎದುರು ಇರುವ ಚರಂಡಿಗಳ ಸ್ವಚ್ಚತೆ, ನೀರು ನಿಲ್ಲದಂತೆ ಅಗತ್ಯ ಕ್ರಮ ಕೈಗೊಳ್ಳಬೇಕು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಳವಾಗಬೇಕು ಎಂದು ಆಡಳಿತಾಧಿಕಾರಿ



- ಶಾಲಾ ಆವರಣಗಳ ಎದುರು ನೀರು ನಿಲ್ಲದಂತೆ ಕ್ರಮ ಕೈಗೊಳ್ಳಿ
- ಸಾಂಕ್ರಾಮಿಕ ಕಾಯಿಲೆ ಹರಡದಂತೆ ನಿಗಾವಹಿಸಿ

ಸೂಚಿಸಿದರು.

ಮಳೆಗಾಲದಲ್ಲಿ ಹೆಚ್ಚಿನ ಮಳೆ ಸುರಿದರೆ ತಾಲೂಕಿನ ಐದು ಗ್ರಾಪಂಗಳ ವ್ಯಾಪ್ತಿಯಲ್ಲಿ ನೆರೆ ಹಾವಳಿ ಸಾಧ್ಯತೆಯಿದ್ದು ಮೀನುಗಾರಿಕೆ ಇಲಾಖೆ ರಕ್ಷಣಾ ಕಾರ್ಯಕ್ಕೆ ದೋಣಿ ವ್ಯವಸ್ಥೆಗೆ ಮುಂಚಿತವಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು ಪಂಚಾಯತಿಗಳ ವ್ಯಾಪ್ತಿಯ ಸಮೀಪದ ದೋಣಿಗಳು ಲಭ್ಯವಾಗುವಂತೆ ನೋಡಿಕೊಳ್ಳಬೇಕು ಎಂದು ಮೀನುಗಾರಿಕೆ ಇಲಾಖೆಯ ಅಧಿಕಾರಿಗೆ ಸಭೆಯಲ್ಲಿ ಸೂಚಿಸಲಾಯಿತು.

ದೋಣಿಗಳ ಲಭ್ಯತೆಗೆ ಸಂಪರ್ಕಿಸಲಾಗಿದ್ದು ಲೈಫ್ ಜಾಕೇಟುಗಳು ಫಲಾನುಭವಿಗಳಿಗೆ ವಿತರಣೆ ಮಾಡಲಾಗಿದ್ದು, ತುರ್ತು ನೆರೆ ಹಾವಳಿ ಪರಿಸ್ಥಿತಿ ಎದುರಾದರೆ ಲೈಫ್ ಜಾಕೇಟ್ ಲಭ್ಯತೆ ಇಲ್ಲ ಎಂದು ಮೀನುಗಾರಿಕೆ ಇಲಾಖೆಯ ಅಧಿಕಾರಿ ಸಭೆಯಲ್ಲಿ ತಮ್ಮ ಅಸಹಾಯಕತೆ ವ್ಯಕ್ತಪಡಿಸಿದರು.

ಆರೋಗ್ಯ ಇಲಾಖೆಯ ವರದಿ ನೀಡಿದ ಡಾ.ಜಗದೀಶ ನಾಯ್ಕ ಮಾತನಾಡಿ, ಮಳೆಗಾಲದ ಸಂದರ್ಭದಲ್ಲಿ ಕಂಡು ಬರುವ ಆರೋಗ್ಯ ಸಮಸ್ಯೆಗಳನ್ನು ಎದುರಿಸಲು ತಾಲೂಕಿನಲ್ಲಿ ಸಜ್ಜಾಗಿದ್ದು ಸಾಂಕ್ರಾಮಿಕ ಕಾಯಿಲೆಗಳು ಹರಡದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು.

ತಾಲೂಕಿನಲ್ಲಿ ನಾಯಿ ಕಡಿತದ ಪ್ರಕರಣಗಳು ಹೆಚ್ಚುತ್ತಿದ್ದು ಈ ವರ್ಷ ಇದುವರೆಗೆ 1088 ರೆಬೀಸ್ ನಿರೋಧಕ ಚುಚ್ಚುಮದ್ದು ನೀಡಲಾಗಿದೆ ಎಂದರು.ಪುರಸಭೆ ವ್ಯಾಪ್ತಿಯ ಎಲ್ಲ ವಾರ್ಡುಗಳಲ್ಲಿ ಮಳೆಗಾಲದ ಪೂರ್ವ ಸ್ವಚ್ಚತಾ ಕಾರ್ಯ ಕೈಗೊಳ್ಳಲಾಗಿದೆ ಎಂದು ಪುರಸಭೆ ಅಧಿಕಾರಿ ರಾಥೋಡ್ ತಿಳಿಸಿದರು. ಶಾಲಾ ಮಕ್ಕಳಿಗೆ ಹೋಗಿ ಬರಲು ಅನುಕೂಲ ಆಗುವಂತೆ ಸಾರಿಗೆ ಸಂಸ್ಥೆಯ ಬಸ್‌ಗಳನ್ನು ಸರಿಯಾದ ಸಮಯಕ್ಕೆ ಬಿಡುವಂತೆ ಬಸ್‌ಗಳ ತಾಂತ್ರಿಕ ದೋಷಗಳನ್ನು ಸರಿಪಡಿಸಿ ಉತ್ತಮ ಸ್ಥಿತಿಯಲ್ಲಿರುವ ಬಸ್‌ಗಳನ್ನು ಓಡಿಸುವಂತೆ ಅಂಕೋಲಾ ಘಟಕ ವ್ಯವಸ್ಥಾಪಕರಿಗೆ ತಿಳಿಸಲಾಯಿತು. ಅಂಕೋಲಾ ಮಾರ್ಗವಾಗಿ ಹೋಗಿ ಬರುವ ಎಲ್ಲ ಬಸ್‌ಗಳು ಬಸ್ ನಿಲ್ದಾಣದ ಒಳಗೆ ಬಂದು ಹೋಗುವಂತೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಸಭೆಯಲ್ಲಿ ತಿಳಿಸಲಾಯಿತು.ತಾಲೂಕಿನ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅಧಿಕಾರಿಗಳ ಗೈರು

ಪ್ರಗತಿ ಪರಿಶೀಲನಾ ಸಭೆಯಲ್ಲಿ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಗೈರು ಹಾಜರಾಗಿದ್ದರು.ಕೆ.ಸಿ.ರಸ್ತೆಯಲ್ಲಿ ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿ ನಡೆಸಲಾದ ವಿದ್ಯುತ್ ದೀಪದ ಕಂಬಗಳು ತುಕ್ಕು ಹಿಡಿದು ಬೀಳುತ್ತಿರುವ ಕುರಿತು ಸಭೆಯಲ್ಲಿ ಕೇಳಿ ಬಂತು. ಪೊಲೀಸ್,ಅಬಕಾರಿ ಇಲಾಖೆಗಳ ವತಿಯಿಂದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಯಾರೂ ಹಾಜರಿರಲಿಲ್ಲ.

ಬಿಡಾಡಿ ಜಾನುವಾರುಗಳನ್ನು ರಸ್ತೆಗೆ ಬಿಡದಿರಿ: ವಿವೇಕ ಬನ್ನೆ

ದಾಂಡೇಲಿ: ದಾಂಡೇಲಿ ನಗರ ವ್ಯಾಪ್ತಿಯಲ್ಲಿ ಜಾನುವಾರುಗಳನ್ನು ಸಾಕುತ್ತಿರುವ ಮಾಲಕರು ತಮ್ಮ ತಮ್ಮ ಜಾನುವಾರುಗಳನ್ನು ಹಟ್ಟಿಗಳಲ್ಲಿ ಕಟ್ಟಿಕೊಳ್ಳದೆ ಬೇಕಾಬಿಟ್ಟಿ ರಸ್ತೆಗೆ ಬಿಟ್ಟಲ್ಲಿ ಅಂತಹ ಬಿಡಾಡಿ ದನಕರುಗಳನ್ನು ನಗರಸಭೆಯ ವಶಕ್ಕೆ ಪಡೆದು, ಗೋಶಾಲೆಗೆ ಕಳುಹಿಸಿ ಕೊಡಲಾಗುವುದು ಎಂದು ನಗರ ಸಭೆಯ ಪೌರಾಯುಕ್ತ ವಿವೇಕ ಬನ್ನೆ ಅವರು ಪ್ರಕಟಣೆಯ ಮೂಲಕ ಖಡಕ್ ಎಚ್ಚರಿಕೆಯನ್ನು ನೀಡಿದ್ದಾರೆ.

ಸಾರ್ವಜನಿಕರ ನೇಕರು ಜಾನುವಾರುಗಳನ್ನು ಸಾಕಿಕೊಂಡಿದ್ದಾರೆಂಬ ಮಾಹಿತಿಯಿದೆ. ಸಾಕಿದ ಜಾನುವಾರುಗಳನ್ನು ತಮ್ಮತಮ್ಮ ಹಟ್ಟಿಗಳಲ್ಲಿ ಕಟ್ಟಿ ಸಾಕುವುದು ಪ್ರತಿಯೊಬ್ಬ ಮಾಲಕನ ಜವಾಬ್ದಾರಿ. ಆದರೆ ಅನೇಕ ಜನರು ತಮ್ಮ ಜಾನುವಾರುಗಳನ್ನು ಸಾಕದೇ ಬೇಕಾಬಿಟ್ಟಿ ರಸ್ತೆಗಳಲ್ಲಿ ಬಿಟ್ಟು ಬಿಡುತ್ತಾರೆ. ಅವು ರಸ್ತೆಯ ಮೇಲೆ ಗುಂಪು ಗುಂಪಾಗಿ ನಿಂತು ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿರುವುದು ಹಾಗೂ ನಗರದಲ್ಲಿ ಅಸ್ವಚ್ಛತೆಗೆ ಕಾರಣವಾಗುತ್ತಿರುವುದು ಕಂಡು ಬಂದಿದೆ. ರಸ್ತೆಗಳಲ್ಲಿ ಅಲೆದಾಡುವ ಜಾನುವಾರುಗಳಿಂದ ಪರಿಸರದ ಸ್ವಚ್ಚತೆ ಹದಗೆಡುವುದಲ್ಲದೆ, ವಾಹನ ಸಂಚಾರಕ್ಕೂ ಅಡಚಣೆ ಉಂಟಾಗಿ ಅಪಘಾತಗಳ ಸಂಭವ ಹೆಚ್ಚುತ್ತಿದೆ. ಹೀಗಾಗಿ, ಇನ್ನು ಮುಂದೆ ರಸ್ತೆಗಳಲ್ಲಿ ಅಲೆದಾಡುತ್ತಿರುವ ಜಾನುವಾರುಗಳನ್ನು ವಶಪಡಿಸಿಕೊಂಡು ಗೋಶಾಲೆಗೆ ಸ್ಥಳಾಂತರಿಸಲಾಗುವುದು ಹಾಗೂ ಸಂಬಂಧಿತ ಮಾಲೀಕರ ವಿರುದ್ಧ ಕಾನೂನುಬದ್ಧ ಕ್ರಮ ಕೈಗೊಳ್ಳಲಾಗುತ್ತದೆ. ಬಿಡಾಡಿ ದನಕರುಗಳಿಂದಾಗುತ್ತಿರುವ ಈ ಎಲ್ಲ ಸಮಸ್ಯೆಗಳ ಬಗ್ಗೆ ಸಾರ್ವಜನಿಕರಿಂದಲೂ ನಮಗೆ ದೂರುಗಳು ಬಂದಿವೆ ಹಾಗೂ ಈ ಬಗ್ಗೆ ಈ ಹಿಂದೆಯೂ ಸಹ ನಾವು ಧ್ವನಿವರ್ಧಕದ ಮೂಲಕ ಮತ್ತು ಮಾಧ್ಯಮ ಹೇಳಿಕೆಗಳ ಮೂಲಕ ಸಾಕಿದ ದನಗಳನ್ನು ಮನೆಯಲ್ಲಿ ಕಟ್ಟಿಕೊಳ್ಳುವಂತೆ ಎಚ್ಚರಿಕೆಯನ್ನೂ ನೀಡಲಾಗಿದೆ. ಆದರೂ ಸಹ ಜಾನುವಾರು ಮಾಲಕರು ಕಾಳಜಿ ವಹಿಸುತ್ತಿಲ್ಲ.

ಇನ್ನು ವಾರದೊಳಗೆ ಜಾನುವಾರುಗಳ ಮಾಲಕರು ಅವರುಗಳನ್ನು ತಮ್ಮ ವಶಕ್ಕೆ ಪಡೆದು ಕಟ್ಟಿ ಸಾಕಬೇಕು. ಹಾಗೆ ಮಾಡದೇ ಮತ್ತೆ ಬೀದಿಗಳಲ್ಲಿ ಬಿಟ್ಟರೆ ಯಾವುದೇ ಮುನ್ಸೂಚನೆ ನೀಡದೇ ವಶಪಡಿಸಿಕೊಂಡು ಗೋಶಾಲೆಗೆ ಕಳುಹಿಸುವ ಜೊತೆಗೆ, ಸಂಬಂಧಪಟ್ಟವರ ಮೇಲೆ ಕಾನೂನು ರೀತಿಯ ದಂಡವನ್ನು ವಿಧಿಸಲಾಗುತ್ತದೆ ಎಂದು ಪೌರಾಯುಕ್ತ ವಿವೇಕ ಬನ್ನೆ ಅವರು ಪ್ರಕಟಣೆಯ ಮೂಲಕ ಎಚ್ಚರಿಕೆಯನ್ನು ನೀಡಿದ್ದಾರೆ.

ಗಡಿಯಾರ ಗೋಪುರಕ್ಕಿಲ್ಲ ದುರಸ್ತಿ ಭಾಗ್ಯ

ಸಂದೇಶ್ ಎಸ್.ಜೈನ್

ದಾಂಡೇಲಿ: ಸಿದ್ದರಾಮಯ್ಯನವರು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಯುವ ಎರಡು ತಿಂಗಳ ಹಿಂದೆ ಸಮಯ ತೋರಿಸುವುದನ್ನು ನಿಲ್ಲಿಸಿದ ದಾಂಡೇಲಿಯ ಜೆ.ಎನ್ ರಸ್ತೆಯ ಗೋಪುರಗಡಿಯಾರ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾಗಿ ಅಧಿಕಾರವಹಿಸಿಕೊಂಡ ನಂತರವೂ ದುರಸ್ತಿಯಾಗಿಲ್ಲ ಎಂಬ ಹಾಸ್ಯಚರ್ಚೆಗಳು ಸಾರ್ವಜನಿಕರ ವಲಯದಲ್ಲಿ ನಡೆಯುವಂತಾಗಿದೆ.

ನಗರದಸೌಂದರ್ಯವನ್ನು ವೃದ್ದಿಸುವನಿಟ್ಟಿನಲ್ಲಿ ಹಾಗೂ ಸಾರ್ವಜನಿಕರಿಗೆ ಅನುಕೂಲವಾಗಲೆಂದು ವೆಸ್ಟ್ ಕೋಸ್ಟ್ ಕಾಗದ ಕಾರ್ಖಾನೆಯೂ ಸಿಎಸ್ ಆರ್ ಯೋಜನೆಯ ಮೂಲಕ ನಗರದ ಬಸ್ ನಿಲ್ದಾಣದ ಮುಂಭಾಗದಲ್ಲಿರುವ ಜೆ.ಎನ್. ರಸ್ತೆಯಲ್ಲಿ ಸುಂದರವಾದ ಗೋಪುರ ಗಡಿಯಾರವನ್ನು ನಿರ್ಮಾಣ ಮಾಡಿದೆ. ಈ ಗೋಪುರ ಗಡಿಯಾರ ನಿರ್ಮಾಣ ಮಾಡಿದ ನಂತರ ಇದರ ನಿರ್ವಹಣೆಯ ಜವಾಬ್ದಾರಿ



ನಗರಸಭೆಯಾದ್ದಾಗಿದೆ. ಕಳೆದೆರಡು ವರ್ಷಗಳ ಹಿಂದೆಯೂ ಈ ಗೋಪುರ ಗಡಿಯಾರ ಸಮಯ ತೋರಿಸುವುದನ್ನು ನಿಲ್ಲಿಸಿತ್ತು. ಆವಾಗಳು ವರದಿಗಳ ಮೇಲೆ ವರದಿ ಮಾಡಿದ ನಂತರ ದುರಸ್ತಿ ಕಾರ್ಯ ನಡೆಯಿತು. ಈಗ ಮತ್ತೆ ಸಮಯ ತೋರಿಸುವುದನ್ನು ನಿಲ್ಲಿಸಿ ಎರಡು ತಿಂಗಳು ಕಳೆದಿದೆ. ಆದರೆ ಈವರೆಗೆ ಅದರ ದುರಸ್ತಿ ಆಗಿಲ್ಲ. ಬಹುಶಃ ಗೋಪುರ ಗಡಿಯಾರ ಮೇಲೆ ಇರುವುದರಿಂದ ನಗರ ಸಭೆಯ ಗಮನಕ್ಕೆ ಬಂದಿರಲಿಕ್ಕಿಲ್ಲ ಎಂಬ ಹಾಸ್ಯಭರಿತ ಚರ್ಚೆಗಳು ನಗರದಲ್ಲಿ ಇದೀಗ ನಡೆಯುವಂತಾಗಿದೆ.



ಕುಮಟಾ: ಪಟ್ಟಣದ ಹೆರವಟ್ಟಾದ ಶ್ರೀ ಸಾಣಿ ಅಮ್ಮ ದೇವಸ್ಥಾನದಲ್ಲಿ ಅಧಿಕ ಮಾಸದ ವಿಶೇಷ ಪೂಜೆ ಮತ್ತು ಸತ್ಯ ನಾರಾಯಣ ಪೂಜೆಭಕ್ತಿಯಿಂದಸಂಪನ್ನಗೊಂಡಿತು.ದಕ್ಷಿಣಾಭಿಮುಖವಾಗಿ ನೆಲೆಸಿರುವ ಕುಮಟಾ ಪಟ್ಟಣದ ಹೆರವಟ್ಟಾದ ಶ್ರೀ ಸಾಣಿ ಅಮ್ಮ ದೇವಸ್ಥಾನದಲ್ಲಿ ಅಧಿಕ ಮಾಸದ ವಿಶೇಷ ಪೂಜೆ ಶುಕ್ರವಾರ ನಡೆಯಿತು.

ಎಂ.ಜಿ. ಶೈಕ್ಷಣಿಕ, ಸಾಂಸ್ಕೃತಿಕ ಟ್ರಸ್ಟ್ ಲೋಕಾರ್ಪಣೆ

ಅಂಕೋಲಾ: ತಾಲೂಕಿನ ಬೆಳಂಬಾರ ಗ್ರಾಮದ ಶಿಕ್ಷಕ, ಕವಿ ಹಾಗೂ ಸಮಾಜಮುಖಿ ವ್ಯಕ್ತಿತ್ವದ ದಿ.ಮಹಾಬಲೇಶ್ವರ ಗಿರಿಯಾ ನಾಯ್ಕ ಅವರ ನುಡಿ ನಮನ ಕಾರ್ಯಕ್ರಮ ಹಾಗೂ ಎಂ.ಜಿ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್‌ನ ಲೋಕಾರ್ಪಣೆ ಕಾರ್ಯಕ್ರಮ ಬೆಳಂಬಾರದ ಅಜ್ಜಿಮನೆ ಸಭಾಂಗಣದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಎಂ.ಜಿ. ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಟ್ರಸ್ಟ್ ನ್ನು ಲೋಕಾರ್ಪಣೆಗೊಳಿಸಲಾಯಿತು. ಟ್ರಸ್ಟ್‌ನ್ನು ಲೋಕಾರ್ಪಣೆಗೊಳಿಸಿದ ಕಂದಾಯ ಇಲಾಖೆಯ ಶಾಖಾಧಿಕಾರಿ ಕೇಶವ ನಾಯ್ಕ ಮಾತನಾಡಿ, ಎಂ.ಜಿ.ನಾಯ್ಕ ಅವರಿಗೆ ಸಮಾಜದ ಒಳಿತಿನ ಬಗ್ಗೆ, ಶಿಕ್ಷಣದ ಬಗ್ಗೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಕಾಳಜಿ ಇತ್ತು. ಈಗ ಕುಟುಂಬದವರು ಟ್ರಸ್ಟ್ ಮೂಲಕ ಅವರ ಹೆಸರನ್ನು ಜೀವಂತವಾಗಿಸಲು ಮುಂದಾಗಿರುವ ಕಾರ್ಯ ಶ್ಲಾಘನೀಯವಾದದ್ದು.

ಸಹಾಯಕ ವೈಜ್ಞಾನಿಕ ಅಧಿಕಾರಿ ದಿನೇಶ ನಾಯ್ಕ ಮಾತನಾಡಿ, ವ್ಯಕ್ತಿ ನಮ್ಮಿಂದ ದೂರವಾದರೂ ಅವರ ವ್ಯಕ್ತಿತ್ವ ಎಂದು ದೂರವಾಗದು. ಏಕೆಂದರೆ ಅವರು ಎಷ್ಟು ವರ್ಷ ಬದುಕಿದ್ದರೂ ಎನ್ನುವುದಕ್ಕಿಂತ ಬದುಕಿದ್ದಾಗ ಅವರು



ತೋರಿದ ಪ್ರೀತಿ, ಕಲಿಸಿದ ವಿದ್ಯೆ, ನೀಡಿದ ಮಾರ್ಗದರ್ಶನ, ಪ್ರೋತ್ಸಾಹ ಮುಖ್ಯವಾದದು. ಅದಕ್ಕಾಗಿ ಅವರ ಕನಸುಗಳನ್ನು ಈ ಟ್ರಸ್ಟ್ ಮೂಲಕ ನನಸು ಮಾಡಲು ಪ್ರಯತ್ನಿಸುತ್ತೇವೆ ಎಂದರು.

ಶಿಕ್ಷಣಾಧಿಕಾರಿ ಉದಯ ನಾಯ್ಕ, ನಿವೃತ್ತ ಬಿ.ಎಚ್.ಇ.ಓ. ಸಿ.ಡಿ. ನಾಯ್ಕ, ಬೆಳಂಬಾರ ಗ್ರಾಪಂ ಮಾಜಿ ಸದಸ್ಯ ಮಂಜುನಾಥ ಕೆ. ನಾಯ್ಕ, ನಿವೃತ್ತ ಉಪನ್ಯಾಸಕ ಪ್ರಭಾಕರ ಜಿ. ನಾಯ್ಕ, ಮುಖ್ಯ ಶಿಕ್ಷಕ ಲಕ್ಷ್ಮಣ ಜಿ. ಬಾಡ್ಕರ್ ಶಿಕ್ಷಕ ಸುರೇಶ ನಾಯ್ಕ, ಪ್ರೀತಿ ಪಿ. ಬೋರಗಾಂವಕರ, ನಿತ್ಯಾನಂದ ಆರ್. ನಾಯ್ಕ , ಪ್ರಭಾಕರ ಕೆ.ನಾಯ್ಕ, ಮಾರುತಿ ನಾಯ್ಕ, ಮೋಹನ್ ಖಾರ್ವಿ ಇತರರಿದ್ದರು. ಗಣೇಶ ವಿ. ನಾಯ್ಕ ನಿರೂಪಿಸಿದರು. ಮಯೂರ ನಾಯ್ಕ ವಂದಿಸಿದರು.

ನಿಯಮ ಉಲ್ಲಂಘನೆ: ಕಾನೂನು ಕ್ರಮಕ್ಕೆ ಒತ್ತಾಯ

ಹಳಿಯಾಳ : ಅಯ್ಯಪ್ಪ ಸ್ವಾಮಿಯ ವ್ರತಾಚರಣೆಯ ಪವಿತ್ರ ನಿಯಮಗಳನ್ನು ಉಲ್ಲಂಘಿಸಿ, 4 ವರ್ಷಗಳಿಂದ ಮಾಲೆ ಧರಿಸಿಕೊಂಡು ಅಕ್ರಮ ವ್ಯವಹಾರ ನಡೆಸುತ್ತಿರುವ ರೌಡಿ ಶೀಟರ್ ರಾಕೇಶ ದಿನಕರ ವಾಲೇಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಹಳಿಯಾಳದ ಅಯ್ಯಪ್ಪಸ್ವಾಮಿ ಸನ್ನಿಧಿ ಸೇವಾ ದೇವಸ್ಥಾನ ಟ್ರಸ್ಟ್ ಕಮೀಟಿ ಹಳಿಯಾಳರವರಿಂದ ಪೊಲೀಸ್ ಇಲಾಖೆ ಮತ್ತು ತಹಶೀಲ್ದಾರ್ ಅವರಿಗೆಮನವಿ ಸಲ್ಲಿಸಿದರು.

ಇಲ್ಲಿಯ ತಾಲೂಕ ಆಡಳಿತ ಸೌಧಕ್ಕೆ ಭೇಟಿ ನೀಡಿದ ಅಯ್ಯಪ್ಪ ಸ್ವಾಮಿ ಸೇವಾ ಸನ್ನಿಧಿ ಕಮಿಟಿಯ ನಿಯೋಗ ಗ್ರೇಡ್ 2 ತಹಶೀಲ್ದಾರ್ ರವೀಂದ್ರ ನೇಸರಗಿ ಅವರಿಗೆ ಮನವಿ ಸಲ್ಲಿಸಿದ ಬಳಿಕ ಪೊಲೀಸ್ ಠಾಣೆಗೆ ಭೇಟಿ ನೀಡಿ ಪಿಎಸ್ಐ ಬಸವರಾಜ್ ಮಬನೂರ್ ಅವರಿಗೆ ಮನವಿ ಸಲ್ಲಿಸಿದರು.

ಮನವಿಯಲ್ಲಿ ಹಳಿಯಾಳ ಪೊಲೀಸ್ ಠಾಣೆಯಲ್ಲಿ ರೌಡಿಶೀಟರ್ ಆಗಿರುವ ಹಲವಾರು ಅಪರಾಧಿಕ ಪ್ರಕರಣಗಳಲ್ಲಿ ಪದೇ ಪದೇ ಜೈಲುವಾಸ ಅನುಭವಿಸುತ್ತಿರುವ ರಾಕೇಶ್ ವಾಲೇಕರ್ ವಿರುದ್ಧ ಕಿಡಿಕಾರಿದ್ದಾರೆ. ಅಯ್ಯಪ್ಪ ವ್ರತಾಚರಣೆ 41 ದಿನಗಳ ಕಠಿಣ ನಿಯಮ ಹೊಂದಿದ್ದು, ವ್ರತಮುಗಿದನಂತರ ಮಾಲೆಯನ್ನು ಶಬರಿಮಲೆಯಲ್ಲಿ



ಸಮರ್ಪಿಸಬೇಕು. ಆದರೆ ರಾಕೇಶ್ ವಾಲೇಕರ 4 ವರ್ಷಗಳ ಹಿಂದೆ ಮಾಲೆ ಧರಿಸಿ ವ್ರತ ಮುಗಿಸಿದರೂ, ನಿಯಮ ಉಲ್ಲಂಘಿಸಿ ಮತ್ತೆ ಮಾಲೆ ಧರಿಸಿ ಸಾರ್ವಜನಿಕರಿಗೆ ಮೋಸ ಮಾಡುತ್ತಿದ್ದಾನೆ.ಮಾಲಾಧಾರಿಗಳು ಸನ್ಯಾಸಿಯಂತೆ ಕಟ್ಟುನಿಟ್ಟಿನ ವ್ರತ ಪಾಲಿಸಬೇಕು. ದೌರ್ಜನ್ಯಕ್ಕೆ ಒಳಗಾದ ಸಾರ್ವಜನಿಕರು, ಕುಟುಂಬಸ್ಥರು ನಿತ್ಯ ಸನ್ನಿಧಿಗೆ ಬಂದು ನ್ಯಾಯಕ್ಕಾಗಿ ಅಂಗಲಾಚುತ್ತಿದ್ದಾರೆ ಎಂದು ಟ್ರಸ್ಟ್ ತಿಳಿಸಿದೆ. ಸತ್ಯಜಿತ್ ಗಿರಿ, ಪರಶುರಾಮ್ ಬೈಲಪ್ಪಗೊಳ, ಸಂತೋಷ್ ಘಟಕಾಂಬಳೆ, ವಿಲಾಸ್ ಕಣಗಲಿ, ರಾಘವೇಂದ್ರ ನಾಯ್ಕ, ಸಿರಾಜ್ ಮುನವಳ್ಳಿ, ದತ್ತಾತ್ರೆಯ ಬಾಂದೇಕರ್, ಚಂದ್ರಕಾಂತ್ ಗೋಂದಳಿ, ಗೋಕುಲ್ ಜಾದವ್, ಶಿವಾನಂದ ಕರಂಜೆಕರ್ ಇತರರು ಇದ್ದರು.

ಜಿಲ್ಲಾ ಘಟಕದ ಪದಾಧಿಕಾರಿಗಳ ಅವಿರೋಧ ಆಯ್ಕೆ

ಯಲ್ಲಾಪುರ : ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಿ ಉತ್ತರ ಕನ್ನಡದಲ್ಲಿ ಇತಿಹಾಸ ನಿರ್ಮಿಸಿದೆ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಜ್ಯಾಧ್ಯಕ್ಷ, ನಿವೃತ್ತ ಆಯ್‌ಪಿಎಸ್ ಅಧಿಕಾರಿ ಶಂಕರ ಬಿದರಿ ಹೇಳಿದರು.

ಅವರು ಶನಿವಾರ ಪಟ್ಟಣದ ಅಡಿಕೆ ಭವನದಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆಯ ಜಿಲ್ಲಾ ಘಟಕದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿ, ನೂತನ ಜಿಲ್ಲಾಧ್ಯಕ್ಷ ವಿ.ಎಸ್.ಪಾಟೀಲ ಹಾಗೂ ಅವರ ತಂಡ ನಿಮ್ಮೆಲ್ಲರ ಸಂಪೂರ್ಣ ಸಹಕಾರದಲ್ಲಿ ಜಿಲ್ಲೆಯಲ್ಲಿ ಸಮಾಜ ಸಂಘಟನೆಯನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗುತ್ತಾರೆ ಎಂಬ ವಿಶ್ವಾಸವಿದೆ.

ಎಲ್ಲಿ ಒಗ್ಗಟ್ಟಿದೆಯೋ ಅಲ್ಲಿ ಶಕ್ತಿ ಇದೆ ಎಂಬುದನ್ನು ಅರಿಯಬೇಕು.

ಮುಂದಿನ ಪೀಳಿಗೆಗೆ ಸರಿಯಾದ ಶಿಕ್ಷಣ ಸಂಸ್ಕಾರ ಕೊಟ್ಟರೆ ಅವರು ಬೆಳೆಯುತ್ತಾರೆ ಸಮಾಜವೂ ಬೆಳಗುತ್ತದೆ ವೀರಶೈವ ಮಹಾಸಭಾ ಸಮಾಜದ ಹಿತಕ್ಕಾಗಿ ಶ್ರಮಿಸುತ್ತಿದೆ ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯರಾಗಿ ಅದರ ಪ್ರಯೋಜನ ಪಡೆದು ಕೊಳ್ಳಿ ಎಂದರು.

ಮಹಾಸಭಾದ ನೂತನ ಜಿಲ್ಲಾಧ್ಯಕ್ಷ ವಿ.ಎಸ್.ಪಾಟೀಲ ಅಧ್ಯಕ್ಷತೆವಹಿಸಿ ಮಾತನಾಡಿ, ಸಮಾಜ ನಮಗೇನು ಕೊಟ್ಟಿದೆ ಎನ್ನುವದಕ್ಕಿಂತ ಸಮಾಜಕ್ಕೆ ನಾವೇನು ಕೊಟ್ಟಿದ್ದೇವೆ ಎಂಬ ಭಾವನೆ ಎಲ್ಲರಲ್ಲಿಯೂ ಬಂದಾಗ ಮಾತ್ರ ಸಮಾಜದ ಸುಧಾರಣೆ ಸಾಧ್ಯ ಸಮಾಜದಲ್ಲಿ ಇದ್ದವರೆಲ್ಲರೂ ಒಳ್ಳೆಯವರೇ ಸಮಾಜದ ಬಗ್ಗೆ ಕಳಕಳಿಯಿಂದ ಕೆಲಸ ಮಾಡಬೇಕು ನಿಮ್ಮೆಲ್ಲರ ಸಹಕಾರದಿಂದ ನನಗೆ ನೀಡಿದ ಜವಾಬ್ದಾರಿಗೆ ನ್ಯಾಯ ಒದಗಿಸುತ್ತೇನೆ ಎಂದರು.



ಮಹಾಸಭಾದ ರಾಜ್ಯ ಪ್ರಧಾನ ಕಾರ್ಯದರ್ಶಿ ನಟರಾಜ್ ಸಾಗರನಹಳ್ಳಿ, ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ಜ್ಯೋತಿ ಪಾಟೀಲ,ರಾಜ್ಯ ಖಜಾಂಚಿ ಗಿರೀಶ ಗೌಡ ದ್ಯಾವನಹಳ್ಳಿ, ರಾಜ್ಯ ಉಪಾಧ್ಯಕ್ಷ ಗುರು ಮೆಟಗುಡ್ಡ ಇತರರು ಇದ್ದರು.ಈ ವೇಳೆ ಜಿಲ್ಲೆಯ ನೂತನ ಅಧ್ಯಕ್ಷರಿಗೆ ಪದಾಧಿಕಾರಿಗಳಿಗೆ ಪದಗ್ರಹಣ ನೆರವೇರಿಸಲಾಯಿತು. ಹಾಗೂ ಎಸ್ಸೆಸ್ಸೆಲ್ಸಿ, ಪಿ ಯುಸಿಯಲ್ಲಿ 90ಕ್ಕಿಂತ ಅಧಿಕ ಅಂಕ ಪಡೆದ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗೌರವಿಸಿ ಪುರಸ್ಕರಿಸಲಾಯಿತು.

ನಿಕಟಪೂರ್ವ ಜಿಲ್ಲಾಧ್ಯಕ್ಷ ಶಿವಲಿಂಗಯ್ಯ ಅಲ್ಲಯ್ಯನವರ ಮಠ ಪ್ರಸ್ತಾವಿಕ ಮಾತನಾಡಿದರು. ಶಿರಸಿ ಬಸವ ಬಳಗ ಮಹಾಸಭಾದ ಗೀತೆ ಹಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹೇಶ ಕುಮಾರ ದಾವಣಗೇರಿ ಸ್ವಾಗತಿಸಿದರು. ಕಾರ್ಯದರ್ಶಿ ಮಂಜುನಾಥ ಹಿರೇಮಠ, ಜಿಲ್ಲಾ ಸಮಿತಿ ಸದಸ್ಯೆ ಚೇತನಾ ಗೌಡರ್ ನಿರ್ವಹಿಸಿದರು. ಜಿಲ್ಲಾ ಸಮಿತಿ ಸದಸ್ಯ ಪ್ರವೀಣ ತೆಪ್ಪಾರ ವಂದಿಸಿದರು. ಶಿರಸಿ ಸಿದ್ದಾಪುರ, ಹಳಿಯಾಳ ದಾಂಡೇಲಿ, ಮುಂಡಗೋಡ ಸೇರಿದಂತೆ ವಿವಿಧ ತಾಲೂಕಿನಿಂದ ವೀರಶೈವ ಲಿಂಗಾಯತ ಸಮಾಜದವರು ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆಗೆ ಎಲ್ಲರೂ ಕೈ ಜೋಡಿಸಿ



ಯಲ್ಲಾಪುರ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಅರಣ್ಯ ಇಲಾಖೆ, ಜ್ಞಾನತರಂಗಿಣಿ ಫೌಂಡೇಶನ್, ಹಾಗೂ ಗ್ರಾಪಂ ಮದನೂರು, ಹುಣಶೆಟ್ಟಿಕೊಪ್ಪ ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಕರಡೊಳ್ಳಿ ಗ್ರಾಮದಲ್ಲಿ ವೃಕ್ಷಾರೋಪಣ ಕಾರ್ಯಕ್ರಮ ನಡೆಯಿತು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ. ಆರ್. ಡಿ. ಜನಾರ್ಧನ ಮಾತನಾಡಿ, ಮರಗಳು ಮಾನವನ ಜೀವನಕ್ಕೆ ಅಗತ್ಯವಾದ ಆಮ್ಲಜನಕವನ್ನು ಒದಗಿಸುವುದರ ಜೊತೆಗೆ ಮಣ್ಣಿನ ಸವೆತವನ್ನು ತಡೆಗಟ್ಟುತ್ತವೆ. ಮಳೆಯ ಪ್ರಮಾಣ ಹೆಚ್ಚಲು ಸಹಕಾರಿಯಾಗುತ್ತವೆ ಹಾಗೂ ಜೀವ ವೈವಿಧ್ಯತೆಯ ಸಂರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ ಎಂದರು.

ಅರಣ್ಯ ಇಲಾಖೆಯ ಗುರು ಕಣ್ಣೂರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಅರಣ್ಯ ನಾಶ, ಹವಾಮಾನ ವೈಪರೀತ್ಯ, ತಾಪಮಾನ ಏರಿಕೆ ದಂತಹ ಸಮಸ್ಯೆಗಳು ಹೆಚ್ಚುತ್ತಿದ್ದು, ಪರಿಸರ ಸಮತೋಲನ ಕಾಪಾಡಲು ವೃಕ್ಷಾರೋಪಣ ಅತ್ಯಗತ್ಯವಾಗಿದೆ ಎಂದರು. ಗ್ರಾಪಂ ಮದನೂರು-ಹುಣಶೆಟ್ಟಿಕೊಪ್ಪ ಪಿಡಿಒ ಅಣ್ಣಪ್ಪ ವಡ್ಡರ ಮಾತನಾಡಿ, ಪ್ರತಿಯೊಬ್ಬ ನಾಗರಿಕರೂ ಕನಿಷ್ಠ ಒಂದು ಸಸಿಯನ್ನು ನೆಟ್ಟು ಅದನ್ನು ಪೋಷಿಸಿ ಬೆಳೆಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದರು. ಜ್ಞಾನತರಂಗಿಣಿ ಫೌಂಡೇಶನ್ ಸಂಸ್ಥಾಪಕ ಅಪ್ಪು ವರಕ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಅರಣ್ಯ ಇಲಾಖೆಯ ಸಿಬ್ಬಂದಿ, ಗ್ರಾಮಸ್ಥರು ಇದ್ದರು.

ವಿಶ್ವ ಪರಿಸರ ದಿನ: ಸಸಿ ನಾಟಿ

ಮುಂಡಗೊಂಡ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಇಂದೂರಿನ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಮುಂಡಗೋಡ ವಲಯ ಯಲ್ಲಾಪುರ ವಿಭಾಗ ಹಾಗೂ ಇಂದೂರ ಅರಣ್ಯ ಸಮಿತಿ ಮತ್ತು ಹಿರಿಯ ಪ್ರಾಥಮಿಕ ಶಾಲೆ ಅಭಿರುದ್ಧಿ ಸಮಿತಿ ಸಹಯೋಗದಲ್ಲಿ ಸಸಿ ನೆಡೆವುದರ ಮುಕಾಂತರ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಿಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ಸಹದೇವಪ್ಪ ನಡಗೇರಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಶ್ರೀನಿವಾಸ್ ಮರಾಟೆ ಶಾಲೆಯ ಮುಖ್ಯ ಶಿಕ್ಷಕಿ ಯರಾದ ರೇಖಾ ಬಂನ್ಸೋಡೆ ವಲಯ ಅರಣ್ಯ ಅಧಿಕಾರಿಯರಾದ ಸುನೀತಾ ಮೇಡಮ್(ಫಾರಿಸ್ಟ್) ಉಪ ವಲಯ ಅರಣ್ಯ ಅಧಿಕಾರಿಯಾದ ಹೇಮಾ ಮೇಡಮ್ (ಗಾರ್ಡ್)ಮತ್ತು ನಂದಿಗಟ್ಟಿ ಬಿಟ್ ಗಾರ್ಡ ಯರೇಬೈಲ್ ಬಿಟ್ ಗಾರ್ಡ ಹಾಗೂ ಊರಿನ ಹಿರಿಯರಾದ ಕುಬೇರಪ್ಪ ಸತ್ತೂರ ತಿಪ್ಪಣ್ಣ ಬಾರಬಾರ ಮತ್ತು ಶಾಲೆ ಸಹ ಶಿಕ್ಷಕರು ಅರಣ್ಯ ಸಿಬ್ಬಂದಿ ಇದ್ದರು.



ಕಿರುಸುದ್ದಿ

ಉತ್ತಮ ಆರೋಗ್ಯಕ್ಕೆ ಪರಿಸರ ಅವಶ್ಯ



◆ **ರಾಣೇಬೆನ್ನೂರ:** ಉತ್ತಮ ಆರೋಗ್ಯಕ್ಕಾಗಿ ಪರಿಸರ ಕಾಪಾಡಿಕೊಳ್ಳುವುದು ಇಂದಿನ ಅಗತ್ಯವಾಗಿದ್ದು, ಪರಿಸರ ಎನ್ನುವುದು ನಾವು ತೆಗೆದುಕೊಳ್ಳುವ ಗಾಳಿ, ನೀರು ಮತ್ತು ಆಹಾರದ ಗುಣಮಟ್ಟವನ್ನು ನಿರ್ಧರಿಸುವ ಮಹತ್ವದ ಅಂಶವಾಗಿದೆ ಎಂದು ಪ್ರಾ. ಎಸ್.ಪಿ.ಗೌಡರ ಹೇಳಿದರು. ತಾಲೂಕಿನ ಸುಣಕಲ್ಲಬಿದರಿ ಗ್ರಾಮದ ಅರಳಿ ಸಿದ್ದಲಿಂಗಪ್ಪ ಬಸಪ್ಪ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕವು ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಯುದ್ಧ ಮತ್ತು ಪ್ರಕೃತಿ ವಿಕೋಪಗಳಂತಹ ಸಂಕಟಗಳ ಸ್ಥಿತಿಯಲ್ಲಿ ಇಂಧನಕ್ಕಾಗಿ ಪರ್ಯಾಯ ಮಾರ್ಗಗಳನ್ನು ಹುಡುಕಲು ಒಳ್ಳೆಯ ಪರಿಸರ ಇದ್ದರೆ ಮಾತ್ರ ಸಾಧ್ಯ ಎಂದರು. ಡಾ. ನಾಗರಾಜ ಗೋಡಿಹಾಳ. ಡಾ.ಬಸವರಾಜ ಹುಗ್ಗಿ, ಪ್ರಾಧ್ಯಾಪಕರಾದ ರೇವಣಸಿದ್ದಪ್ಪ ಕೆ.ಬಿ ಮಂಜುನಾಥ ಬಿ.ಕೆ., ಅಂಬಿಕಾ ಹೊಸಮನಿ,ರವಿ ಎಂ ರವಿಕುಮಾರ. ಎಸ್.ಯು ಸೇರಿದಂತೆ ಮತ್ತಿತರರು ಇದ್ದರು.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ



◆ **ರಾಣೇಬೆನ್ನೂರ:** ಪರಿಸರದ ಸಮತೋಲನ ಕಾಪಾಡಲು ಹಾಗೂ ಮುಂದಿನ ಪೀಳಿಗೆಗೆ ಹಸಿರು ವಾತಾವರಣ ನಿರ್ಮಿಸಲು ಪ್ರತಿಯೊಬ್ಬರೂ ಗಿಡಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಜವಾಬ್ದಾರಿ ವಹಿಸಬೇಕು ಎಂದು ಸಂಸ್ಥೆ ಸಂಸ್ಥಾಪಕ ಪಿ.ಕೆ.ಪ್ರಕಾಶರಾವ್ ಹೇಳಿದರು. ತಾಲೂಕಿನ ಕೋಡಿಯಾಲ ಗ್ರಾಮದ ಅಮೃತ ವರ್ಷಿಣಿ ಮಹಾವಿದ್ಯಾಲಯದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಪರಿಸರ ನಮ್ಮ ಬದುಕಿನ ಆಧಾರ, ಗಾಳಿ, ನೀರು, ಮಣ್ಣು ಮತ್ತು ಮರಗಳು ನಮ್ಮ ಜೀವನಕ್ಕೆ ಅತ್ಯಗತ್ಯ. ಪರಿಸರವನ್ನು ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ ಪರಿಸರವನ್ನು ನಾವಿಂದು ರಕ್ಷಿಸಿದರೆ ನಾಳೆಯ ನಮ್ಮ ಭವಿಷ್ಯ ಸುಂದರವಾಗಿತ್ತದೆ ಎಂದರು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ವಿನಯ್ ರಾವ್. ಪ್ರಾಂಶುಪಾಲ ಚೇತನಾ ರಾವ್, ಮುಖ್ಯೋಪಾಧ್ಯಾಯಿನಿ ಫೌನಿಯಾ ಬಾನು. ಶಿಕ್ಷಕ ವರ್ಗ, ಸಿಬ್ಬಂದಿ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

ಜಾನುವಾರು ಕಳ್ಳತನ

◆ **ರಟ್ಟೀಹಳ್ಳಿ:** ರಟ್ಟೀಹಳ್ಳಿ ಪಟ್ಟಣದ ಹೊರ ವಲಯದಲ್ಲಿಯಲಿವಾಳ ಕ್ರಾಸ್ ಬಳಿಯಿರುವ ದನದಕೊಟ್ಟಿಗೆಯಲ್ಲಿಕಟ್ಟಿದ ಜಾನುವಾರುಗಳನ್ನು ಕಳ್ಳತನ ಮಾಡಿದ ಘಟನೆ ವರದಿಯಾಗಿದೆ. ಎರಡು ಎತ್ತುಗಳು, ಎರಡು ಆಕಳ ಕರುಗಳನ್ನು ಕಳ್ಳತನ ಮಾಡಲಾಗಿದೆ.ರಟ್ಟೀಹಳ್ಳಿಯ ಸಿದ್ದಪ್ಪ ಚಕ್ರಸಾಲಿ ಎಂಬುವವರಿಗೆ ಸೇರಿದ ಜಾನುವಾರುಗಳಾಗಿವೆ. ಕೊಟ್ಟಿಗೆ ಕೀಲಿಕೈ ಸಮೇತ ಮುರಿದು ಅದನ್ನೂ ಬಿಡದೇ ಕಳ್ಳತನ ಮಾಡಿದ್ದಾರೆ. ಹೊನ್ನಾಳಿ, ಬ್ಯಾಡಗಿ, ರಾಣೆಬೆನ್ನೂರ, ಶಿಕಾರಿಪುರ ಮುಂತಾದ ಪಟ್ಟಣಗಳಲ್ಲಿ ಮನೆಯ ಜನರೆಲ್ಲ ಹುಡುಕಾಟ ನಡೆಸಿದ್ದಾರೆ. ಆದರೂ ಪ್ರಯೋಜನವಾಗಿಲ್ಲ, ಅಂದಾಜು 1.50.000 ಸಾವಿರ ಬೆಲೆಯುಳ್ಳ ಜಾನುವಾರುಗಳಾಗಿವೆ. ರಟ್ಟೀಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವ್ಯಕ್ತಿ ಆತ್ಮಹತ್ಯೆ

◆ **ರಾಣೇಬೆನ್ನೂರ:** ರೈಲ್ವೆ ಹಳಿಗೆ ಬಿದ್ದು ವ್ಯಕ್ತಿಯೋರ್ವ ಆತ್ಮಹತ್ಯೆ ಮಾಡಿಕೊಂಡ ಘಟನೆ ನಗರದ ದೇವರಗುಡ್ಡ ರಸ್ತೆಯ ರೈಲ್ವೆ ಬ್ರಿಡ್ಜ್ ಬಳಿ ನಡೆದಿದೆ. ಮೃತ ವ್ಯಕ್ತಿಯನ್ನು ಸದಾಶಿವ ನಗರದ ಗುಡ್ಡದೇಶ ಆನಂದಪ್ಪ (32) ಎಂದು ಗುರುತಿಸಲಾಗಿದೆ. ಈ ಕುರಿತು ಹುಬ್ಬಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲುಗೊಂಡಿದೆ.



ಹಾನಗಲ್ಲ: ಬಿತ್ತನೆ ರಸಗೊಬ್ಬರ ವಿತರಣೆಯಲ್ಲಿ ಸರ್ಕಾರ ಜಾರಿಗೆ ತಂದ ಎಫ್‌ಐಡಿ ನಿಯಮದ ತಾಂತ್ರಿಕ ದೋಷದಿಂದ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಸಿಗುತ್ತಿಲ್ಲ, ಈ ನಿಯಮ ಸಡಿಲಗೊಳಿಸಬೇಕು ಎಂದು ಒತ್ತಾಯಿಸಿ ಶುಕ್ರವಾರ ರೈತ ಸಂಘದಿಂದ ತಹಶೀಲ್ದಾರ್ ವಿಠಲ್ ಚೌಗಲೇಯವರಿಗೆ ಮನವಿ ಸಲ್ಲಿಸಿದರು.

ಎಫ್‌ಐಡಿ ನಿಯಮ ಸಡಿಲಗೊಳಿಸಲು ಆಗ್ರಹ

◆ **ಹಾನಗಲ್ಲ:** ಬಿತ್ತನೆ ರಸಗೊಬ್ಬರ ವಿತರಣೆಯಲ್ಲಿ ಸರ್ಕಾರ ಜಾರಿಗೆ ತಂದ ಎಫ್‌ಐಡಿ ನಿಯಮದ ತಾಂತ್ರಿಕ ದೋಷದಿಂದ ರೈತರಿಗೆ ಸಮರ್ಪಕವಾಗಿ ರಸಗೊಬ್ಬರ ಸಿಗುತ್ತಿಲ್ಲ. ಈ ನಿಯಮ ಸಡಿಲಗೊಳಿಸಬೇಕು ಎಂದು ಒತ್ತಾಯಿಸಿ ಶುಕ್ರವಾರ ರೈತ ಸಂಘದಿಂದ ತಹಶೀಲ್ದಾರ್ ವಿಠಲ್ ಚೌಗಲೇಯವರಿಗೆ ಮನವಿ ಸಲ್ಲಿಸಿದರು. ಈ ಸಂಧರ್ಭದಲ್ಲಿ ತಾಲೂಕು ರೈತ ಸಂಘದ ಅಧ್ಯಕ್ಷ ಮರಿಗೌಡ ಪಾಟೀಲ ಮಾತನಾಡಿ, ತಾಲೂಕಿನಲ್ಲಿ ರಸಗೊಬ್ಬರ, ಬಿತ್ತನೆ ಬೀಜ ಮತ್ತು ಪೆಟ್ರೋಲ್, ಡೀಸೆಲ್ ಕೊರತೆಯಾಗುತ್ತಿದ್ದು ಕೇಂದ್ರ ಮತ್ತು ರಾಜ್ಯ ಸರ್ಕಾರ ರೈತ ವಿರೋಧಿ ನೀತಿಯಲ್ಲಿ ಅನುಸರಿಸುತ್ತಿವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕಳೆದ ಸಾಲಿನ ಮಂಗಾರು ಹಂಗಾಮಿನ ಶುಂಠಿ ಮತ್ತು ಹಸಿಮೆಣಸಿನಕಾಯಿ ಬೆಳೆಗೆ ರೈತರು ಕಟ್ಟಿದ್ದ ವಿಮಾ ಪರಿಹಾರ ವಿತರಣೆ ಅವಧಿ ಅಕ್ಟೋಬರ್‌ನಲ್ಲಿ ಮುಕ್ತಾಯಗೊಂಡಿದ್ದು, ಈತನಕ ಪರಿಹಾರ ರೈತರ ಖಾತೆಗೆ ಜಮೆಯಾಗಿಲ್ಲ, ಅಡಿಕೆ, ಶುಂಠಿ ಬೆಳೆ ವ್ಯಾಪ್ತಿ ಹೆಚ್ಚುತ್ತಿದ್ದು, ರೋಗ, ಕೀಟ ಬಾಧೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳಬೇಕು. ಕಳಪೆ ಮತ್ತು ನಕಲಿ ಗೋವಿನಜೋಳ ಬಿತ್ತನೆ ಬೀಜಗಳನ್ನು ಮಾರಾಟ ಮಾಡಲಾಗುತ್ತಿದೆ ಹಾಗೂ ವಿದ್ಯುತ್ ಇಲಾಖೆ ಖಾಸಗೀಕರಣ ನಿಲ್ಲಿಸಬೇಕು ಎಂದು ಹೇಳಿದರು. ಈ ವೇಳೆ ಮಲ್ಲೇಶಪ್ಪ ಪರಪ್ಪನವರ, ಮಹೇಶ ವಿರುಪಣ್ಣನವರ, ರುದ್ರಪ್ಪ ಹಣ್ಣಿ ಸೋಮಣ್ಣ ಜಡೆಗೊಂಡರ, ಉಮೇಶ ಮೂಡಿ, ಶ್ರೀಧರ ಮಲಗುಂದ, ಎಂ.ಎಂ.ಬಡಗಿ, ಮಹಲಿಂಗಪ್ಪ ಅಕ್ಕಿವಳ್ಳಿ ಮತ್ತಿತರು ಉಪಸ್ಥಿತರಿದ್ದರು.



ರಾಣೇಬೆನ್ನೂರ: ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಮುತ್ತು ಬಿಸಿಎಂ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ಹಾಸ್ಟೆಲ್ ಗಳಿಗೆ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು ಮತ್ತು ಮೂಲಭೂತ ಸೌಲಭ್ಯ ಒದಗಿಸಬೇಕೆಂದು ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ನಗರದ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿ ಪ್ರಶಾಂತ ವರ್ಗಪ್ಪನವರಿಗೆ ಮನವಿ ಸಲ್ಲಿಸಿದರು.

ಮಾದಕ ವಸ್ತುಗಳ ಸಾಗಾಣಿಕೆ ಬಗ್ಗೆ ನಿಗಾವಹಿಸಿ | ಡಿಸಿ ಸೂಚನೆ

ಪಾರ್ಸಲ್, ಸರಕು ಸಾರಿಗೆ ಮೇಲೆ ಕಣ್ಣಿಡಿ

◆ **ಹಾವೇರಿ:** ಜಿಲ್ಲೆಯಲ್ಲಿ ಪಾರ್ಸಲ್ ಹಾಗೂ ಸಾರಿಗೆ ಮೂಲಕ ಮಾದಕ ವಸ್ತುಗಳ ಸಾಗಾಣಿಕೆ ಬಗ್ಗೆ ಹೆಚ್ಚಿನ ನಿಗಾವಹಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶುಕ್ರವಾರ ಜರುಗಿದ ನಾರ್ಕೊ ಸಮನ್ವಯ ಕೇಂದ್ರ (NCORD) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಗಾಂಜಾ ಮಾರಾಟ, ಸಾಗಾಟ ಮಾಡುವವರನ್ನು ಮಟ್ಟಹಾಕುವ ನಿಟ್ಟಿನಲ್ಲಿ ಪೊಲೀಸ್ ಇಲಾಖೆಯೊಂದಿಗೆ ಸಂಬಂಧಪಟ್ಟ ಇಲಾಖೆಗಳು ಸಹಕಾರ ನೀಡಬೇಕು. ಮಾದಕ ಪದಾರ್ಥ ಸೇವನೆ ಮಾಡುವವರನ್ನು ಗುರುತಿಸಬೇಕು, ಅನುಮಾನಾಸ್ಪದ ವ್ಯಕ್ತಿಗಳನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸಿ. ಮಾದಕ ಪದಾರ್ಥ ಸೇವನೆ ಮಾಡಿದವರ ಮೇಲೆ ನಿಯಮಾನುಸಾರ ಕಾನೂನು ಕ್ರಮ ಜರುಗಿಸಬೇಕು ಎಂದು ಸೂಚಿಸಿದರು.

ಪೊಲೀಸ್ ಇಲಾಖೆಯಿಂದ ಪ್ರತಿದಿನ ನಿಯಮಿತವಾಗಿ ಗಾಂಜಾ ಮಾರಾಟ, ಸಾಗಾಟ ಮಾಡುವವರನ್ನು ಹಾಗೂ ಮಾದಕ ಪದಾರ್ಥ ಸೇವನೆ ಮಾಡುವವರನ್ನು ಪರಿಶೀಲನೆಗೆ ಒಳಪಡಿಸಿ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ. ಈ ಕಾರ್ಯಕ್ಕೆ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಹಕಾರ ನೀಡಬೇಕು. ಜಿಲ್ಲೆಯ ಶಿಕ್ಷಣ ಇಲಾಖೆಯ ಅಧಿಕಾರಿಗಳು ತಮ್ಮ ವ್ಯಾಪ್ತಿಯ ಶಾಲಾ-ಕಾಲೇಜುಗಳಲ್ಲಿ ಹಾಗೂ ಹಾಸ್ಟೆಲ್ ಗಳಲ್ಲಿಯ ವಿದ್ಯಾರ್ಥಿಗಳಿಗೆ ನಿಯಮಿತವಾಗಿ ಜಾಗೃತಿ ಕಾರ್ಯಕ್ರಮ ಆಯೋಜಿಸಬೇಕು ಎಂದು ಸೂಚಿಸಿದರು.

ಜಿಲ್ಲಾ ಔಷಧ ನಿಯಂತ್ರಕರು ಮಾತನಾಡಿ,



ಔಷಧಿ ಅಂಗಡಿಗಳ ಮೇಲೆ ನಿಗಾ

ನಿಷೇಧಿತ ಔಷಧಿಗಳನ್ನು ಮಾರಾಟ ಮಾಡುವ ಔಷಧಿ ಅಂಗಡಿಗಳ ಮೇಲೆ ನಿಗಾ ವಹಿಸಿ. ಔಷಧಿ ಅಂಗಡಿಗಳಲ್ಲಿ ದಾಸ್ತಾನು, ಮಾರಾಟದ ಬಗ್ಗೆ ವಹಿ ನಿರ್ವಹಿಸಬೇಕು. ರಶೀದಿ ಇಲ್ಲದೆ ಔಷಧಿಗಳನ್ನು ನೀಡುವುದಿಲ್ಲ ಎಂಬ ಸೂಚನಾ ಫಲಕ ಕಡ್ಡಾಯವಾಗಿ ಔಷಧಿ ಅಂಗಡಿಗಳಲ್ಲಿ ಪ್ರದರ್ಶಿಸಬೇಕು.

ಜಿಲ್ಲೆಯಲ್ಲಿ 120 ಹೋಲ್‌ಸೇಲ್ ಹಾಗೂ 955 ರಿಟೇಲರ್ ಔಷಧ ಮಾರಾಟಗಾರರಿದ್ದು, ಸೂಚನಾ ಫಲಕ ಅಳವಡಿಸುವಂತೆ ಈಗಾಗಲೇ ಎಲ್ಲ ಅಂಗಡಿದಾರರಿಗೆ ಸೂಚನೆ ನೀಡಲಾಗಿದೆ. ಈ ಕುರಿತು ಜಿಲ್ಲೆಯಲ್ಲಿ ಪರಿಶೀಲನೆ ಮಾಡುವುದಾಗಿ ಸಭೆಗೆ ಮಾಹಿತಿ ನೀಡಿದರು.

ಜಾಗೃತಿ ಮೂಡಿಸಿ: ಜಿಲ್ಲೆಯ ಎಲ್ಲ ಶಾಲಾ-ಕಾಲೇಜುಗಳು, ಹಾಸ್ಟೇಲ್‌ಗಳಲ್ಲಿ ವರ್ಷದಲ್ಲಿ ಎರಡು ಬಾರಿ ಸ್ಥಳೀಯ ಪೊಲೀಸ್ ಅಧಿಕಾರಿಗಳ ಸಹಕಾರದೊಂದಿಗೆ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

2025ನೇ ಸಾಲಿನಲ್ಲಿ 10 ಪ್ರಕರಣದಲ್ಲಿ ರೂ.11,34,929 ಮೊತ್ತದ 40.206 ಕೆ.ಜಿ ಹಾಗೂ 2026ಸಾಲಿನ ಈವರೆಗೆ ಎಂಟು ಪ್ರಕರಣಗಳಲ್ಲಿ ರೂ.11,67,700 ಮೊತ್ತ 25.025 ಕೆ.ಜಿ ಮಾದಕ ವಸ್ತು ವಶಪಡಿಸಿಕೊಳ್ಳಲಾಗಿದೆ. 2026ನೇ ಸಾಲಿನಲ್ಲಿ ಈವರೆಗೆ 43 ಪ್ರಕರಣಗಳಲ್ಲಿ 51 ಜನರು ಆರೋಪಿತರಾಗಿದ್ದಾರೆ.

■ ಯಶೋಧಾ ವಂಟಗೋಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ರಾಜ್ಯ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ವಿವಿಧ ಹಂತದ ಅಧಿಕಾರಿಗಳ ನೇತೃತ್ವದಲ್ಲಿ ಅಫೆಖಉರಚನೆ ಮಾಡಲಾಗಿದೆ. ಎಲ್ಲರೂ Karnataka state Police ಆ್ಯಪ್‌ನ್ನು ಡೌನ್ ಲೋಡ್ ಮಾಡಿಕೊಂಡು, ನಿರ್ಭಯವಾಗಿ ಮಾದಕ ಪದಾರ್ಥ ಮಾರಾಟ, ಸಾಗಾಟ, ಸೇವನೆ ಮಾಡುವವರ ವಿವರವನ್ನು ನಮೂದ ಮಾಡಬೇಕು ಎಂದು ಸಲಹೆ ನೀಡಿದರು.

ಬೀಟ್ ಪೊಲೀಸರಿಗೆ ಈಗಾಗಲೇ ಮಾದಕ ವಸ್ತುಗಳ ಸೇವನೆ ಮಾಡುವವರ ಬಗ್ಗೆ ಹಾಗೂ ಪೆಡ್ಲರಗಳ ಬಗ್ಗೆ ನಿಗಾವಹಿಸಲು ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಹಾವೇರಿ ಉಪವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ಪ್ರಾದೇಶಿಕ ಸಾರಿಗೆ ಅಧಿಕಾರಿ, ಅಬಕಾರಿ ಉಪಆಯುಕ್ತರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು, ಕಾಲೇಜುಗಳ ಪ್ರಾಂಶುಪಾಲರು ಉಪಸ್ಥಿತರಿದ್ದರು.

ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನ ಅರ್ಥಪೂರ್ಣ ಆಚರಿಸಿ

◆ **ಹಾವೇರಿ:** ವಿಶ್ವಬಾಲಕಾರ್ಮಿಕವಿರೋಧಿ ದಿನಾಚರಣೆ ಕಾರ್ಯಕ್ರಮವನ್ನು ವಿವಿಧ ಸಂಘ- ಸಂಸ್ಥೆಗಳ ಸಹಯೋಗದೊಂದಿಗೆ ಜಾಗೃತಿ ಕಾರ್ಯಕ್ರಮ ಆಯೋಜಿಸುವ ಮೂಲಕ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿಶ್ವ ಬಾಲಕಾರ್ಮಿಕ ವಿರೋಧಿ ದಿನಾಚರಣೆ ಪೂರ್ವಭಾವಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜೂನ್ 12ರಂದು ಬೆಳಗ್ಗೆ 9 ಗಂಟೆಗೆ ಜಾಥಾ ಹಾಗೂ 11 ಗಂಟೆಗೆ ವೇದಿಕೆ ಕಾರ್ಯಕ್ರಮವನ್ನು ಅತ್ಯಂತ ಅಚ್ಚುಕಟ್ಟಾಗಿ ಆಯೋಜಿಸಬೇಕು ಎಂದು ತಿಳಿಸಿದರು.

ವಿವಿಧ ಸ್ಪರ್ಧೆ: ಶಾಲಾ-ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ವಿಶ್ವ ಬಾಲ ಕಾರ್ಮಿಕ ವಿರೋಧಿ ದಿನಾಚರಣೆ ಕುರಿತು ಪ್ರಬಂಧ, ರಸಪ್ರಶ್ನೆ, ಭಿತ್ತಿಚಿತ್ರ ಸೇರಿದಂತೆ ವಿವಿಧ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ವಿಜೇತ ಮಕ್ಕಳಿಗೆ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪತ್ರ ವಿತರಣೆ ಮಾಡಬೇಕು. ಜಿಲ್ಲೆಯ ಎಲ್ಲ ಸರ್ಕಾರಿ ಕಚೇರಿಗಳಲ್ಲಿ, ಶಾಲಾ-ಕಾಲೇಜು ಹಾಗೂ ಗ್ರಾಮ ಪಂಚಾಯತಿಗಳಲ್ಲಿ ''ವಿಶ್ವ ಬಾಲಕಾರ್ಮಿಕ ವಿರೋಧಿ ದಿನ'' ಕುರಿತು ಪ್ರಮಾಣ ವಚನ ಸ್ವೀಕಾರ ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಾಥಾ: ಬಾಲ ಹಾಗೂ ಕಿಶೋರ ಕಾರ್ಮಿಕ ವಿರೋಧಿ ಪದ್ಧತಿ ಕುರಿತು ಗ್ರಾಮ, ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಶಾಲಾ-ಕಾಲೇಜು ಎನ್.ಸಿ.ಸಿ. ಮತ್ತು ಎನ್.ಎಸ್.ಎಸ್. ವಿದ್ಯಾರ್ಥಿಗಳಿಂದ ಜಾಥಾ ಆಯೋಜಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾ ಕಾರ್ಮಿಕ ಅಧಿಕಾರಿ ತರನ್ನುಮ ಬೆಂಗಾಲಿ ಕಾರ್ಯಕ್ರಮದ ರೂಪರೇಷೆ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಹಾವೇರಿ ಉಪ ವಿಭಾಗಾಧಿಕಾರಿ ಕಲ್ಯಾಣಿ ಕಾಂಬ್ಳೆ, ಕೃಷಿ ಜಂಟಿನಿರ್ದೇಶಕಮಲ್ಲಿಕಾರ್ಜುನ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.



ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಒತ್ತಾಯ

◆ **ಬ್ಯಾಡಗಿ:** ಅಥಣಿಯಲ್ಲಿ ವಕೀಲರ ಮೇಲೆ ಹಲ್ಲೆ ಖಂಡಿಸಿ ಹಾಗೂ ತಪ್ಪಿತಸ್ಥ ಪೊಲೀಸ್ ಅಧಿಕಾರಿ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ತಾಲೂಕು ವಕೀಲರ ಸಂಘದ ಪದಾಧಿಕಾರಿಗಳು ಶನಿವಾರ ನ್ಯಾಯಾಲಯದ ಕಲಾಪ ಬಹಿಷ್ಕರಿಸಿ ತಹಶೀಲ್ದಾರ್ ಕಚೇರಿಯ ಮುಂದೆ ಪ್ರತಿಭಟನೆ ನಡೆಸಿದರು.

ತಹಶೀಲ್ದಾರ್ ಅವರ ಮೂಲಕ ಮಾನ್ಯ ಮುಖ್ಯಮಂತ್ರಿ ಅವರಿಗೆ ಮನವಿ ಸಲ್ಲಿಸಿದರು. ನೇತೃತ್ವವಹಿಸಿದ್ದ ವಕೀಲರಸಂಘದ ತಾಲೂಕು ಅಧ್ಯಕ್ಷ ಆರ್.ಸಿ.ಶೀಡೆನೂರ ಮಾತನಾಡಿ, ಕಳೆದ ದಿನಗಳ ಹಿಂದೆಯಷ್ಟೇ ಅಥಣಿ ನಗರದ ಪೊಲೀಸ್ ಅಧಿಕಾರಿಗಳು ವಿನಾಕಾರಣ ಸಿವಿಲ್ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಅಥಣಿಯ ವಕೀಲರ ಮೇಲೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಲ್ಲೆ ಮಾಡಿದ್ದಾರೆ. ಈ ಬಗ್ಗೆ ಸಿಸಿ ಕ್ಯಾಮೆರಾದಲ್ಲಿ ಸೆರೆಯಾಗಿದ್ದರೂ ಸಹಿತ ಅಲ್ಲಿನ ಪೊಲೀಸ್ ವರಿಷ್ಠಾಧಿಕಾರಿಗಳು ಹಲ್ಲೆ ನಡೆಸಿದ ಪೊಲೀಸ್ ಅಧಿಕಾರಿಗಳ ಮೇಲೆ ಯಾವುದೇ ಕಾನೂನು ಕ್ರಮ ಕೈಗೊಂಡಿಲ್ಲ.ಕೂಡಲೇ ಹಲ್ಲೆಗೈದ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಬೇಕು. ಇಲಾಖೆಯ ತನಿಖೆ ಕೈಗೊಂಡು ಸೂಕ್ತ ಕಾನೂನುಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಉಪಾಧ್ಯಕ್ಷಜಿ.ಬಿ.ಯಲಗಚ್ಚ ಮಾತನಾಡಿ, ನ್ಯಾಯವಾದಿ ಮಲ್ಲಿಕಾರ್ಜುನ್ ಕೋರಿ ಅವರ ಮೇಲೆ ಆದ ಹಲ್ಲೇಯನ್ನು ಖಂಡಿಸಿ ನಾಗರಿಕ ಸಮಾಜದಲ್ಲಿ ಇದು ಅತ್ಯಂತ ಹೇಯ ಘಟನೆ ಸಮಾಜದಲ್ಲಿ ಇಂತಹ ಘಟನೆಗಳು ಘಟಿತದಂತೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳಬೇಕು ಹಾಗೂ ಈ ಘಟನೆಯಲ್ಲಿನ ತಪ್ಪಿತಸ್ಥರನ್ನು ಕೂಡಲೇ ಬಂದಿಸಿ ಹಲ್ಲಿಗೊಳದಾದ ವಕೀಲರಿಗೆ ನ್ಯಾಯ ಕೊಡಿಸಬೇಕು ಎಂದು ಆಗ್ರಹಿಸಿದರು.

ಹಿರಿಯ ವಕೀಲರಾದ ಬಿ ಎಸ್ ಚೂರಿ. ವ್ಹಿ ಎಸ್ ಕಡಗಿ, ಹಾಗೂ ವಕೀಲರಾದ ಎಚ್.ಜಿ ಮುಳಗುಂದ, ಎಂ ಎಸ್ ಕುಮ್ಮುರ, ಬಿಎಸ್ ಕುಲಕರ್ಣಿ, ಹಾಲೇಶ ಜಾಧವ, ಬಾರ್ಕಿ, ಮಂಜುನಾಥ್ ಹಂಜೆಗಿ, ಮಂಜುಳಾ ಜಿಗಳಿ, ಜಿ ಎನ್ ಹುಚ್ಚೇರ್, ಎಸ್ ಪಿ ಪೂಜಾರ್, ಎಮ್ ಎ ಮುಲ್ಲಾ, ಎಂ ಜಿ ಹಿರೇಮಠ್, ಶಂಕರ್ ಕುಸಗುರ್ ಹಾಗೂ ನ್ಯಾಯಾಲಯದ ಎಲ್ಲ ನ್ಯಾಯವಾದಿಗಳು ಉಪಸ್ಥಿತರಿದ್ದರು.



ಸರ್ಕಾರಿ ಶಾಲೆಗೆ ಸಾಮಗ್ರಿ ವಿತರಿಸಿದ ಶಾಸಕ ಮಾನೆ

◆ **ಹಾನಗಲ್ಲ:** ಶಾಸಕ ಶ್ರೀನಿವಾಸ ಮಾನೆ ಅವರ 50%-50% ಕಾರ್ಯಕ್ರಮದಡಿ ತಾಲೂಕಿನ ಕಾಮನಹಳ್ಳಿ ಕಾಲೋನಿ ಗ್ರಾಮದ ಸರ್ಕಾರಿಉರ್ದುಕಿರಿಯಪ್ರಾಥಮಿಕ ಶಾಲೆಗೆ ಒಟ್ಟು 98 ಸಾವಿರ ರೂ. ವೆಚ್ಚದಲ್ಲಿ ವಿವಿಧ ಸಾಮಗ್ರಿಗಳನ್ನು ವಿತರಿಸಲಾಯಿತು.

ಈ ಸಂದರ್ಭದಲ್ಲಿ ಲೈಬ್ರರಿ ಅಲ್ಮೇರಾ, ಆಫೀಸ್ ಟೇಬಲ್, ಎಸ್ ಮಾರ್ಕ್ ಚೇರ್, ಗ್ರೀನ್ ಬೋರ್ಡ್, ಡೆಸ್ಕ್, ಫ್ಯಾನ್, ನಾನಾ ಸ್ಪೋರ್ಟ್ಸ್ ಸಾಮಗ್ರಿ ವಿತರಿಸಲಾಯಿತು. ಸಾಮಗ್ರಿಗಳಿಗೆ ತಗುಲಿದ ಒಟ್ಟು ವೆಚ್ಚದಲ್ಲಿ ಅರ್ಧ ಹಣವನ್ನು ಗ್ರಾಮಸ್ಥರು ಸಂಗ್ರಹಿಸಿ ನೀಡಿದ್ದರೆ, ಉಳಿದರ್ಧ ಹಣವನ್ನು ಶಾಸಕ ಶ್ರೀನಿವಾಸ ಮಾನೆ ವೈಯಕ್ತಿಕವಾಗಿ ನೀಡಿದ್ದಾರೆ.



ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಸನಗೌಡ ಪಾಟೀಲ ಮಾತನಾಡಿ, ಶಾಸಕ ಶ್ರೀನಿವಾಸ ಮಾನೆ ಅವರು ಸರ್ಕಾರಿ ಶಾಲೆಗಳಿಗೆ ಸೌಲಭ್ಯ ಕಲ್ಪಿಸಲು ಕಾಳಜಿ ವಹಿಸಿದ್ದಾರೆ. 50%-50% ಕಾರ್ಯಕ್ರಮಡಿ 140 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಒಟ್ಟು 4 ಕೋಟಿ ರೂ. ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಿದ್ದಾರೆ. ಸಂಘ, ಸಂಸ್ಥೆಗಳ ಸಹಭಾಗಿತ್ವದಲ್ಲಿ ಸರ್ಕಾರಿ ಶಾಲೆಗಳಿಗೆ ಹೈಟೆಕ್ ಕಟ್ಟಡ ನಿರ್ಮಿಸುತ್ತಿದ್ದು, ಶಾಲೆ, ಕಾಲೇಜುಗಳಲ್ಲಿ ಕಲಿಕೆಗೆ ಪೂರಕ ವಾತಾವರಣ ಸೃಷ್ಟಿಸುತ್ತಿದ್ದಾರೆ ಎಂದರು.

ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ಕೆಪಿಸಿಸಿ ಸದಸ್ಯ ಖ್ವಾಜಾಮೋಹಿದ್ದೀನ್ ಜಮಾದಾರ, ಎಸ್‌ಡಿಎಂಸಿ ಅಧ್ಯಕ್ಷ ಮೈನುದ್ದೀನ ಒಡಗೇರಿ, ಮುಖ್ಯಶಿಕ್ಷಕ ಆರ್.ಎನ್.ಜವಳಿ, ಮುಖಂಡರಾದ ಗಿರೀಶ ವಡ್ಡರ, ಅಶೋಕ ಪಾಟೀಲ, ಜಾಫರಸಾಬ ವಡಗೇರಿ, ಹಜರತ್ ಅಲಿ ವಡಗೇರಿ, ಸುರೇಶ ವಡ್ಡರ, ಸಿದ್ದು ಓಣಿಕೇರಿ, ರಾಜೂ ಗಾಡಿ ಗೇರ, ಮಲ್ಲೇಶಪ್ಪ ವಡಗೇರಿ, ಕುತುಬುದ್ದೀನ್ ಜನಗೇರಿ, ಮುಸ್ತಾಕ್ ಅಹ್ಮದ್, ಮುಜಾಫರ್ ವಡಗೇರಿ, ಜಗದೀಶ ಮಾಯಣ್ಣನವರ, ಸಹಶಿಕ್ಷಕಿ ನಜ್ಮಾಬಾನು ಪಾನವಾಲೆ ಇದ್ದರು.

ಹಾಸ್ಟೆಲ್‌ಗಳಲ್ಲಿ ಮೂಲ ಸೌಲಭ್ಯ ಒದಗಿಸಲು ಒತ್ತಾಯ

◆ **ರಾಣೇಬೆನ್ನೂರ:** ನಗರದಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಮುತ್ತು ಬಿಸಿಎಂ ಇಲಾಖೆ ಹಾಗೂ ಅಲ್ಪಸಂಖ್ಯಾತರ ಇಲಾಖೆಯ ಹಾಸ್ಟೆಲ್‌ಗಳಿಗೆ ಅರ್ಜಿ ಹಾಕಿದ ಎಲ್ಲಾ ವಿದ್ಯಾರ್ಥಿಗಳಿಗೂ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು ಮತ್ತು ಮೂಲಭೂತ ಸೌಲಭ್ಯ ಒದಗಿಸಬೇಕೆಂದು ಆಗ್ರಹಿಸಿ ಎಬಿವಿಪಿ ಕಾರ್ಯಕರ್ತರು ನಗರದ ಸಮಾಜಕಲ್ಯಾಣ ಇಲಾಖೆಯ ಅಧಿಕಾರಿ ಪ್ರಶಾಂತ ವರ್ಗಪ್ಪನವರಿಗೆ ಮನವಿ ಸಲ್ಲಿಸಿದರು. ಎಬಿವಿಪಿಯ ಮಹೇಶ ಮರೋಳ ಮಾತನಾಡಿ, ವಿದ್ಯಾಭ್ಯಾಸಕ್ಕಾಗಿ ವಿದ್ಯಾರ್ಥಿಗಳು ತಾಲೂಕಿನ ವಿವಿಧ ಗ್ರಾಮಗಳಿಂದ ನಗರಕ್ಕೆ ಆಗಮಿಸುತ್ತಾರೆ ಹೀಗಾಗಿ ಬರುವ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ವಿದ್ಯಾಭ್ಯಾಸಕ್ಕೆ ತೊಂದರೆ ಆಗದಂತೆ ಹಾಸ್ಟೆಲ್ ಸೌಲಭ್ಯ ಕಲ್ಪಿಸಬೇಕು ಎಂದರು.

ಯಾವ ಹಾಸ್ಟೆಲ್ ನಿಲಯಗಳು ಮೂಲಭೂತ ಸೌಕರ್ಯಗಳಿಂದ ವಂಚಿತ ಆಗಿರುತ್ತವೋ ಅಂತಹ ಹಾಸ್ಟೆಲ್‌ಗಳಿಗೆ ಮೂಲಭೂತ ಸೌಕರ್ಯ ಒದಗಿಸಿ ಹಾಸ್ಟೆಲ್‌ಗಳನ್ನ ಸಬಲೀಕರಣ ಮಾಡಬೇಕು. ವಿದ್ಯಾರ್ಥಿಗಳ ಭವಿಷ್ಯದ ಜೊತೆಗೆ ಚೆಲ್ಲಾಟವಾಡಿದರೆ ಮುಂದಿನ ದಿನಗಳಲ್ಲಿ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದರು. ಎಬಿವಿಪಿ ಮುಖಂಡರಾದ ಆಕಾಶ ಉನ್ನತಿ, ಕಿರಣ್ ಪೂಜಾರಿ, ಸತೀಶ್ ದೇವಗಪ್ಪನವರ ಸೇರಿದಂತೆ ಮತ್ತಿತರರು ಇದ್ದರು.

ಬಾಲಕಾರ್ಮಿಕ ನಿಷೇಧ ಕಾಯ್ದೆ ಜಾಗೃತಿ ಮೂಡಿಸಿ: ಡಿಸಿ

◆ **ಹಾವೇರಿ:** ಬಾಲಕಾರ್ಮಿಕಪದ್ಧತಿನಿಷೇಧಕಾಯ್ದೆ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸಬೇಕು ಹಾಗೂ ಬಾಲ ಕಾರ್ಮಿಕರನ್ನು ಪತ್ತೆಹಚ್ಚಲು ಅನಿರೀಕ್ಷಿತ ದಾಳಿ ಹೆಚ್ಚಿಸಬೇಕು ಎಂದು ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜಿಲ್ಲಾ ಬಾಲಕಾರ್ಮಿಕ ಯೋಜನಾ ಸೊಸೈಟಿಯ ಪ್ರಗತಿ ಪರಿಶೀಲನೆ, ಕಾರ್ಯಕಾರಿ ಸಮಿತಿ ಸಭೆ ಹಾಗೂ ಜಿಲ್ಲಾ ಟಾಸ್ಕ್ ಪೋರ್ಸ್ ಸಮಿತಿ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯಲ್ಲಿ ಬಾಲಕಾರ್ಮಿಕರ ಪ್ರಕರಣಗಳ ತಡೆಗೆ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ಕಾರ್ಯ ನಿರ್ವಹಿಸಿ, ಶಾಲಾ-ಕಾಲೇಜುಗಳು ಹಾಗೂ ಮಕ್ಕಳ ವಿಶೇಷ ಗ್ರಾಮ ಸಭೆಗಳಲ್ಲಿ ಅರಿವು ಮೂಡಿಸಬೇಕು ಎಂದು ಸೂಚಿಸಿದರು.

ಬಾಲಕಾರ್ಮಿಕ ಪದ್ಧತಿ ನಿಷೇಧ ಕಾಯ್ದೆ ಬಗ್ಗೆ ಬಸ್ ನಿಲ್ದಾಣ, ರೈಲು ನಿಲ್ದಾಣದಲ್ಲಿ ಧ್ವನಿವರ್ಧಕ ಮೂಲಕ ಹಾಗೂ ಕಸವಿಲೇವಾರಿ ವಾಹನಗಳಲ್ಲಿ ಜಿಂಗಲ್ಸ್ ಮೂಲಕ ಜಾಗೃತಿ ಮೂಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾಕಾರ್ಮಿಕಅಧಿಕಾರಿತರನ್ನುಮ್ ಬೆಂಗಾಲಿ ಮಾತನಾಡಿ, 2025-26ನೇ ಸಾಲಿನಲ್ಲಿ ಜಿಲ್ಲೆಯ



ಹೋಟೆಲ್, ಗ್ಯಾರೇಜು, ಬೇಕರಿ, ವೆಲ್ಡಿಂಗ್‌ಶಾಪ್, ಸ್ವೀಟ್ಸ್ ತಯಾರಿಕಾ ಘಟಕ, ಮಂಡಕ್ಕಿ ಭಟ್ಟಿ ಹಾಗೂ ವಿವಿಧ ವಾಣಿಜ್ಯ ಅಂಗಡಿಗಳ ಮೇಲೆ ದಾಳಿ ನಡೆಸಿ 17 ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆ ಮಾಡಲಾಗಿದೆ. ಈ ಪೈಕಿ ಎರಡು ಪ್ರಕರಣಗಳಲ್ಲಿ ಮೊಕದ್ದಮೆ ದಾಖಲಿಸಲಾಗಿದೆ. ಎಂಟು ಮಕ್ಕಳನ್ನು ಮಕ್ಕಳ ಕಲ್ಯಾಣ ಸಮಿತಿಗೆ ಹಾಜರುಪಡಿಸಿದೆ, ಆರು ಮಕ್ಕಳನ್ನು ಶಾಲೆಗೆ ದಾಖಲಿಸಲಾಗಿದೆ ಮತ್ತು ಮೂರು ಮಕ್ಕಳನ್ನು ಪೋಷಕರ ವಶಕ್ಕೆ ನೀಡಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆ ಕಾರ್ಮಿಕ ಪದ್ಧತಿ ನಿರ್ಮೂಲನೆ ಅಂಗವಾಗಿ ಬೀದಿನಾಟಕ, ಗೋಡೆ ಬರಹ, ಆಟೋ ಪ್ರಚಾರ, ಕರಪತ್ರ-ಬಿತ್ತಿಪತ್ರ, ಕಾನೂನು ಅರಿವು-ನೆರವು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಜಾಗೃತಿ ಮೂಡಿಸಲಾಗಿದೆ ಎಂದು ಮಾಹಿತಿ ನೀಡಿದರು.

ಅನಿರೀಕ್ಷಿತ ದಾಳಿ ನಡೆಸಿ

ಜಿಲ್ಲೆಯ ಕೈಗಾರಿಕೆ, ದಾಬಾ, ಹೋಟೆಲ್, ಇಟ್ಟಂಗಿ ಭಟ್ಟಿ ಸೇರಿದಂತೆ ವಿವಿಧ ಸ್ಥಳಗಳಿಗೆ ಕಾರ್ಮಿಕ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಅನಿರೀಕ್ಷಿತ ದಾಳಿ ನಡೆಸಿ, ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಬೇಕು. ಒಂದು ವೇಳೆ ಬಾಲಕಾರ್ಮಿಕರು ಪತ್ತೆಯಾದರೆ ಅವರನ್ನು ರಕ್ಷಿಸಬೇಕು ಹಾಗೂ ಸಂಬಂಧಿಸಿದವರ ವಿರುದ್ಧ ಕಡ್ಡಾಯವಾಗಿ ಪ್ರಕರಣ ದಾಖಲಿಸಬೇಕು. ಕಾರ್ಮಿಕ ಇಲಾಖೆ ಅಧಿಕಾರಿಗಳು ಇಂತಹ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂದು ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಸೂಚನೆ ನೀಡಿದರು.

ಸಭೆಯಲ್ಲಿ ಹಾವೇರಿ ಎಸಿ ಕಲ್ಯಾಣಿ ಕಾಂಬ್ಳೆ, ಕೃಷಿ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಪ್ರಶಾಂತ ವರಗಪ್ಪನವರ, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಶುದ್ಧ ಪರಿಸರಕ್ಕೆ ಸ್ವಚ್ಛತೆ ಅತ್ಯಗತ್ಯ



◆ **ರಾಣೇಬೆನ್ನೂರ:** ದಶಕಗಳಿಂದ, ಪ್ಲಾಸ್ಟಿಕ್ ಮಾಲಿನ್ಯವು ಪ್ರಪಂಚದ ಮೂಲೆ ಮೂಲೆಗಳಿಗೂ ನುಸುಳಿದೆ, ನಾವು ಕುಡಿಯುವ ನೀರು, ನಾವು ತಿನ್ನುವ ಆಹಾರ ಮತ್ತು ನಮ್ಮ ದೇಹಗಳಿಗೆ ಸೇರುತ್ತಿದೆ. ಪ್ಲಾಸ್ಟಿಕ್ ಮಾಲಿನ್ಯವು ಒಂದು ಪ್ರಮುಖ ಕಾಳಜಿಯಾಗಿದ್ದರೂ, ಇದು ಇಂದಿನ ಪರಿಸರ ಸವಾಲುಗಳಲ್ಲಿ ಅತ್ಯಂತ ಸರಿಪಡಿಸಬಹುದಾದ ಒಂದಾಗಿದೆ, ಕೆಲವು ಸ್ಪಷ್ಟ ಪರಿಹಾರಗಳು ಕೈಯಲ್ಲಿವೆ ಎಂದು ಕೆಎಲ್‌ಇ ಸಂಸ್ಥೆ ಸ್ಥಾನಿಕ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ವಿ.ಪಿ.ಲಿಂಗನಗೌಡ್ರ ಹೇಳಿದರು. ಸ್ಥಳೀಯ ರಾಜ-ರಾಜೇಶ್ವರಿ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯದಲ್ಲಿ ನಡೆದ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಆರೋಗ್ಯಯುತ ಸಮಾಜ ನಿರ್ಮಾಣವಾಗಬೇಕಾದರೆ ಸ್ವಚ್ಛ ಹಾಗೂ ಶುದ್ಧ ಪರಿಸರ ಕಾಪಾಡುವುದು ಪ್ರತಿಯೊಬ್ಬರ ಕರ್ತವ್ಯ. ಸಾರ್ವಜನಿಕರು ಆದಷ್ಟು ಮಟ್ಟಿಗೆ ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಬೇಕು ಎಂದರು. ಆಡಳಿತ ಮಂಡಳಿ ಸದಸ್ಯ ಬಿ.ಎಸ್ .ಪಟ್ಟಣಶೆಟ್ಟಿ, ಜಯಣ್ಣ ಜಂಬಗಿ, ಪ್ರಾ. ನಾರಾಯಣ ನಾಯಕ್. ಪ್ರೊ.ವಾಣಿಶ್ರೀ ಪಾಟೀಲ, ಪ್ರೊ.ಅನುರಾಧ ಎಸ್. ಪ್ರೊ.ಸುಜಾತಾ ಹುಲ್ಲೂರು, ಪ್ರೊ.ಚನ್ನಬಸಪ್ಪ ಮಾಳಿ, ಪ್ರೊ. ಕೃಷ್ಣ ಎಲ್ ಹೆಚ್, ರತ್ನವ್ವ ಹಾದಿಮನಿ ಸೇರಿದಂತೆ ಮತ್ತಿತರರು ಇದ್ದರು.

ಕಿರುಸುದ್ದಿ

ವಿದ್ಯುತ್ ವ್ಯತ್ಯಯ ನಾಳೆ

ಬೆಳಗಾವಿ : ಕ.ವಿ.ಪ್ರ.ನಿ.ನಿ. ವತಿಯಿಂದ ಮೊದಲನೇಯ ತ್ರೈಮಾಸಿಕ ಹಾಗೂ ತುರ್ತು ನಿರ್ವಹಣಾ ಕಾರ್ಯಗಳನ್ನು ಕೈಗೊಳ್ಳುತ್ತಿರುವುದರಿಂದ ಜೂನ್ 8 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೆ 110 ಕೆ.ವ್ಹಿ. ಖಾನಾಪೂರ ಉಪಕೇಂದ್ರದಿಂದ ಸರಬರಾಜು ಆಗುವ ಲೈಲಾ ಶುಗರ ಕಾರ್ಖಾನೆ, ದೇವಲತ್ತಿ, ಬಿದರಭಾವಿ, ಭಂಡಾರಗಾಳಿ, ಗರ್ಲಗುಂಜಿ, ತೋಪಿನಕಟ್ಟಿ, ಬೋರಗಾಂವ, ನಿಡಗಲ, ದೊಡ್ಡಹೊಸೂರ, ಸಣ್ಣಹೊಸೂರ, ಕರಂಬಳ, ಜಳಗಾ, ಕುಪ್ಪಟಗಿರಿ, ಲೋಕೋಳ್ಳಿ, ಲಕ್ಕೇಬೈಲ, ಯಡೋಗಾ, ಬಳೋಗಾ, ಜೈನಕೊಪ್ಪ, ಗಾಂಧಿನಗರ, ಹಲಕರ್ಣಿ, ಕೋರ್ಟ ಪ್ರದೇಶ, ಕೈಗಾರಿಕಾ ಪ್ರದೇಶ, ಬಾಚೋಳ್ಳಿ, ಕೌಂದಲ, ಝಾಡನಾವಗಾ, ಲಾಲವಾಡಿ, ಹೆಬ್ಬಾಳ, ನಂದಗಡ, ಕಸಬಾ ನಂದಗಡ, ಕಾರಲಗಾ, ಶಿವೊಳ್ಳಿ ಹಾಗೂ ಚಾಪಗಾಂವ ಗ್ರಾಮಗಳಿಗೆ ಹಾಗೂ ಸದರಿ ಗ್ರಾಮಗಳ ನೀರಾವರಿ ಪಂಪ್‌ಸೆಟ್ಟಗಳ ಏರಿಯಾಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಜೂ.24 ರಂದು ಪಿಂಚಣಿ ಅದಾಲತ್

ಬೆಳಗಾವಿ : ಬೆಳಗಾವಿ ಅಂಚೆ ವಿಭಾಗದ ಪಿಂಚಣಿದಾರರಿಗಾಗಿ ಜೂನ್ 24 ರಂದು ಬೆಳಗ್ಗೆ 11 ಗಂಟೆಗೆ ಬೆಳಗಾವಿಯ ಹಿರಿಯ ಅಂಚೆ ಅಧೀಕ್ಷಕರು ಕಾರ್ಯಾಲಯದಲ್ಲಿ ಪಿಂಚಣಿ ಅದಾಲತ್ ಜರುಗಲಿದೆ. ಸೇವೆಯಿಂದ ನಿವೃತ್ತರಾದ ಅಂಚೆ ನೌಕರರ ಪಿಂಚಣಿ ಮತ್ತು ಇತರೆ ನಿವೃತ್ತಿ ಸೌಲಭ್ಯಗಳ ಹಾಗೂ ಕುಟುಂಬ ಪಿಂಚಣಿದಾರರ ಅಹವಾಲುಗಳೆನಾದರೂ ಇದ್ದಲ್ಲಿ ಅವುಗಳನ್ನು ಅದಾಲತ್ ನಲ್ಲಿ ಆಲಿಸಲಾಗುವುದು. ನಿವೃತ್ತಿ ಹೊಂದಿದ ಗ್ರಾಮೀಣ ಅಂಚೆ ಸೇವಕರು ಮತ್ತಿತರರಿಗೆ ಈ ಅದಾಲತ್ ನಲ್ಲಿ ಪಾಲ್ಗೊಳ್ಳಲು ಅವಕಾಶವಿರುವುದಿಲ್ಲ. ಪಿಂಚಣಿ ಅದಾಲತ್ನಲ್ಲಿ ಹಾಜರಾಗುವವರಿಗೆ ಯಾವುದೇ ತರಹದ ಭತ್ಯೆ ನೀಡಲಾಗುವುದಿಲ್ಲ. ಅದಾಲತ್ನಲ್ಲಿ ಚರ್ಚಿಸುವ ಅಹವಾಲುಗಳಿದ್ದಲ್ಲಿ ಹಿರಿಯ ಅಂಚೆ ಅಧೀಕ್ಷಕರ ಕಾರ್ಯಾಲಯ, ಪೋಸ್ಟಮ್ಯಾನ್ ವೃತ್ತದ ಹತ್ತಿರ, ಪ್ರಧಾನ ಅಂಚೆ ಕಛೇರಿ ಕಟ್ಟಡ, ಬೆಳಗಾವಿ-590001 ಇವರಿಗೆ ಜೂನ್ 23, 2026 ಬೆಳಿಗ್ಗೆ 10.30 ರೊಳಗಾಗಿ ಅಹವಾಲುಗಳನ್ನು ಲಿಖಿತ ರೂಪದಲ್ಲಿ ಕಳುಹಿಸಬೇಕೆಂದು ಬೆಳಗಾವಿ ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೂ.28 ರಂದು ಪಲ್ಸ್ ಪೋಲಿಯೋ ಅಭಿಯಾನ

ಬೆಳಗಾವಿ : ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜೂನ್ 28 ರಂದು ಜಿಲ್ಲೆಯಲ್ಲಿ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಜರುಗಲಿದೆ. ಜಿಲ್ಲೆಯಲ್ಲಿನ ಐದು ವರ್ಷದೊಳಗಿನ ಪ್ರತಿಯೊಂದು ಮಗುವಿಗೂ ಪೋಲಿಯೋ ಲಸಿಕೆ ನೀಡುವುದರ ಮೂಲಕ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನವನ್ನು ಯಶಸ್ವಿಗೊಳಿಸಲು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರುಜಿಲೆಯಲ್ಲಿರಯವ ಸಾರ್ವಜನಿಕರಿಗೆ ಮನವಿ ಮಾಡಿಕೊಂಡಿದ್ದಾರೆ.



ಯುವತಿ ಕಾಣೆ

ಬೆಳಗಾವಿ : ನಗರದ ವಡಗಾವಿ ನಾಝರ ಕ್ಯಾಂಪ 3ನೇ ಕ್ರಾಸ್ ನಿವಾಸಿ ಸೋನಿಯಾ ಶಿರಾಜ ಮುಲ್ಲಾ ಎಂಬ 19 ವರ್ಷದ ಯುವತಿ ಜೂನ್ 1 ರಂದು ಬೆಳಿಗ್ಗೆ 6 ಗಂಟೆ ಸುಮಾರಿಗೆ ಮನೆಯಿಂದ ವಾಕಿಂಗ್ಗೆ ಹೋಗಿ ಬರುತ್ತೇನೆಂದು ಹೇಳಿ ಹೋದವಳು ಮರಳಿ ಮನೆಗೆ ಬಾರದೆ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಕುರಿತು ಶಹಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ಕಾಣೆಯಾದ ಯುವತಿಯ ವಿವರ: 5 ಪೂಟ್ ಎತ್ತರ, ಗುಂಡು ಮುಖ, ಉದ್ದ ಮೂಗು, ಸದೃಡ ಮೈಕಟ್ಟು, ಗೋದಿಗೆಂಪು ಮೈಬಣ್ಣ, ನೀಲಿ ಬಣ್ಣದ ನೈಟಿ, ಕಪ್ಪು ಬಣ್ಣದ ಬುರ್ಕಾ ಧರಿಸಿರುತ್ತಾಳೆ ಹಾಗೂ ಹಿಂದಿ, ಮರಾಠಿ, ಕನ್ನಡ, ಬಂಗಾಳಿ ಭಾಷೆ ಮಾತನಾಡುತ್ತಾಳೆ. ಕಾಣೆಯಾದ ಯುವತಿಯ ಬಗ್ಗೆ ಮಾಹಿತಿ ದೊರೆತಲ್ಲಿ ಬೆಳಗಾವಿ ನಗರ ಪೊಲೀಸ್ ಕಂಟ್ರೋಲ್ ರೂಮ್, ಶಹಾಪೂರ ಪೊಲೀಸ ಠಾಣೆ ಬೆಳಗಾವಿ ನಗರ ದ ಪೊಲೀಸ್ ಇನ್ಸ್ಪೆಕ್ಟರ್ ಶಹಾಪೂರ ಪೊಲೀಸ ಠಾಣೆ ಬೆಳಗಾವಿ ನಗರ ಸಂಪರ್ಕಿಸಬಹುದಾಗಿದೆ ಎಂದು ಶಹಾಪೂರ ಪೊಲೀಸ ಠಾಣೆಯ ಸಹಾಯಕ ಪೊಲೀಸ್ ಸಬ್ ಇನ್ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.





ತೆಲಸಂಗ: ಗ್ರಾಮದ ಬಸವ ಇಂಟರ್ನ್ಯಾಷನಲ್ ಸ್ಕೂಲ್‌ನಲ್ಲಿ ವಿಶ್ವಪರಿಸರ ದಿನ ಆಚರಣೆ ಮಾಡಲಾಯಿತು. ನ್ಯಾಯವಾದಿ ಅಮೋಘಸಿದ್ಧ ಖೊಬ್ರಿ, ಹಣಮಂತ ಥೈಕಾರ, ಶ್ರೀಶೈಲ ಮರನೂರ, ಶಿವಲೀಲಾ ಹಿರೇಮಠ, ಸವಿತಾ ಹೊನವಾಡ, ಮೇಘಾ ಸಜ್ಜನ, ಕಾವ್ಯಾ ಪತ್ತಾರ, ಸ್ವಾತಿ ಕಾಪ್ಸೆ, ನೀಲಾಂಬಿಕಾ ಮಠಪತಿ ಸೇರಿದ ಇತರರು ಇದ್ದರು.

1.20 ಲಕ್ಷ ಸಸಿ ನೆಡುವ ಗುರಿ: ಕತ್ತಿ

ಸಂಕೇಶ್ವರ : ವಿಶ್ವ ಪರಿಸರ ದಿನಾಚರಣೆ ಹಿನ್ನಲೆಯಲ್ಲಿ ಪುರಸಭೆ ಹಾಗೂ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗದ ಸಹಯೋಗದಲ್ಲಿ ಹಸಿರು ಸಂಪತ್ತಿನ ವೃದ್ಧಿಗಾಗಿ ಪಟ್ಟಣದಲ್ಲಿ 2.5 ಸಾವಿರ ಸಸಿಗಳನ್ನು ನೆಡಲಾಗುತ್ತಿದೆ ಎಂದು ಶಾಸಕ ನಿಖಿಲ್ ಕತ್ತಿ ಹೇಳಿದರು. ಪಟ್ಟಣದ ಶ್ರೀರಾಮ ಮಂದಿರದ ಬಳಿಯ ಬಡಾವಣೆ ಪ್ರದೇಶದಲ್ಲಿ ಪುರಸಭೆ ಹಾಗೂ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗದ ಸಹಯೋಗದಲ್ಲಿ ವನಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಜಿಲ್ಲಾ ಪಂಚಾಯತಿ ಹಾಗೂ ಸಾಮಾಜಿಕ ಅರಣ್ಯ ವಿಭಾಗವು ಪ್ರಸಕ್ತ ವರ್ಷ ಜಿಲ್ಲೆಯಲ್ಲಿ 1.20 ಲಕ್ಷ ಸಸಿಗಳನ್ನು ನೆಡುವ ಗುರಿ ಹೊಂದಿದ್ದು, ಈ ಯೋಜನೆಯ ಪ್ರಯೋಜನವನ್ನು ಕ್ಷೇತ್ರದ ವಿವಿಧ ಗ್ರಾಮಗಳು ಹಾಗೂ ಪಟ್ಟಣ ಪ್ರದೇಶಗಳಿಗೂ ತಲುಪಿಸಲಾಗುವುದು ಎಂದು ತಿಳಿಸಿದರು. ಪುರಸಭೆ ಮುಖ್ಯಾಧಿಕಾರಿ ಪ್ರಕಾಶ ಮಠದ ಮಾತನಾಡಿದರು. ಹುಕ್ಕೇರಿ ವಿದ್ಯುತ್ ಸಹಕಾರಿ ಸಂಘದ ನಿರ್ದೇಶಕ ಶಿವಾನಂದ ಮುಡಶಿ, ಮುಖಂಡರಾದ ಸುನೀಲ ಪರ್ವತರಾವ, ವಲಯ ಅರಣ್ಯಾಧಿಕಾರಿ ಬಿ. ಎಲ್. ಸನದಿ, ಉಪವಲಯ ಅರಣ್ಯಾಧಿಕಾರಿಗಳಾದ ರಾಕೇಶ ಮುರಾರಿ, ಪ್ರಭು ತಂಗಡಿ, ಪುರಸಭೆಯ ಕಿರು ಆರೋಗ್ಯ ನಿರೀಕ್ಷಕರಾದ ಶ್ರೀಧರ ಬೆಳವಿ, ಪುರಸಭೆಯ ಸಿ.ಇ.ಓ ಸಪ್ನಾ ಖೋಡಬಾಳೆ ಸಿಬ್ಬಂದಿಗಳಾದ ಬೊರಮ್ಮಾ ಉದೋಶಿ ಸೇರಿದಂತೆ ಅನೇಕರು ಇದ್ದರು.



ಸಂಕೇಶ್ವರ: ಪಟ್ಟಣದ ಶ್ರೀರಾಮ ಮಂದಿರದ ಬಳಿಯ ಬಡಾವಣೆ ಪ್ರದೇಶದಲ್ಲಿ ಪುರಸಭೆ ಹಾಗೂ ಅರಣ್ಯ ಇಲಾಖೆಯ ಸಾಮಾಜಿಕ ಅರಣ್ಯ ವಿಭಾಗದ ಸಹಯೋಗದಲ್ಲಿ ವನಮಹೋತ್ಸವ ಅಂಗವಾಗಿ ಹಮ್ಮಿಕೊಂಡಿದ್ದ ಸಸಿ ನೆಡುವ ಮೂಲಕ ಕಾರ್ಯಕ್ರಮಕ್ಕೆ ಶಾಸಕ ನಿಖಿಲ್ ಕತ್ತಿ ಚಾಲನೆ ನೀಡಿದರು.

ಶಿಕ್ಷಣ ಸುಧಾರಣಾ ಸಮಿತಿ ಸಭೆ | ಶಾಸಕ ವಿಶ್ವಾಸ ವೈದ್ಯ ಹೇಳಿಕೆ

ಶೈಕ್ಷಣಿಕ ಕ್ಷೇತ್ರ ಅಭಿವೃದ್ಧಿಗೆ ಬದ್ಧ

ಸವದತ್ತಿ: ತಾಲೂಕಿನ ಎಲ್ಲ ಮಕ್ಕಳು ವಿದ್ಯಾವಂತರಾಗಿ ಬಾಳಬೇಕು. ಅವರು ಪಡೆಯುವ ಶಾಲೆಗಳಲ್ಲಿ ವಿದ್ಯೆಗೆ ಬೇಕಾಗುವ ಎಲ್ಲ ರೀತಿಯ ಸೌಲಭ್ಯಗಳನ್ನು ನಾನು ಅತ್ಯಂತ ಪ್ರಾಮಾಣಿಕವಾಗಿ ಒದಗಿಸುವೆ ಎಂದು ಶಾಸಕ ವಿಶ್ವಾಸ ವೈದ್ಯ ಹೇಳಿದರು.

ಅವರು ಸ್ಥಳೀಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ನಡೆದ ಸವದತ್ತಿ ಎಲ್ಲಮ್ಮ ವಿಧಾನಸಭಾ ಮತಕ್ಷೇತ್ರದ ಶಿಕ್ಷಣ ಸುಧಾರಣಾ ಸಮಿತಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಶಿಕ್ಷಣ ಇಲಾಖೆ ಮತ್ತು ತಾಲೂಕಿನ ಎಲ್ಲಾ ಶಿಕ್ಷಕರು ಅತ್ಯಂತ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುತ್ತಿದ್ದಾರೆ. ಜನಪ್ರತಿನಿಧಿಗಳಾದ ನಾವು ಮತ್ತು ಶಿಕ್ಷಣ ಇಲಾಖೆ, ಶಿಕ್ಷಕರು ಮತ್ತು ಶಿಕ್ಷಣ ಸುಧಾರಣಾ ಸಮಿತಿಯವರು ಅತ್ಯಂತ ಕಾಳಜಿ ಯುದ್ಧವಾಗಿ ಕಾರ್ಯನಿರ್ವಹಿಸಬೇಕಾಗಿದೆ ಎಂದರು.

ತಾಲೂಕಿನಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಿಕ್ಷಕರು ಬಹಳಷ್ಟು ಶ್ರಮವಹಿಸಿ ಮಕ್ಕಳಿಗೆ ಶಿಕ್ಷಣ ನೀಡುತ್ತಿದ್ದಾರೆ. ತಾಲೂಕಿನ ಬಹಳಷ್ಟು ಗ್ರಾಮಗಳಲ್ಲಿ ಶಾಲಾ ಕೊಠಡಿಗಳು ಮತ್ತು ಮಕ್ಕಳ ಕಲಿಕೆಗೆ ಬೇಕಾಗುವ ಕೆಲಸಗಳನ್ನು ಪ್ರಾಮಾಣಿಕವಾಗಿ ಒದಗಿಸುತ್ತಿದ್ದೇನೆ ಎಂದರು.

ತಹಶೀಲ್ದಾರ್ ಮಲ್ಲಿಕಾರ್ಜುನ್ ಹೆಗ್ಗನ್ನವರ ಮಾತನಾಡಿ, ಮೆಲಾಧಿಕಾರಿಗಳ ಆದೇಶದಂತೆ ಈಗಾಗಲೇ ಶಾಲೆ ಮತ್ತು ಕಾಲೇಜುಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದರು.

ಶಿಕ್ಷಕ ಸುಧೀರ ವಾಗೆರಿ ನಿರೂಪಿಸಿದರು.



ನಮ್ಮ ಶಾಲೆ - ಕೊಡುಗೆ

ಕ್ಷೇತ್ರದ ಶಾಸಕರಾದ ವಿಶ್ವಾಸ ವೈದ್ಯ ಅವರು ತಮ್ಮ ಮೊದಲ ವೇತನವನ್ನು ಶಿಕ್ಷಣ ಇಲಾಖೆಗೆ ನೀಡಿದ್ದರಿಂದ ಸಚಿವರಾಗಿದ್ದ ಮಧು ಬಂಗಾರಪ್ಪನವರು ಬೆಳಗಾವಿಯ ಸುವರ್ಣ ಸೌಧದಲ್ಲಿ ನಮ್ಮ ಶಾಲೆಗೆ ನಮ್ಮ ಕೊಡುಗೆ ಮತ್ತು ನಮ್ಮ ಜವಾಬ್ದಾರಿ ಎಂಬ ಯೋಜನೆಯನ್ನು ಪ್ರಾರಂಭಿಸುವಾಗ ನಮ್ಮ ಶಾಸಕರಿಗೆ ಅಭಿನಂದಿಸಿರುವುದು ಸಂತಸದ ವಿಷಯವಾಗಿದೆ ಎಂದು ಕ್ಷೇತ್ರ ಸಮನ್ವಯ ಅಧಿಕಾರಿ ಬಿ.ಎನ್. ಬ್ಯಾಳಿ ಹೇಳಿದರು.

ಸದಸ್ಯರಿಗೆ ಸನ್ಮಾನ

ಶಾಸಕ ವಿಶ್ವಾಸ ವೈದ್ಯರವರು ಶಿಕ್ಷಣ ಸುಧಾರಣಾ ಸಮಿತಿಗೆ ಆಯ್ಕೆಯಾದ ಎಲ್ಲ ಸದಸ್ಯರಿಗೆ ಸನ್ಮಾನಿಸಿ ಗೌರವಿಸಿದರು. ನಂತರ ಶಿಕ್ಷಣ ಸಮಿತಿಯ ಎಲ್ಲ ಸದಸ್ಯರು ಶಾಸಕ ವಿಶ್ವಾಸ ವೈದ್ಯರನ್ನು ಸನ್ಮಾನಿಸಿ ಗೌರವಿಸಿದರು

ಸಭೆಯಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎ. ಎ. ಖಾಜಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಪ್ರಶಾಂತ್ ಹಂಪಣ್ಣವರ, ಶಿಕ್ಷಣ ಸುಧಾರಣಾ ಸಮಿತಿಯ ಸದಸ್ಯರಾದ ಸಂಗನಬಸಯ್ಯ ಗದಗಿಮಠ, ಸದಸ್ಯ ಕಾರ್ಯದರ್ಶಿ ಎ.ಎ. ಖಾಜಿ, ಎಂ.ಎಸ್. ಲೋಕನ್ನವರ್, ಎ.ಎ. ಮಕ್ತುಮನವರ, ಆರ್.ಪಿ. ಕೌಜಲಗಿ, ಷರೀಫ್ ನದಾಫ, ನಿಂಗಪ್ಪ ದಳವಾಯಿ, ಮಲ್ಲೇಶಪ್ಪ ತಾಂದಳೆ, ರಾಜೇಶ್ವರಿ ಎಸ್ ಗೊರಾಬಾಳ್, ಹುಸೇನ್ ಸಾಬ್ ನದಾಫ್, ನಾಮ ನಿರ್ದೇಶಕ ಸದಸ್ಯರಾಗಿ ಆಯ್ಕೆಯಾದ ಈಶ್ವರ್ ಕಾಡಪ್ಪ, ಶ್ರೀಶೈಲ ಶಂಕರ್ ಹೆಬ್ಬಳ್ಳಿ ಮತ್ತು ಶಿಕ್ಷಣ ಇಲಾಖೆಯ ನಿವೃತ್ತ ಅಧಿಕಾರಿಗಳಾದ ಗಿರೀಶ್ ಮುನವಳ್ಳಿ ಸೇರಿದಂತೆ ಸ್ಥಳೀಯ ಗಣ್ಯರು ಹಾಗೂ ಶಿಕ್ಷಕ ಶಿಕ್ಷಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

40 ಲಕ್ಷ ರೂ. ವೆಚ್ಚದಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ

ರಾಯಬಾಗ: ಬಾವನಸೌಂದತ್ತಿ ಸಮೀಪದ ಗ್ರಾಮದಲ್ಲಿ 40 ಲಕ್ಷ ರೂ. ವೆಚ್ಚದಲ್ಲಿ ಗ್ರಾಮದ ಅಲ್ಪಸಂಖ್ಯಾತರ ಕಾಲೋನಿಗಳಲ್ಲಿ ಸಿಸಿ ರಸ್ತೆ ನಿರ್ಮಾಣ ಮತ್ತು ಫೇವರ್ಸ್ ಬ್ಲಾಕ್ ಅಳವಡಿಕೆ ಮಾಡುವ ಕಾಮಗಾರಿಗೆ ಶಾಸಕ ದುರ್ಯೋಧನ ಐಹೊಳೆ ಅವರು ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿ, ನಸಲಾಪುರ ಗ್ರಾಮದ ಜನರಿಗೆ ಮೂಲಭೂತ ಸೌಲಭ್ಯಗಳು ಒದಗಿಸಬೇಕೆನ್ನುವ ಮಹದಾಸೆಯಿಂದ ಗ್ರಾಮದ ಮುಖಂಡರ ಬೇಡಿಕೆಗಳನ್ನು ಪ್ರತಿಯೊಂದು ಈಡೇರಿಸುತ್ತ ಬಂದಿದ್ದೇನೆ. ಗ್ರಾಮದ ಮುಖಂಡರ ಸಹಕಾರ ನೀಡಿದ್ದಾರೆ ಎಂದು ಹೇಳಿದರು.

ಮುಖಂಡರಾದ ಭರತೇಶ ಬನವಣೆ ಮಾತನಾಡಿ, ಗ್ರಾಮದ ಸರ್ವಾಂಗೀಣ ಅಭಿವೃದ್ಧಿಗೆ ಶಾಸಕರ ಪಾತ್ರ ಬಹಳ ಮಹತ್ವ ಇದೆ. ಇನ್ನೂ ಗ್ರಾಮದ ಅಭಿವೃದ್ಧಿಗೆ ಹಣ ನೀಡಲಾಗುವುದು ಎಂದು ಭರವಸೆ ನೀಡಿದ್ದು ಸಂತಸವಾಗಿದೆ ಎಂದರು. ಈ ಸಂದರ್ಭದಲ್ಲಿ ಮುಖಂಡರಾದ ಭರತೇಶ ಬನವಣೆ, ಸದಾಶಿವ ಘೋರ್ಪಡೆ, ರಾಜುಗೌಡ ಪಾಟೀಲ, ಜಯಪಾಲ ಬನವಣೆ, ಚೌಗೊಂಡಾ ಪಾಟೀಲ, ಅರುಣ ನಾಯಿಕ, ಸುರೇಂದ್ರ ಸಮಾಜೆ, ಶಿವಾನಂದ ಕುಂಬಾರ, ಮಹಾದೇವ ಕಾಂಬಳೆ, ಅಣ್ಣಾಸಾಹೇಬ ಸಮಾಜೆ, ಬಾಳಾಸಾಹೇಬ ಪಾಟೀಲ, ಯಾಕೂಬ ತಾಂಬಟ, ಪ್ರಕಾಶ ಖೋಬಾರೆ, ನಿಂಗಪ್ಪ ಕುಂಬಾರ, ವೆಂಕಟೇಶ ಬನವಣೆ, ದಿನೇಶ ಕಾಂಬಳೆ, ಆನಂದ ಸಮಾಜೆ ಉಪಸ್ಥಿತರಿದ್ದರು.



ವಿಶ್ವ ಸೈಕಲ್ ದಿನಾಚರಣೆ

ಯಮಕನಮರಡಿ : ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ ಹಾಗೂ ಮೈ ಭಾರತ ಕೇಂದ್ರ, ಬೆಳಗಾವಿ ವಿಠ್ಠಲ ರುಕ್ಮಾಯಿ ಸಮುದಾಯ ಅಭಿವೃದ್ಧಿ ಕಲಾಸಂಘ ಹರಗಾಪೂರ ಇವರ ಸಂಯುಕ್ತಾಶ್ರಯದಲ್ಲಿ ಬಾಡ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ವಿಶ್ವ ಸೈಕಲ್ ದಿನಾಚರಣೆ ಜಾಗೃತಿ ಕಾರ್ಯಕ್ರಮ ನಡೆಯಿತು. ರಾಷ್ಟ್ರ ಪ್ರಶಸ್ತಿ ಪುರಸ್ಕೃತರಾದ ಭರತ ಕಲಾಚಂದ್ರ, ಬಾಡ ಸರ್ಕಾರಿ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಎಚ್. ಬೊಳಗುಂಡಿ, ಸುನೀತಾ ಅರಳಿಕಟ್ಟಿ , ಬಿ.ಎಮ್ ಕಂಕಣವಾಡಿ , ಯು.ಎಸ್ ದಬಾಡೆ, ಪ್ರಕಾಶ ಜನಮಟ್ಟಿ ಉಪಸ್ಥಿತರಿದ್ದರು. ಗ್ರಾಮದ ಬೀದಿಗಳಲ್ಲಿ ಸೈಕಲ್ ಜೊತೆಗೆ ಯುವ ಜನರು ಜಾಗೃತಿ ಮೂಡಿಸಿದರು. ಶಿಕ್ಷಕಿಯರಾದ ಎಮ್ ಎಸ್. ಕಂಕಣವಾಡಿ ನಿರೂಪಿಸಿ ಸ್ವಾಗತಿಸಿದರು ಅಶ್ವಿನಿ ಸಂಬಾಳ ವಂದಿಸಿದರು.





ಮೂಡಲಗಿ: ಕೆ. ಎಚ್. ಸೋನವಾಲಕರ ಸರ್ಕಾರಿ ಪ್ರೌಢಶಾಲೆಯಲ್ಲಿ ಶುಕ್ರವಾರ ವಿಶ್ವಪರಿಸರ ದಿನ ಆಚರಣೆ ಮಾಡಲಾಯಿತು. ಮುಖ್ಯೋಪಾಧ್ಯಾಯ ಭೀಮಪ್ಪ ಕಸಾಳೆ, ಎಸ್ ಡಿ ಎಂ ಸಿ ಅಧ್ಯಕ್ಷ ಸಂತೋಷ ಸೋನವಾಲಕರ ಸೇರಿದಂತೆ ಮತ್ತಿತರರು ಇದ್ದರು.

ಜೂ.10ರಂದು ದೈಹಿಕ ಶಿಕ್ಷಕರಿಗೆ ಯೋಗ ಕಾರ್ಯಾಗಾರ

ಕುಡಚಿ: ರಾಯಬಾಗ ತಾಲೂಕಿನ ಎಲ್ಲಾ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರಿಗಾಗಿ ಜೂನ್ 10ರಂದು ಯೋಗ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷರಾದ ಎಂ.ಬಿ. ಜಿರಗ್ಯಾಳ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಕಾರ್ಯಾಗಾರವು ಕುಡಚಿ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ಶಿಕ್ಷಣ ಸಂಸ್ಥೆಯ ಅಜೀತ ಬಾನೆ ಶಾಲಾ ಸಭಾ ಭವನದಲ್ಲಿ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5.30ರವರೆಗೆ ಒಂದು ದಿನದ ಕಾರ್ಯಾಗಾರ ಜರುಗಲಿದೆ.

ಈ ಕಾರ್ಯಾಗಾರವು ಆರೋಗ್ಯ ಮತ್ತು ದೈಹಿಕ ಸಾಮರ್ಥ್ಯ ವೃದ್ಧಿ ದೃಷ್ಟಿಯಿಂದ ಮಹತ್ವದ್ದಾಗಿದ್ದು, ಶಿಕ್ಷಕರಿಗೆ ಯೋಗದ ಮೂಲಭೂತ ತತ್ವಗಳು, ಆಸನಗಳು ಹಾಗೂ ದಿನನಿತ್ಯ ಜೀವನದಲ್ಲಿ ಯೋಗದ ಬಳಕೆಯ ಕುರಿತು ತರಬೇತಿ ನೀಡಲಾಗುವುದು.

ತರಬೇತಿಯನ್ನು ತಜ್ಞ ಯೋಗ ಶಿಕ್ಷಕರು ನಡೆಸಲಿದ್ದು, ಎಲ್ಲಾ ದೈಹಿಕ ಶಿಕ್ಷಕರು ಕಡ್ಡಾಯವಾಗಿ ಹಾಜರಾಗುವ ಮೂಲಕ, ಶಿಕ್ಷಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಿ, ವಿದ್ಯಾರ್ಥಿಗಳಿಗೂ ಯೋಗಾಭ್ಯಾಸವನ್ನು ಉತ್ತೇಜಿಸುವುದು ಮುಖ್ಯ ಉದ್ದೇಶವಾಗಿದೆ. ಕಾರ್ಯಾಗಾರದಲ್ಲಿ ಭಾಗವಹಿಸುವ ಶಿಕ್ಷಕರು ಯೋಗಾಭ್ಯಾಸಕ್ಕೆ ಅಗತ್ಯವಾದ ಉಡುಪು ಧರಿಸಿ, ಯೋಗ ಮ್ಯಾಟ್ ಹಾಗೂ ವೈಯಕ್ತಿಕ ಅಗತ್ಯ ವಸ್ತುಗಳನ್ನು ತರುವಂತೆ ದೈಹಿಕ ಶಿಕ್ಷಣ ಪರಿವೀಕ್ಷಕರಾದ ಎಂ.ಬಿ.ಜಿರಗ್ಯಾಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಅಜೀತ ಬಾನೆ ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯ ಎಸ್.ಪಿ.ಕಾಂಬಳೆ, ಶಿಕ್ಷಕರಾದ ಅಶೋಕ ಯಲ್ಲಟ್ಟಿ, ಹಣಮಂತ ಭಜಂತ್ರಿ, ಭಂಡಗಾರ ಸರ ಉಪಸ್ಥಿತರಿದ್ದರು.



ಬೆಳಗಾವಿ : ವಿಶ್ವ ಪರಿಸರ ದಿನದ ಅಂಗವಾಗಿ, ಭಾರತೀಯ ಜನತಾ ಪಾರ್ಟಿ ಕಾರ್ಯಕರ್ತರು ಹಾಗೂ ಪದಾಧಿಕಾರಿಗಳು, ಮತ್ತು ಕಾರ್ಯಕರ್ತರೊಂದಿಗೆ ಸೇರಿ ಸಸಿ ನೆಟ್ಟು, ನೀರುಣಿಸಿ ಪರಿಸರ ಸಂರಕ್ಷಣೆಯ ಸಂಕಲ್ಪವನ್ನು ಕೈ ಜೊಡಿಸಿದರು. ಹಸಿರು ಬಾಳಿನ ಉಸಿರು - ಪರಿಸರವನ್ನು ಉಳಿಸುವ ಜವಾಬ್ದಾರಿ ನಮ್ಮೆಲ್ಲರದು. ತಾವೂ ಈ ವಿಶೇಷ ದಿನದಂದು ಒಂದು ಸಸಿಯನ್ನು ನೆಟ್ಟು, ಅದನ್ನು ಪೋಷಿಸಿ ಬೆಳೆಸುವ ಮೂಲಕ ಹಸಿರು ಭವಿಷ್ಯ ನಿರ್ಮಾಣಕ್ಕೆ ಕೈಜೋಡಿಸಿ ಎಂದು ವಿಶ್ವ ಪರಿಸರ ದಿನಾಚರಣೆಯಂದು ಬಿಜೆಪಿ ಕಾರ್ಯಕರ್ತರು ಸಂಕಲ್ಪ ಮಾಡಿದರು.



ಯರಗಟ್ಟಿ: ಪಟ್ಟಣದ ಕರ್ನಾಟಕ ಕನ್ನಡ ಪ್ರಾಥಮಿಕ ಶಾಲಾ ಮಕ್ಕಳು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸಾರ್ವಜನಿಕರಿಗೆ ಪರಿಸರ ರಕ್ಷಣೆ ಜಾಗೃತಿ ಮೂಡಿಸಿದರು.

ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ


ಅಡಹಳ್ಳಿ : ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ, ಪ್ರತಿಯೊಬ್ಬರು ಉತ್ತಮ ಪರಿಸರ ನಿರ್ಮಾಣವಾಗಲು ಗಿಡ-ಮರಗಳನ್ನು ಬೆಳೆಸಬೇಕಂದು ಬಸವಶ್ರೀ ಸೇವಾ ಸಂಘದ ಅಧ್ಯಕ್ಷ ಡಾ. ಅಣ್ಣಪ್ಪ ಚಿಕ್ಕಟ್ಟಿ ಹೇಳಿದರು.

ಅವರು ಸಮೀಪದ ಅಡಹಳ್ಳಟ್ಟಿ ಗ್ರಾಮದ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಪರಿಸರ ದಿನಾಚರಣೆ ಅಂಗವಾಗಿ ಬಸವಶ್ರೀ ಸೇವಾ ಸಂಘದಿಂದ 200 ಸಸಿಗಳನ್ನು ನಡೆವು ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ವೇಳೆ ಗುರಪ್ಪ ಚಂಡಕಿ, ಲಚ್ಚಪ್ಪ ಪತ್ತಾರ, ಗಂಗಪ್ಪ ಗುಡ್ಡಾಪೂರ, ಚಿದಾನಂದ ಗುಡ್ಡಾಪೂರ, ಮಲ್ಲಪ್ಪ ಕೊಂಡಿ, ಶ್ರೀಶೈಲ ಪಾಟೀಲ, ಅರುಣ ಹೊನವಾಡ, ಸದಾಶಿವ ಗುಡ್ಡಾಪೂರ, ಶಿವು ಕಡೆಣ್ಣವರ, ರಾಜು ಕಡೆನ್ನವರ, ಸಂಗು ಸವದಿ, ಜಗದೀಶ ಹಿರೇಮಠ, ಅಪ್ಪಯ್ಯಾ ಮಠಪತಿ ಸೇರಿದಂತೆ ಅನೇಕರು ಇದ್ದರು.



ಅಧಿಕ ಮಾಸ: ಹಲ್ಯಾಳದಲ್ಲಿ ವಿಶೇಷ ಪೂಜೆ



ಹಲ್ಯಾಳ : ಅಧಿಕ ಮಾಸದ ಅಂಗವಾಗಿ ಗ್ರಾಮದ ಶ್ರೀ ಶೇಷ ಸಹಿತ ಲಕ್ಷ್ಮೀ ನೃಸಿಂಹ ದೇವರ (ಭಹ್ಮದೇವರು) ದೇವಸ್ಥಾನದಲ್ಲಿ ಹೈಕೋರ್ಟ್ ನ್ಯಾಯಾಧೀಶರಾದ ಹೇಮಲತಾ ಕುಲಕರ್ಣಿ ಅವರು ಕುಟುಂಬ ಸಮೇತರಾಗಿ ಭೇಟಿ ನೀಡಿ ವಿಶೇಷ ಹೋಮ ಹಾಗೂ ಪೂಜೆ ನೆರವೇರಿಸಿದರು.

ದೇವಸ್ಥಾನದಲ್ಲಿ ಧಾರ್ಮಿಕ ವಿಧಿ-ವಿಧಾನಗಳೊಂದಿಗೆ ಹೋಮ ಹವನ ನಡೆಸಲಾಗಿದ್ದು, ದೇವರ ಕೃಪೆ ಹಾಗೂ ಜನರ ಸುಖ-ಸಮೃದ್ಧಿಗಾಗಿ ದೇವರಿಗೆ ಅಭಿಷೇಕ ಹಾಗೂ ಮನ್ಯು ಸೂಕ್ತ ಹೋಮದ ಮೂಲಕ ಪ್ರಾರ್ಥನೆ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ದೇವಸ್ಥಾನದ ಅರ್ಚಕರು ಪವನ ಸವಣೂರ ಮತ್ತು ವಿನಾಯಕ ಕುಲಕರ್ಣಿ ಹಾಗೂ ಮುಖ್ಯ ಗುರುಗಳು ಮಹೇಶ್ ಭಟ್ ಒಡೆಯರ್ ತಮ್ಮ ಸಂಘದೊಂದಿಗೆ ಬಂದು ಪೂಜಾ ಕಾರ್ಯಗಳನ್ನು ನೆರವೇರಿಸಿದರು. ಈ ವೇಳೆ ಹೈಕೋರ್ಟ್ ವಕೀಲ ಎಸ್. ಎಮ್ ಕುಲಕರ್ಣಿ, ಅರವಿಂದರಾವ್ ದೇಶಪಾಂಡೆ, ವಿಲಾಸ ಕುಲಕರ್ಣಿ, ಸುರೇಶ ಕುಲಕರ್ಣಿ, ಸುಧೀರ್ ಕುಲಕರ್ಣಿ,ಪ್ರಸನ್ನ ಕುಲಕರ್ಣಿ, ಮತ್ತು ಅನಿಲ ಕುಲಕರ್ಣಿ ಹಾಗೂ ಸಮಸ್ತ ಶ್ರೀ ಶೇಷ ಸಹಿತ ಲಕ್ಷ್ಮೀ ನೃಸಿಂಹ ದೇವರ (ಬ್ರಹ್ಮ ದೇವರು) ಭಕ್ತವೃಂದ ಉಪಸ್ಥಿತರಿದ್ದರು.

ಚನ್ನಮ್ಮಾಜಿ ಕೋಟೆಯೊಳಗಡೆ ವಿಶ್ವ ಪರಿಸರ ದಿನಾಚರಣೆ

ಚನ್ನಮ್ಮನ ಕಿತ್ತೂರು: ಐತಿಹಾಸಿಕ ಚನ್ನಮ್ಮಾಜಿಯ ಕೋಟೆಯೊಳಗಡೆ ವಸ್ತು ಸಂಗ್ರಹಾಲಯದ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಸಸಿಗಳನ್ನು ನೆಡುವುದರ ಮೂಲಕ ಆಚರಿಸಲಾಯಿತು. ನಂತರ ಕೋಟೆಯಲ್ಲಿರುವ ಬತ್ತೇರಿಯ ಮೇಲೆ ಸ್ವಚ್ಛತಾ ಕಾರ್ಯ ಕೈಗೊಂಡರು.

ಕಸಾಪ ಅಧ್ಯಕ್ಷ ಡಾ. ಎಸ್.ಬಿ. ದಳವಾಯಿ, ಕಾಕತಿ ಅರಣ್ಯ ಇಲಾಖೆಯ ಲೋಹಿತ್, ಬೀಡಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಧ್ಯಾಪಕ ಶರಣಬಸವ ವಾಲಿ, ಶಿಕ್ಷಕರಾದ ಬಿ.ಸಿ. ಬಿದರಿ, ಮಂಜುನಾಥ ಕಳಸನ್ನವರ, ಕ್ಯೂರೇಟರ್ ರಾಘವೇಂದ್ರ ಸೇರಿದಂತೆ ವಸ್ತು ಸಂಗ್ರಹಾಲಯದ ಸಿಬ್ಬಂದಿಗಳು ಭಾಗವಹಿಸಿದ್ದರು.



ಕಿರುಸುದ್ದಿ

ವಿದ್ಯುತ್ ವ್ಯತ್ಯಯ ಇಂದು

ಚನ್ನಮ್ಮನ ಕಿತ್ತೂರು: ಸಮೀಪದ ಎಂ.ಕೆ. ಹುಬ್ಬಳ್ಳಿಯ 110 ಕೆವಿ ಉಪಕೇಂದ್ರದ 1 ತ್ರೈಮಾಸಿಕ ನಿರ್ವಹಣಾ ಕೆಲಸ ಕೈಗೊಳ್ಳುವುದರಿಂದ ಜೂ.7ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 7 ಗಂಟೆಯವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ. ಎಂ ಕೆ ಹುಬ್ಬಳ್ಳಿ ವ್ಯಾಪ್ತಿಯ ಕಾದ್ರೋಳ್ಳಿ, ಇಟಗಿ, ಪಾರಿಶ್ವಾಡ, ಹಿರೇಮುನವಳ್ಳಿ, ಚಿಕ್ಕಮುನವಳ್ಳಿ, ಬಸವನಗರ, ಎಂ ಕೆ ಹುಬ್ಬಳ್ಳಿ, ಶುಗರ್ ಪ್ಯಾಕ್ಟರಿ, ಚಿಕ್ಕಹಟ್ಟಿಹೊಳಿ, ದೇವರಶಿಗಿಹಳ್ಳಿ, ಮಾರ್ಗನಕೊಪ್ಪ, ಹುಣಶೀಕಟ್ಟಿ, ದಾಸ್ತಕೊಪ್ಪ, ವೀರಾಪೂರ, ಮಲಪ್ರಭಾ, ಕ್ಯಾರಕೊಪ್ಪ ಹಾಗೂ 33 ಕೆವ್ಹಿ ಫೀಡರ್‌ಗಳಾದ ಗಂದಿಗವಾಡ, ಹಾಗೂ ಎಸಿಎಮ್‌ಇ ಕಿತ್ತೂರ ಸೋಲಾರ್ ಇವುಗಳಿಂದ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಕಾರಣ ಗ್ರಾಹಕರು ಸಹಕರಿಸಬೇಕೆಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಪರಿಚಿತ ವ್ಯಕ್ತಿ ಸಾವು

ಬೆಳಗಾವಿ : ಸುಲದಾಳ-ಪಾಶ್ಚಾಪೂರ ರೈಲು ನಿಲ್ದಾಣಗಳ ಮಧ್ಯ ಜೂನ್ 4, ರಂದು ಯಾವುದೋ ಚಲಿಸುವ ರೈಲು ಗಾಡಿಯ ಮುಂದೆ ಬಿದ್ದು ಅಪರಿಚಿತ ವ್ಯಕ್ತಿ (ವಯಸ್ಸು 60-65) ಆತ್ಮಹತ್ಯೆ ಮಾಡಿಕೊಂಡು ಮೃತಪಟ್ಟಿರುತ್ತಾನೆ. ಈ ಕುರಿತು ಬೆಳಗಾವಿ ರೈಲ್ವೆ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತನ ಚಹರೆ ವಿವರ: 5'-4 ಎತ್ತರ, ಕಪ್ಪು ಮೈ ಬಣ್ಣ, ಮೈಯಿಂದಾ ಸಾಧಾರಣ, ಮುಖದ ಭಾಗ ಪೂರ್ತಿಯಾಗಿ ಜಜ್ಜಿದ್ದು ಗುರ್ತು ಬಾರದಂತಾಗಿರುತ್ತದೆ. ಬಿಳಿ ಬಣ್ಣದ ಶರ್ಟ, ನೀಲಿ ಬಣ್ಣದ ಬನಿಯನ್, ಕಪ್ಪು ಬಣ್ಣದ ಪ್ಯಾಂಟ್ ಹಾಗೂ ಚಾಕಲೇಟ್ ಬಣ್ಣದ ಚಕ್ಸ ಟಾವೆಲ್ ಧರಿಸಿರುತ್ತಾನೆ. ಈ ರೀತಿ ಚಹರೆಯುಳ್ಳ ಅಪರಿಚಿತ ವ್ಯಕ್ತಿ ಕಾಣೆಯಾದ ಬಗ್ಗೆ ತಮ್ಮ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೆ ಅಥವಾ ಮೃತನ ರಕ್ತ ಸಂಬಂಧಿಗಳು ಯಾರಾದರೂ ಪತ್ತೆಯಾದರೆ ಬೆಳಗಾವಿ ರೈಲ್ವೆ ಪೊಲೀಸ್ ಠಾಣೆ ಅಥವಾ ರೈಲ್ವೆ ಪೊಲೀಸ್ ನಿಯಂತ್ರಣ ಕೊಠಡಿ ಅನ್ನು ಸಂಪರ್ಕಿಸಲು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಸ್ತಮಾ ರೋಗಕ್ಕೆ ಉಚಿತ ನಾಟಿ ಔಷಧ ವಿತರಣೆ



ಮುಗಳಖೋಡ: ಪಟ್ಟಣದ ಶ್ರೀ ನಿಸರ್ಗಧಾಮ ಗ್ರಾಮೀಣಾಭಿವೃದ್ಧಿ ಸಂಸ್ಥೆ ವತಿಯಿಂದ ಪಾರಂಪರಿಕ ವೈದ್ಯರಾದ ಶ್ರೀ ಅಲ್ಲಯ್ಯಾ ಹಿರೇಮಠ ಅವರು ಮೃಗಶಿರ ಮಳೆಯ ನಿಮಿತ್ತ ಜೂನ್ 8 ರಂದು ಸೋಮವಾರ ಅಸ್ತಮಾ ರೋಗಕ್ಕೆ ಉಚಿತವಾಗಿ ಆಯುರ್ವೇದ ನಾಟಿ ಔಷಧ ನೀಡಲಿದ್ದಾರೆ. ಇದರ ಜೊತೆಗೆ ಅಲರ್ಜಿ, ನೆಗಡಿ, ಮೂಗಿನಲ್ಲಿ ಮಾಂಸ ಬೆಳೆಯುವುದು, ನೀರು ಸೋರುವಿಕೆ, ಸೀನು, ಧೂಳಿನ ಅಲರ್ಜಿ. ಚರ್ಮರೋಗ, ಗಜ್ಜಿ, ತುರಕಿ, ಇಸಬು, ಬಿಳಿತೊನ್ನು. ಜಲೋಧರ, ವಾತ, ಸಂಧಿನೋವು, ನಡನೋವು, ಕೈಕಾಲು ಹರಿಯುವಿಕೆ. ಪಿತ್ತ, ತಲೆನೋವು, ಹೊಟ್ಟೆನೋವು, ಮೂಲವ್ಯಾಧಿ ಸೇರಿದಂತೆ ಎಲ್ಲ ತರಹದ ರೋಗಗಳಿಗೆ ಔಷಧ ದೊರೆಯುತ್ತದೆ. ವಿಶೇಷವಾಗಿ ಮೃಗಶಿರ ಮಳೆಯ ಸಂದರ್ಭದಲ್ಲಿ ಸೇವಿಸುವ ಈ ಗಿಡಮೂಲಿಕೆ ಮತ್ತು ವನಸ್ಪತಿ ಔಷಧಿಯು ಅಸ್ತಮಾ ರೋಗಿಗಳಿಗೆ ಅತ್ಯಂತ ಪರಿಣಾಮಕಾರಿಯಾಗಿದೆ. ಆದ್ದರಿಂದ ಸುಮಾರು ವರ್ಷಗಳಿಂದ ನಾವು ಮೃಗಶಿರ ಮಳೆಯೆಂದು ನಾಟಿ ವನಸ್ಪತಿ ಔಷಧಿ ನೀಡುತ್ತಾ ಬಂದಿದ್ದೇವೆ. ಅದರಂತೆ ಈ ವರ್ಷವೂ ಕೂಡ ಜೂನ್ 8 ರಂದು ಬರುವ ಮೃಗಶಿರ ಮಳೆಯ ದಿನದಂದು ಔಷಧ ನೀಡುತ್ತಿದ್ದೇವೆ. ಆಸಕ್ತರು ಈ ಸುಸಂದಿಯನ್ನು ಪಡೆದುಕೊಳ್ಳಲು ಕಾರ್ಯದರ್ಶಿ ಸಂಗಮೇಶ ಹಿರೇಮಠ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9611951633, 9611738779 ಸಂಪರ್ಕಿಸಲು ಕೋರಿದ್ದಾರೆ.

ವ್ಯಕ್ತಿ ಕಾಣೆ



ಬೆಳಗಾವಿ : ಖಾನಾಪೂರ ತಾಲೂಕಿನ ಮುಂಡವಾಡ ಗ್ರಾಮದ ನಿವಾಸಿ ಪಾಂಡುರಂಗ ಹಣಮಂತ ಮಳಿಕ 65 ವರ್ಷದ ವ್ಯಕ್ತಿ ಕಾಣೆಯಾಗಿದ್ದರ ಕುರಿತು ಖಾನಾಪೂರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸಾದಾಗಪ್ಪು ಮೈಬಣ, ಸಡಪಾತಾಳ ಮೈಕಟ್ಟು, ಉದ್ದ ಮುಖ, 5.5 ಅಡಿ ಎತ್ತರ, ಗುಲಾಬಿ ಬಣ್ಣದ ಶರ್ಟ ಹಾಗೂ ಕಪ್ಪು ಬಣ್ಣದ ಹಾಫ್ ಪ್ಯಾಂಟ್ ಧರಿಸಿರುತ್ತಾನೆ, ಮರಾಠಿ, ಹಿಂದಿ ಮಾತನಾಡುತ್ತಾರೆ. ಈ ವ್ಯಕ್ತಿ ಬಗ್ಗೆ ಮಾಹಿತಿ ದೊರೆತಲ್ಲಿ ಖಾನಾಪೂರ ಪೊಲೀಸ್ ಠಾಣೆ, ಪೊಲೀಸ್ ಇನ್ಸ್‌ಪೆಕ್ಟರ್ ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



ಖಾನಾಪುರ: ಪಟ್ಟಣದ ಕೆಎಲ್‌ಇ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು.

ರೆಡ್ಡಿಯವರಿಗೆ ನಗರಾಭಿವೃದ್ಧಿ ಸಚಿವ ಸ್ಥಾನ ನೀಡಿ

ರಾಮದುರ್ಗ: ರಾಜ್ಯದ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ ನೇತೃತ್ವದ ಸಚಿವ ಸಂಪುಟದಲ್ಲಿ ರಾಜ್ಯದ ರೆಡ್ಡಿ ಸಮಾಜದ ಮುಖಂಡರು, ಅನುಭವಿಗಳಾದ ರಾಮಲಿಂಗಾರಡ್ಡಿ ಅವರಿಗೆ ಸಂಪುಟದಲ್ಲಿ ಬೆಂಗಳೂರು ನಗರಾಭಿವೃದ್ಧಿ ಸಚಿವರನ್ನಾಗಿ ನೇಮಕ ಮಾಡಬೇಕು ಎಂದು ತಾಲೂಕು ರಡ್ಡಿ ಸಮಾಜದ ಅಧ್ಯಕ್ಷ ಜ್ಞಾನೇಶ್ವರ ಮೇಲಪ್ಪಗೋಳ ಮತ್ತು ನಗರ ಘಟಕದ ಅಧ್ಯಕ್ಷ ಎಚ್. ಆರ್. ಭೂಮರಡ್ಡಿ ಒತ್ತಾಯಿಸಿದರು.ಶನಿವಾರ ಪ್ರೆಸ್‌ಕ್ಲಬ್‌ದಲ್ಲಿ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಂಗಳೂರ ನಗರದ ಎರಡು ವಿಧಾನ ಸಭಾಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಸಂಘಟನೆ ಮಾಡುವ ಮುಖಾಂತರು ಹಲವು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರಲ್ಲದೆ ಹಿಂದಿನ ಅವಧಿಯಲ್ಲಿ ಡಿ. ಕೆ. ಶಿವಕುಮಾರ ಬೆಂಗಳೂರು ನಗರಾಭಿವೃದ್ಧಿ ಸಚಿವರನ್ನಾಗಿ ಮಾಡುವದಾಗಿ ಭರವಸೆ ನೀಡಿದಂತೆ ಈಗ ನಡೆದಕೊಳ್ಳಬೇಕೆಂದು ಮನವಿ ಮಾಡಿದರು.ರಾಮದುರ್ಗ ವಿಧಾನ ಸಭಾ ಕ್ಷೇತ್ರದಿದ ಮೂರನೇ ಬಾರಿಗೆ ಆಯ್ಕೆಯಾಗಿರುವ ಶಾಸಕ ಅಶೋಕ ಪಟ್ಟಣವರಿಗೆ ಸಚಿವ ಸ್ಥಾನ ನೀಡಬೇಕು ಎಂದು ರಡ್ಡಿ ಸಮಾಜದ ಮುಖಂಡರು ಒತ್ತಾಯಿಸಿದರು.ಪತ್ರಿಕಾಗೋಷ್ಠಿಯಲ್ಲಿ ರಡ್ಡಿ ಸಮಾಜದ ಉಪಾಧ್ಯಕ್ಷ ಗೋಪಾಲ ಸಂಶಿ, ಕಾರ್ಯದರ್ಶಿ, ಕೆಎಮ್‌ಎಫ್ ನಿರ್ದೇಶಕ ರಮೇಶ ಅಣ್ಣಿಗೇರಿ, ವರುಣ ಹೊಸಕೋಟಿ, ಬಿ. ವೈ. ನಡಮನಿ ಮತ್ತು ಹನಮಂತ ಹಂಚಿನಾಳ ಸೇರಿದಂತೆ ಹಲವರಿದ್ದರು.



ಬೆಳಗಾವಿ : ನಗರದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ ವಿಶೇಷ ದತ್ತು ಕೇಂದ್ರದಲ್ಲಿ ದಾಖಲಾಗಿರುವ 2 ತಿಂಗಳಿನ ನವಜಾತ ಗಂಡು ಶಿಶುವಿಗೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಶಾಸ್ತ್ರೋಕ್ತವಾಗಿ ಯತೀನ್ ಎಂಬ ಹೆಸರಿನ ಮೂಲಕ ನಾಮಕರಣ ಮಾಡಿದರು.

ಸಮುದಾಯ ಭವನ ನಿರ್ಮಾಣಕ್ಕೆ ಚಾಲನೆ | ಶಾಸಕ ಐಹೊಳೆ ಹೇಳಿಕೆ

2028ರಲ್ಲಿ ಬಿಜೆಪಿಗೆ ಅಧಿಕಾರ ನಿಶ್ಚಿತ

ಚಿಕ್ಕೋಡಿ: ರಾಜ್ಯದ ಇಂದಿನ ರಾಜಕೀಯ ವಿದ್ಯಮಾನಗಳನ್ನು ಗಮನಿಸಿದರೆ 2028 ರ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ ಎಂದು ರಾಯಬಾಗ ಮತಕ್ಷೇತ್ರದ ಶಾಸಕ ದುರ್ಯೋಧನ ಐಹೊಳೆ ಭವಿಷ್ಯ ನುಡಿದಿದ್ದಾರೆ.

ಅವರು ಚಿಕ್ಕೋಡಿ ತಾಲೂಕಿನ ಖಜಗೌಡನಟ್ಟಿ ಗ್ರಾಮದಲ್ಲಿ 20 ಲಕ್ಷ ರೂಪಾಯಿ ವೆಚ್ಚದ ಶ್ರೀ ಬಾಳುಮಾಮಾ ದೇವಸ್ಥಾನದ ಸಮುದಾಯ ಭವನ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಚಾಲನೆ ನೀಡಿ ಮಾತನಾಡಿದರು.



ರಾಯಬಾಗ ಕ್ಷೇತ್ರದ ಭೆಂಡವಾಡ ಹಾಗೂ ಹನುಮಾನ ಏತ ನೀರಾವರಿ ಯೋಜನೆಗಳಿಗೆ ತಕ್ಷಣವೇ ಮಂಜೂರಾತಿ ನೀಡಿ, ಈ ಭಾಗದ ರೈತರ ಹಿತ ಕಾಯಬೇಕು ಎಂದು ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಚಂದರಗಿ ಕ್ರೀಡಾ ಶಾಲೆಯ ಅಧ್ಯಕ್ಷರಾದ ಮಹೇಶ ಭಾತೆ ಮಾತನಾಡಿ, ಖಜಗೌಡನಟ್ಟಿ ಗ್ರಾಮಸ್ಥರ ಬಹುದಿನಗಳ ಬೇಡಿಕೆಯಾಗಿದ್ದ ಶ್ರೀ ಬಾಳುಮಾಮಾ ದೇವಸ್ಥಾನದ ಸಮುದಾಯ ಭವನ ನಿರ್ಮಾಣಕ್ಕೆ ಶಾಸಕರು ಶ್ರಮಿಸಿ, 20 ಲಕ್ಷ ರೂಪಾಯಿ ಅನುದಾನ ಮಂಜೂರು ಮಾಡಿಸಿದ್ದಾರೆ. ಇಂದು ಕಾಮಗಾರಿಗೆ ಚಾಲನೆ ದೊರೆತಿರುವುದು ಸಂತಸ ತಂದಿದೆ ಎಂದರು.

ಈ ಸಂದರ್ಭದಲ್ಲಿ ವಿಜಯ ಕೋಠಿವಾಲೆ,ಸದಾನಂದ ಘೋರ್ಪಡೆ,ರಾಜು ನಾಯಿಕ ಮಹೇಶ ಚೌಡನ್ನವರ,ಪ್ರಕಾಶ ಪೂಜಾರಿ,ನಿಂಗಪ್ಪಾ ಶಿಂಗಾಯಿ,ದುಂಡಪ್ಪ ಬಾಡಕರ,ಅಣ್ಣಪ್ಪಾ ಪಾಟೀಲ, ದುಂಡಪ್ಪ ಖೋತ,ದುಂಡಪ್ಪ ಮಸ್ತಿ,ಲಕ್ಷ್ಮಣ ಪೂಜಾರಿ ಸೇರಿದಂತೆ ಮಹೇಶ ಚೌಗಲಾ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆ ಇಂದಿನ ಅಗತ್ಯ

ಬೈಲಹೊಂಗಲ: ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರಕೃತಿಯ ಸಮತೋಲನ ಕಾಪಾಡಲು ಪ್ರತಿಯೊಬ್ಬರೂ ಗಿಡ-ಮರಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿ ವಹಿಸಬೇಕು ಎಂದು ಹಿರಿಯ ದಿವಾಣಿ ನ್ಯಾಯಾಧೀಶ ರವಿ ಚವ್ಹಾಣ ಹೇಳಿದರು.

ತಾಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ ಹಾಗೂ ಅರಣ್ಯ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಶುಕ್ರವಾರ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಆಧುನಿಕ ಜೀವನ ಶೈಲಿ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಕಾಡುಗಳು ನಾಶವಾಗುತ್ತಿರುವುದು ಪರಿಸರ ಅಸಮತೋಲನಕ್ಕೆ ಕಾರಣವಾಗುತ್ತಿದೆ. ಪರಿಸರವನ್ನು ರಕ್ಷಿಸಿದರೆ ಅದು ನಮ್ಮನ್ನು ರಕ್ಷಿಸುತ್ತದೆ ಎಂಬ ಅರಿವು ಪ್ರತಿಯೊಬ್ಬರಲ್ಲೂ ಮೂಡಬೇಕು ಎಂದು ಅವರು ತಿಳಿಸಿದರು.

ಪರಿಸರ ಉಳಿವಿಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸಸಿಗಳನ್ನು ನೆಟ್ಟು ಅವುಗಳನ್ನು ಮರಗಳಾಗಿ ಬೆಳೆಸುವ ಅಗತ್ಯವಿದೆ. ಉತ್ತಮ ಪರಿಸರದಿಂದ ಆರೋಗ್ಯವಂತ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಮಕ್ಕಳು ತಮ್ಮ ಮನೆ ಹಾಗೂ ಶಾಲಾ ಆವರಣದಲ್ಲಿ ಸಸಿಗಳನ್ನು ನೆಟ್ಟು ಅವುಗಳ ಆರೈಕೆ ಮಾಡುವ ಮೂಲಕ ಪರಿಸರ ಸಂರಕ್ಷಣೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರಧಾನ ದಿವಾಣಿ ನ್ಯಾಯಾಧೀಶೆ ರೋಹಿಣಿ ಬಸ್ತಾಪುರ ಹಾಗೂ ಅರಣ್ಯ ಅಧಿಕಾರಿ ಪ್ರಸನ್ನ ಬೆಲ್ಲದ ಪರಿಸರ ಜಾಗೃತಿಯ ಮಹತ್ವದ ಕುರಿತು ಮಾತನಾಡಿದರು.

ಸರ್ಕಾರಿ ಅಭಿಯೋಜಕಿ ಸರೋಜಿನಿ ಬಟಕುರ್ಕಿ, ಗುರುನಾಥ ಶಿರೂರ, ನ್ಯಾಯವಾದಿಗಳ ಸಂಘದ ಅಧ್ಯಕ್ಷ ಸಿ.ಎಚ್. ಹೊಸಮನಿ, ಅಪರ ಸರ್ಕಾರಿ ವಕೀಲ ರಮೇಶ ಕೋಲಕಾರ, ವಲಯ ಅರಣ್ಯಾಧಿಕಾರಿ ಸುರೇಶ ಅಂದೋಲಿ ಹಾಗೂ ಸುರೇಶ ನಾಯಕ ಉಪಸ್ಥಿತರಿದ್ದು ಪರಿಸರ ಜಾಗೃತಿ ಕುರಿತು ಮಾಹಿತಿ ನೀಡಿದರು. ಶಿರಸ್ತೇದಾರರಾದ ಎನ್.ಎನ್. ಬಡವನ್ನವರ, ಬಿ.ಬಿ. ದಳವಾಯಿ, ಜೆ.ಎಸ್. ಕುಲಕರ್ಣಿ, ನ್ಯಾಯವಾದಿಗಳ ಸಂಘದ ಸದಸ್ಯರು, ನ್ಯಾಯಾಲಯ ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.





ಐಗಳಿ: ಗ್ರಾಮದ ಶ್ರೀ ಅಪ್ಪಯ್ಯ ಸ್ವಾಮಿ ಶಿಕ್ಷಣ ಸಂಸ್ಥೆಯಲ್ಲಿ ಪ್ರಧಾನ ಗುರುಗಳಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ ಶ್ರೀ ಸದಾಶಿವ ಜನಗೌಡ ಅವರಿಗೆ ಐಗಳಿ ಗ್ರಾಮದ ಹಿರಿಯರಾದ ಶಂಕರಗೌಡ ಪೊಲೀಸ ಪಾಟೀಲ ಹಾಗೂ ಅವರ ಪತ್ನಿ ಮಾಜಿ ಗ್ರಾಮ ಪಂಚಾಯತಿ ಅಧ್ಯಕ್ಷೆ ರಾಜಶ್ರೀ ಪಾಟೀಲ ಅವರು ಆತ್ಮೀಯವಾಗಿ ಸನ್ಮಾನಿಸಿ ಗೌರವಿಸಿ ಅವರ ನಿವೃತ್ತಿ ಜೀವನ ಸುಖಕರವಾಗಲಿ ಎಂದು ಹಾರೈಸಿದರು.

ಪ್ರಾಯೋಗಿಕ ಕೌಶಲ್ಯ ಬೆಳೆಸಿಕೊಳ್ಳಿ: ಅಜಿತ

ಬೆಳಗಾವಿ: ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಯುವಕರು ಉದ್ಯೋಗಕ್ಕಾಗಿ ಅಲೆದಾಡಿ ಸಮಯ ವ್ಯರ್ಥ ಮಾಡದೇ, ಇಂಜಿನಿಯರಿಂಗ್ ಶಿಕ್ಷಣದಲ್ಲಿ ಪಡೆದ ತಾಂತ್ರಿಕ ಜ್ಞಾನ ಮತ್ತು ಕೌಶಲ್ಯಗಳನ್ನು ಸರಿಯಾಗಿ ಬಳಸಿಕೊಂಡು ಸ್ವಾವಲಂಬಿಗಳಾಗಬೇಕು ಹಾಗೂ ಹೊಸ ಆವಿಷ್ಕಾರಗಳತ್ತ ಗಮನಹರಿಸಬೇಕು ಎಂದು ಪತ್ರಕರ್ತ ಅಜಿತ್ ಹನಮಕ್ಕನವರ ಹೇಳಿದರು.

ಬೆಳಗಾವಿಯ ಉದ್ಯಮಬಾಗದಲ್ಲಿರುವ ಪ್ರಸಿದ್ಧ ತಾಂತ್ರಿಕ ಸಂಸ್ಥೆಯಾದ ಜೈನ್ ಕಾಲೇಜ್ ಆಫ್ ಇಂಜಿನಿಯರಿಂಗ್ ಮತ್ತು ರಿಸರ್ಚ್ (ಜಿಇಆರ್) ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಘಟಿಕೋತ್ಸವ ಮತ್ತು ಪದವಿ ಪ್ರಮಾಣಪತ್ರ ವಿತರಿಸಿ ಅವರು ಮಾತನಾಡಿದರು.

ಉದ್ಯೋಗ ಆಕಾಂಕ್ಷಿಗಳಾಗಬೇಡಿ, ಉದ್ಯೋಗದಾತರಾಗಿ, ಇಂದಿನ ಆಧುನಿಕ ಯುಗದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಯಂತಹ ತಂತ್ರಜ್ಞಾನಗಳು ವೇಗವಾಗಿ ಬೆಳೆಯುತ್ತಿವೆ. ಪ್ರಸ್ತುತ ದಿನಗಳಲ್ಲಿ ಉದ್ಯೋಗ ಮಾರುಕಟ್ಟೆ ಕ್ಷಣಕ್ಷಣಕ್ಕೂ ಬದಲಾಗುತ್ತಿದ್ದು, ಅದಕ್ಕೆ ತಕ್ಕಂತೆ ವಿದ್ಯಾರ್ಥಿಗಳು ತಮ್ಮ ಕೌಶಲ್ಯಗಳನ್ನು ಸದಾ ಅಪ್ಡೇಟ್ ಮಾಡಿಕೊಳ್ಳುತ್ತಿರಬೇಕು. ಕೇವಲ ಪದವಿ ಪ್ರಮಾಣಪತ್ರಗಳನ್ನು ಕೈಯಲ್ಲಿ ಹಿಡಿದು ಉದ್ಯೋಗಕ್ಕಾಗಿ ಅಲೆಯುವ ಆಕಾಂಕ್ಷಿಗಳಾಗುವ ಬದಲು, ನೀವೇ ನಾಲ್ಕು ಜನರಿಗೆ ಕೆಲಸ ಕೊಡುವ ಉದ್ಯೋಗದಾತರಾಗಿ ಬೆಳೆಯುವ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಪೋಷಕರ ಸಾಂಪ್ರದಾಯಿಕ ನಿರೀಕ್ಷೆಗಳನ್ನು ಮೀರಿ ನನ್ನದೇ ಆದ ಸ್ವಂತ ಹಾದಿಯನ್ನು ಆಯ್ದುಕೊಂಡಿದ್ದರಿಂದಲೇ ಇಂದು ಮಾಧ್ಯಮ ರಂಗದಲ್ಲಿ ಗುರುತಿಸಿಕೊಳ್ಳಲು ಸಾಧ್ಯವಾಯಿತು ಎಂದು ವಿದ್ಯಾರ್ಥಿಗಳಿಗೆ ಧೈರ್ಯ ತುಂಬಿದರು.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವ ಡಾ. ಪ್ರಸಾದ್ ರಾಂಪುರೆ ಮಾತನಾಡಿದರು.

ಕಾಲೇಜಿನ ಪ್ರಾಂಶುಪಾಲರು ಹಾಗೂ ನಿರ್ದೇಶಕರಾದ ಡಾ. ಎಸ್. ವ್ಹಿ. ಗೋರಬಾಳ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ಕಾಲೇಜು ಸಾಧಿಸಿರುವ ಶೈಕ್ಷಣಿಕ ಪ್ರಗತಿಯನ್ನು ಶ್ಲಾಘಿಸಿ, ವಿದ್ಯಾರ್ಥಿಗಳ ಭವಿಷ್ಯ ಉಜ್ವಲವಾಗಿಲೆಂದು ಹಾರೈಸಿದರು.



ಎಚ್.ಕೆ. ಪಾಟೀಲ, ರಾಮಲಿಂಗಾರೆಡ್ಡಿಗೆ ಅನ್ಯಾಯ: ಬಾವಲತ್ತಿ

ಬೆಳಗಾವಿ : ಅತ್ಯಂತ ಅನುಭವಿ, ಮುತ್ಸದ್ದಿ ರಾಜಕಾರಣಿ ಎಚ್.ಕೆ. ಪಾಟೀಲ್ ಅವರನ್ನು ಸಂಪುಟದಿಂದ ಕೈಬಿಟ್ಟಿರುವುದು ಹಾಗೂ ಹಿರಿಯ ನಾಯಕ ರಾಮಲಿಂಗಾ ರೆಡ್ಡಿ ಅವರಿಗೆ ಸೂಕ್ತ ಸ್ಥಾನಮಾನ ನೀಡದೇ ಇರುವುದು ಇಡೀ ಸಮಾಜಕ್ಕೆ ಮಾಡಿದ ಅನ್ಯಾಯ ಎಂದು ಸಂಘವು ಸರ್ಕಾರದ ವಿರುದ್ಧ ಕಿಡಿಕಾರಿದೆ.

ಶುಕ್ರವಾರ ನಗರದಲ್ಲಿರುವ ರೆಡ್ಡಿ ಭವನದಲ್ಲಿ ನಡೆದ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾಜಿ ಉಪಾಧ್ಯಕ್ಷ ಬಸವರಾಜ ಬಾವಲತ್ತಿ ಮಾತನಾಡಿ, ಹಲವು ದಶಕಗಳಿಂದ ಪಕ್ಷ ಮತ್ತು ನಾಡಿಗೆ ಅಪಾರ ಕೊಡುಗೆ ನೀಡುತ್ತಾ ಬಂದಿರುವ ನಮ್ಮ ಸಮಾಜದ ಹಿರಿಯ ನಾಯಕರಿಗೆ ಸಚಿವ ಸಂಪುಟದಲ್ಲಿ ಅರ್ಹ ಸ್ಥಾನಮಾನ ಸಿಗದಿರುವುದು ಖಂಡನೀಯ. ರಾಜ್ಯದಲ್ಲಿ ರೆಡ್ಡಿ ಸಮುದಾಯಕ್ಕೆ ಗಣನೀಯ ರಾಜಕೀಯ ಪ್ರಾತಿನಿಧ್ಯವಿದ್ದರೂ, ಅದಕ್ಕೆ ತಕ್ಕ ಅನುಪಾತದಲ್ಲಿ ಅವಕಾಶ ನೀಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೌಲ್ಯಾಧಾರಿತ ರಾಜಕಾರಣಕ್ಕೆ ಹಿನ್ನಡೆ: ರಾಜಕೀಯ ಅನುಭವ, ಪ್ರಾಮಾಣಿಕತೆ ಮತ್ತು ಆಡಳಿತಾತ್ಮಕ ಸಾಮರ್ಥ್ಯಕ್ಕೆ ಹೆಸರಾಗಿರುವ ಎಚ್. ಕೆ. ಪಾಟೀಲ ಅವರಂತಹ ಸೈದ್ಧಾಂತಿಕ ನಾಯಕನನ್ನು ಸಂಪುಟದಿಂದ ಹೊರಗಿಟ್ಟಿರುವುದು ಜನರಲ್ಲಿ ತಪ್ಪು ಸಂದೇಶ ರವಾನಿಸಿದೆ ಎಂದು ಪದಾಧಿಕಾರಿಗಳು ಅಭಿಪ್ರಾಯಪಟ್ಟರು.

ರಾಜ್ಯಾದ್ಯಂತ ಹೋರಾಟದ ಎಚ್ಚರಿಕೆ: ಸಚಿವ ಸಂಪುಟದಲ್ಲಿ ಆಗಿರುವ ಈ ತಾರತಮ್ಯವನ್ನು ಸರ್ಕಾರ ತಕ್ಷಣವೇ ಸರಿಪಡಿಸಬೇಕು. ಈ ಕುರಿತು ಸರ್ಕಾರಕ್ಕೆ ಶೀಘ್ರದಲ್ಲೇ ಅಧಿಕೃತ ಮನವಿ ಸಲ್ಲಿಸಲಾಗುವುದು. ಒಂದು ವೇಳೆ ಸರ್ಕಾರ ಸಮಾಜದ ಹಿರಿಯ ನಾಯಕರನ್ನು ಹೀಗೆಯೇ ಕಡೆಗಣಿಸಿದರೆ, ಮುಂದಿನ ದಿನಗಳಲ್ಲಿ ರಾಜ್ಯಾದ್ಯಂತ ರೆಡ್ಡಿ ಸಮಾಜವನ್ನು ಒಗ್ಗೂಡಿಸಿ ಉಗ್ರ ಹೋರಾಟ ರೂಪಿಸಲಾಗುವುದು ಎಂದು ಮುಖಂಡರು ಇದೇ ವೇಳೆ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು. ಈ ವೇಳೆ ರೆಡ್ಡಿ ಸಂಘದ ಜಿಲ್ಲಾಧ್ಯಕ್ಷ ರಾಮಣ್ಣ ಮುಳ್ಳೂರ, ಮಾಜಿ ಉಪಾಧ್ಯಕ್ಷ ಬಸವರಾಜ ಬಾವಲತ್ತಿ, ಪ್ರಕಾಶ ಕದರೆಡ್ಡಿ, ಖಜಾಂಚಿ ಬಸವರಾಜ ಗಣಿ, ಬೆಳಗಾವಿ ರೆಡ್ಡಿ ಸಂಘದ ಪ್ರಮುಖ ಪದಾಧಿಕಾರಿಗಳು, ಮಾಜದ ಮುಖಂಡರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು: ಸಂಸದೆ ಜಾರಕಿಹೊಳಿ

ಕಾಗವಾಡ: ಲೋಕೋಪಯೋಗಿ ಇಲಾಖೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಕಾಗವಾಡ ಕ್ಷೇತ್ರದ ಅಭಿವೃದ್ಧಿಗಾಗಿ ವಿಶೇಷ ಕಾಳಜಿ ವಹಿಸಿದ್ದಾರೆ. ಈಗಾಗಲೇ ನೂರಾರು ಕೋಟಿ ಅನುದಾನವನ್ನು ರಸ್ತೆ ಕಾಮಗಾರಿ ಯೋಜನೆಗಳಿಗೆ ಮಂಜೂರು ಮಾಡಿದ್ದಾರೆ ಎಂದು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಹೇಳಿದರು.

ಅವರು ಶನಿವಾರ ಕಾಗವಾಡ ಮತಕ್ಷೇತ್ರದ ಉಗಾರ ಖುರ್ದ ಪಟ್ಟಣದಲ್ಲಿ 2025-26ನೇ ಸಾಲಿನ ಮುಖ್ಯಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಯಡಿ ಹಮ್ಮಿಕೊಳ್ಳಲಾದ ಎರಡು ಸಿಸಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೇರವೇರಿಸಿ ಮಾತನಾಡಿದರು.

ಈ ಸಂದರ್ಭದಲ್ಲಿ ಪಟ್ಟಣ ಪಂಚಾಯತ ಅಧ್ಯಕ್ಷ ಫಾತಿಮಾ ನದಾಫ, ಮುಖಂಡರಾದ ರಮೇಶ ಸಿಂದಗಿ, ವೀರಭದ್ರ ಕಟಗೇರಿ, ವಿಜಯ ಅಸೋದೆ,ಸಚೀನ ಶಿಂಗೆ, ಈಶ್ವರ ಕಾಂಬಳೆ,ಅಮರ ಜಗತಾಪ ವಿಕ್ರಮ ಭೊಸಲೆ, ಭರಮು ಮಾದರ,ತಾಪಂ ಇಒ ವಿರಣ್ಣಾ ವಾಲಿ ಅಭಿಯಂತರಾದ ಮಲ್ಲಿಕಾರ್ಜುನ ಮಗದುಮ, ಗುತ್ತಿಗೆದಾರ ಸಂದೀಪ ಕುರಾಡೆ ಸ್ಥಳೀಯ ಜನಪ್ರತಿನಿಧಿಗಳು,ಇತರರು ಇದ್ದರು.



ಪರಿಸರ ಸಂರಕ್ಷಿಸಲು ಮುಂದಾಗಿ

ರಾಮದುರ್ಗ: ಕೇಂದ್ರ ಸರ್ಕಾರ ಆರಂಭಿಸಿದ ಏಕ ಪೇಡ ಮಾಕೆ ನಾಮ ಅಭಿಯಾನದಂತೆ ಪ್ರತಿಯೊಬ್ಬ ವಿದ್ಯಾರ್ಥಿ ತಮ್ಮ ತಾಯಿಯ ಹೆಸರಲ್ಲಿ ಒಂದು ಮರವನ್ನು ನೆಟ್ಟು, ಪೋಷಿಸಿದಲ್ಲಿ ದೇಶದಲ್ಲಿ ಪರಿಸರ ಸಂರಕ್ಷಿಸಲು ಉತ್ತಮ ಕೊಡುಗೆ ನೀಡಲು ಸಾಧ್ಯ ಎಂದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ ಹೇಳಿದರು.

ತಾಲೂಕಿನ ಕಟಕೋಳದ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಬ್ಯಾಂಕ್ ಆಪ್ ಬರೋಡಾ ರಾಮದುರ್ಗ ಶಾಖೆ, ಶಿಕ್ಷಣ ಇಲಾಖೆ ಹಾಗೂ ಆದರ್ಶ ಇಕೋ ಕ್ಲಬ್ ಸಹಯೋಗದಲ್ಲಿ ಶುಕ್ರವಾರ ಏರ್ಪಡಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಪ್ರತಿಯೊಬ್ಬ ವಿದ್ಯಾರ್ಥಿ ಒಂದು ಗಿಡವನ್ನು ದತ್ತು ಪಡೆದು ಸಂರಕ್ಷಿಸಬೇಕೆಂದು ಹೇಳಿದರು.

ಬ್ಯಾಂಕ್ ಆಪ್ ಬರೋಡಾ ರಾಮದುರ್ಗ ಶಾಖಾ ವ್ಯವಸ್ಥಾಪಕ ಹನಮಂತ್ರಾಯ ಬಿರಾದಾರದರು. , ಬ್ಯಾಂಕ್ ಆಪ್ ಬರೋಡಾ ಅಧಿಕಾರಿ ಪೂಜಾ ಹೂಲಗೇರಿ, ಆದರ್ಶ ಪಿಯು ಕಾಲೇಜಿನ ಪ್ರಾಚಾರ್ಯ ಎಸ್.ಎಸ್. ಕಟ್ಟೇಕಾರ, ಪತ್ರಕರ್ತ ರಾಮಚಂದ್ರ ಯಾದವಾಡ ಸೇರಿದಂತೆ ಶಿಕ್ಷಕ ಸಿಬ್ಬಂದಿ ಉಪಸ್ಥಿತರಿದ್ದರು.

ಮುಖ್ಯ ಶಿಕ್ಷಕ ವೈ.ಪಿ. ಮಳಲಿ ಸ್ವಾಗತಿಸಿದರು. ಶಿಕ್ಷಕ ಆನಂದತೀರ್ಥ ಜೋಶಿ ಕಾರ್ಯಕ್ರಮ ನಿರೂಪಿಸಿ, ವಂದಿಸಿದರು.



ಡಾ.ಅಜಿತ ದಂಪತಿಯಿಂದ 1.50 ಲಕ್ಷ ರೂ.ದೇಣಿಗೆ



ರಾಯಬಾಗ: ಅರಿಹಂತ ಚಾರಿಟೇಬಲ್ ಫೌಂಡೇಶನ್ ರಾಯಬಾಗ ಸಂಸ್ಥೆಗೆ ಪಟ್ಟಣದ ವೈದ್ಯ ಡಾ. ಅಜೀತ ಮತ್ತು ಶೋಭಾ ನಾಯಿಕ ದಂಪತಿ 1.50 ಲಕ್ಷ ರೂಪಾಯಿ ದಾನವಾಗಿ ನೀಡಿದ್ದು, ತಾಲೂಕಿನ ಪ್ರತಿಭಾವಂತ ಬಡ ಮಕ್ಕಳು ಇದರ ಸದುಪಯೋಗವನ್ನು ಪಡೆದುಕೊಳ್ಳಲು ಸಂಸ್ಥೆ ಅಧ್ಯಕ್ಷ ಡಿ.ಸಿ.ಸದಲಗಿ ಹೇಳಿದರು.

ಮಂಗಳವಾರ ಪಟ್ಟಣ ಮಹಾವೀರ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಕಾರ್ಯದರ್ಶಿ ಮಲ್ಲಪ್ಪ

ಖಾನಟ್ಟಿ, ತಾಲೂಕಿನ ಪ್ರತಿಭಾವಂತ ಜೈನ ಸಮುದಾಯದ ಮಕ್ಕಳು 2025-26ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.90 ಹಾಗೂ ಪಿಯುಸಿಯಲ್ಲಿ ಶೇ.85 ಅಂಕ ಪಡೆದ ವಿದ್ಯಾರ್ಥಿಗಳು ಸಂಸ್ಥೆಗೆ ಜುಲೈ 15 ರವರೆಗೆ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದರು. ಸದುಪಯೋಗವನ್ನು ತಾಲೂಕಿನ ಎಲ್ಲಾ ವಿದ್ಯಾರ್ಥಿಗಳ ಪಡೆದುಕೊಳ್ಳಬೇಕೆಂದು ಸಂಸ್ಥೆಯು ಕಾರ್ಯದರ್ಶಿಗಳಾದ ಮಲ್ಲಪ್ಪ ಖಾನಟ್ಟಿ ತಿಳಿಸಿದರು.

ಸಭೆಯಲ್ಲಿ ದಾನಿ ಡಾ. ಅಜಿತ ನಾಯಕ, ಸಂಸ್ಥೆ ಉಪಾಧ್ಯಕ್ಷ ಸಂಜಯ ಬಡೋರೆ, ನಿರ್ದೇಶಕರಾದ ಈರಗೌಡ ಪಾಟೀಲ, ದಶರಥ

ಶೆಟ್ಟಿ, ಶೀತಲ ಬೇಡಿಕಿಹಾಳೆ, ಸಂಜಯ ಹಂಜೆ, ಪಾರೀಸ ಉಗಾರೆ, ಭರತೇಶ ಪಾಟೀಲ, ನೇಮನಾಥ ಅಸ್ಕಿ, ವರ್ಧಮಾನ ಬನವನೆ, ಭರತೇಶ ಕೊರಗೇರಿ ಇದ್ದರು.

ಪರಿಸರ ದಿನ ಆಚರಣೆ

ಖಾನಾಪುರ: ಪಟ್ಟಣದ ಕೆಎಲ್‌ಇ ಪದವಿಪೂರ್ವ ಕಾಲೇಜಿನಲ್ಲಿ ಶುಕ್ರವಾರ ತಾಲೂಕು ಕಾನೂನು ಸೇವೆಗಳ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ ಹಾಗೂ ಅರಣ್ಯ ಇಲಾಖೆಯ ಸಹಯೋಗದಲ್ಲಿ ವಿಶ್ವ ಪರಿಸರ ದಿನವನ್ನು ಆಚರಿಸಲಾಯಿತು. ಕಾರ್ಯಕ್ರಮವನ್ನು ತಾಲೂಕು ಕಾನೂನು ಸೇವೆಗಳ ಸಮಿತಿಯ ಅಧ್ಯಕ್ಷರು ಹಾಗೂ ಜೆ.ಎಂ. ಎಫ್.ಸಿ. ನ್ಯಾಯಾಲಯದ ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶ ನ್ಯಾ.ಚಂದ್ರಶೇಖರ ತಳವಾರ ಕಾಲೇಜಿನ ಆವರಣದಲ್ಲಿ ಸಸಿ ನೆಟ್ಟು ನೀರೆರೆಯುವ ಮೂಲಕ ಉದ್ಘಾಟಿಸಿದರು.

ಪ್ರೊಬೇಷನರಿ ಎಸಿಎಫ್ ಬೇಲಬಾದೇವಿ ಬಿರಾದಾರ, ಕಾಲೇಜಿನ ಪ್ರಾಂಶುಪಾಲರಾದ ವಿಜಯ ಕಲ್ಮಠ, ವಕೀಲರ ಸಂಘದ ಅಧ್ಯಕ್ಷ ಐ.ಆರ್. ಘಾಡಿ, ಸಹಾಯಕ ಸರ್ಕಾರಿ ಅಭಿಯೋಜಕಿ ಅಫಿಯಾ ನೇಸರಗಿಕರ ಹಾಗೂ ಇತರರು ಮಾತನಾಡಿ ಪರಿಸರ ಸಂರಕ್ಷಣೆಯ ಮಹತ್ವ, ಅರಣ್ಯ ರಕ್ಷಣೆಯ ಕಾನೂನುಗಳು ಮತ್ತು ಸುಸ್ಥಿರ ಭವಿಷ್ಯ ನಿರ್ಮಾಣದಲ್ಲಿ ವಿದ್ಯಾರ್ಥಿಗಳು ಹಾಗೂ ನಾಗರಿಕರ ಪಾತ್ರದ ಕುರಿತು ವಿವರವಾದ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೆಎಲ್‌ಇ ಬಿಸಿಎ ಕಾಲೇಜು ಪ್ರಾಚಾರ್ಯ ಆನಂದ ತವಂಶಿ ಸೇರಿದಂತೆ ವಕೀಲರು, ನ್ಯಾಯಾಲಯದ ಸಿಬ್ಬಂದಿ, ವಿದ್ಯಾರ್ಥಿಗಳು, ಉಪನ್ಯಾಸಕರು ಹಾಗೂ ಅರಣ್ಯ ಇಲಾಖೆಯ ಸಿಬ್ಬಂದಿ ಇದ್ದರು.

ಪರಿಸರ ಸಂರಕ್ಷಣೆಗೆ ಸಂಕಲ್ಪ

ಅಥಣಿ : ಪರಿಸರದಲ್ಲಿ ಸಮತೋಲನ ಕಾಯ್ದುಕೊಳ್ಳಲು ಗಿಡ ಮರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೆಡುವುದು ಅಗತ್ಯ. ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ಪ್ರತಿ ವರ್ಷ ಒಂದು ಸಾವಿರ ಗಿಡಗಳನ್ನು ನೆಡುವ ಸಂಕಲ್ಪ ಹೊಂದಲಾಗಿದೆ ಎಂದು ಕಾರ್ಖಾನೆಯ ಅಧ್ಯಕ್ಷ ಪರಪ್ಪ ಸವದಿ ಹೇಳಿದರು.

ಅವರು ತಾಲೂಕಿನ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆಯ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ 1000 ಗಿಡಗಳನ್ನು ನೆಡುವ ಕಾರ್ಯಕ್ಕೆ ಚಾಲನೆ ನೀಡಿ ಮಾತನಾಡಿದರು.

ಮುಂಬರುವ ದಿನಗಳಲ್ಲಿ ಇನ್ನು ಸಾವಿರಾರು ಗಿಡಗಳನ್ನು ನೆಡುವ ಸಂಕಲ್ಪ ಹೊಂದಿದ್ದೇವೆ ಎಂದರು.

ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಯ ಸದಸ್ಯರು ಹಾಗೂ ಅಧಿಕಾರಿಗಳಾದ ಎಸ್.ಎ. ಠಕ್ಕಣ್ಣವರ, ಸಿ.ಎಸ್. ಪಾಟೀಲ, ವಿ.ಪಿ. ಮನಗೂಳಿ, ಡಿ.ಬಿ. ದೇಸಾಯಿ, ಎ.ಜಿ. ಕುಲಕರ್ಣಿ, ದೇಶಪಾಂಡೆ, ಎಸ್.ಎಸ್. ಪಾಟೀಲ, ರಾಮಣ್ಣಾ ಬೆಳ್ಳಗಿ ಹಾಗೂ ಕಾರ್ಖಾನೆಯ ಕಾರ್ಮಿಕ ವರ್ಗದವರು ಉಪಸ್ಥಿತರಿದ್ದರು.



ಕಿರುಸುದ್ದಿ

ನಾಳೆ ಆಸ್ತಮಾ ಔಷಧಿ ಉಚಿತ ವಿತರಣಾ ಶಿಬಿರ

ಬಾದಾಮಿ: ವೀರ ಪುಲಿಕೇಶಿ ಗ್ರಾಮೀಣ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರ, ಬಾದಾಮಿ, ಪ್ರಜ್ಞಾ ಎಜುಕೇಶನ್ ಟ್ರಸ್ಟ್ ಹುಬ್ಬಳ್ಳಿ ಹಾಗೂ ನವಚೇತನ ಎಜುಕೇಶನ್ ಸೊಸೈಟಿ ಚೊಳಚಗುಡ್ಡ ಸಂಯುಕ್ತ ಆಶ್ರಯದಲ್ಲಿ ಪ್ರತಿ ದಿನ ಪ್ರತಿ ಮನೆಯಲ್ಲೂ ಆಯುರ್ವೇದ ಇದರ ಅಂಗವಾಗಿ ಉಚಿತ ಅಸ್ತಮಾ ಔಷಧಿ ವಿತರಣಾ ಶಿಬಿರವನ್ನು (ಸತತ 27 ವರ್ಷಗಳಿಂದ) ಈ ಯುಕ್ತಿಶಕ್ತ್ಯ ಯೋಜನಾ ಯಾತು ಯುಜ್ಯತೆ ಎಂಬ ಉಕ್ತಿಯಂತೆ ನಮ್ಮ ವೀರ ಪುಲಿಕೇಶಿ ಗ್ರಾಮೀಣ ಆಯುರ್ವೇದ ಮಹಾವಿದ್ಯಾಲಯದ ಆಸ್ಪತ್ರೆಯಲ್ಲಿ ಜೂ. 8ರಂದು ಸೋಮವಾರ ಸಂಜೆ 7 ಗಂಟೆ 55 ನಿಮಿಷಕ್ಕೆ ಮೃಗಶಿರ ಯೋಗ ಕಾಲ ಸೇರುವುದರಿಂದ ಸೂಕ್ತ ಸಲಹೆಗಳ ಜೊತೆಗೆ ಡಾ.ಕೆ.ವೈ.ಕೃಷ್ಣಾಜಿಯವರ ಅನುಭೂತಿ ಔಷಧಿ ವಿತರಣೆ ಮಾಡಲಾಗುವುದು. ಕಾರಣ ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆಯಬೇಕೆಂದು ವಿನಂತಿಸಿಕೊಳ್ಳುತ್ತೇವೆ. ಮಾಹಿತಿಗಾಗಿ ಉಪ ವೈದ್ಯಕೀಯ ನಿರೀಕ್ಷಕ ಡಾ.ವಿ.ವ್ಹಿ.ಭಾಗವತ 9449260984 ಹಾಗೂ ಡಾ. ಸೋಮಶೇಖರ ಬಿರಾದರ ಆಸ್ಪತ್ರೆಯ ನೋಡಲ್ ಆಫೀಸರ್ 9449260159 ಪ್ರಾಚಾರ್ಯರು ಡಾ.ಬಸವರಾಜ ಎಂ.ಮಲ್ಲಿಪಾಟೀಲ, ಡಾ.ಗಿರೀಶ ಎನ್.ದಾನಪ್ಪಗೌಡರ 9448079112, 8073364227 ಅವರನ್ನು ಸಂಪರ್ಕಿಸಲು ತಿಳಿಸಿದ್ದಾರೆ.



ಗುಳೇದಗುಡ್ಡ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಪಟ್ಟಣದ ಪಿಇಟಿ ಅಂತಾರಾಷ್ಟ್ರೀಯ ಶಾಲೆಯಲ್ಲಿ ಪರಿಸರ ಜಾಗೃತಿ ಮೂಡಿಸಲು ವಿದ್ಯಾರ್ಥಿಗಳಿಂದ ಪರಿಸರ ಜಾಗೃತಿ ಜಾಥಾ ನಡೆಸಲಾಯಿತು. ಶಾಲಾ ಚೇರಮನ್ ಪುರುಷೋತ್ತಮ ಜವರ, ಸದಸ್ಯರಾದ ಎಸ್.ಎಸ್.ನಾಯನೇಗಲಿ, ಸುನೀಲ ಕರಣಿ, ಎಲ್.ಆರ್. ಕಾಬ್ರಾ, ಗೋವಿಂದ ಜಾಜು, ಮುಖ್ಯೋಪಾಧ್ಯಾಯ ಎನ್.ವೈ.ಭಾವಿ, ವಿ.ಶೀಲವಂತ ಹಾಗೂ ಶಿಕ್ಷಕರು ಇದ್ದರು.

ಇಂದು ವಿಚಾರ ಸಂಕಿರಣ

ಬೀಳಗಿ: ತಾಲೂಕಿನ ಕೊರ್ತಿ ಸಮುದಾಯ ಭವನದಲ್ಲಿ ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ (ಸಾಗರ ಬಣ) ಜಿಲ್ಲಾ ಸಮಿತಿ ಬಾಗಲಕೋಟೆ ಇವರ ಆಶ್ರಯದಲ್ಲಿ ಬುದ್ಧ-ಬಸವ-ಡಾ.ಅಂಬೇಡ್ಕರ್ ಅವರ ಜಯಂತ್ಯುತ್ಸವ ಪ್ರಯುಕ್ತ ಸಮ ಸಮಾಜದ ಕುರಿತು ವಿಚಾರ ಸಂಕಿರಣ ಜೂ.7ರಂದು ಬೆಳಗ್ಗೆ 11:30 ಗಂಟೆಗೆ ಜರುಗಲಿದೆ. ಶಾಸಕ ಜೆ.ಟಿ.ಪಾಟೀಲ ಉದ್ಘಾಟಿಸುವರು. ಡಿಎಸ್‌ಎಸ್ ಜಿಲ್ಲಾ ಸಂಚಾಲಕ ಬಸವರಾಜ ಹಳ್ಳದಮನಿ ಅಧ್ಯಕ್ಷತೆ ವಹಿಸುವರು. ಬುದ್ಧ,ಬಸವ, ಅಂಬೇಡ್ಕರ್ ಭಾವಚಿತ್ರಕ್ಕೆ ಮಾಜಿ ಸಚಿವ ಎಸ್.ಆರ್.ಪಾಟೀಲ ಪುಷ್ಪಾರ್ಚನೆ ಮಾಡುವರು. ಮುಖ್ಯ ಅತಿಥಿಗಳಾಗಿ ಕೆಪಿಸಿಸಿ ಮಾಜಿ ಕಾರ್ಯದರ್ಶಿ ಬಸವಪ್ರಭು ಸರನಾಡಗೌಡ, ಬೀಳಗಿ ಬ್ಲಾಕ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಹನುಮಂತ ಕಾಖಂಡಕಿ, ಜಿಪಂ ಮಾಜಿ ಅಧ್ಯಕ್ಷೆ ವೀಣಾ ಕಾಶಪ್ಪನವರ, ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸಂಯುಕ್ತಾ ಪಾಟೀಲ ಆಗಮಿಸುವರು. ಪ್ರಗತಿಪರ ಚಿಂತಕ, ವಿಚಾರವಾದಿ ರಂಜಾನ ದರ್ಗಾ ಉಪನ್ಯಾಸ ನೀಡುವರು. ಜಿಲ್ಲಾ ಸಂಚಾಲಕ ಪರಶುರಾಮ ಕಾಂಬಳೆ ಪ್ರಾಸ್ತಾವಿಕ ನುಡಿ ಹೇಳುವರು. ಅತಿಥಿಗಳಾಗಿ ತಹಶೀಲ್ದಾರ್ ವಿನೋದ ಹತ್ತಳ್ಳಿ, ತಾಪಂ ಮಾಜಿ ಅಧ್ಯಕ್ಷ ಶ್ರೀಶೈಲ ಸೂಳಿಕೇರಿ, ಜಿಪಂ ಮಾಜಿ ಅಧ್ಯಕ್ಷ ಯಮನಪ್ಪ ರೊಳ್ಳಿ, ಜಿಪಂ ಮಾಜಿ ಸದಸ್ಯೆ ಕಸ್ತೂರಿಬಾಯಿ ಲಿಂಗಣ್ಣವರ, ಗ್ಯಾರಂಟಿ ಸಮಿತಿ ತಾಲೂಕಾಧ್ಯಕ್ಷ ಆನಂದಿರಾಯ್ಯ ಪ್ಯಾಟಿಮಠ, ಸಿಪಿಐ ಹನುಮಂತ ಸಣಮನಿ, ತಜ್ಞವೈದ್ಯ ಡಾ.ಶಿವಪ್ಪ ತೇಲಿ, ನಿವೃತ್ತ ತಹಶೀಲ್ದಾರ್ ಮಹಿಬೂಬ ಜಮಖಂಡಿ, ಸುನೀಲ ನಾರಾಯಣಿ, ರವಿ ಕಾಂಬಳೆ, ರಮೇಶ ಆನಗವಾಡಿ, ಕಾಶೀಲಿಂಗ ಗೋಣಿ, ಎಚ್.ಎನ್.ನೀಲನಾಯಕ, ಯಲ್ಲಪ್ಪ ಮಾದರ, ಮಂಜುನಾಥ ಜಾನಮಟ್ಟಿ, ಹುಸೇನಸಾಬ ಬಡಿಗೇರ ಆಗಮಿಸುವರು.

ಇಂದು ಬೀಳ್ಕೊಡುಗೆ ಸಮಾರಂಭ

ಕಲಾದಗಿ: ಗ್ರಾಮದ ಹಿರಿಯ ಮುಖ್ಯಶಿಕ್ಷಕ ಚಂದ್ರಶೇಖರ ಹೂಗಾರ ಅವರು ಶಿಕ್ಷಣ ಇಲಾಖೆಯಲ್ಲಿ 37 ವರ್ಷಗಳ ಸುದೀರ್ಘ ಸೇವೆ ಪೂರೈಸಿ ವಯೋನಿವೃತ್ತಿ ಹೊಂದಿರುವ ನಿಮಿತ್ತ ಜೂ.7ರಂದು ಭಾನುವಾರ ಬೆಳಗ್ಗೆ 10.30ಗಂಟೆಗೆ ಕಲಾದಗಿ ಸರ್ಕಾರಿ ಕನ್ನಡ ಗಂಡು ಮಕ್ಕಳ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬೀಳ್ಕೊಡುಗೆ ಹಾಗೂ ಅಭಿನಂದನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಅವರ ಆತ್ಮೀಯರು ಹಾಗೂ ಶಿಷ್ಯ ಬಳಗದವರು ಉಪಸ್ಥಿತರಿರಬೇಕೆಂದು ಕಾರ್ಯಕ್ರಮದ ಸಂಘಟಕರು ಕೋರಿದ್ದಾರೆ.



ಬಾದಾಮಿ: ತಾಲೂಕಿನ ಕೆತ್ತಲಿ ಗ್ರಾಮದಲ್ಲಿ ಸಿದ್ಧಲಿಂಗೇಶ್ವರ ವಿರಕ್ತಮಠದಲ್ಲಿ ಭಾರತೀಯ ಕಿಸಾನ್ ಸಂಘ-ಕರ್ನಾಟಕ ಪ್ರದೇಶ (ರಿ)ಕರ್ನಾಟಕ ಉತ್ತರ ಪ್ರಾಂತ ಬಾಗಲಕೋಟೆ ಜಿಲ್ಲಾ ಬಾದಾಮಿ ಘಟಕದಿಂದ 350 ಸಸಿಗಳನ್ನು ನೆಡುವ ಮೂಲಕ ಆಚರಿಸಲಾಯಿತು. ಭಾರತೀಯ ಕಿಸಾನ್ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಪುಟ್ಟಸ್ವಾಮಿಜೀ ಹಾಗೂ ಜಿಲ್ಲಾ ಯುವ ಪ್ರಮುಖ ಕಿರಣಕುಮಾರ ಕುಲಕರ್ಣಿ, ಬಾದಾಮಿ ಘಟಕದ ಅಧ್ಯಕ್ಷ ಎಸ್.ಎಸ್.ಪಾಟೀಲ, ಗದಗ ಜಿಲ್ಲಾ ಅಧ್ಯಕ್ಷ ಎಸ್.ಎನ್.ಪಾಟೀಲ, ನರಗುಂದ ತಾಲೂಕು ಘಟಕದ ಅಧ್ಯಕ್ಷ ನಾಗೇಶ ಅಪೋಜೀ ಉಪಸ್ಥಿತರಿದ್ದರು.

ವಸತಿ, ನಿವೇಶನ ರಹಿತರಿಗೆ ಅರ್ಜಿ ಆಹ್ವಾನ

ರನ್ನ ಬೆಳಗಲಿ: ಪಟ್ಟಣದ ಪಂಚಾಯತಿ ವಸತಿ ಹಾಗೂ ನಿವೇಶನ ರಹಿತರಿಗೆ ಅರ್ಜಿ ಆಹ್ವಾನಿಸಿದ್ದಾರೆ. ರಾಜೀವ್ ಗಾಂಧಿ ವಸತಿ ನಿಗಮ ಸೂಚನೆಯಂತೆ ಪ್ರಧಾನ ಮಂತ್ರಿ ಅವಾಸ್ ಯೋಜನೆ(ನಗರ)-2.0 ಅಡಿಯಲ್ಲಿ ಬೆಳಗಲಿ ಪಟ್ಟಣದ ವ್ಯಾಪ್ತಿಯಲ್ಲಿ ವಸತಿ ಸೌಲಭ್ಯ ಕಲ್ಪಿಸುವ ಸಲುವಾಗಿ ವಸತಿ ರಹಿತ ಹಾಗೂ ನಿವೇಶನ ರಹಿತರ ಸಮೀಕ್ಷೆಗೆ ಅರ್ಜಿ ಸಲ್ಲಿಸಲು ಜೂ.30ರ ವರೆಗೆ ಕಾಲಾವಕಾಶ ನೀಡಿದೆ. ಈ ಯೋಜನೆಯಡಿ ಇದುವರೆಗೆ ಯಾವುದೇ ವಸತಿ ಯೋಜನೆಯಡಿ ಸೌಲಭ್ಯ ಪಡೆಯದೆ ಇರುವ ವಸತಿ ರಹಿತರು (ನಿವೇಶನ, ಹಳೆಯ ಕಚ್ಚಾ ಮನೆ ಹೊಂದಿರುವವರು) ಹಾಗೂ ನಿವೇಶನ ರಹಿತ ಮಹಿಳೆಯರು,ಹಿರಿಯ ನಾಗರೀಕರು, ವಿಧುರರು, ವಿಶಿಷ್ಟಚೇತನರು ಹಾಗೂ ಮಾಜಿ ಸೈನಿಕರು ಅರ್ಜಿ ಸಲ್ಲಿಸಬಹುದು.

ಅರ್ಜಿದಾರರು ಆಧಾರ ಕಾರ್ಡ್, ರೇಶನ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಮತದಾರರ ಗುರುತಿನ ಚೀಟಿ, ಬ್ಯಾಂಕ್ ಪಾಸ್‌ಬುಕ್, ಕುಟುಂಬ ಸದಸ್ಯರ ಆಧಾರ್ ಕಾರ್ಡ್, ನಿವೇಶನ, ಹಳೆಯ ಕಚ್ಚಾ ಮನೆ ದಾಖಲೆಗಳೊಂದಿಗೆ ಸ್ವತಃವಾಗಿ, ಗ್ರಾಹಕ ಸೇವಾ ಕೇಂದ್ರಗಳಲ್ಲಿ, ನಗರ ಸ್ಥಳೀಯ ಸಂಸ್ಥೆಗಳಲ್ಲಿ ಆನ್‌ಲೈನ್ ಮೂಲಕ ಜೂ.30ವರೆಗೆ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಪಟ್ಟಣ ಪಂಚಾಯತ ಕಚೇರಿ ವಸತಿ ಶಾಖೆ ಸಂಪರ್ಕಿಸಲು ಮುಖ್ಯಾಧಿಕಾರಿ ತಿಳಿಸಿದ್ದಾರೆ.



ಬಾಗಲಕೋಟೆ: ನೂತನ ಮುಖ್ಯಮಂತ್ರಿ ಡಿ.ಕೆ.ಶಿವುಕುಮಾರ ಅವರನ್ನು ಶಾಸಕ ಉಮೇಶ ಮೇಟಿ, ಮುಖಂಡ ಮಲ್ಲಿಕಾರ್ಜುನ ಚರಂತಿಮಠ, ಹೊಳಬಸು ಶೆಟ್ಟರ ಭೇಟಿ ಮಾಡಿ ಅಭಿನಂಧಿಸಿದರು.

ಜಿಲ್ಲೆಯಲ್ಲಿ 85 ಸಾವಿರ ಹೆಕ್ಟೇರ್ ಬಿತ್ತನೆ | ಪರ್ಯಾಯ ಬೆಳೆಗೆ ಸಲಹೆ

ಸಮರ್ಪಕ ಬಿತ್ತನೆ ಬೀಜ, ರಸಗೊಬ್ಬರಕ್ಕೆ ಕ್ರಮ

ಬಾಗಲಕೋಟೆ: ಪ್ರಸಕ್ತ ಮುಂಗಾರು ಹಂಗಾಮಿನಲ್ಲಿ ರೈತರಿಗೆ ಗುಣಮಟ್ಟದ ಬಿತ್ತನೆ ಬೀಜ ಹಾಗೂ ರಸಗೊಬ್ಬರಗಳು ಸಮರ್ಪಕವಾಗಿ ಲಭ್ಯವಾಗುವಂತೆ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಸಂಗಪ್ಪ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಮುಂಗಾರು ಹಂಗಾಮಿನ ಬಿತ್ತನೆ ಬೀಜ, ರಸಗೊಬ್ಬರ ಪೂರೈಕೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಜನವರಿಯಿಂದ ಜೂನ್‌ವರೆಗೆ ವಾಡಿಕೆಯಂತೆ 93.8 ಎಂಎಂ ಮಳೆ ಆಗಬೇಕಿತ್ತು. ಆದರೆ 101 ಎಂ.ಎಂ ಮಳೆ ಆಗಿರುತ್ತದೆ. ಬಾದಾಮಿ, ಮುಧೋಳ, ರಬಕವಿ-ಬನಹಟ್ಟಿ ತಾಲೂಕಿನಲ್ಲಿ ಹೆಚ್ಚಿಗೆ ಮಳೆಯಾಗಿದೆ. ಈಗಾಗಲೇ ಜಿಲ್ಲೆಯಲ್ಲಿ 85 ಸಾವಿರ ಹೆಕ್ಟೆರ್‌ನಷ್ಟು ಕಬ್ಬು ಹಾಗೂ ಇತರೆ ಬೆಳೆಗಳ ಬಿತ್ತನೆ ಆಗಿರುತ್ತದೆ. ಇನ್ನು ಬಿತ್ತನೆ ಮಾಡದ ರೈತರು ಸಮರ್ಕವಾಗಿ ಮಳೆ ಆಗುವವರೆಗೆ ಬಿತ್ತನೆ ಕಾರ್ಯ ಮಾಡಬಾರದೆಂದು ಹೇಳಿದರು.

ಜಿಲ್ಲೆಯಲ್ಲಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಕೊರತೆ ಇರುವುದಿಲ್ಲ, ಅಗತ್ಯ ದಾಸ್ತಾನು ಲಭ್ಯವಿರುತ್ತದೆ. ಮಾಹಿತಿ ಪಡೆದ ಜಿಲ್ಲಾಧಿಕಾರಿಗಳು ಆರ್.ಎಸ್.ಕೆಗಳಲ್ಲಿ ರೈತರಿಗೆ ವ್ಯವಸ್ಥಿತವಾಗಿ ವಿತರಣೆಗೆ ಕ್ರಮಕೈಗೊಳ್ಳಬೇಕು. ಯಾವ ಯಾವ ಬೆಳೆಗೆ ಯಾವ ಯಾವ ಗೊಬ್ಬರವನ್ನ ಎಷ್ಟು ಹಾಕಬೇಕು ಎಂಬುದರ ಬಗ್ಗೆ ಮಾಹಿತಿ ಬೋರ್ಡ ಹಾಕಿ ರೈತರಲ್ಲಿ ಜಾಗೃತಿ ಮೂಡಿಸಲು ಮುಂದಾಗಬೇಕು ಎಂದರು.

ಮಳೆ ವಿಳಂಬವಾದಲ್ಲಿ ಪರ್ಯಾಯ ಯೋಜನೆಯಲ್ಲಿ ತಿಳಿಸಿದ ಬೇಸಾಯ ಕ್ರಮಗಳನ್ನು ಅನುಸರಿಸಲು ತಿಳಿಸಿದರು. ಅಲ್ಲದೇ ತೋವಿವಿಯ ಸಹ ಸಂಶೋಧನಾ ನಿರ್ದೇಶಕ ಡಾ.ವಸಂತ ಗಾಣಗೇರ ಅವರು ವಿವಿಧ ಬೆಳೆಯ ತಳಿಗಳ ಬಗ್ಗೆ ಮಾಹಿತಿ ನೀಡಿದರು.

ರಸಗೊಬ್ಬರ ಸರಬರಾಜು ಮಾಡುತ್ತಿರುವ ಇಫ್ಕೋ, ಐಪಿಸಿ ಹಾಗೂ ಸಿಐಎಲ್ ಕಂಪನಿಗಳು ರೈಲ್ವೆ ಮೂಲಕ ಬಾಗಲಕೋಟೆಯಲ್ಲಿ ರಸಗೊಬ್ಬರ ಇಳಿಸದೇ ವಿಜಯಪುರದಲ್ಲಿ ಇಳಿಸುತ್ತಿರುವದರಿಂದ ಅಲ್ಲಿಂದ ತಾಲೂಕಾವಾರು ಸರಬರಾಜಿಗೆ ತೊಂದರೆಯಾಗಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದಾಗ ಬಾಗಲಕೋಟೆ ಮೂಲಕವೇ ವಿಜಯಪೂರಕ್ಕೆ ಗೂಡ್ಸ್ ರೈಲು ಹೋಗುತ್ತಿರುವದರಿಂದ ಬಾಗಲಕೋಟೆಯಲ್ಲಿ ಗೊಬ್ಬರ ಇಳಿಸಲು ಕ್ರಮಕೈಗೊಳ್ಳಲು ವಿವಿಧ ಕಂಪನಿ ಪ್ರತಿನಿಧಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು. ಈ ಸಂದರ್ಭದಲ್ಲಿ ಖೇತ ಬಚಾವೋ ಅಭಿಯಾನದ ಬಗ್ಗೆ ರೈತರಲ್ಲಿ ಅರಿವು ಮೂಡಿಸಲು ತಿಳಿಸಿದರು.

ಜಂಟಿ ಕೃಷಿ ನಿರ್ದೇಶಕ ಟಿ.ಎಸ್.ರುದ್ರೇಶಪ್ಪ, ತೋಟಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ರವೀಂದ್ರ ಹಕಾಟೆ, ರೇಷ್ಮೆ ಇಲಾಖೆಯ ಉಪನಿರ್ದೇಶಕ ಎಸ್.ಎಂ.ಕೋರೆ, ಜಮಖಂಡಿ ವಿಭಾಗದ ಕೃಷಿ ಉಪನಿರ್ದೇಶಕಿ ಮಂಜುಳಾ ಬಸವರೆಡ್ಡಿ, ಮಾರ್ಕೆಟಿಂಗ್ ಫೆಡರೇಷನ್ ಅಧಿಕಾರಿ ಸುಪ್ರಿಯಾ ಸೇರಿದಂತೆ ಆಯಾ ತಾಲೂಕಿನ ಕೃಷಿ ಅಧಿಕಾರಿಗಳು ಹಾಗೂ ರಸಗೊಬ್ಬರ ಸರಬರಾಜು ಕಂಪನಿಗಳ ಪ್ರತಿನಿಧಿಗಳು ಉಪಸ್ಥಿತರಿದ್ದರು.



3580 ಕ್ವಿಂಟಾಲ್ ಬಿತ್ತನೆ ಬೀಜ ಸರಬರಾಜು

ವಿವಿಧ ಬಿತ್ತನೆ ಬೀಜಗಳಿಗೆ 7128 ಕ್ವಿಂಟಲ್ ಬೇಡಿಕೆ ಇದ್ದು, ಈ ಪೈಕಿ 3580 ಕ್ವಿಂಟಲ್ ಬಿತ್ತನೆ ಬೀಜ ಸರಬರಾಜು ಆಗಿದೆ. 1319 ಕ್ವಿಂಟಲ್‌ನಷ್ಟು ವಿತರಣೆ ಮಾಡಲಾಗಿದೆ. 2261 ಕ್ವಿಂಟಲ್‌ನಷ್ಟು ಇದೆ. ವಿವಿಧ ರಸಗೊಬ್ಬರ ಸೇರಿ ಒಟ್ಟು 55711 ಮೆ.ಟನ್ ಬೇಡಿಕೆ ಪೈಕಿ 26463 ಮೆ.ಟನ್ ಹಂಚಿಕೆಯಾಗಿದೆ.

ಪರಿಸರ ಉಳಿಸಿದರೆ ದೇಶದ ಉಳಿವು

ಬಾಗಲಕೋಟೆ: ಭಾರತೀಯ ಜನತಾ ಪಾರ್ಟಿ ಹಾಗೂ ನಗರಸಭೆ ವತಿಯಿಂದ ನಗರದ ಹಳೆ ಪ್ರವಾಸಿ ಮಂದಿರದಲ್ಲಿ ವಿಶ್ವ ಪರಿಸರ ದಿನ ಆಚರಿಸಲಾಯಿತು. ಆವರಣದಲ್ಲಿ ಸಸಿ ನೆಡುವ ಮೂಲಕ ವಿಪ ಶಾಸಕ ಪಿ.ಎಚ್.ಪೂಜಾರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಜಾಗತಿಕ ತಾಪಮಾನದಿಂದ ಇಡೀ ವಿಶ್ವವೇ ನಲಗುತ್ತಿದೆ. ಆದ್ದರಿಂದ ಕಾಡುಗಳನ್ನು ಬೆಳಸಬೇಕು ಮತ್ತು ಉಳಿಸಬೇಕಾಗಿದೆ. ಪರಿಸರ ಉಳಿಸಿದರೆ ದೇಶ ಉಳಿಯಲಿದೆ. ಉಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಸ್ವಯಂ ಪ್ರೇರಣೆಯಿಂದ ಕೆಲಸ ಮಾಡಬೇಕಾಗಿದೆ ಎಂದರು.

ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ತಾಯಿ ಹೆಸರಿನಲ್ಲಿ ಒಂದು ಸಸಿ ನೆಟ್ಟು ಪೋಷಿಸಲು ಕರೆ ನೀಡಿರುವುದು ಆ ಹಿನ್ನಲೆಯಲ್ಲಿ ನಮ್ಮ ಸುತ್ತಮುತ್ತಲಿನ ವಾತಾವರಣ ಹಸಿರೀಕರಣ ಮಾಡಿದಾಗ ಮಾತ್ರ ಸಮೃದ್ಧ ನಾಡು ಕಟ್ಟಲು ಸಾಧ್ಯವಾಗುತ್ತದೆ ಎಂದರು.

ನಗರಸಭಾ ಮಾಜಿ ಅಧ್ಯಕ್ಷೆ ಸವಿತಾ ಲೆಂಕೆನ್ನವರ, ಶಿವು ಹಣಮಕನವರ, ನಿವೃತ್ತ ಪ್ರಾಧ್ಯಾಪಕ ಮಹಾಂತೇಶ ಸಂಗಮ, ಮದಕಟ್ಟಿ, ವಾರ್ಡ್ ಅಧ್ಯಕ್ಷ ಯಚ್ಚರೇಶ್ ಮಾಯಾಚಾರಿ, ರಾಜು ಶಿಂತ್ರೆ, ದತ್ತು ಶಹಾಪುರ, ಡಾ.ಶೇಖರ ಮಾನೆ, ಶಂಭುಗೌಡ ಪಾಟೀಲ್, ಚಂದ್ರಕಾಂತ ಕೇಸನೂರ, ರಾಜು ಚಿತ್ತವಾಡಗಿ, ಯಲ್ಲಪ್ಪ ಅಂಬಿಗೇರ, ಕುಮಾರ ಗಿರಿಜಾ, ಅಪ್ಪಣ್ಣ ಲೆಂಕೆನ್ನವರ, ಮಲ್ಲಿಕಾರ್ಜುನ ಸುರಪುರ, ಶಾಂತಾಬಾಯಿ ಗೋಣಿ, ಶೈಲು ಅಂಗಡಿ, ರಾಜು ಗೌಳಿ, ರಾಜು ಶ್ರೀರಾಮ, ನಗರಸಭೆ ಅಧಿಕಾರಿಗಳಾದ ಸತೀಶ ಖಜಿಡೋಣಿ, ಖಾಜಿ ಇದ್ದರು.





ಗಲಗಲಿ: ಇಲ್ಲಿನ ಅರವಿಂದೊ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಅರವಿಂದ ನರಗುಂದ ಸೇರಿದಂತೆ ಶಿಕ್ಷಕಿಯರು ಮಕ್ಕಳು ಪಾಲ್ಗೊಂಡಿದ್ದರು.

ರಾಜ್ಯದಲ್ಲಿ 2028ಕ್ಕೆ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ

ಬಾಗಲಕೋಟೆ: ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಅಭಿವೃದ್ಧಿ ಶೂನ್ಯದಿಂದ ಜನ ಬೇಸತ್ತು ಹೋಗಿದ್ದಾರೆ. 2028ಕ್ಕೆ ರಾಜ್ಯದಲ್ಲಿ ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿದೆ ಎಂದು ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ ಹೇಳಿದರು.

ಭಾರತೀಯ ಜನತಾ ಪಕ್ಷ ಬಾಗಲಕೋಟೆ ಮತಕ್ಷೇತ್ರದಿಂದ ಮುಚಖಂಡಿಯ ಗೌರಿಶಂಕರ ಕಲ್ಯಾಣ ಮಂಟಪದಲ್ಲಿ ಶನಿವಾರ ಹಮ್ಮಿಕೊಂಡ ಪಂಡಿತ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026ರ ಅಂಗವಾಗಿ ಮತಕ್ಷೇತ್ರದ ಗ್ರಾಮೀಣ ಹಾಗೂ ನಗರ ಮಂಡಲಗಳ ಎರಡು ದಿನದ ಪ್ರಶಿಕ್ಷಣ ವರ್ಗಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ಸರ್ವಾಂಗೀಣ ಅಭಿವೃದ್ಧಿಯೇ ಭಾರತೀಯ ಜನತಾ ಪಕ್ಷದ ಜನ್ಮವಾಗಿದ್ದು, ಪಕ್ಷಕ್ಕೆ ರಾಷ್ಟ್ರಭಕ್ತಿ ಹಾಗೂ 'ದೇಶ ಮೊದಲು' ಎಂಬ ಧ್ಯೇಯೋದ್ದೇಶಗಳೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಮುಂದೆ ಬರುವ 2028ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷ ಜಯಗಳಿಸಲಿದ್ದು, ರಾಜ್ಯದಲ್ಲಿ ಸರ್ಕಾರ ರಚಿಸಲಿದೆ ಎಂದರು.

ವಿಪ ಶಾಸಕ ಪಿ.ಎಚ್.ಪೂಜಾರ ಮಾತನಾಡಿ, ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಾಗಲಕೋಟೆ ಜಿಲ್ಲೆಯ ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಗೆಲ್ಲಲಿದೆ, ಕಾರ್ಯಕರ್ತರು ಪಕ್ಷದ ತತ್ವಗಳನ್ನು, ಬಿಜೆಪಿ ಸರ್ಕಾರದ ಸಾಧನೆಗಳನ್ನು ಜನರಿಗೆ ತಲುಪಿಸುವಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಾಜಿ ಶಾಸಕ ಡಾ.ವೀರಣ್ಣ ಚರಂತಿಮಠ ಮಾತನಾಡಿ, ಪಕ್ಷದ ಸೈದ್ಧಾಂತಿಕ ಮೌಲ್ಯಗಳು, ಸಂಘಟನಾ ಚಾತುರ್ಯ ಹಾಗೂ ರಾಷ್ಟ್ರೀಯ ಚಿಂತನೆಗಳನ್ನು ತಳಮಟ್ಟದ ಕಾರ್ಯಕರ್ತರಿಗೆ ಮನವರಿಕೆ ಮಾಡಿಕೊಡುವ ನಿಟ್ಟಿನಲ್ಲಿ ಪ್ರಶಿಕ್ಷಣ ವರ್ಗಗಳು ಅತ್ಯಂತ ಮಹತ್ವದ ಪಾತ್ರವಹಿಸುತ್ತವೆ. ಏಕಾತ್ಮ ಮಾನವತಾವಾದ ಪಂಡಿತ್ ದೀನದಯಾಳ್ ಉಪಾಧ್ಯಾಯ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ಪಕ್ಷ ಬಲಿಷ್ಠವಾಗಿ ಸಂಘಟಿಸಲು ಈ ತರಬೇತಿ ಪ್ರೇರಣೆಯಾಗಲಿದೆ ಎಂದರು.

ಹನಮಂತ ನಿರಾಣಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ರಾಜು ನಾಯ್ಕರ ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ.ಟಿ.ಉಪಾಧ್ಯ, ರಾಜು ಮುದೇನೂರ, ರಾಜು ರೇವಣಕರ್, ಎಸ್ಸಿ ಮೋರ್ಚಾ ಜಿಲ್ಲಾಧ್ಯಕ್ಷ ಮುತ್ತಣ್ಣ ಬೇಣ್ಣೂರ, ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ಭಾಗಿರಥಿ ಪಾಟೀಲ, ಲಕ್ಷ್ಮೀ ನಾರಾಯಣ ಕಾಸಟ್, ಸತ್ಯನಾರಾಯಣ ಹೆಮಾದ್ರಿ, ನಗರ ಮಂಡಲ ಅದ್ಯಕ್ಷ ಬಸವರಾಜ ಹುನಗುಂದ, ಗ್ರಾಮೀಣ ಮಂಡಲ ಅಧ್ಯಕ್ಷ ಸುರೇಶ ಕೋಣ್ಣೂರ, ಪ್ರಶಿಕ್ಷಣ ವರ್ಗದ ಸಂಚಾಲಕರಾದ ಶಂಕರ ಹುನೂರ, ಮಲ್ಲೇಶ ವಿಜಾಪುರ, ಕಲ್ಲಪ್ಪ ಭಗವತಿ ಇದ್ದರು.



ಪರಿಸರ ಸಂರಕ್ಷಣೆ ನಮ್ಮ ಜವಾಬ್ದಾರಿ: ಬಸವರಾಜ ಖೋತ

ಬೀಳಗಿ: ಪರಿಸರ ಸಂರಕ್ಷಣೆಗಾಗಿ ಜಾಗೃತಿ ಮೂಡಿಸುವುದು ಮತ್ತು ಪರಿಸರದ ಮೇಲಿನ ಮಾನವ ಹಸ್ತಕ್ಷೇಪ ಕಡಿಮೆ ಮಾಡುವುದು ಈ ದಿನದ ಪ್ರಮುಖ ಉದ್ದೇಶವಾಗಿದೆ. ಈ ಆಚರಣೆ ಉದ್ದೇಶ ಏನೆಂದರೆ ಪ್ರತಿಯೊಬ್ಬರೂ ಸಸಿಯನ್ನು ನೆಟ್ಟು ಸಂರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಶ್ರೀ ರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಚೇರ್ಮನ್ ಬಸವರಾಜ ಖೋತ ಹೇಳಿದರು.

ತಾಲೂಕಿನ ಕುಂದರಗಿ ಗ್ರಾಮದ ಶ್ರೀರಾಮಲಿಂಗೇಶ್ವರ ವಿದ್ಯಾವರ್ಧಕ ಸಂಘದ ಮಾತೋಶ್ರೀ ಬಸಲಿಂಗಮ್ಮ ಎನ್ ಖೋತ ಅಂತಾರಾಷ್ಟ್ರೀಯ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಸಸಿನೆಟ್ಟು ನೀರುಣಿಸುವ ಮೂಲಕ ಚಾಲನೆ ನೀಡಿ ಮಾತನಾಡಿ, ಭೂಮಿ ಹಸಿರಾದರೆ ನಮ್ಮ ಉಸಿರು ಸರಳವಾದಂತೆ ಎಂಬುದನ್ನು ಅರ್ಥೈಸಿಕೊಳ್ಳಬೇಕು ಎಂದರು.

ಪ್ರಾಚಾರ್ಯ ರಾಜೇಂದ್ರ ಕೆ.ಮಾತನಾಡಿ, ಖ್ಯಾತ ಪರಿಸರವಾದಿಗಳಾದ ಸುಂದರಲಾಲ್ ಬಹುಗುಣ, ಮೇಧಾ ಪಾಟ್ಕರ, ಸಾಲುಮರದ ತಿಮ್ಮಕ್ಕ ಭೂಮಿಯಲ್ಲಿ ಮರಗಳನ್ನು ನೆಡುವುದರಲ್ಲಿ ಯಶಸ್ವಿಯಾದವರು ಅವರೆಲ್ಲರೂ ನಮಗೆ ಆದರ್ಶಪ್ರಾಯರು ಎಂದು ಹೇಳಿದರು.

ಶಿಕ್ಷಕರಾದ ವಿಜಯ ಆಟಗಾರ, ನಾಗರತ್ನ ಚಿಕ್ಕಣ್ಣಿ, ಹನಮಂತ ಬಿಸನಾಳ, ಮುತ್ತು ಗಾಣಗೇರ, ಪ್ರೇಮಾ ಬಾಚಕ, ಶೈಲಾ ಮಂಟೂರ, ಕ್ಲರ್ಕ ಸಿದ್ದು ಚರಂತಿಮಠ ಸೇರಿದಂತೆ ಶಾಲೆಯ ಮಕ್ಕಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.



ಪರಿಸರ ರಕ್ಷಣೆ ನಮ್ಮ ಹೊಣೆ

ಹುನಗುಂದ: ಪರಿಸರ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ. ಮಕ್ಕಳೆಲ್ಲರೂ ಮರ ನೆಡುವ ಮನಸ್ಸು ಮಾಡಬೇಕು. ಅಂದಾಗ ಮಾತ್ರ ನಾವು ಈ ಭೂಮಿಯನ್ನು ಅಪಾಯದಿಂದ ರಕ್ಷಿಸಲು ಸಾಧ್ಯ. ಹಸಿರೇ ನಮ್ಮ ಉಸಿರು ಎಂದು ಪ್ರಿನ್ಸಿಪಾಲ್ ಈ. ಸಾಯಿಕೃಷ್ಣ ಹೇಳಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹುನಗುಂದ ಎಸ್.ಎಸ್.ಕಡಪಟ್ಟಿ ಇಂಟರ್‌ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಕರಾದ ಶಿಬಿನ್ ಹಾಗೂ ಸುಬ್ರತೋ ದಾಸ್ ಮಾತನಾಡಿದರು. ವಿದ್ಯಾರ್ಥಿಗಳಾದ ಸನ್ನಿಶಿ, ಸಂಜನಾ, ಸಾಚಿ, ಚಿರಂಜೀವಿ ದ್ರುವ ಮಾತನಾಡಿದರು. ಶಿಕ್ಷಕಿ ಕಾವ್ಯ, ಶಿಕ್ಷಕ ಕುಮಾರ ಹಿರೇಮಠ ಇದ್ದರು. ಪರಿಸರ ರಕ್ಷಣೆ ಮಾಡುವ ಕುರಿತು ಮಕ್ಕಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.



ವಿಶ್ವ ಪರಿಸರ ದಿನಾಚರಣೆ

ಜಮಖಂಡಿ: ಸ್ಥಳೀಯ ಸರ್ಕಾರಿ ಬಾಲಕಿಯರ ಪ.ಪೂ ಮಹಾವಿದ್ಯಾಲಯದ ಪ್ರೌಢಶಾಲಾ ವಿಭಾಗದಲ್ಲಿ ಸಾಲು ಮರದ ತಿಮ್ಮಕ್ಕ ಇಕೋ ಕ್ಲಬ್ ಸಹಯೋಗದೊಂದಿಗೆ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಎಸ್‌ಡಿಎಂಸಿ ಅಧ್ಯಕ್ಷ ನಂದು ಕನಕೇರಿ, ರೋಟರಿ ಸಂಸ್ಥೆ ರಾಮತೀರ್ಥದ ಅಧ್ಯಕ್ಷ ರಾಜಶೇಖರ ವಾರದ, ಸಿದ್ರಾಮ ನಾವಿ, ವಿಜಯ ಕಟಗಿ ಹಾಗೂ ಸ್ತ್ರೀ ಶಕ್ತಿ ಸ್ವಸಹಾಯ ಸಂಘಗಳ ಪದಾಧಿಕಾರಿಗಳು ಶಾಲಾ ಆವರಣದಲ್ಲಿ ಗಿಡ ನೆಟ್ಟು ಪರಿಸರ ಸಂರಕ್ಷಣೆಯ ಮಹತ್ವ ಸಾರಿದರು. ಶಿಕ್ಷಕ ರಮೇಶ ವಡ್ಡರ ಅಧ್ಯಕ್ಷತೆ ವಹಿಸಿದ್ದರು. ಉಪಪ್ರಾಚಾರ್ಯ ಮಹಾಂತೇಶ ನರಸನಗೌಡ್ರ ಮಾತನಾಡಿದರು. ಇಕೋ ಕ್ಲಬ್ ಸಂಯೋಜಕ ಶಿಕ್ಷಕ ರಮೇಶ ದಾನಗೌಡ ನಿರೂಪಿಸಿದರು. ಶ್ರೀನಾಥ ಮದುರಖಂಡಿ ಸ್ವಾಗತಿಸಿದರು. ಮಹಾಲಿಂಗ ಹುದ್ದಾರ ವಂದಿಸಿದರು.



ಮಕ್ಕಳಿಗೆ ಬ್ಯಾಗ್, ಕಿಟ್ ವಿತರಣೆ



ಬೀಳಗಿ: ತಾಲೂಕಿನ ಕೊಂತಿಕಲ್ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬೆಂಗಳೂರಿನ ರೋಹನ್ ಕೇರ್ ಫೌಂಡೇಶನ್ ವತಿಯಿಂದ ಶಾಲಾ ಮಕ್ಕಳಿಗೆ 65 ಬ್ಯಾಗ ಮತ್ತು ಕಿಟ್ ವಿತರಣೆ ಮಾಡಲಾಯಿತು.

ಶಿಕ್ಷಕ ಗಿರೀಶ ಸೊಲ್ಲಾಪುರ ಮಾತನಾಡಿ, ಆಸ್ಟ್ರೇಲಿಯಾದಲ್ಲಿರುವ ಮಂಜುನಾಥ ಅವರು ಬೆಂಗಳೂರು ನಿವಾಸಿಯಾಗಿದ್ದು, ಸರ್ಕಾರಿ ಶಾಲೆಯ ಮಕ್ಕಳ ಬಗ್ಗೆ ಅಪಾರವಾದ ಕಾಳಜಿ ಹೊಂದಿದ್ದಾರೆ. ಸಾಕಷ್ಟು ಹಣವಿದ್ದರೂ ಕೊಡುವ ಗುಣ ಮುಖ್ಯ. ಅಂಥವರ ಪಟ್ಟಿಯಲ್ಲಿ ರೋಹನ್ ಕೇರ್ ಫೌಂಡೇಶನ್ ಸಂಸ್ಥಾಪಕ ಮಂಜುನಾಥ್ ಅವರು ಅಗ್ರಸ್ಥಾನದಲ್ಲಿ ನಿಲ್ಲುತ್ತಾರೆ. ಇಂಥವರ ಸಂತತಿ ಹೆಚ್ಚಾಗಲಿ ಎಂದು ಹೇಳಿದರು. ಮುಖ್ಯ ಶಿಕ್ಷಕ ಜೆ.ಎಂ.ಬಂಧುಗೋಳ ಮಾತನಾಡಿ, ಸರ್ಕಾರಿ ಶಾಲೆ ಅಭಿವೃದ್ಧಿ ಹೊಂದಲು ಕೇವಲ ಸರ್ಕಾರ ಮಾತ್ರವಲ್ಲದೆ ಕೊಡುಗೈ ದಾನಿಗಳೂ ಕಾರಣೀಕರ್ತರಾಗಿದ್ದಾರೆ. ಕೊಪ್ಪ (ಎಸ್.ಕೆ.) ಸರ್ಕಾರಿ ಶಾಲೆಯ ಶಿಕ್ಷಕ ಚಂದ್ರು ವೈ.ಎ ಅವರ ಶಾಲೆಗೆ ಶಾಲಾ ಬ್ಯಾಗ್ ಕಿಟ್‌ಗಳು ಬಂದಿವೆ. ಇಂತಹ ಸೌಲಭ್ಯ ಉಪಯೋಗಿಸಿಕೊಂಡು ಮಕ್ಕಳು ಸಾಧನೆ ಮಾಡಬೇಕು ಎಂದರು. ಎಸ್‌ಡಿಎಂಸಿ ಅಧ್ಯಕ್ಷ ರಾಜು ಚಲವಾದಿ, ಉಪಾಧ್ಯಕ್ಷೆ ಕವಿತಾ ಸಣ್ಣಕ್ಕಿ, ಸಮೂಹ ಸಂಪನ್ಮೂಲ ವ್ಯಕ್ತಿ ವಿಠ್ಠಲ ಕುರಿ, ಬಿಆರ್‌ಪಿ ಬಸವರಾಜ ರಾಠೋಡ, ನಿಂಗಪ್ಪ ಹೊಕ್ರಾಣಿ, ನಿಂಗಪ್ಪ ಚಲವಾದಿ, ವಿಠ್ಠಲ ಚಲವಾದಿ, ಕಲ್ಲಪ್ಪ ಕಡಪಟ್ಟಿ, ಶಿಕ್ಷಕ ಡಿ.ಬಿ.ಬಸರಿಗಿಡದ ಇದ್ದರು.

ಪರಿಸರ ರಕ್ಷಣೆ ನಮ್ಮ ಜವಾಬ್ದಾರಿ

ಕಮತಗಿ: ಪರಿಸರ ರಕ್ಷಣೆ ಮಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ ಎಂದು ಪಟ್ಟಣ ಪಂಚಾಯತಿ ಅಧ್ಯಕ್ಷ ಬಸವರಾಜ ಕುಂಬಳಾವತಿ ಹೇಳಿದರು.

ಪಟ್ಟಣದ ಜಾಲಿ ಓಣಿಯ ಅಂಗನವಾಡಿ ಕೇಂದ್ರದ ಹಿಂಭಾಗ ಮತ್ತು ಘನ ತ್ಯಾಜ್ಯ ವಿಲೇವಾರಿ ಘಟಕದ ಆವರಣದಲ್ಲಿ ಶುಕ್ರವಾರ ಪಟ್ಟಣ ಪಂಚಾಯಿತಿಯಿಂದ ವಿಶ್ವ ಪರಿಸರ ದಿನಾಚರಣೆ ಸಸಿ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನಾವು ಇಂದು ಪರಿಸರ ರಕ್ಷಿಸಿದರೆ ಮಾತ್ರ. ನಾವು ಸುಂದರವಾದ ಬದುಕನ್ನು ಕಟ್ಟಿಕೊಳ್ಳಲು ಮತ್ತು ಆರೋಗ್ಯಕರವಾದ ಪರಿಸರದ ವಾತಾವರಣ ನೀಡಲು ಸಾಧ್ಯವಾಗುತ್ತದೆ ಎಂದರು.

ಪಪಂ ಸದಸ್ಯರಾದ ದೇವಿಪ್ರಸಾದ ನಿಂಬಲಗುಂದಿ, ಲಕ್ಷ್ಮಣ ಮಾದರ, ಪಪಂ ಮುಖ್ಯಾಕಾರಿ ಎಫ್.ಎನ್.ಹುಲ್ಲಿಕೇರಿ, ರಮೇಶ ಪದಕಿ, ಪ್ರಭು ಹುಲಮನಿಗೌಡ್ರ, ರವಿ ವಂದಗನೂರ, ರವಿ ಚಿತ್ತರಗಿ ಮತ್ತು ಮುಖಂಡ ಲಕ್ಷ್ಮಣ ದ್ಯಾವಣ್ಣವರ, ಭಾಷಾ ಇಳಕಲ್ ಉಪಸ್ಥಿತರಿದ್ದರು.



ಜನರಲ್ಲಿ ಪರಿಸರದ ಕಾಳಜಿ ಇರಲಿ



ಗುಳೇದಗುಡ್ಡ: ಪರಿಸರ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ನಮ್ಮ ಸುತ್ತಮುತ್ತಲಿನ ಪರಸರ ಸ್ವಚ್ಛವಾಗಿರಿಸುವುದ, ಗಿಡಮರಳನ್ನು ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಶಾಲಾ ಪರಿಸರದಲ್ಲಿ ಸಸಿಗಳನ್ನು ನೆಡುವುದರ ಮೂಲಕ ಮಕ್ಕಳಲ್ಲಿ ಪರಿಸರದ ಬಗ್ಗೆ ಅರಿವು ಮೂಡಿಸುತ್ತಿರುವುದು ಶ್ಲಾಘನೀಯ ಎಂದು ಉಪವಲಯ ಅರಣ್ಯಾಧಿಕಾರಿ ರವಿ ಚವ್ಹಾಣ ಹೇಳಿದರು.

ಸಮೀಪದ ಪರ್ವತಿ ಸರ್ಕಾರಿ ಆರ್‌ಎಂಎಸ್ ಪ್ರೌಢ ಶಾಲೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಅರಣ್ಯ ಇಲಾಖೆ ಸಹಭಾಗಿತ್ವದಲ್ಲಿ ವಿಶ್ವ ಪರಿಸರ ದಿನಾಚರಣೆಯ ಶಾಲೆಯಲ್ಲಿ ಗಿಡ ನಾಟಿ ಮಾಡುವುದರ ಮೂಲಕ ಯೋಜನೆಯ ಜಿಲ್ಲಾ ನಿರ್ದೇಶಕ ಚನ್ನಕೇಶವ, ಉಪವಲಯ ಅರಣ್ಯಾಧಿಕಾರಿ ರವಿಕುಮಾರ ಚವ್ಹಾಣ ಚಾಲನೆ ನೀಡಿದರು. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಚನ್ನಕೇಶವ ಮಾತನಾಡಿ, ಪರಿಸರ ಕಾರ್ಯಕ್ರಮ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮವಾಗಿದ್ದು, ಎಲ್ಲರಲ್ಲಿ ಪರಿಸರದ ಬಗ್ಗೆ ಕಾಳಜಿ ಮೂಡಿದರೆ ಉತ್ತಮ ಹಾಗೂ ಸ್ವಚ್ಛ ವಾತಾವರಣ ನಿರ್ಮಾಣವಾಗುವ ಜೊತೆಗೆ ಕಾಲಕಾಲಕ್ಕೆ ಮಳೆ ಆಗುತ್ತದೆ ಕೃಷಿಗೆ ಸಹಕಾರಿಯಾಗುತ್ತದೆ ಎಂದರು. ಮುಖ್ಯೋಪಾಧ್ಯಾಯ ಎಚ್.ಕೆ.ಗುಡೂರ, ಸುಶೀಲಾ ಗೌಡರ, ಇಕೋಕ್ಲಬ್‌ನ ಎಸ್.ಎಸ್.ಕಾರಜೋಳ, ಎಸ್.ಜಿ.ಮೇಟಿ, ಎಂ.ಎಚ್.ಮುಲ್ಲಾ, ಗುರುಸಿದ್ದಪ್ಪ ಹಡಪದ, ಸಿಕಂದರ ಸುರಕೋಡ, ಮಷಾಕ್, ಬಿ.ಜಿ.ಮೇದಾರ ಇದ್ದರು.

ಪ್ರತಿಯೊಬ್ಬರೂ ಗಿಡಗಳನ್ನು ನೆಡಿ

ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ವಿಧಾನ ಪರಿಷತ್ ಸದಸ್ಯ ಎಚ್.ಆರ್.ನಿರಾಣಿ, ಜಿಪಂ ಮಾಜಿ ಸದಸ್ಯ ಬಸವರಾಜ ಖೋತ, ಟಿಎಪಿಸಿಎಂಎಸ್ ಅಧ್ಯಕ್ಷ ಎಂ.ಬಿ.ಕಂಬಿ ಸಸಿನೆಟ್ಟು ನೀರುಣಿಸಿದರು.

ವಿಧಾನ ಪರಿಷತ್ ಸದಸ್ಯ ಎಚ್.ಆರ್.ನಿರಾಣಿ ಮಾತನಾಡಿ, ನಮ್ಮ ಮುಂದಿನ ಪೀಳಿಗೆಗೆ ಶುದ್ಧ ಗಾಳಿ, ನೀರು ಮತ್ತು ಜೀವವೈವಿಧ್ಯತೆಯಿಂದ ಕೂಡಿದ ಆರೋಗ್ಯಕರ ಭೂಮಿಯನ್ನು ಉಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಪ್ರತಿಯೊಬ್ಬರೂ ಗಿಡಗಳನ್ನು ನೆಡುವುದು, ನೀರನ್ನು ಸಂರಕ್ಷಿಸುವುದು ಮತ್ತು ಪ್ಲಾಸ್ಟಿಕ್ ಬಳಕೆ ತ್ಯಜಿಸುವ ಮೂಲಕ ಈ ಆಚರಣೆ ಸಾರ್ಥಕಗೊಳಿಸಬೇಕು ಎಂದು ಹೇಳಿದರು. ಎಸ್‌ಡಿಎಂಸಿ ಅಧ್ಯಕ್ಷ ಯಮನಪ್ಪ ಹಡಪದ, ಮುಖಂಡರಾದ ಅಶೋಕ ನಾಯಿಕ, ಮಲ್ಲಪ್ಪ ಮೇಟಿ, ಮುತ್ತಣ್ಣ ಅಂಗಡಿ, ರುದ್ರಪ್ಪ ಮೇಟಿ, ಹೊಳಬಸು ಬಾಳಶೆಟ್ಟಿ, ವೀರೇಂದ್ರ ಶೀಲವಂತ, ಬಸು ಛಬ್ಬಿ, ಪೀರಸಾಬ ನದಾಫ, ಸದಸ್ಯರಾದ ಮಲ್ಲಯ್ಯ ಕಂಬಿ, ಮಲ್ಲಪ್ಪ ಇಂಗುನ್ನವರ, ಎಸ್‌ಡಿಎಂಸಿ ಮಾಜಿ ಅಧ್ಯಕ್ಷ ಈರಯ್ಯ ಕೊತ್ತಲಮಠ, ಲಕ್ಷ್ಮಣ ಬಂಡಿವಡ್ಡರ, ಶಿಕ್ಷಕರಾದ ಮಂಜಿಬಾಯಿ ಡಿ, ರಾಜಲಕ್ಷ್ಮಿ ದೇಸಾಯಿ, ಅನಿತಾ ಪತ್ತಾರ, ಎ.ಎನ್.ಹೊಸಗೌಡರ ಪಾಲ್ಗೊಂಡಿದ್ದರು.



ಕಿರುಸುದ್ದಿ

ವಿಶೇಷ ದಾಖಲಾತಿ ಆಂದೋಲನಕ್ಕೆ ಚಾಲನೆ



◆ದೇವರ ಹಿಪ್ಪರಗಿ: ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಡಿ, ಹೆಣ್ಣು ಮಕ್ಕಳು ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಉದ್ದೇಶದಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯದ ವತಿಯಿಂದ ಶಾಲೆ ಕಡೆ ನನ್ನ ನಡೆ, ಶಿಕ್ಷಣ ನನ್ನ ಹಕ್ಕು'' ಘೋಷಣೆಯಡಿ ವಿಶೇಷ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಲಾಯಿತು. ದಾಖಲಾತಿ ಆಂದೋಲನ ಕುರಿತು ಶಾಲಾ ಮುಖ್ಯೋಪಾಧ್ಯಾಯ ಚಂದ್ರಶೇಖರ ಪೂಜಾರಿ ಮಾತನಾಡಿ ಸರ್ಕಾರಿ ಶಾಲೆಗಳಲ್ಲಿ ದೊರೆಯುವ ವಿವಿಧ ಸವಲತ್ತುಗಳ ಬಗ್ಗೆ ಪೋಷಕರಲ್ಲಿ ಜಾಗೃತಿ ಮೂಡಬೇಕು ಎಂದು ಹೇಳಿದ ಅವರು ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಶೂ ಮತ್ತು ಸಾಕ್ಸ್ ವಿತರಣೆ. ಎಲ್ಲಾ ಮಕ್ಕಳಿಗೂ ವಿದ್ಯಾರ್ಥಿವೇತನ ಸೌಲಭ್ಯ ಅಕ್ಷರ ದಾಸೋಹ (ಬಿಸಿಯೂಟ), ಕ್ಷೀರಭಾಗ್ಯ ಯೋಜನೆ ಹಾಗೂ ಪ್ರಸಕ್ತ ಸಾಲಿನಿಂದ 1ನೇ ತರಗತಿಯಿಂದಲೇ ಆಂಗ್ಲ ಭಾಷಾ ಕಲಿಕೆ. ಹೆಣ್ಣು ಮಕ್ಕಳ ಹಾಜರಾತಿಗೆ ವಿಶೇಷ ಪ್ರೋತ್ಸಾಹ ಧನದ ಕುರಿತು ಮಾಹಿತಿ ನೀಡಿದರು. ಪಟ್ಟಣದ ಪ್ರಮುಖ ಬೀದಿಗಳಲ್ಲಿ ಶಾಲಾ ಮಕ್ಕಳು ಹಾಗೂ ಶಿಕ್ಷಕರು ಜಂಟಿಯಾಗಿ ಜಾಗೃತಿ ಜಾಥಾ ನಡೆಸಿದರು. ಮಕ್ಕಳ ಶಿಕ್ಷಣದ ಮಹತ್ವವನ್ನು ಸಾರುವ ಬ್ಯಾನರ್ ಹಿಡಿದು ಹೊರಟ ಜಾಥಾಕ್ಕೆ ಸಾರ್ವಜನಿಕರಿಂದ ಉತ್ತಮ ಸ್ಪಂದನೆ ವ್ಯಕ್ತವಾಯಿತು. ದೈಹಿಕ ಶಿಕ್ಷಕ ಜಿ.ಎಸ್.ಬಿರಾದಾರ ಹಾಗೂ ಸಹ ಶಿಕ್ಷಕರಾದ ಇಂದುಮತಿ ಕೋಟಿನ, ಎಸ್.ಎಸ್.ನವಲಿ ವಿದ್ಯಾರ್ಥಿಗಳು ಪಾಲ್ಗೊಂಡು ಯಶಸ್ವಿಗೊಳಿಸಿದರು.

ಇಂದು ಪ್ರತಿಭಾ ಪುರಸ್ಕಾರ

◆ವಿಜಯಪುರ: ರಾಜ್ಯ ಹಡಪದ ನೌಕರರ ಸಂಘ ಬೆಂಗಳೂರು ಹಾಗೂ ವಿಜಯಪುರ ಜಿಲ್ಲಾ ಘಟಕದ ನೇತೃತ್ವದಲ್ಲಿ ಹಡಪದ ಸಮಾಜದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಶೇ.90ರಷ್ಟು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಜೂ.7ರಂದು ಬೆಳಗ್ಗೆ 10 ಗಂಟೆಗೆ ನಗರದ ಇಟ್ಟಂಗಿಹಾಳ ರಸ್ತೆಯ ವೇದ ಅಕಾಡೆಮಿಯಲ್ಲಿ ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಸಮಾರಂಭ ಜರುಗಲಿದೆ. ಸಮಾರಂಭದ ಸಾನ್ನಿಧ್ಯವನ್ನು ಸುಕ್ಷೇತ್ರ ತಂಗಡಗಿ ಹಡಪದ ಅಪ್ಪಣ್ಣ ದೇವರ ಮಹಾಸಂಸ್ಥಾನಮಠದ ಜಗದ್ಗುರು ಅನ್ನದಾನಿ ಭಾರತಿ ಅಪ್ಪಣ್ಣ ಮಹಾಸ್ವಾಮೀಜಿ ವಹಿಸುವರು, ಗಂಗಾವತಿ ವಿಧಾನಸಭಾ ಕ್ಷೇತ್ರದ ಶಾಸಕ ಆಕಾಂಕ್ಷಿ ಸಂಗಮೇಶ ಸುಗ್ರೀವ ಉದ್ಘಾಟಿಸುವರು, ವಿಜಯಪುರ ವೇದ ಮತ್ತು ಎಕ್ಸಲೆಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಡಾ.ಶಿವಾನಂದ ಕೆಲೂರ ಉಪಸ್ಥಿತರಿರುವರು, ಕೆಎಸ್‌ಎಚ್‌ಇಎ ರಾಜ್ಯಾಧ್ಯಕ್ಷ ಪ್ರಕಾಶ ಆರ್.ಎಚ್. ಅಧ್ಯಕ್ಷತೆ ವಹಿಸುವರು, ಮೈಸೂರು ವಿಭಾಗದ ಅಬಕಾರಿ ಜಂಟಿ ಆಯುಕ್ತ ಬಸವರಾಜ ಹಡಪದ, ಕುಕನೂರು ತಹಶೀಲ್ದಾರ ಬಸವರಾಜ ಬೆಣ್ಣೆಶಿರೂರ, ಹಡಪದ ಅಪ್ಪಣ್ಣ ಸಮಾಜದ ರಾಜ್ಯಾಧ್ಯಕ್ಷ ದೇವೇಂದ್ರ ಹಡಪದ, ವೇದ ಸಮೂಹ ಶಿಕ್ಷಣ ಸಂಸ್ಥೆಗಳು ಉಪಾಧ್ಯಕ್ಷ ದಯಾನಂದ ಕೆಲೂರ, ಬೆಳಗಾವಿ ಲೋಕಾಯುಕ್ತ ಕಚೇರಿಯ ಪಿಐ ಗುರುರಾಜ ಮೈಲಾರ, ವಿಜಯಪುರ ಬಿಎಲ್‌ಡಿ ಎಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಡಾ.ಸುರೇಶ ಕಟ್ಟಿಮನಿ, ಬಾಗಲಕೋಟ ಮತ್ತು ವಿಜಯಪುರ ಕೆಎಂಎಫ್ ಸಹಾಯಕ ವ್ಯವಸ್ಥಾಪಕ ಅಭಿಯಂತರ ಶ್ರೀಶೈಲ ಹಡಪದ, ಸಂಘದ ಗೌರವಾಧ್ಯಕ್ಷ ಕರ್ನಲ್ ಸಂಗಪ್ಪ ಹಡಪದ, ರಾಜ್ಯ ಸಂಘಟನಾ ಕಾರ್ಯದರ್ಶಿ ಶಿವಾನಂದ ನಾವಿ, ರಾಮದುರ್ಗದ ನಿವೃತ್ತ ಶಿಕ್ಷಕ ಮಹಾಂತಪ್ಪ ಧನ್ನೂರ, ಅರುಣ ನಾವಿ, ಸಂತೋಷ ಹಡಪದ ಸೇರಿದಂತೆ ಎಲ್ಲ ಜಿಲ್ಲಾಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ ಎಂದು ವಿಜಯಪುರ ಕೆಎಸ್‌ಎಚ್‌ಇಎ ಜಿಲ್ಲಾಧ್ಯಕ್ಷ ದಶರಥ ನಾವಿ ತಿಳಿಸಿದ್ದಾರೆ.

ಪರಿಸರ ದಿನಾಚರಣೆ ಇಂದು

◆ಮುದ್ದೇಬಿಹಾಳ: ಹಸಿರು ತೋರಣ ಗೆಳೆಯರ ಬಳಗ, ಅರಣ್ಯ ಇಲಾಖೆ ಹಾಗೂ ಪುರಸಭೆ ಮುದ್ದೇಬಿಹಾಳ ಇವುಗಳ ಸಂಯುಕ್ತ ಆಶ್ರಯದಲ್ಲಿ ಜೂ.7ರಂದು ಭಾನುವಾರ ಬೆಳಗ್ಗೆ 8 ಗಂಟೆಗೆ ಹುಡ್ಕೋ ಬಡಾವಣೆಯ ಹಸಿರು ತೋರಣ ಉದ್ಯಾನವನದಲ್ಲಿ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ. ಮತಕ್ಷೇತ್ರದ ಶಾಸಕರಾದ ಸಿ.ಎಸ್.ನಾಡಗೌಡ್ರ ಅಪ್ಪಾಜಿ, ಆಲಮಟ್ಟಿ ಕೃಷ್ಣಾ ಜಲ ಭಾಗ್ಯ ನಿಗಮದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಶಿವಾನಂದ ಜಿಡ್ಡಿಮನಿ, ತಾಲೂಕು ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಬಸನಗೌಡ ಬಿರಾದಾರ, ಸಾಮಾಜಿಕ ವಲಯ ಅರಣ್ಯಾಧಿಕಾರಿ ಗಿರೀಶ್ ಆಲಕುಡೆ, ಕೆಬಿಜೆನ್ನೆಲ್ ವಲಯ ಅರಣ್ಯಾಧಿಕಾರಿ ಯಶವಂತ ರಾಠೋಡ, ಪುರಸಭೆ ಮುಖ್ಯಾಧಿಕಾರಿ ಮಲ್ಲನಗೌಡ ಬಿರಾದಾರ ಪಾಲ್ಗೊಳ್ಳುವರು. ಗಿಡಗಳನ್ನು ನೆಡುವಿಕೆ, ಪರಿಸರ ರಕ್ಷಕ ಪ್ರಶಸ್ತಿ ವಿತರಣೆ ಹಾಗೂ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಯಲಿದೆ. ಹಸಿರು ತೋರಣ ಬಳಗದ ಅಧ್ಯಕ್ಷ ಅಮರೇಶ ಗೂಳಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಬಳಗದ ಕಾರ್ಯದರ್ಶಿ ಬಸವರಾಜ ಬಿಜ್ಜೂರ ತಿಳಿಸಿದ್ದಾರೆ.



ನಾಲತವಾಡ: ಪಟ್ಟಣದ ಶಾಸಕರ ಮಾದರಿಯ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಗಿಡ ನೆಡುವ ಮೂಲಕ ಆಚರಿಸಿದರು. ಮುಖ್ಯ ಗುರುಮಾತೆ ಎಸ್.ಎಲ್.ಗೊಳಸಂಗಿ, ಜಕಾತಿ, ಶಿಲ್ಪಾ ಗಂಗನಗೌಡರ, ಬಸಮ್ಮ ಪಟ್ಟಣಶೆಟ್ಟಿ, ಕಳ್ಳಿಗುಡ್ಡ ಮಕ್ಕಳು ಇದ್ದರು.

150 ಗಿಡ ನೆಡುವ ಕಾರ್ಯಕ್ರಮ

◆ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣ ಪಂಚಾಯತಿ ನೇತೃತ್ವದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 150 ಸಸಿಗಳನ್ನು ನಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಪಟ್ಟಣದ ವಾರ್ಡ್ ನಂ.9ರಲ್ಲಿ ಬರುವ ಉದ್ಯಾನವನ, ಪೊಲೀಸ್ ಠಾಣೆ ಆವರಣ, ಹೊಸ ಬಸ್ ನಿಲ್ದಾಣದ ಸುತ್ತಮುತ್ತ ಹಾಗೂ ಆರೋಗ್ಯ ಇಲಾಖೆಯ ಕಚೇರಿ ಆವರಣ ಸೇರಿ ಸುಮಾರು 150 ವಿವಿಧ ಪ್ರಭೇದಗಳ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. ಪಪಂ ಮುಖ್ಯಾಧಿಕಾರಿ ನಿಖಿಲೇಶ ಪಾಟೀಲ ಮಾತನಾಡಿ, ಹಸಿರೇ ಉಸಿರು ಪ್ರತಿಯೊಬ್ಬರು ಕನಿಷ್ಠ ಒಂದು ಗಿಡವನ್ನಾದರೂ ನೆಟ್ಟು ಪೋಷಣೆ ಮಾಡಿದಲ್ಲಿ ಪರಿಸರ ಸಂರಕ್ಷಣೆ ಮಾಡಿದಂತಾಗುತ್ತದೆ. ಮನಗೂಳಿ ಪಟ್ಟಣವನ್ನು ಹಸಿರು ಪಟ್ಟಣವನ್ನಾಗಿ ಮಾಡುವುದು ನಮ್ಮೆಲ್ಲರ ಜವಾಬ್ದಾರಿ, ಇಂದು ನೆಟ್ಟಿರುವ ಗಿಡಗಳನ್ನು ಸಂರಕ್ಷಿಸುವ ಹೊಣೆ ಪಂಚಾಯಿತಿಯದ್ದು ಎಂದು ಹೇಳಿದರು. ಪಪಂ ಉಪಾಧ್ಯಕ್ಷ ಶೇಖಪ್ಪಗೌಡ ಬಿರಾದಾರ, ಸದಸ್ಯರಾದ ಡಾ.ರಾಮಚಂದ್ರ ಪತ್ತಾರ, ಭಾಗ್ಯರಾಜ ಸೊನ್ನದ, ಪ್ರದೀಪ ಜಾನಕರ, ಶಂಕರ ಶಿವಮತ, ಪ್ರಕಾಶ ಮನಗೂಳಿ, ಸಲೀಂ ಮಕಾಂದಾರ, ರಾಜಶೇಖರ್ ವಾಲೀಕಾರ ಮುಖಂಡರಾದ ತಿಪ್ಪಣ್ಣ ಕ್ಯಾತನವರ, ವಿಜಯಕುಮಾರ ರಜಪೂತ, ರಮೇಶ್ ತೊರವಿ, ಸಚಿನಗೌಡ ಪಾಟೀಲ, ಪ್ರವೀಣ ಕರಿಶಂಕರಿ , ಹನಮಂತ ಬಿರಳದಿನ್ನಿ, ಸಂತೋಷ್ ಜಾಂಬರೆ, ಯಲ್ಲಪ್ಪ ಉಮನಾಬಾದಿ, ಹಾಗೂ ಪಪಂ ಸಿಬ್ಬಂದಿ, ಹಾಗೂ ವಿವಿಧ ಇಲಾಖೆಯ ಅಧಿಕಾರಿಗಳು ಪಾಲ್ಗೊಂಡಿದರು.



ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣ ಪಂಚಾಯತಿ ನೇತೃತ್ವದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ 150 ಸಸಿಗಳನ್ನು ನಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಿಸಲಾಯಿತು. ಪಟ್ಟಣದ ವಾರ್ಡ್ ನಂ.9ರಲ್ಲಿ ಬರುವ ಉದ್ಯಾನವನ, ಪೊಲೀಸ್ ಠಾಣೆ ಆವರಣ, ಹೊಸ ಬಸ್ ನಿಲ್ದಾಣದ ಸುತ್ತಮುತ್ತ ಸೇರಿ ಸುಮಾರು 150 ವಿವಿಧ ಪ್ರಭೇದಗಳ ಗಿಡಗಳನ್ನು ನೆಡಲಾಯಿತು.

ಸಿದ್ಧೇಶ್ವರ ಸ್ವಾಮೀಜಿಗಳ ಜ್ಞಾನಯೋಗಾಶ್ರಮಕ್ಕೆ ಭೇಟಿ | ಶ್ರೀಗಳ ಅಭಿಮತ

ಎಂ.ಬಿ.ಪಾಟೀಲರ ಕಾರ್ಯ ಶ್ಲಾಘನೀಯ

◆ವಿಜಯಪುರ: ನೂತನ ಸಂಪುಟದಲ್ಲಿ ಸಚಿವರಾದ ನಂತರ ಇದೇ ಮೊದಲ ಬಾರಿಗೆ ಶನಿವಾರ ತವರು ಜಿಲ್ಲೆಗೆ ಆಗಮಿಸಿದ ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರು ನೇರವಾಗಿ ನಗರದ ಸಿದ್ಧೇಶ್ವರ ಸ್ವಾಮೀಜಿಗಳ ಜ್ಞಾನಯೋಗಾಶ್ರಮಕ್ಕೆ ತೆರಳಿ ಪೂಜೆ ಸಲ್ಲಿಸಿ ಶ್ರೀಗಳಿಂದ ಆಶೀರ್ವಾದ ಪಡೆದರು.



ವೇದಾಂತ ಕೇಸರಿ ಮಲ್ಲಿಕಾರ್ಜುನ ಸ್ವಾಮೀಜಿಗಳ ಗದ್ದುಗೆಗೆ ಪೂಜೆ ಸಲ್ಲಿಸಿದ ಸಚಿವರನ್ನು ಆಶ್ರಮದ ಅಧ್ಯಕ್ಷ ಬಸವಲಿಂಗಸ್ವಾಮೀಜಿಯವರು ಸಿದ್ಧೇಶ್ವರ ಸ್ವಾಮೀಜಿಯವರು ರಚಿಸಿದ ಮೊದಲ ಕೃತಿ ವಚನ ಚಿಂತನ ನೀಡಿ ಆಶೀರ್ವದಿಸಿದರು.

ಈ ವೇಳೆ ಮಾತನಾಡಿದ ಬಸವಲಿಂಗ ಸ್ವಾಮೀಜಿ, 21 ವರ್ಷಗಳ ಹಿಂದೆ ಸಿದ್ಧೇಶ್ವರ ಸ್ವಾಮೀಜಿಗಳು ಇದೇ ದಿನದಂದು 9 ಜನರಿಗೆ ಸನ್ಯಾಸ ದೀಕ್ಷೆ ನೀಡಿದ್ದರು. ಇದೇ ದಿನ ಸಚಿವರು ಆಶ್ರಮಕ್ಕೆ ಭೇಟಿ ನೀಡಿದ ಯೋಗಾಯೋಗ ಬಂದಿದೆ. ನನ್ನ ಜೀವಮಾನದಲ್ಲಿ ಬೇಸಿಗೆಯಲ್ಲೂ ಹಳ್ಳಗಳು ತುಂಬಿ ಹರಿಯುತ್ತಿರುವುದನ್ನು ಕಂಡು ಸಂತಸವಾಗಿದೆ. ಇದಕ್ಕೆ ಸಚಿವ ಎಂ.ಬಿ. ಪಾಟೀಲ ಅವರು ಕೈಗೊಂಡಿರುವ ನೀರಾವರಿ ಯೋಜನೆಗಳು ಕಾರಣವಾಗಿವೆ. ಕೊಟ್ಟ ಖಾತೆಯನ್ನು ಸಮರ್ಥವಾಗಿ ನಿಭಾಯಿಸುವ ವ್ಯಕ್ತಿತ್ವ ಅವರಾಗಿದ್ದು, ಇನ್ನೂ ಉನ್ನತ ಸ್ಥಾನಕ್ಕೇರಲಿ ಎಂದು ಆಶೀರ್ವದಿಸಿದರು.

ಸಚಿವ ಎಂ.ಬಿ.ಪಾಟೀಲ ಮಾತನಾಡಿ, ನನ್ನ ಜೀವನವಿಡೀ ಸಿದ್ಧೇಶ್ವರ ಸ್ವಾಮೀಜಿಗಳ ಆಶಯದಂತೆ ಕೆಲಸ ಮಾಡುತ್ತೇನೆ. ಸಿದ್ಧೇಶ್ವರ ಸ್ವಾಮೀಜಿ ಆಶೀರ್ವಾದದಿಂದ ಜನಸೇವೆ, ಅಭಿವೃದ್ಧಿ ಕಾರ್ಯ ಕೈಗೊಳ್ಳಲಾಗಿದೆ. ಅವರ ಕಿವಿಮಾತಿನಂತೆ ಚಾಚೂ ತಪ್ಪದೆ ಪಾಲಿಸುತ್ತ ರಾಜ್ಯದ ಅಭಿವೃದ್ಧಿಗೆ ಸಮಯ ಮೀಸಲಿಟ್ಟಿದ್ದೇನೆ. ಶ್ರೀಗಳ ಆಶೀರ್ವಾದ ನನಗೆ ಕಾಯಕ ಮಾಡಲು ಸ್ಫೂರ್ತಿಯಾಗಿದ್ದು, ಈಗ ಮಾಡುತ್ತಿರುವ ಕೆಲಸ ಕಾರ್ಯಗಳ ಬಗ್ಗೆ ನನಗೆ ಸಂತೃಪ್ತಿ ಇದೆ. ಜ್ಞಾನಯೋಗಿ ಸಿದ್ಧೇಶ್ವರ ಮಹಾಸ್ವಾಮಿಗಳವರು ನಡೆದಾಡಿದ ಪುಣ್ಯ ಭೂಮಿಗೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿ ಗುರುಗಳ ಆಶೀರ್ವಾದವನ್ನು ಪಡೆದು ಧನ್ಯನಾಗಿದ್ದೇನೆ. ಬೆಂಗಳೂರಿನಿಂದ ಬಂದು ನೇರವಾಗಿ ಆಶ್ರಮಕ್ಕೆ ಮೊದಲ ಭೇಟಿ ನೀಡಿದ್ದೇನೆ. ಶ್ರೀಗಳು ಮತ್ತು ಬಸವಾದಿ ಶರಣರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ್ದೇನೆ. ಜೀವನಪೂರ್ತಿ ಶ್ರೀಗಳ ಆಶಯದಂತೆ ನಡೆಯುತ್ತೇನೆ ಎಂದು ಹೇಳಿದರು.

ಅಮೃತಾನಂದ ಸ್ವಾಮೀಜಿ ಬಾಲಗಾಂವ, ಹರ್ಷಾನಂದ ಸ್ವಾಮೀಜಿ, ಪ್ರಸಾದ ಸ್ವಾಮೀಜಿ, ಜಗನು ಮಹಾರಾಜ, ವಿಡಿಎ ಅಧ್ಯಕ್ಷ ಡಾ. ಗಂಗಾಧರ ಸಂಬಣ್ಣಿ, ಮುಖಂಡರಾದ ಸಂಗು ಸಜ್ಜನ, ವಿ.ಸಿ.ನಾಗಠಾಣ, ಮಲ್ಲಿಕಾರ್ಜುನ ಹಳ್ಳದ, ಪಿ.ಎಸ್.ಬಿರಾದಾರ, ಘನಶ್ಯಾಮ ತೋಶ್ನಿವಾಲ, ಶಿವಾನಂದ ಸಂಖ, ವಿಠ್ಠಲಗೌಡ ಬಿರಾದಾರ ಇದ್ದರು.

ಬಿಎಲ್‌ಡಿಇ ಸಂಸ್ಥೆಯ ಬಂಗಾರಮ್ಮ ಸಜ್ಜನ ಆವರಣದಲ್ಲಿರುವ ಸಂಸ್ಥೆಯ ಪ್ರಾತಃ ಸ್ಮರಣೀಯರಾದ ದಿ.ಬಿ.ಎಂ.ಪಾಟೀಲ, ಡಾ.ಫ.ಗು.ಹಳಕಟ್ಟಿ ಸಮಾಧಿ, ಬಂಥನಾಳ ಶಿವಯೋಗಿಗಳ ದೇವಸ್ಥಾನ ಹಾಗೂ 770 ಅಮರಗಣಂಗಳ ಲಿಂಗದ ಗುಡಿಗೆ ತೆರಳಿ ನಮನ ಸಲ್ಲಿಸಿದರು. ಬಿಎಲ್‌ಡಿಇ ಸಂಸ್ಥೆಯ ನಿರ್ದೇಶಕ ಸಂಗು ಸಜ್ಜನ, ಡೀಮ್ಡ್ ವಿವಿ ಸಮಕುಲಾಧಿಪತಿ ಡಾ.ವೈ.ಎಂ.ಜಯರಾಜ, ರಜಿಸ್ಟ್ರಾರ್ ಡಾ.ಆರ್.ವಿ. ಕುಲಕರ್ಣಿ, ಪ್ರಾಚಾರ್ಯೆ ತೇಜಸ್ವಿನಿ ವಲ್ಲಭ ಇದ್ದರು.

ಪರಿಸರ ನಾಶದಿಂದ ಮಾನವನಿಗೆ ಸಂಕಷ್ಟ

◆ಚಡಚಣ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಲೋಣಿ ಬಿ.ಕೆ.ಗ್ರಾಮದ ಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆ ಹಾಗೂ ಮಾಹೇರ್ ಆಶ್ರಮ ಸಂಯುಕ್ತ ಆಶ್ರಯದಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮ ಆಚರಿಸಲಾಯಿತು.

ಮಾಹೇರ್ ಆಶ್ರಮದ ಸಹೋದರಿ ಜಯಶ್ರೀ ಮಾತನಾಡಿ, ಪರಿಸರ ಸಂರಕ್ಷಣೆಯ ಮಹತ್ವದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಇಡೀ ಬ್ರಹ್ಮಾಂಡದಲ್ಲಿ ಗಿಡಮರಗಳು, ಶುದ್ಧ ವಾಯು, ನೀರು ಹಾಗೂ ಜೀವಸಂಕುಲಕ್ಕೆ ಅಗತ್ಯವಾದ ಎಲ್ಲಾ ಸಂಪನ್ಮೂಲಗಳನ್ನು ಹೊಂದಿರುವ ಏಕೈಕ ಗ್ರಹ ನಮ್ಮ ಪೃಥ್ವಿ ಆದ್ದರಿಂದ ಈ ಭೂಮಿಯನ್ನು ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಪರಿಸರ ನಾಶವಾದರೆ ಮಾನವ ಜೀವನವೂ ಸಂಕಷ್ಟಕ್ಕೆ ಸಿಲುಕಲಿದೆ ಎಂದು ಎಚ್ಚರಿಸಿದರು. ಪರಿಸರ ಹಾನಿಯಿಂದ ಉಂಟಾಗುತ್ತಿರುವ ಹವಾಮಾನ ವೈಪರೀತ್ಯಗಳ ಕುರಿತು ಮಾಹಿತಿ ನೀಡಿ, ಪ್ರಕೃತಿಯ ಸಂರಕ್ಷಣೆಯಲ್ಲಿ ಯುವಜನರ ಪಾತ್ರ ಮಹತ್ವದ್ದಾಗಿದೆ ಎಂದು ಹೇಳಿದರು.

ಪ್ರೌಢಶಾಲೆಯ ಶಿಕ್ಷಕರಾದ ಎಸ್.ಎಸ್. ಸೋನ್ನಗಿ ಮಾತನಾಡಿ, ಪ್ಲಾಸ್ಟಿಕ್ ತ್ಯಜಿಸಿ -ಪರಿಸರ ಉಳಿಸಿ ಎಂಬ ಘೋಷವಾಕ್ಯದಡಿ ಮಾತನಾಡಿ, ಪ್ಲಾಸ್ಟಿಕ್ ಬಳಕೆಯಿಂದ ಪರಿಸರದ ಮೇಲೆ ಉಂಟಾಗುವ ದುಷ್ಪರಿಣಾಮಗಳ ಕುರಿತು ಅರಿವು ಮೂಡಿಸಿದರು. ಪ್ಲಾಸ್ಟಿಕ್ ತ್ಯಜಿಸುವ ಮೂಲಕ ಮಾಲಿನ್ಯ ನಿಯಂತ್ರಣ ಮಾಡುವದರೊಂದಿಗೆ ಪರಿಸರ ಸಂರಕ್ಷಣೆಗೆ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಕರೆ ನೀಡಿದರು.

ಪ್ರಾಥಮಿಕ ಶಾಲೆಯ ಶಿಕ್ಷಕರಾದ ಎಸ್.ಸಿ.ಗದ್ಯಾಳ ಅವರು ನೀರಿನ ಮಹತ್ವವನ್ನು ವಿವರಿಸಿ, ನೀರು ಪ್ರಕೃತಿಯ ಅಮೂಲ್ಯ ಕೊಡುಗೆಯಾಗಿದ್ದು, ಅದರ ಸಂರಕ್ಷಣೆ ನಮ್ಮೆಲ್ಲರ ಹೊಣೆಗಾರಿಕೆ ಎಂದು ಹೇಳಿದರು.

ಪ್ರೌಢಶಾಲೆಯ ವಿಜ್ಞಾನ ಶಿಕ್ಷಕರಾದ ಜಿ.ಬಿ.ಕೋರಿ ಅವರು ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರತಿಯೊಬ್ಬ ವಿದ್ಯಾರ್ಥಿಯೂ ತಮ್ಮ ತಾಯಿಯ ಹೆಸರಿನಲ್ಲಿ ಕನಿಷ್ಠ ಒಂದು ಗಿಡ ನೆಟ್ಟು ಅದರ ಪೋಷಣೆ ಮಾಡುವ ಸಂಕಲ್ಪ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.



ಖಾದ್ರಿ ವಿರುದ್ಧ ಕಾನೂನು ಕ್ರಮಕ್ಕೆ ಮನವಿ

◆ವಿಜಯಪುರ: ಸಮಾಜದಲ್ಲಿ ಕೋಮುಗಲಭೆ ಸೃಷ್ಟಿಸಲು ಯತ್ನಿಸುತ್ತಿರುವ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಮೇಲೆ ಪ್ರಕರಣ ದಾಖಲಿಸಿ, ಕಟ್ಟುನಿಟ್ಟಿನ ಕಾನೂನು ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮಹಾನಗರ ಪಾಲಿಕೆ ಸದಸ್ಯರು ಹಾಗೂ ಹಿಂದೂ ಮುಖಂಡರು ಶನಿವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಅವರಿಗೆ ಮನವಿಪತ್ರ ಸಲ್ಲಿಸಿದರು.

ನಗರದ ವಕೀಲ ಸೈಯದ್ ಆಸೀಫ್ ಉಲ್ಲಾ ಸೈಯದ್ ಖಾದರ್ ಭಾಷಾ ಖಾದ್ರಿ ಎಂಬಾತನ ವಿರುದ್ಧ ದಲಿತ ಮಹಿಳೆ ಮೇಲೆ ಹಲ್ಲೆ ಹಾಗೂ ಕಿರುಕುಳ ನೀಡಿದ ಪ್ರಕರಣ, ಕೋರ್ಟ ಆವರಣದಲ್ಲಿಯೇ ಪೊಲೀಸ್ ಅಧಿಕಾರಿ ಮೇಲೆ ಹಲ್ಲೆ ನಡೆಸಿದ ಪ್ರಕರಣ, ಮಹಾನಗರ ಪಾಲಿಕೆ ಸದಸ್ಯೆಯ ಪತಿಯ ಹತ್ಯೆ ಪ್ರಕರಣ ಸೇರಿದಂತೆ ಹಲವು ಪ್ರಕರಣಗಳಲ್ಲಿ ಭಾಗಿಯಾಗಿ ರೌಡಿಶೀಟರ್ ನಿಂದಾಗಿ ಗಡಿಪಾರು ಶಿಕ್ಷೆಗೆ ಒಳಗಾಗಿದ್ದ. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲೇ ಗೃಹ ಸಚಿವರು ಲಿಖಿತ ಉತ್ತರ ನೀಡಿದ್ದಾರೆ. ಹೀಗೆ ಹತ್ತಾರು ಆರೋಪಗಳನ್ನು ಎದುರಿಸುತ್ತಿರುವ ಕ್ರಿಮಿನಲ್ ಹಿನ್ನೆಲೆ ಹೊಂದಿರುವ, ಹಾಗೂ ಈ ಹಿಂದೆ ಜಿಲ್ಲೆಯ ಸಚಿವರಿಗೆ, ಶಾಸಕರಿಗೆ, ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಅತ್ಯಂತ ಕೆಟ್ಟ ಪದಗಳನ್ನು ಬಳಸಿದ್ದಾನೆ. ಅಲ್ಲದೆ, ಅಮಾಯಕರಿಗೆ ಬಂದೂಕು ತೋರಿಸಿ ಹೆದರಿಸುತ್ತಿದ್ದಾನೆ. ಸರ್ಕಾರಿ ವಕೀಲ ಎಂಬ ಪರಿಜ್ಞಾನ ಇಲ್ಲದೆ, ಅನೇಕ ಭಾರಿ ಪತ್ರಿಕಾಗೋಷ್ಠಿ ನಡೆಸಿ, ಮಾತನಾಡುತ್ತ, ಜನಪ್ರತಿನಿಧಿಯಾದ ಬಸನಗೌಡ ಪಾಟೀಲ ಯತ್ನಾಳರ ಬಗ್ಗೆ ಅತ್ಯಂತ ಕೀಳು ಮಟ್ಟದ ಮತ್ತು ಅವಾಚ್ಯ ಶಬ್ದಗಳನ್ನು ಬಳಸಿ ಏಕವಚನದಲ್ಲಿ ಅವರ ಬಗ್ಗೆ ಅವಹೇಳನಕಾರಿ ಮಾತನಾಡಿದ್ದು, ಇದರಿಂದ ರಾಜ್ಯಮಟ್ಟದಲ್ಲಿ ಬಸನಗೌಡ ಪಾಟೀಲ ಯತ್ನಾಳರ ಹೆಸರಿಗೆ ಕಳಂಕವನ್ನು ಸತತವಾಗಿ ತರುತ್ತಿದ್ದು, ರಾಜ್ಯಾದ್ಯಂತ ಲಕ್ಷಾಂತರ ಹಿಂದೂ ಅಭಿಮಾನಿಗಳು, ಕಾರ್ಯಕರ್ತರು, ಹಿತೈಷಿಗಳು ಅಲ್ಲದೆ, ಸಮಾಜ ಬಾಂಧವರು ರೊಚ್ಚಿಗೆದ್ದು ಇವರ ವಿರುದ್ಧ ಕ್ರಮ ಜರುಗಿಸಬೇಕು. ಇಲ್ಲವಾದರೆ ವಿಜಯಪುರ ನಗರಕ್ಕೆ ಎಲ್ಲ ಕಡೆಯಿಂದ ಆಗಮಿಸಿ ದೊಡ್ಡ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸುತ್ತಿದ್ದಾರೆ.

ಪಾಲಿಕೆ ಸದಸ್ಯರಾದ ಪ್ರೇಮಾನಂದ ಬಿರಾದಾರ, ಕಿರಣ ಪಾಟೀಲ, ರಾಜಶೇಖರ ಕುರಿಯವರ, ಜವಾಹರ ಗೋಸಾವಿ, ಬಿಜೆಪಿ ನಗರ ಮಂಡಲ ಮಾಜಿ ಅಧ್ಯಕ್ಷ ಶಂಕರ ಹೂಗಾರ, ರಾಷ್ಟ್ರೀಯ ಬಂಜಾರ ಪರಿಷತ್ ರಾಜ್ಯಾಧ್ಯಕ್ಷ ಪ್ರಕಾಶ ಚವ್ಹಾಣ, ಯುವ ಮುಖಂಡ ಸಂತೋಷ ಕವಟೇಕರ್, ವಿಜಯ ಚವ್ಹಾಣ ಇದ್ದರು.



ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ

◆ಮುದ್ದೇಬಿಹಾಳ: ಬಾಸ್ ಶಾಲೆಯ ಯಶಸ್ವಿ ಎರಡನೇ ವರ್ಷದ ಬಿಎಎಸ್ ಟ್ಯಾಲೆಂಟ್ ಅವಾರ್ಡ ಪರೀಕ್ಷೆಯಲ್ಲಿ ಸಾವಿರಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸಿ ತಮ್ಮ ಪ್ರತಿಭೆ ಪ್ರದರ್ಶಿಸಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ಮಹಾಂತಗೌಡ ಬಿರಾದಾರ ಹೇಳಿದರು.

ಪಟ್ಟಣದ ಆಲಮಟ್ಟಿ ರಸ್ತೆಯಲ್ಲಿರುವ ಬಿಎಎಸ್ ಅಂತರಾಷ್ಟ್ರೀಯ ಶಾಲೆಯಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಬಿಎಎಸ್ ಟ್ಯಾಲೆಂಟ್ ಅವಾರ್ಡ್ ಪರೀಕ್ಷೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು. ಈ ಬಾರಿಯ ಪರೀಕ್ಷೆಗೆ ನೊಂದಾಯಿಸಿಕೊಂಡಿದ್ದ 1080 ವಿದ್ಯಾರ್ಥಿಗಳ ಪೈಕಿ ತರಗತಿಯೊಂದಕ್ಕೆ 40 ವಿದ್ಯಾರ್ಥಿಗಳಂತೆ 240 ವಿದ್ಯಾರ್ಥಿಗಳು ಅಂಕಗಳಿಕೆ ಆಧಾರ ಮೇಲೆ ಆಯ್ಕೆ ಮಾಡಲಾಗಿದೆ ಎಂದು ತಿಳಿಸಿದರು.

ಸಂಸ್ಥೆಯ ಆಡಳಿತಾಧಿಕಾರಿ ಪ್ರಭುಗೌಡ ಬಿರಾದಾರ ಮಾತನಾಡಿ, ಬಿಎಎಸ್ ಶಾಲೆಯೂ ಎಂಟು ಎಕರೆ ವಿಸ್ತೀರ್ಣದಲ್ಲಿ ಅತ್ಯಾಧುನಿಕ ಸಕಲ ಸೌಲಭ್ಯಗಳನ್ನು ಹೊಂದಿದೆ. ಕಳೆದ ವರ್ಷ 700ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರೆ ಈ ವರ್ಷ ಸಂಖ್ಯೆ ನೂರು ಹೆಚ್ಚಾಗಿದೆ. ಕಲಿಕೆಗೆ ಪೂರಕವಾದ ವಾತವರಣ ಜೊತೆಗೆ ಗುಣಮಟ್ಟದ ಶಿಕ್ಷಣ ನೀಡುವದು ಸಂಸ್ಥೆಯ ಆದ್ಯತೆಯಾಗಿದೆ ಎಂದರು.



ರಾಯಚೂರಿನ ನವೋದಯ ತರಬೇತಿದಾರ ಅಮರೇಶ ಪಾಟೀಲ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳಿಗೆ ತಾಳ್ಮೆ ಸವಾಲುಗಳನ್ನು ಎದುರಿಸುವ ಸಾಮರ್ಥ್ಯವನ್ನು ಪಾಲಕರು ಬೆಳೆಸಬೇಕಿದೆ. ಪಾಲಕರು ಒತ್ತಡಕ್ಕೊಳಗಾಗದೇ ಮಕ್ಕಳನ್ನು ಬೆಳೆಸಬೇಕು. ಅಂಕಗಳಿಕೆಗಷ್ಟೇ ಮಕ್ಕಳನ್ನು ಸೀಮಿತಗೊಳಿಸದೇ ಇನ್ನುಳಿದ ಚಟುವಟಿಕೆಗಳಲ್ಲೂ ಕೂಡಾ ಸಕ್ರಿಯರನ್ನಾಗಿ ಭಾಗವಹಿಸಲು ಅವಕಾಶ ನೀಡಬೇಕು ಎಂದರು.

ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಎಂ.ಎಂ.ಬೆಳಗಲ್, ಸಂಸ್ಥೆಯ ನಿರ್ದೇಶಕರಾದ ಗೀತಾ ಬಿರಾದಾರ, ಸುಮಂಗಲಾ ಬಿರಾದಾರ, ಮಾರ್ಗದರ್ಶಕ ಶಿವನಗೌಡ ಬಿರಾದಾರ, ಪ್ರಾಚಾರ್ಯೆ ರಶಿಕಾ ನಾಯಕ ಶಿಕ್ಷಕ ವಿನಯ ಪಾಟೀಲ, ರಾಜಮಾ ಕಂದಗಲ್ ಸೇರಿದಂತೆ ಶಿಕ್ಷಕರು, ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.


ಹಸಿರು ಮಾನವನ ಉಸಿರಾಗಲಿ

◆ಸಿಂದಗಿ: ಪ್ರಕೃತಿಯಲ್ಲಾಗುವ ವಿಕೋಪಕ್ಕೆ ಮುಖ್ಯಕಾರಣ ಮಾನವನ ಸ್ವಾರ್ಥ ಬದುಕು. ಇದು ಹೀಗೆ ಮುಂದುವರೆದರೆ ಪರಿಸರ ನಾಶವಾಗಿ ಜೀವಿಗಳ ಬದುಕು ಅಸ್ಥಿರವಾಗುತ್ತದೆ ಎಂದು ತಾಲೂಕಾ ಶಿಕ್ಷಣ ಪ್ರಸಾರಕ ಮಂಡಳಿಯ ನಿರ್ದೇಶಕ ಶಿವಪ್ಪಗೌಡ ಬಿರಾದಾರ ಹೇಳಿದರು.

ಪಟ್ಟಣದ ಎಚ್.ಜಿ.ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚಾರಣೆಯ ನಿಮಿತ್ತ ಸಸಿ ನೆಟ್ಟು ಮಾತನಾಡಿ, ಪ್ರತಿ ಗಿಡ-ಮರಗಳಿಂದ ಮಾನವನಿಗೆ ಒಂದಲ್ಲಾ ರೀತಿಯಲ್ಲಿ ಲಾಭವಿದೆ. ಆದರೆ ಮಾನವ ಅವುಗಳನ್ನು ನಾಶ ಮಾಡಿ ತನ್ನ ಸ್ವಾರ್ಥ ಬದುಕನ್ನು ಕಟ್ಟಿಕೊಳ್ಳುತ್ತಿದ್ದಾನೆ. ಗಿಡ ಮರಗಳನ್ನು ಜೋಪಾನ ಮಾಡಬೇಕು. ಹಸಿರು ಮಾನವನ ಉಸಿರಾಗಬೇಕು ಎಂದರು.

ಪ್ರಾಚಾರ್ಯ ಎ.ಆರ್.ಹೆಗ್ಗಣದೊಡ್ಡಿ ಮಾತನಾಡಿ, ಪರಿಸರದ ರಕ್ಷಣೆ ಮಾಡುವುದು ಅಂದೊಂದು ಸಾಮಾಜಿಕ ಸೇವೆಯಾಗಬೇಕು. ಆರೋಗ್ಯದ ಬದುಕು ನಮ್ಮದಾಗಬೇಕು ಎಂದರೆ ಪರಿಸರದ ಬಗ್ಗೆ ಕಾಳಜಿ ಬೇಕೆ ಬೇಕು ಎಂದರು.

ಸಂಸ್ಥೆಯ ನಿರ್ದೇಶಕ ಬಿ.ಜಿ.ನೆಲ್ಲಗಿ, ಉಪನ್ಯಾಸಕರಾದ ಎಸ್.ಎ.ಪಾಟೀಲ, ಎಂ.ಎನ್.ಅಜ್ಜಪ್ಪ, ಎಸ್.ಪಿ.ಬಿರಾದಾರ, ಎಫ್.ಎ.ಹಾಲಪ್ಪನವರ, ಮುಕ್ತಾಯಕ್ಕ ಕತ್ತಿ, ಎ.ಆರ್.ಸಿಂದಗಿಕರ, ಸಿದ್ದಲಿಂಗ ಕಿಣಗಿ, ಡಾ.ಶಾಂತುಲಾಲ ಚವ್ಹಾಣ, ಸತೀಶ ಬಸರಕೋಡ, ಎ.ಬಿ.ಪಾಟೀಲ, ಎಸ್.ಎಸ್.ಪಾಟೀಲ, ಜ್ಯೋತಿರ್ಲೇಖ



ಚೆನ್ನೂರ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪರಿಸರ ರಕ್ಷಣೆ ಜೀವನದ ಭಾಗವಾಗಲಿ



◆ವಿಜಯಪುರ: ಪರಿಸರ ನಾವು ರಕ್ಷಿಸಿದರೆ, ಅದು ನಮ್ಮನ್ನು ರಕ್ಷಿಸುತ್ತದೆ ಎಂದು ಚಿದಂಬರ ಸೇವಾ ಸಮಿತಿಯ ಅಧ್ಯಕ್ಷ ಲಕ್ಷ್ಮೀಕಾಂತ ಕುಲಕರ್ಣಿ ಹೇಳಿದರು.

ನಗರದ ಚಿದಂಬರೇಶ್ವರ ದೇವಸ್ಥಾನ ಹತ್ತಿರ ವಿಶ್ವ ಪರಿಸರ ದಿನ ನಿಮಿತ್ತ ಹಲವು ಸಸಿಗಳನ್ನು ನೆಟ್ಟು ಅವರು ಮಾತನಾಡಿದರು. ಪರಿಸರ ನಮಗೆ ಪ್ರಾಣವಾಯು, ಆಹಾರ ಎಲ್ಲವೂ ನೀಡಿದೆ, ಆದರೆ ನಾವು ಪ್ರತಿಯಾಗಿ ಪರಿಸರವನ್ನು ವಿನಾಶ ಮಾಡುತ್ತಿದ್ದೇವೆ. ಮಾಲಿನ್ಯಗೊಳಿಸುತ್ತಿದ್ದೇವೆ, ಹೀಗಾಗಿ ಪರಿಸರ ರಕ್ಷಣೆ ನಮ್ಮ ಜೀವನದ ಭಾಗವಾಗಬೇಕು ಎಂದರು.

ಯುವ ಧುರೀಣ ಪ್ರಕಾಶ ಅಕ್ಕಲಕೋಟ ಮಾತನಾಡಿ, ಪರಿಸರ ರಕ್ಷಣೆ ಕೇವಲ ಒಂದು ದಿನದ ಆಚರಣೆಯಾಗಬಾರದು, ಅನುದಿನವೂ ಪರಿಸರ ರಕ್ಷಣೆ ಬದ್ಧತೆಯಿಂದ ಮಾಡೋಣ ಎಂದರು. ವೇ.ಶಂಕರ ಭಟ್ ಅಗ್ನಿ ಹೋತ್ರಿ, ಮಹಾಲಕ್ಷ್ಮೀ ಬ್ಯಾಂಕ್ ನಿರ್ದೇಶಕ ವಿಜಯ ಜೋಶಿ, ಜೋಶಿ ಉದ್ಯಮ ಸಮೂಹದ ಮುಖ್ಯಸ್ಥ ಗೋವಿಂದ ಜೋಶಿ, ದತ್ತಾತ್ರೇಯ ಜೋಶಿ, ಕಾನಿಪ ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಸುಧೀಂದ್ರ ಕುಲಕರಣಿ, ಚಿದಂಬರ ಸೇವಾ ಸಮಿತಿಯ ಕಾರ್ಯದರ್ಶಿ ವೆಂಕಟೇಶ್ ಜೋಶಿ ನಂದವಾಡಗಿ, ದತ್ತಾತ್ರೇಯ ಜೋಶಿ, ಪ್ರಶಾಂತ್ ರಾವ್, ವೆಂಕಟೇಶ್ ಗುಡಿ, ಗೋವಿಂದ ದೇಶ್ಪಾಂಡೆ, ಶ್ರೀನಿಧಿ ಜೋಶಿ, ಸದಾಶಿವ ಬಾವಿಕಟ್ಟಿ, ವೆಂಕಟೇಶ ಜೋಶಿ ಇದ್ದರು.

ಗಿಡ ಮರಗಳ ಸಂರಕ್ಷಣೆ ನಮ್ಮ ಕರ್ತವ್ಯ

◆ಝುಳಕಿ: ಗಿಡ ಮರಗಳ ಸಂರಕ್ಷಣೆಗೆ ನಮ್ಮೆಲ್ಲರ ಕರ್ತವ್ಯ ಎಂದು ಮಾಹೇರ್ ಆಶ್ರಮದ ಮುಖ್ಯ ಸಾಹಾಯಕಿ ಜಯಶ್ರೀ ಎಂದು ಹೇಳಿದರು.

ಸಮೀಪದ ಲೋಣಿ ಬಿ.ಕೆ ಗ್ರಾಮ ನಡೆದ ಸಿದ್ದೇಶ್ವರ ಪ್ರಾಥಮಿಕ ಹಾಗೂ ಪ್ರೌಢಶಾಲೆ ಲೋಣಿ ಬಿ.ಕೆ ಹಾಗೂ ಮಾಹೇರ್ ಆಶ್ರಮ ಲೋಣಿ ಬಿ.ಕೆ. ಸಂಯುಕ್ತ ಆಶ್ರಯದಲ್ಲಿ ವಿಶ್ವ ಪರಿಸರ ದಿನದ ಪ್ರಯುಕ್ತ ಗಿಡ ನೆಟ್ಟು ನೀರು ಹಾಕಿ ಚಾಲನೆ ನೀಡಿ ಮಾತನಾಡಿದ ಅವರು, ಪರಿಸರ ಸಂರಕ್ಷಣೆಯ ಮಹತ್ವ, ಮರಗಳ ಅಗತ್ಯತೆ ಹಾಗೂ ಮಾಲಿನ್ಯ ನಿಯಂತ್ರಣದ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಶಿಕ್ಷಕರಾದ ಎಸ್.ಎಸ್.ಸೋನ್ನಗಿ ಮಾತನಾಡಿ, ಅವರು ಪ್ಲಾಸ್ಟಿಕ್ ತ್ಯಜಿಸಿ ಪರಿಸರ ಉಳಿಸಿ ಎಂಬ ಘೋಷವಾಕ್ಯದೊಂದಿಗೆ ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ದುಷ್ಪರಿಣಾಮ ಉಂಟುಗುತ್ತದೆ. ನೀರಿನ ಸಂರಕ್ಷಣೆ ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಹೇಳಿದರು.

ಜಿ.ಬಿ.ಕೋರಿ ವಿದ್ಯಾರ್ಥಿಗಳಿಗೆ ಪರಿಸರ ಸಂರಕ್ಷಣೆಯ ಪ್ರತಿಜ್ಞಾವಿಧಿ ಬೋಧಿಸಿದರು. ಪ್ರತಿಯೊಂದು ಮಗು ತಮ್ಮ ತಾಯಿಯ ಹೆಸರಿನಲ್ಲಿ ಕನಿಷ್ಠ ಒಂದು ಗಿಡವನ್ನು ನೆಟ್ಟು ಅದರ ಪೋಷಣೆ ಮಾಡಬೇಕೆಂದು ಕರೆ ನೀಡಿದರು.

ಪ್ರಾಥಮಿಕ ಹಾಗೂ ಪ್ರೌಢಶಾಲೆಯ ಶಿಕ್ಷಕ-ಶಿಕ್ಷಕಿಯರು, ಸಿಬ್ಬಂದಿ, ಮಾಹೇರ್ ಆಶ್ರಮದ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.



ಹೈಕಮಾಂಡ್ ಇಚ್ಛಿಸಿದರೆ ಸ್ಪರ್ಧೆ: ವಿದ್ಯಾ ಪಾಟೀಲ



◆ಬಸವನಬಾಗೇವಾಡಿ: 2028ರ ವಿಧಾನಸಭೆ ಚುನಾವಣೆಗೆ ಬಸವನಬಾಗೇವಾಡಿ ಮತಕ್ಷೇತ್ರದಿಂದ ಭಾರತೀಯ ಜನತಾ ಪಕ್ಷದ ಪ್ರಬಲ ಆಕಾಂಕ್ಷಿಯಾಗಿದ್ದು ಬಿಜೆಪಿಯ ವರಿಷ್ಠರು ಚುನಾವಣೆಗೆ ಸ್ಪರ್ಧಿಸಲು ಅವಕಾಶ ಮಾಡಿಕೊಡುತ್ತಾರೆಂದು ವಿಶ್ವಾಸ ನನಗಿದೆ ಎಂದು ವಿದ್ಯಾ ಪಾಟೀಲ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಕಳೆದ ಹತ್ತು ವರ್ಷಗಳಿಂದ ಬಿಜೆಪಿ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತೆಯಾಗಿ, ನೊಂದವರ, ಬಡವರ, ರೈತರ, ಮಹಿಳೆಯರ ಪರವಾಗಿ ಹಲವಾರು ಹೋರಾಟಗಳನ್ನು ಹಮ್ಮಿಕೊಳ್ಳುವುದರ ಮೂಲಕ ನೊಂದವರ ಧ್ವನಿಯಾಗಿ ಕೆಲಸ ಮಾಡಿದ್ದೇನೆ. ಈಗಾಗಲೇ ಹಲವಾರು ಬಾರಿ ಬಿಜೆಪಿ ರಾಜ್ಯ ನಾಯಕರನ್ನು ಭೇಟಿ ಮಾಡಿ ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಸವನಬಾಗೇವಾಡಿ ಮತಕ್ಷೇತ್ರದ ಪ್ರಬಲ ಆಕಾಂಕ್ಷಿ. ಮುಂಬರುವ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷದಿಂದ ನನಗೆ ಟಿಕೆಟ್ ಕೈತಪ್ಪಿದರೂ ಬಿಜೆಪಿ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತೇನೆ ಎಂದು ಹೇಳಿದರು. ಶೋಭಾ ಬಿರಾದಾರ, ಜಯಶ್ರೀ ಸಾಹುಕಾರ, ಮಲ್ಲಮ್ಮ, ಅಮಿನಸಾಬ ವಾಲಿಕಾರ, ಸತೀಶ ಲಮಾಣಿ, ಭೀಮಪ್ಪ ಚಲವಾದಿ, ರಮೇಶ ರಡ್ಡಿ, ಮುತ್ತು ಕುರುಬರ, ಸತೀಶ ಲಮಾಣಿ ಇದ್ದರು.

ಕಿರುಸುದ್ದಿ

ತೈಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

ಸಿಂಧನೂರು: ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಗ್ಯಾಸ್ ಬೆಲೆ ಏರಿಕೆಯನ್ನು ಖಂಡಿಸಿ ನಗರದ ಬಸವ ವೃತ್ತದಿಂದ ಗಾಂಧಿ ವೃತ್ತದ ವರೆಗೆ ಟ್ರ್ಯಾಕ್ಟರ್‌ಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಬರುವ ಮೂಲಕ ವಿನೂತನ ಪ್ರತಿಭಟನೆ ಮಾಡಿ ಗಾಂಧಿ ವೃತ್ತದಲ್ಲಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ಪ್ರಗತಿಪರ ಸಂಘಟನೆಗಳ ಒಕ್ಕೂಟದ ಸಂಚಾಲಕರು ಚಂದ್ರಶೇಖರ ಗೊರೆಬಾಳ ಮಾತನಾಡಿ, ಕೇಂದ್ರದ ಬಿಜೆಪಿ ಸರ್ಕಾರ ಐದು ರಾಜ್ಯಗಳ ಚುನಾವಣೆಗಳಲ್ಲಿ ಭರಪೂರ ಭರವಸೆಗಳನ್ನು ನೀಡಿ,ಚುನಾವಣೆಗಳು ಮುಗಿಯುತ್ತಿದ್ದಂತೆಯೇ ಪೆಟ್ರೋಲ್, ಡೀಸೆಲ್, ಎಲ್ ಪಿಜಿ ಗ್ಯಾಸ್ ಬೆಲೆ ವಿಪರೀತ ಏರಿಕೆ ಮಾಡುವ ಮೂಲಕ ದೇಶದ ಜನರ ಹೊಟ್ಟೆಯ ಮೇಲೆ ಬರೆ ಎಳೆದಿದೆ ಹಾಗೂ ಇಂಧನ ಬೆಲೆ ಏರಿಕೆ ಕೇವಲ ಪೆಟ್ರೋಲ್, ಡೀಸೆಲ್ ಬಳಕೆದಾರರಿಗೆ ಮಾತ್ರ ಸಂಬಂಧಪಟ್ಟ ವಿಚಾರ ಮಾತ್ರವಲ್ಲದೇ ಸಮಾಜದ ಜನಜೀವನದ ಬಹುತೇಕ ವಲಯಗಳ ಮೇಲೆ ಪರಿಣಾಮ ಬೀರುತ್ತದೆ. ಇದು ಸರಕುಗಳ ಬೆಲೆಯನ್ನು ದುಬಾರಿಯಾಗಿ, ಜನರ ಕೊಳ್ಳುವ ಶಕ್ತಿ ಕ್ಷೀಣಗೊಂಡಿದೆ. ಈಗಾಗಲೇ ಸಂಕಷ್ಟದಲ್ಲಿರುವ ಜನಸಾಮಾನ್ಯರನ್ನು ಇದು ಮತ್ತಷ್ಟು ಬಿಕ್ಕಟ್ಟಿಗೆ ತಳ್ಳಲಿದೆ. ಕಾರಣ ಇದನ್ನು ಪ್ರಗತಿಪರ ಸಂಘಟನೆಗಳ ಒಕ್ಕೂಟ ಬಲವಾಗಿ ಖಂಡಿಸುತ್ತದೆ ಕೂಡಲೇ ಇಂಧನಗಳ ಬೆಲೆಯನ್ನು ಇಳಿಸಬೇಕೆಂದು ಆಗ್ರಹಿಸಿದರು.

ನಂತರ ಹಿರಿಯ ಹೋರಾಟಗಾರ ಹಾಗೂ ಪತ್ರಕರ್ತರಾದ ಡಿ.ಎಚ್.ಕಂಬಳಿ, ತದನಂತರ ನಾಗರಾಜ ಪೂಜಾರ ಸಿಪಿಐ (ಎಂಎಲ್) ಮಾತನಾಡಿದರು.

ಎಸ್.ದೇವೇಂದ್ರಗೌಡ, ಶಂಕರ ಗುರಿಕಾರ, ಮಂಜುನಾಥ್ ಗಾಂಧಿನಗರ, ಚಿಟ್ಟಿಬಾಬು, ಜಗದೀಶ, ಬಸವರಾಜ ಹೊಸಮುಖಿಲ್, ಕೃಷ್ಣಮೂರ್ತಿ ಧುಮುತಿ, ಬಸವಂತರಾಯಗೌಡ, ವೀರೇಶ, ಹನುಮಂತ, ಬಸವರಾಜ, ಆದೇಶ, ಬಸವರಾಜ, ಹನುಮಂತಪ್ಪ, ಭಾಷಾಮಿಯಾ, ಗಂಗಪ್ಪ, ಭಾಷಾಸಾಬ್ ಇತರರಿದ್ದರು.

ಪದಾಧಿಕಾರಿಗಳ ನೇಮಕ

ಕುಷ್ಟಗಿ: ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯ ತಾಲೂಕಿನ ನೂತನ ಪದಾಧಿಕಾರಿಗಳ ಆಯ್ಕೆ ಮಾಡಿದರು.ಶರಣಪ್ಪ ಎಸ್.ಕಮತರ್ (ತಾಲೂಕು ಅಧ್ಯಕ್ಷ), ಶರಣಪ್ಪ ಎಸ್.ಬಾಚಲಾಪುರ (ತಾಲೂಕು ಪ್ರಧಾನ ಕಾರ್ಯದರ್ಶಿ), ಕಾಡಪ್ಪ ಡಿ.ಗದ್ದಿ (ಉಪಾಧ್ಯಕ್ಷ), ಮಹಾದೇವಮ್ಮ ಎಸ್.ಪಾಟೀಲ್ (ಮಹಿಳಾ ಘಟಕದ ತಾಲೂಕಾಧ್ಯಕ್ಷ), ಶಂಕರಗೌಡ ಎಸ್.ಪಾಟೀಲ (ಗೌರವಾಧ್ಯಕ್ಷ), ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಮೊಹಮ್ಮದ್ ನಜೀರ್‌ಸಾಬ್ ಮೂಲಿಮನಿ ಅವರ ಅಧ್ಯಕ್ಷತೆಯಲ್ಲಿ ಪದಾಧಿಕಾರಿಗಳು ಆಯ್ಕೆಗೊಂಡಿದ್ದಾರೆ.

ಇಂದು ಸಂಗೀತ ಸಂಭ್ರಮ

ಕುಕನೂರು: ಕನ್ನಡ ಸಾಹಿತ್ಯ ಸಂಸ್ಕೃತಿ ಅಭಿವೃದ್ಧಿ ಟ್ರಸ್ಟ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತ ಆಶ್ರಯದಲ್ಲಿ 2025–26ನೆಯ ಸಾಲಿನ ಸಂಘ ಸಂಸ್ಥೆ ಧನಸಹಾಯ ಯೋಜನೆಯಡಿಯಲ್ಲಿ ಸಂಗೀತ ಸಂಭ್ರಮ ಜೂ.7ರಂದು ಬೆಳಗ್ಗೆ 10.30ಕ್ಕೆ ಕುಕನೂರಿನ ಶ್ರೀಅನ್ನದಾನೇಶ್ವರ ಶಾಖಾ ಮಠ ಸಭಾಂಗಣದಲ್ಲಿ ಜರುಗಲಿದೆ. ಡಾ.ಮಹಾದೇವ ಮಹಾಸ್ವಾಮೀಜಿ, ಅನ್ನದಾನೇಶ್ವರ ಶಾಖಾ ಮಠ ಕುಕನೂರು ಸಾನ್ನಿಧ್ಯ ವಹಿಸಲಿದ್ದು, ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕರ್ಣಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ರಂಗಭೂಮಿ ಕಲಾವಿದೆ ಶ್ರೀ ೯ ಶೇಖರೆಡ್ಡಿ ಮಾದಿನೂರ ಅಧ್ಯಕ್ಷತೆ ವಹಿಸುವರು. ಮಂಗಳೂರಿನ ಶಿಕ್ಷಕ ಹಾಗೂ ಗಾಯಕ ಹನುಮಂತಪ್ಪ ಎಚ್. ಎ.ಅವರು, ಜನಪದ ಮತ್ತು ಸಂಗೀತ ಕಲೆಗಳು ಒಂದು ಅವಲೋಕನ ಕುರಿತು ಉಪನ್ಯಾಸ ನೀಡುವರು ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ಪ್ರಹ್ಲಾದಾಚಾರ್ಯ ತಟ್ಟಿ



ಕುಷ್ಟಗಿ: ಪಟ್ಟಣದ ಶತಾಯುಷಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಪ್ರಹ್ಲಾದಾಚಾರ್ಯ ತಟ್ಟಿ (101) ಶನಿವಾರ ಮೃತರಾದರು. ಮೃತರಿಗೆ ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವಿದೆ. ಪಟ್ಟಣದ ಟೆಂಗುಂಟಿ ರಸ್ತೆಯ ರುದ್ರಭೂಮಿಯಲ್ಲಿ ಸಕಲ ಸರ್ಕಾರಿ ಗೌರವದೊಂದಿಗೆ ಅಂತ್ಯಕ್ರಿಯೆ ಶನಿವಾರ ಸಂಜೆ ನೆರವೇರಿತು.

ಸಂತಾಪ: ಶಾಸಕ ದೊಡ್ಡನಗೌಡ ಪಾಟೀಲ್, ಮಾಜಿ ಸಚಿವ ಅಮರೇಗೌಡ ಪಾಟೀಲ ಮಾಜಿ ಶಾಸಕ,ಹಸನಸಾಬ ದೋಟಿಹಾಳ ತಹಶೀಲ್ದಾರ ಗುರುರಾಜ ಸೇರಿದಂತೆ ಗಣ್ಯರು ಸಂತಾಪ ಸೂಚಿಸಿದರು.



ಸಿಂಧನೂರು: ಪೆಟ್ರೋಲ್, ಡೀಸೆಲ್, ಎಲ್‌ಪಿಜಿ ಗ್ಯಾಸ್ ಬೆಲೆ ಏರಿಕೆಯನ್ನು ಖಂಡಿಸಿ ನಗರದ ಬಸವ ವೃತ್ತದಿಂದ ಗಾಂಧಿ ವೃತ್ತದ ವರೆಗೆ ಟ್ರ್ಯಾಕ್ಟರ್‌ಗೆ ಹಗ್ಗವನ್ನು ಕಟ್ಟಿ ಎಳೆದುಕೊಂಡು ಬರುವ ಮೂಲಕ ವಿನೂತನ ಪ್ರತಿಭಟನೆ ಮಾಡಿ ಗಾಂಧಿ ವೃತ್ತದಲ್ಲಿ ತಹಶೀಲ್ದಾರ್ ಮೂಲಕ ರಾಷ್ಟ್ರಪತಿ ಅವರಿಗೆ ಮನವಿ ಸಲ್ಲಿಸಿದರು.

ವಿದ್ಯಾರ್ಥಿಗೊಂದು ಮರ, ಶಾಲೆಗೊಂದು ವನ ನಿರ್ಮಿಸಿ

ಕೊಪ್ಪಳ: ಮನೆಗೊಂದು ಮರ ಊರಿಗೊಂದು ವನ ಎಂಬಂತೆ ವಿದ್ಯಾರ್ಥಿಗೆ ಒಂದು ಮರ ಶಾಲೆಗೊಂದು ವನ ನಿರ್ಮಿಸಲು ಹೊಸಬಂಡಿಹರ್ಲಾಪುರ್ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಶರಣಪ್ಪ ಸುಂಕದ ಹೇಳಿದರು.

ಗ್ರಾಪಂ, ಸರ್ಕಾರಿ ಪ್ರೌಢಶಾಲೆ ಹೊಸ ಬಂಡಿ ಹರ್ಲಾಪುರ್ ಹಾಗೂ ಅರಣ್ಯ ಇಲಾಖೆ ಮುನಿರಾಬಾದ ರವರ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವ ಪರಿಸರ ದಿನಾಚರಣೆಯ ಕಾರ್ಯಕ್ರಮಕ್ಕೆ ಸಸಿ ನೆಡುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ವಿಜ್ಞಾನ ತಂತ್ರಜ್ಞಾನ ಎಷ್ಟೇ ಬೆಳೆದರೂ ಸಹ ನಿಸರ್ಗದಲ್ಲಿನ ಅನೇಕ ಸತ್ಯಗಳನ್ನ ಇದುವರೆಗೂ ಮನುಷ್ಯನು ಅನ್ವೇಷಿಸಲು ಸಾಧ್ಯವಾಗುತ್ತಿಲ್ಲ ಎಂದರು.

ವಲಯ ಅರಣ್ಯ ಅಧಿಕಾರಿಗಳಾದ ಲಿಂಗರಾಜ್ ಅವರು ಪರಿಸರದಲ್ಲಿನ ನೆಲ ಜಲ ವನ್ಯ ಸಂಪತ್ತು ಪ್ರಾಣಿ ಸಂಪತ್ತುಗಳ ಕುರಿತು ಮಹತ್ವದ ಮಾಹಿತಿ ನೀಡಿದರು.

ಶಾಲಾ ಆವರಣದಲ್ಲಿ ಬೇವು, ನೇರಳೆ, ಅರಳೆ ಮರ ಇತ್ಯಾಧಿ ಸಸಿಗಳನ್ನು ನೆಡಲಾಯಿತು. ಅರಣ್ಯ ಇಲಾಖೆಯ ಸಿಬ್ಬಂದಿ ಸಂತೋಷ್, ಪ್ರೌಢ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ರಾಘವೇಂದ್ರ ಇಲ್ಲೂರು, ಪ್ರಾಥಮಿಕ ಶಾಲೆಯ ಎಸ್ಡಿಎಂಸಿ ಅಧ್ಯಕ್ಷರಾದ ಸಿದ್ದಿ ಭಾಷಾ ಗೊರೆಬಾಳ, ಶಿಕ್ಷಕ ಸೆಲ್ವರಾಜನ್ ಸೋಮಪ್ಪ, ಸೈಯದ್ ಮೆಹಬೂಬ್, ರಾಮಣ್ಣ, ನಾಗವೇಣಿ ಸುಮಲತಾ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.



ಕೊಪ್ಪಳ: ಗ್ರಾಪಂ, ಸರ್ಕಾರಿ ಪ್ರೌಢಶಾಲೆ ಹೊಸ ಬಂಡಿ ಹರ್ಲಾಪುರ್ ಹಾಗೂ ಅರಣ್ಯ ಇಲಾಖೆ ಮುನಿರಾಬಾದ ರವರ ಸಹಯೋಗದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ವಿಶ್ವಪರಿಸರ ದಿನಾಚರಣೆಯ ಕಾರ್ಯಕ್ರಮಕ್ಕೆ ಸರ್ಕಾರಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಶರಣಪ್ಪ ಸುಂಕದ ಅವರು ಸಸಿ ನೆಡುವುದರ ಮೂಲಕ ಚಾಲನೆ ನೀಡಿದರು.

ಕೆಸಿಇಟಿ: ಎಸ್‌ಬಿಆರ್ ವಿದ್ಯಾರ್ಥಿಗಳ ಸಾಧನೆ

ಕಲಬುರಗಿ: ಶರಣಬಸವೇಶ್ವರ ಸಂಯುಕ್ತ ಪದವಿ ಪೂರ್ವ ಕಾಲೇಜಿನ (ಎಸ್‌ಬಿಆರ್) ವಿದ್ಯಾರ್ಥಿಗಳು 2026ರ ಕೆಸಿಇಟಿ ಪರೀಕ್ಷೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ವಿವಿಧ ವಿಭಾಗಗಳಲ್ಲಿ ರಾಜ್ಯಮಟ್ಟದ ರ್ಯಾಂಕ್‌ಗಳನ್ನು ಪಡೆದು ಕಾಲೇಜಿನ ಕೀರ್ತಿಯನ್ನು ಹೆಚ್ಚಿಸಿದ್ದಾರೆ.

ವಿದ್ಯಾರ್ಥಿ ಚನ್ನಬಸವ ಕೊರಳ್ಳಿ ಔಷಧ ವಿಜ್ಞಾನ (ಫಾರ್ಮಸಿ) ವಿಭಾಗದಲ್ಲಿ ರಾಜ್ಯಕ್ಕೆ 27ನೇ ರ್ಯಾಂಕ್ ಪಡೆದು ವಿಶೇಷ ಸಾಧನೆ ಮಾಡಿದ್ದಾರೆ. ಅಲ್ಲದೆ ಕೃಷಿ ವಿಜ್ಞಾನ ವಿಭಾಗದಲ್ಲಿ 31ನೇ ರ್ಯಾಂಕ್, ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ವಿಭಾಗದಲ್ಲಿ 126ನೇ ರ್ಯಾಂಕ್, ಇಂಜಿನಿಯರಿಂಗ್ ವಿಭಾಗದಲ್ಲಿ 170ನೇ ರ್ಯಾಂಕ್, ಪಶು ಸಂಗೋಪನಾ ವಿಜ್ಞಾನ ವಿಭಾಗದಲ್ಲಿ 391ನೇ ರ್ಯಾಂಕ್ ಹಾಗೂ ಬಿ.ನರ್ಸಿಂಗ್ ವಿಭಾಗದಲ್ಲಿ 392ನೇ ರ್ಯಾಂಕ್ ಗಳಿಸಿದ್ದಾರೆ.

ವಿದ್ಯಾರ್ಥಿನಿ ಸಿಮ್ರನ್ ಬಾನು ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ವಿಭಾಗದಲ್ಲಿ ರಾಜ್ಯಕ್ಕೆ 35ನೇ ರ್ಯಾಂಕ್, ಕೃಷಿ ವಿಜ್ಞಾನ ವಿಭಾಗದಲ್ಲಿ 74ನೇ ರ್ಯಾಂಕ್, ಪಶು ಸಂಗೋಪನಾ ವಿಜ್ಞಾನ ಮತ್ತು ಬಿ.ನರ್ಸಿಂಗ್ ವಿಭಾಗಗಳಲ್ಲಿ 92ನೇ ರ್ಯಾಂಕ್ ಹಾಗೂ ಇಂಜಿನಿಯರಿಂಗ್ ವಿಭಾಗದಲ್ಲಿ



> ಎಸ್‌ಬಿಆರ್ ಕಾಲೇಜಿನ ವಿದ್ಯಾರ್ಥಿಗಳು ಕೆಸಿಇಟಿ ಪರೀಕ್ಷೆಯಲ್ಲಿ ದಾಖಲಿಸಿರುವ ಈ ಗಮನಾರ್ಹ ಸಾಧನೆಯು ಕಾಲೇಜಿನ ಗುಣಮಟ್ಟದ ಶಿಕ್ಷಣ, ಶಿಸ್ತುಬದ್ಧ ಶೈಕ್ಷಣಿಕ ವಾತಾವರಣ ಹಾಗೂ ಶಿಕ್ಷಕರ ಅವಿರತ ಪರಿಶ್ರಮಕ್ಕೆ ಸಾಕ್ಷಿಯಾಗಿದೆ. ವಿದ್ಯಾರ್ಥಿಗಳು ಇದೇ ರೀತಿಯ ಶ್ರದ್ಧೆ ಮತ್ತು ಆತ್ಮವಿಶ್ವಾಸದಿಂದ ಮುಂದಿನ ವಿದ್ಯಾಭ್ಯಾಸದಲ್ಲಿಯೂ ಸಾಧನೆಗೈದು ಸಮಾಜಕ್ಕೆ ಮಾದರಿಯಾಗಬೇಕು.
>
> ■ ಡಾ.ದಾಕ್ಷಾಯಿಣಿ ಅವ್ವಾಜಿ, ಅಧ್ಯಕ್ಷರು, ಶರಣಬಸವೇಶ್ವರ ವಿದ್ಯಾವರ್ಧಕ ಸಂಘ

559ನೇ ರ್ಯಾಂಕ್ ಪಡೆದಿದ್ದಾರೆ.

ಕಾಲೇಜಿನ ಹಲವಾರು ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಉತ್ತಮ ರ್ಯಾಂಕ್ ಗಳಿಸಿದ್ದು, ಅಪೂರ್ವ ಸಾಧನೆ ಮೆರೆದಿದ್ದಾರೆ. ಅರ್ಪಿತಾ, ನವೀನ್ ಮೆಟೇಕರ್, ಅನ್ವಯ ನಾಗಲೀಕರ, ರೋಹಿತ್, ಪ್ರಜ್ವಲ್, ಸಂಪತ್ ಕುಮಾರ್, ಪಿ. ಮನೋಜ್ ಕುಮಾರ್ ಹಾಗೂ ಭೂಮಿಕಾ ಸೇರಿದಂತೆ ಅನೇಕ ವಿದ್ಯಾರ್ಥಿಗಳು ವಿವಿಧ ವೃತ್ತಿಪರ ಕೋರ್ಸ್‌ಗಳ ವಿಭಾಗಗಳಲ್ಲಿ ರಾಜ್ಯಮಟ್ಟದ ಉತ್ತಮ ರ್ಯಾಂಕ್ ಪಡೆದಿದ್ದಾರೆ.

ಇದೇ ವೇಳೆ ಇಂಜಿನಿಯರಿಂಗ್ ವಿಭಾಗದಲ್ಲಿ 6,000 ರ್‍ಯಾಂಕಿಂಗ್ ಒಳಗೆ 50 ವಿದ್ಯಾರ್ಥಿಗಳು, ಔಷಧ ವಿಜ್ಞಾನ ವಿಭಾಗದಲ್ಲಿ 95 ವಿದ್ಯಾರ್ಥಿಗಳು, ಕೃಷಿ ವಿಜ್ಞಾನ ವಿಭಾಗದಲ್ಲಿ 121 ವಿದ್ಯಾರ್ಥಿಗಳು, ನ್ಯಾಚುರೋಪತಿ ಮತ್ತು ಯೋಗ ವಿಜ್ಞಾನ ವಿಭಾಗದಲ್ಲಿ 122 ವಿದ್ಯಾರ್ಥಿಗಳು, ಬಿ.ನರ್ಸಿಂಗ್ ವಿಭಾಗದಲ್ಲಿ 128 ವಿದ್ಯಾರ್ಥಿಗಳು ಹಾಗೂ ಪಶು ಸಂಗೋಪನಾ ವಿಜ್ಞಾನ ವಿಭಾಗದಲ್ಲಿ 133 ವಿದ್ಯಾರ್ಥಿಗಳು ಸ್ಥಾನ ಪಡೆದಿದ್ದಾರೆ.

ಕಾಲೇಜಿನ ಪ್ರಾಚಾರ್ಯ ಎನ್. ಎಸ್. ದೇವರಕಲ್ ಅವರು ಸಾಧಕ ವಿದ್ಯಾರ್ಥಿಗಳನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಉನ್ನತ ಸಾಧನೆ ಮಾಡಿ ಸಮಾಜಕ್ಕೆ ಮಾದರಿಯಾಗಲಿ ಎಂದು ಶುಭ ಹಾರೈಸಿದ್ದಾರೆ.

ಬಸವರಾಜ ದೇಶಮುಖ, ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ, ಈ ಯಶಸ್ಸಿನ ಹಿಂದೆ ಕಾಲೇಜಿನ ಅನುಭವಿ ಪ್ರಾಚಾರ್ಯರ ದೂರದೃಷ್ಟಿಯ ನಾಯಕತ್ವ, ಬದ್ಧತೆಯ ಶಿಕ್ಷಕ ವೃಂದದ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳ ನಿರಂತರ ಪರಿಶ್ರಮ ಅಡಗಿದೆ. ಶಿಕ್ಷಣ ಕ್ಷೇತ್ರದಲ್ಲಿ ಎಸ್.ಬಿ.ಆರ್. ಕಾಲೇಜು ಸದಾ ಶ್ರೇಷ್ಠತೆಯನ್ನು ಗ'ುರಿಯಾಗಿಸಿಕ'ೊಂಡ'ು ಕಾರ್ಯನಿರ್ವಹಿಸುತ್ತಿದ್ದು, ವಿದ್ಯಾರ್ಥಿಗಳ ಈ ಸಾಧನೆಯು ಸಂಸ್ಥೆಯ ಶೈಕ್ಷಣಿಕ ಬದ್ಧತೆಯ ಪ್ರತಿಬಿಂಬವಾಗಿದೆ ಎಂದರು.

ಪರಿಸರ ಸಂರಕ್ಷಣೆಗೆ ಒತ್ತು ನೀಡಿ

ಗಂಗಾವತಿ: ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದು ತಾಪಂ ಇಒ ರಾಮರೆಡ್ಡಿ ಪಾಟೀಲ ಹೇಳಿದರು.

ತಾಲೂಕಿನ ಹೊಸ ಅಯೋಧ್ಯಾ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಶನಿವಾರ ಹಮ್ಮಿಕೊಂಡಿದ್ದ ಸಸಿ ನೆಡುವ ಕಾರ್ಯಕ್ರಮ ಹಾಗೂ ಸಸಿ ವಿತರಣೆ ಕಾರ್ಯಕ್ರಮದಲ್ಲಿ ಸಸಿ ನೆಟ್ಟು ಮಾತನಾಡಿದರು.

ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಭವಿಷ್ಯದ ದೃಷ್ಟಿಯಿಂದ ಮುಂದಿನ ಪೀಳಿಗೆಗೆ ಉತ್ತಮ ಪರಿಸರ ನೀಡಬೇಕಾಗಿರುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ಪರಿಸರ ದಿನಾಚರಣೆ ಆಚರಿಸುವ ಮೂಲಕ ಜನರಲ್ಲಿ ಪರಿಸರ ಪ್ರಜ್ಞೆ ಬೆಳೆಸಲಾಗುತ್ತಿದೆ. ಆ ನಿಟ್ಟಿನಲ್ಲಿ ಸಾರ್ವಜನಿಕರಿಗೆ ಅರಿವು ಮೂಡಿಸಲಾಗುತ್ತಿದೆ. ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಪಣ ತೊಡಬೇಕು. ಪ್ರತಿಯೊಬ್ಬರೂ ಪರಿಸರ ಸಂರಕ್ಷಣೆಗೆ ಒತ್ತು ನೀಡಬೇಕು. ಉತ್ತಮ ಆರೋಗ್ಯ ಹೊಂದಲು ನಮ್ಮ ಸುತ್ತಮುತ್ತ ಸ್ವಚ್ಛ ಸುಂದರ ಪರಿಸರ ನಿರ್ಮಿಸುವುದು ಅತ್ಯಗತ್ಯವಾಗಿದೆ ಎಂದರು.

ಸಾಮಾಜಿಕ ವಲಯ ಅರಣ್ಯ ಅಧಿಕಾರಿಗಳಾದ ಬಿ.ರಾಘವೇಂದ್ರ ಮಾತನಾಡಿ, ಶಾಲೆಯಲ್ಲಿ ನೆಟ್ಟ ಸಸಿಗಳನ್ನು ಸರಿಯಾಗಿ ಪೋಷಣೆ ಮಾಡಬೇಕು. ಶಾಲಾ ಮಕ್ಕಳು ಪರಿಸರ ಪ್ರೇಮ ಬೆಳೆಸಿಕೊಳ್ಳಬೇಕು.

ಹೊಸ ಅಯೋಧ್ಯಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ಅರಣ್ಯ ಇಲಾಖೆಯಿಂದ 10 ಸಸಿ ನೆಟ್ಟು, ಗ್ರಾಮಸ್ಥರಿಗೆ 50 ಸಸಿ ವಿತರಣೆ ಮಾಡಲಾಯಿತು.

ಪ್ರಾದೇಶಿಕ ವಲಯ ಅರಣ್ಯ ಅಧಿಕಾರಿ ಬಸವರಾಜ ಪೂಜಾರ, ಉಪ ವಲಯ ಅರಣ್ಯ ಅಧಿಕಾರಿಗಳಾದ ಚಂದ್ರಶೇಖರ ಭಾಗವತ್, ಗುಂಡಪ್ಪ, ಗ್ರಾಪಂ ಪಿಡಿಒ ರವೀಂದ್ರ ಕುಲಕರ್ಣಿ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮುಖ್ಯಶಿಕ್ಷಕ ನೀಲಕಂಠಯ್ಯ ಸ್ವಾಮಿ, ಶಿಕ್ಷಕರಾದ ಮಂಜುನಾಥ ಎಂ., ಗ್ರಾಪಂ ಸಿಬ್ಬಂದಿ ರಮೇಶ ಅಯೋಧ್ಯಾ, ಸೇರಿ ಇತರರಿದ್ದರು.



'ಸ್ವಚ್ಛ ಗ್ರಾಮ-ಸುರಕ್ಷಿತ ಹವಾಮಾನ' ಅಭಿಯಾನ



ಹನುಮಸಾಗರ: ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹನುಮಸಾಗರ ಸಮೀಪದ ಯರಗೇರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಂದ್ರಗಿರಿ ಗ್ರಾಮದಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ನರೇಗಾ) ಅಡಿಯಲ್ಲಿ 'ಸ್ವಚ್ಛ ಗ್ರಾಮ-ಸುರಕ್ಷಿತ ಹವಾಮಾನ' ವಿಶೇಷ ಅಭಿಯಾನವನ್ನು ಹಮ್ಮಿಕೊಳ್ಳಲಾಯಿತು.

ಅಭಿಯಾನದ ಅಂಗವಾಗಿ ಗ್ರಾಮಸ್ಥರು ಹಾಗೂ ನರೇಗಾ ಕಾರ್ಮಿಕರು ಸಸಿ ನೆಟ್ಟು ಪರಿಸರ ಸಂರಕ್ಷಣೆಯ ಸಂದೇಶ ಸಾರಿದರು. ಹವಾಮಾನ ಬದಲಾವಣೆಯ ಪರಿಣಾಮಗಳ ಕುರಿತು ಅರಿವು ಮೂಡಿಸುವುದು ಹಾಗೂ ಹಸಿರು ಪರಿಸರ ನಿರ್ಮಾಣಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕಾರ್ಯಕ್ರಮ ನಡೆಯಿತು.

ಚಂದ್ರಗಿರಿ ಗ್ರಾಮದ ಮುಖಂಡ ಗಂಗಪ್ಪ ಪರಸ್ಪರ ಜಾಲಿಹಾಳ ಮಾತನಾಡಿ, ಪರಿಸರ ಸಂರಕ್ಷಣೆ ಇಂದಿನ ಅಗತ್ಯವಾಗಿದ್ದು, ಪ್ರತಿಯೊಬ್ಬರೂ ಮರಗಳನ್ನು ನೆಟ್ಟು ಅವುಗಳನ್ನು ಪೋಷಿಸುವ ಮೂಲಕ ಪರಿಸರ ಉಳಿಸುವ ಕಾರ್ಯದಲ್ಲಿ ಭಾಗಿಯಾಗಬೇಕು ಎಂದು ತಿಳಿಸಿದರು.

ನರೇಗಾ ಯೋಜನೆಯಡಿ ಸಸಿ ನೆಡುವುದು ಮತ್ತು ಸ್ವಚ್ಛತಾ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಯರಗೇರ ಗ್ರಾಪಂ ಪಿಡಿಒ ಗಂಗಯ್ಯ ವಸ್ತ್ರದ ಮಾತನಾಡಿ, ಮರಗಳು ಪರಿಸರ ಸಮತೋಲನ ಕಾಪಾಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ನೆಟ್ಟ ಸಸಿಗಳನ್ನು ಸಂರಕ್ಷಿಸಿ ಬೆಳೆಸಿದಾಗ ಮಾತ್ರ ಪರಿಸರ ದಿನಾಚರಣೆಯ ಉದ್ದೇಶ ಸಾರ್ಥಕವಾಗುತ್ತದೆ. ಹಸಿರು ಗ್ರಾಮ ನಿರ್ಮಾಣಕ್ಕೆ ಎಲ್ಲರೂ ಕೈಜೋಡಿಸಬೇಕು ಎಂದು ಸಲಹೆ ನೀಡಿದರು.

ಗ್ರಾಪಂ ಕಂಪ್ಯೂಟರ್ ಆಪರೇಟರ್ ಸಚಿನ್, ಬಿಲ್ ಕಲೆಕ್ಟರ್ ಮಹಾಂತೇಶ, ಜೆಕೆಎಂ ರೇಣುಕಾ ರಾಠೋಡ, ಸಂಗಯ್ಯ ಕಪ್ಪಯ್ಯನವರ, ಯಲ್ಲಪ್ಪ ತಳ್ಳಿಕೇರಿ, ಚನ್ನಪ್ಪ ಮಾನ್ವಿ, ರುದ್ರಪ್ಪ ಚಿತ್ತವಾಡಗಿ, ಬಸಯ್ಯ ಅಜ್ಜಯ್ಯನವರ, ಗೀತಾ ಪೂಜಾರ, ಶಿವಯ್ಯ ಬಸಾಪುರಮಠ, ಶರಣಮ್ಮ, ಯಲ್ಲಮ್ಮ ತಳವಾರ ಸೇರಿದಂತೆ ನೂರಾರು ಗ್ರಾಮಸ್ಥರು ಭಾಗವಹಿಸಿ ಸಸಿ ನೆಟ್ಟು ಪರಿಸರ ಸಂರಕ್ಷಣೆಯ ಸಂಕಲ್ಪ ಕೈಗೊಂಡರು.

ದ್ವಿದಳ ಧಾನ್ಯಗಳ ಬೀಜದ ಕಿಟ್ ವಿತರಣೆ

ರಾಯಚೂರು: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ ಆತ್ಮನಿರ್ಭರ ಭಾರತ ದ್ವಿದಳ ಧಾನ್ಯಗಳ ಮಿಷನ್ ಅಡಿಯಲ್ಲಿ ತಾಲೂಕಿನ ಅರ್ಹ ರೈತರಿಗೆ ಉಚಿತ ದ್ವಿದಳ ಧಾನ್ಯಗಳ ಬೀಜದ ಕಿಟ್‌ಗಳನ್ನು ರಾಯಚೂರಿನ ಕೃಷಿ ಇಲಾಖೆಯ ರೈತ ಸಂಪರ್ಕ ಕೇಂದ್ರದಲ್ಲಿ ಶನಿವಾರ ವಿತರಿಸಲಾಯಿತು.

ರಾಯಚೂರಿನ ಕೃಷಿ ಉಪ ನಿರ್ದೇಶಕ ನಯೀಮ್ ಹುಸೇನ್ ಚಾಲನೆ ನೀಡಿ ಮಾತನಾಡಿ, ದೇಶದಲ್ಲಿ ದ್ವಿದಳ ಧಾನ್ಯಗಳ ಉತ್ಪಾದನೆ ಹೆಚ್ಚಿಸಿ ರೈತರ ಆದಾಯವನ್ನು ವೃದ್ಧಿಸುವುದು ಸದರಿ ಯೋಜನೆಯ ಉದ್ದೇಶವಾಗಿದೆ. ದ್ವಿದಳ ಧಾನ್ಯ ಮಣ್ಣಿನ ಫಲವತ್ತತೆ ಹೆಚ್ಚಿಸುವುದರ ಜೊತೆಗೆ ಜನರ ಪೌಷ್ಟಿಕಾಂಶ ಭದ್ರತೆಯಲ್ಲಿಯೂ ಪ್ರಮುಖ ಪಾತ್ರ ವಹಿಸಲಿದೆ. ಕಾರಣ ರೈತರು ಸರ್ಕಾರದ ಯೋಜನೆಗಳನ್ನು ಸದುಪಯೋಗ ಪಡಿಸಿಕೊಂಡು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಕೃಷಿಯನ್ನು ಲಾಭದಾಯಕ ಉದ್ಯಮ ವಾಗಿ ಪರಿವರ್ತಿಸುವಂತೆ ಮನವಿ ಮಾಡಿಕೊಂಡರು.

ರಾಯಚೂರು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕಿ ದೀಪಾ.ಎಲ್ ಮಾತನಾಡಿ, ದ್ವಿದಳ ಧಾನ್ಯಗಳ ಬೇಡಿಕೆ ಹೆಚ್ಚುತ್ತಿದ್ದು, ರೈತರು ಸುಧಾರಿತ ತಳಿಗಳ ಅಳವಡಿಕೆಗೆ ಹೆಚ್ಚಿನ ಒತ್ತು ನೀಡಬೇಕು ಎಂದು ಹೇಳಿದರು. ಅಧಿಕ ಇಳುವರಿ ನೀಡುವ, ಹವಾಮಾನ ವೈಪರೀತ್ಯಗಳನ್ನು ಸಹಿಸಬಲ್ಲ, ಕೀಟ ಹಾಗೂ ರೋಗ ನಿರೋಧಕ ಗುಣಗಳನ್ನು ಹೊಂದಿರುವ ಪ್ರಮಾಣಿತ ಬೀಜಗಳನ್ನು ರೈತರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ. ಮುಂಗಾರು ಹಂಗಾಮಿನ ಬಿತ್ತನೆಗೆ ಪೂರಕವಾಗಿ ಬಿತ್ತನೆ ಬೀಜಗಳನ್ನು ಹಾಗೂ ರಸಗೊಬ್ಬರಗಳನ್ನು ಅಗತ್ಯವಿರುವಷ್ಟು ದಾಸ್ತಾನು ಮಾಡಿಕೊಳ್ಳಲಾಗಿದೆ. ಕೆ.ಕಿಸಾನ್ ತಂತ್ರಾಂಶದ ಮೂಲಕ ಫ್ರೋಟ್ಸ್ ಎಫ್‌ಐಡಿ ಆಧಾರಿತವಾಗಿ ಯೂರಿಯಾ ರಸಗೊಬ್ಬರ ವಿತರಣೆ ಕಡ್ಡಾಯಗೊಳಿಸಲಾಗಿದೆ. ಯೂರಿಯಾಕ್ಕೆ ಪರ್ಯಾಯವಾಗಿ ಸಂಯುಕ್ತ ಗೊಬ್ಬರಗಳ ಬಳಕೆ ಮಾಡುವ ಕುರಿತು ರೈತರಿಗೆ ಜಾಗೃತಿಯನ್ನು ಮೂಡಿಸಲಾಯಿತು.

ರೈತ ಸಂಘದ ಅಧ್ಯಕ್ಷ ಲಕ್ಷ್ಮಣಗೌಡ ಕಡಗಮದೊಡ್ಡಿ ಸೇರಿದಂತೆ ರೈತ ಉತ್ಪಾದಕ ಸಂಸ್ಥೆಯ ಪ್ರತಿನಿಧಿಗಳು, ಪ್ರಗತಿ ಪರ ರೈತರಿದ್ದರು.



ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ: ರತ್ನಾಕರ್



ಕುಕನೂರು: ಪರಿಸರ ಉಳಿದರೆ ನಾಡೆಲ್ಲಾ ಉಳಿಯುವುದು ಅದಕ್ಕೆ ಪರಿಸರ ಉಳಿಸಬೇಕು ಮೌಢ್ಯತೆಯನ್ನು ಅಳಿಯಬೇಕು ವಿದ್ಯಾರ್ಥಿಗಳು ಎಂದು ಮಾನವ ಬಂಧುತ್ವ ವೇದಿಕೆಯ ನಿಕಟಪೂರ್ವ ಜಿಲ್ಲಾಧ್ಯಕ್ಷ ಟಿ.ರತ್ನಾಕರ್ ಹೇಳಿದರು.

ಪಟ್ಟಣದ ಸರ್ಕಾರಿ ಪ್ರೌಢ ಶಾಲೆಯಲ್ಲಿ ಹಮ್ಮಿಕೊಂಡ ಪರಿಸರ ದಿನಾಚರಣೆಯ ಅಂಗವಾಗಿ ವಿದ್ಯಾರ್ಥಿಗಳಿಗೆ ಮಾವಿನ ಹಣ್ಣಿನ ಸಿಹಿಕರಣೆ ವಿತರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದಿನ ದಿನಮಾನಗಳಲ್ಲಿ ಪರಿಸರ ಉಳಿದರೆ ನಾಡು ಉಳಿಯುತ್ತದೆ. ಆದರಂತೆ ಇಂದಿನ ಯುವ ಸಾಲದ ಮರದ ತಿಮ್ಮಕ್ಕನ ದಾರಿಯಲ್ಲಿ ನಡೆದ ಉತ್ತಮ ಜೀವನಕ್ಕೆ ನೀವೆಲ್ಲರೂ ಹಣೆಯಾಗಬೇಕು ಎಂದು ಹೇಳಿದರು.

ನಂತರ ಮಾನವ ಬಂಧುತ್ವ ವೇದಿಕೆಯ ತಾಲೂಕು ಸಂಚಾಲಕ ಈಶಪ್ಪ ಶಿರೂರು ಮಾತನಾಡಿ, ಮೌಢ್ಯತೆ ನಿವಾರಣೆಗಾಗಿ ಮತ್ತು ಮೌಢ್ಯತೆಯಿಂದ ಜೀವನವಾಗಬಾರದು. ಪರಿಸರದ ಜೊತೆಗೆ ನಮ್ಮ ಜೀವನ ಸಾಗಬೇಕು ಎಂದು ತಿಳಿಸಿದರು. ಶಾಲಾ ಮುಖ್ಯೋಪಾಧ್ಯಾಯ ಎ.ಎಚ್.ಮುತ್ತಣ್ಣ ಮಾತನಾಡಿದರು. ಶಿಕ್ಷಕಿಯರಾದ ಮಂಜುಳಾ ರೇಣುಕಾ, ಶಿಲ್ಪಾ ಹಾಗೂ ಇತರರು ಇದ್ದರು.

ಮರ ಬೆಳೆಸಿ, ಜೀವ ಉಳಿಸಿ: ಪಿಡಿಒ ಅರಳಿಗನೂರ

ಕುಷ್ಟಗಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ತಾಲೂಕಿನ ಜುಮಲಾಪುರ ಗ್ರಾಮ ಪಂಚಾಯತ್ ಆವರಣದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ವಿಶೇಷ ಗ್ರಾಮ ಸಭೆ ಹಾಗೂ ಸಸಿ ನೆಡುವ ಅಂಗವಾಗಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಮಾತನಾಡಿದ ಗ್ರಾಪಂ ಪಿಡಿಒ ನಾಗೇಶ್ ಅರಳಿಗನೂರ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಜೀವ ರಕ್ಷಣೆಗೆ ಅಗತ್ಯವಾಗಿದ್ದು, ಪ್ರತಿಯೊಬ್ಬ ನಾಗರಿಕರೂ ಪರಿಸರ ರಕ್ಷಣೆಯ ಹೊಣೆಗಾರಿಕೆಯನ್ನು ಅರಿತುಕೊಳ್ಳಬೇಕು ಎಂದು ಹೇಳಿದರು.

ನಾವು ಪರಿಸರವನ್ನು ಕಾಪಾಡಿದರೆ ಮಾತ್ರ ಪರಿಸರ ನಮ್ಮನ್ನು ರಕ್ಷಿಸುತ್ತದೆ. ಇತ್ತೀಚಿನ ದಿನಗಳಲ್ಲಿ ಮಾನವನ ಅತಿಯಾದ ಅಭಿವೃದ್ಧಿ ಮತ್ತು ಸ್ವಾರ್ಥಪರ ಚಟುವಟಿಕೆಗಳಿಂದ ಪರಿಸರಕ್ಕೆ ಸಾಕಷ್ಟು ಹಾನಿಯಾಗುತ್ತಿದೆ ಎಂದರು.

ಪಂಚಾಯತಿ ಕಾರ್ಯದರ್ಶಿ ಗುರಪ್ಪ ನಾಯಕ ಮಾತನಾಡಿ, ಭೂಮಿಯ ಮೇಲಿನ ಸಕಲ ಜೀವಿಗಳ ಬದುಕಿಗೆ ಆಧಾರವಾಗಿರುವ ಮಣ್ಣು, ನೀರು ಹಾಗೂ ಗಾಳಿಯನ್ನು ಮನುಷ್ಯ ತನ್ನ ಆಸೆಗಾಗಿ ಹಾಳು ಮಾಡುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ'' ಎಂದು ಅವರು ಅಭಿಪ್ರಾಯಪಟ್ಟರು.

ಗ್ರಾಮೀಣ ಅಂಗವಿಕಲ ಪುನರ್ವಸತಿ ಕಾರ್ಯಕರ್ತ ಆದಪ್ಪ ಮಾಲಿಪಾಟೀಲ ಮಾತನಾಡಿ, ಪರಿಸರ ಸಮತೋಲನ ಕಾಪಾಡಲು ಹೆಚ್ಚಿನ ಸಂಖ್ಯೆಯಲ್ಲಿ ಸಸಿ ನೆಟ್ಟು ಅವುಗಳನ್ನು



ಪೋಷಿಸುವ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಬೇಕು ಸಾಲುಮರದ ತಿಮ್ಮಕ್ಕನಂತೆ ನಾವೆಲ್ಲರೂ ಕನಿಷ್ಠ ವರ್ಷಕ್ಕೆ ಎರಡು ಸಸಿ ನೆಡುವ ಸಂಕಲ್ಪ ಮಾಡಬೇಕು ಎಂದು ಕರೆ ನೀಡಿದರು.

ಪರಿಸರ ಸಂರಕ್ಷಣೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ, ಅದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ನಂತರ ಸುಭಾಷ್ ಚಂದ್ರ ಹೂಲಗೇರಿ ಮಾತನಾಡಿ ನಗರದ ಪ್ರಮುಖ ರಸ್ತೆ ಬದಿಗಳಲ್ಲಿ ಹಾಗೂ ಸರ್ಕಾರಿ ಶಾಲೆಯ ಆವರಣದಲ್ಲಿ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಪರಿಸರ ಉಳಿಸುವ ಮೂಲಕ ನಮ್ಮ ಜೀವ ಕಾಪಾಡಿಕೊಳ್ಳಬೇಕಿದೆ ಎಂದರು.

ನಿಕಟಪೂರ್ವ ಗ್ರಾಪಂ ಸದಸ್ಯರಾದ ಬಾಳಪ್ಪ ಕೊಡಗಲಿ,ಕಾಂಗ್ರೆಸ್ ಯುವ ನಾಯಕ ತಿಪ್ಪಣ್ಣ ಮಡ್ಡೇರ, ಸೇರಿದಂತೆ ಗ್ರಾಪಂ ಸಿಬ್ಬಂದಿ ವರ್ಗ, ಎನ್‌ಎಂಎಲ್ ಆರ್ ಪ್ರಮುಖರು, ಸ್ವಸಹಾಯ ಸಂಘದ ಸದಸ್ಯರು ಸಾರ್ವಜನಿಕರು ಇದ್ದರು.

ನೂತನ ತಾಲೂಕಾಧ್ಯಕ್ಷರಾಗಿ ಶಿವಮೂರ್ತಿ ಆಯ್ಕೆ

ಯಲಬುರ್ಗಾ: ಜಿಲ್ಲಾ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘದ ಅಧ್ಯಕ್ಷರ ನೇತೃತ್ವದಲ್ಲಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಶನಿವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಕ್ಕೆ ನೂತನ ತಾಲೂಕಾಧ್ಯಕ್ಷರನ್ನಾಗಿ ಶಿವಮೂರ್ತಿ ಇಟಗಿ ಅವರನ್ನು ಚುನಾವಣೆ ಮೂಲಕ ಆಯ್ಕೆ ಮಾಡಲಾಯಿತು.

ಬಳಿಕ ಜಿಕಕಾನಿಪ ಧ್ವನಿ ಸಂಘದ ಅಧ್ಯಕ್ಷ ಸುನೀಲ ಮಠದ ಮಾತನಾಡಿ, ಪತ್ರಕರ್ತರು ಪತ್ರಿಕಾ ರಂಗ ಪ್ರಜಾಪ್ರಭುತ್ವದ ಬಲಿಷ್ಠತೆ ಹಾಗೂ ಸದೃಢ ಭಾರತ ನಿರ್ಮಾಣಕ್ಕೆ ಬಹುಮುಖ್ಯ ಪಾತ್ರ ವಹಿಸಿದೆ. ಸಮಾಜಕ್ಕೆ ತಪ್ಪು ಸರಿ ಪ್ರಸಾರ ಮಾಡುವುದರ ಜೊತೆಗೆ ಸಮಾಜಮುಖಿ ಕೆಲಸದಲ್ಲಿ ಪತ್ರಕರ್ತರು ತಮ್ಮನ್ನು ತೊಡಗಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮುತ್ತುದೊಡ್ಡನಿಹಾಗೂಗೌರವಾಧ್ಯಕ್ಷ ಮಹೇಶ ಕಲ್ಮಠ ಮಾತನಾಡಿ, ಸಂಘಕ್ಕೆ ಎಲ್ಲರೂ ಬದ್ಧರಾಗಿ ಪತ್ರಕರ್ತರು ನಡೆದುಕೊಂಡು ಸಮಾಜದಲ್ಲಿ ಒಳ್ಳೆಯ ಕಾರ್ಯಗಳನ್ನು ಮಾಡುವ ಮೂಲಕ ಇತರರಿಗೆ ಮಾದರಿ ಯಾಗಬೇಕು ಎಂದು ಹೇಳಿದರು.



ಜಿಲ್ಲಾ ಪದಾಧಿಕಾರಿಗಳಾದ ವಿರೇಶ ಹಿರೇಮಠ ಮತ್ತು ಸಲೀಂ ಅಮರಾವತಿ ಮಾತನಾಡಿ, ನಮ್ಮ ಧ್ವನಿ ಸಂಘದ ರಾಜ್ಯಾಧ್ಯಕ್ಷರಾದ ಮಲ್ಲಿಕಾರ್ಜುನ ಬಂಗ್ಲೆ ಅವರು ವಸ್ತು ನಿಷ್ಠೆ ವರದಿ ಮಾಡುವ ಪತ್ರಕರ್ತಕರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು ದೊರಕಿಸಿ ಕೊಡುವ ಅತ್ಯಂತ ಪ್ರಮಾಣಿಕವಾಗಿ ಶ್ರಮಿಸುತ್ತಿದ್ದಾರೆ ಎಂದರು.

ನೂತನ ತಾಲೂಕಾಧ್ಯಕ್ಷ ಶಿವಮೂರ್ತಿ ಇಟಗಿ ಮಾತನಾಡಿ, ಎಲ್ಲ ಪತ್ರಕರ್ತರು ನನ್ನ ಮೇಲೆ ಅಭಿಮಾನ,ವಿಶ್ವಾಸವಿಟ್ಟು ಆಯ್ಕೆ ಮಾಡಿದ್ದಕ್ಕೆ ಎಲ್ಲರಿಗೂ ಸದಾ ಚಿರಋಣಿಯಾಗಿರುತ್ತೇನೆ ಎಂದರು.

ಪತ್ರಕರ್ತರರಾದ ವಿ.ಎಸ್. ಶಿವಪ್ಪಯ್ಯನಮಠ, ಶ್ರೀಕಾಂತಗೌಡ ಮಾಲಿಪಾಟೀಲ, ದೇವರಾಜ ದೊಡ್ಮನಿ, ಮುತ್ತಣ್ಣ ಆದಿ, ಎಸ್. ಕೆ.ದಾನಕೈ, ಹುಸೇನ ಮೋತೆಖಾನ, ಶಶಿಧರ ಹೊಸ್ಮನಿ, ಮಲ್ಲು ಹಡಪದ, ಶರಣಪ್ಪ ಆಡೀನ್, ಕಳಕೇಶ ಬೇವಿನಗಿಡದ, ಮೌನೇಶ ವಜ್ರಬಂಡಿ, ಶ್ರೀಕಾಂತ ಅಂಗಡಿ, ನೀಲಪ್ಪ ಖಾನಾವಳಿ, ಶ್ಯಾಮೀದ್ ತಾಳಕೇರಿ ಮತ್ತಿತರರು ಇದ್ದರು.

ಕಿರುಸುದ್ದಿ

ಸ್ವಯಂ ಪ್ರೇರಣೆಯಿಂದ ಪರಿಸರ ರಕ್ಷಣೆ ಸಾಧ್ಯ

ಹಗರಿಬೊಮ್ಮನಹಳ್ಳಿ: ಪ್ರತಿಯೊಂದು ಜೀವಿಗೂ ಭೂಮಿಯ ಮೇಲೆ ಬದುಕುವ ಹಕ್ಕಿದೆ ಪರಿಸರ ನಾಶವಾದಂತೆ ಕಾಡಿನ ಪ್ರಾಣಿಗಳು ನಾಡಿನೊಳಗೆ ಬಂದು ಮನುಷ್ಯ ಕಾಡು ಪ್ರಾಣಿಗಳ ಸಂಘರ್ಷದಿಂದ ಸಾವು ನೋವು ಸಂಭವಿಸಿವೆ. ಆದ್ದರಿಂದ ಕಾಡು ಬೆಳೆಸುವ ಮೂಲಕ ನಾಡನ್ನು ಉಳಿಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ಸಹಾಯಕ ಸರ್ಕಾರಿ ಅಭಿಯೋಜಕ ಟಿ.ರಾಘವೇಂದ್ರ ತಿಳಿಸಿದರು.

ಪಟ್ಟಣದ ಹಳೆ ಊರಿನ ಜ್ಞಾನ ಗಂಗಾ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಹಗರಿಬೊಮ್ಮನಹಳ್ಳಿ ತಾಲೂಕು ವಕೀಲರ ಸಂಘ ಕಾನೂನು ಸೇವಾ ಸಮಿತಿ ಹಾಗೂ ಶಾಲಾ ಆಡಳಿತ ಮಂಡಳಿ ಸಾಮಾಜಿಕ ಮತ್ತು ವಲಯ ಅರಣ್ಯ ಅಧಿಕಾರಿಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆಯ ಅಂಗವಾಗಿ ಸಸಿಗೆ ನೀರು ಹಾಕುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಶಾಲೆಯ ಮುಖ್ಯ ಶಿಕ್ಷಕ ವೀರೇಶ್ ಬಸಟ್ಟಿ ಮಾತನಾಡಿದರು.ವಕೀಲರ ಸಂಘದ ಕಾರ್ಯದರ್ಶಿ ಡಿ.ಮಂಜಣ್ಣ ಜಂಟಿ ಕಾರ್ಯದರ್ಶಿ ಕೆ.ಪ್ರಹ್ಲಾದ್ ವಕೀಲರಾದ ಎನ್.ಗುರು ಬಸವರಾಜ, ಯಾಶ್ಮಿನ್ ಎಚ್.ಸಿ. ನ್ಯಾಯಾಲಯದ ಸಿಬ್ಬಂದಿ ಸತೀಶ್ ಶಾಲೆಯ ಶಿಕ್ಷಕರಾದ ಬಿ.ಎಂ.ವೀರಯ್ಯ ನಾಗರಾಜ ಅರಣ್ಯ ಇಲಾಖೆಯ ಸಿಬ್ಬಂದಿ ಕೆ.ಎಂ.ಮಲ್ಲಿಕಾರ್ಜುನ ಮಾಬುಸಾಬ್ ಇತರರಿದ್ದರು.

ವ್ಯಕ್ತಿತ್ವ ವಿಕಸನಕ್ಕೆ ಎನ್ಎಸ್ಎಸ್ ಉತ್ತಮ ವೇದಿಕೆ



ಸಿರುಗುಪ್ಪ: ವಿದ್ಯಾರ್ಥಿಗಳಲ್ಲಿ ಸ್ವಯಂಪ್ರೇರಿತ ಶಿಸ್ತು, ನಾಯಕತ್ವದ ಗುಣಗಳು, ಮತ್ತು ಸಮಯಪ್ರಜ್ಞೆಯನ್ನು ಬೆಳೆಸುವುದರೊಂದಿಗೆ ಸಮಾಜ ಸೇವೆಯ ಮೂಲಕ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ರಾಷ್ಟ್ರೀಯ ಸೇವಾ ಯೋಜನೆ ಅತ್ಯುತ್ತಮ ವೇದಿಕೆಯಾಗಿದೆ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಚಾರ್ಯ ಜಿನ್ನಿನ ಕೊಟ್ರಪ್ಪ ಹೇಳಿದರು.

ನಗರದ ಡ್ರೈವರ್ ಕಾಲೋನಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆಯ ಎ ಮತ್ತು ಬಿ ಘಟಕಗಳಿಂದ ಶುಕ್ರವಾರ ನಡೆದ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಪ್ರಜಾಪ್ರಭುತ್ವದಲ್ಲಿ ಯುವಜನರನ್ನು ಸದೃಢಗೊಳಿಸುವಲ್ಲಿ ಭಾರತ ಸರ್ಕಾರದ ಸ್ಕೌಟ್ಸ್ ಗೈಡ್ಸ್, ರಾಷ್ಟ್ರೀಯ ಸೇವಾ ಯೋಜನೆ, ನ್ಯಾಷನಲ್ ಕ್ರೆಡಿಟ್ ಕ್ರಾಪ್, ಇವುಗಳು ಸಹಪಠ್ಯ ಚಟುವಟಿಕೆಗಳಿಂದ ವಿದ್ಯಾರ್ಥಿಗಳಲ್ಲಿ ದೇಶಭಕ್ತಿಯನ್ನು, ತ್ಯಾಗಭಾವನೆಯನ್ನು, ಸಮರ್ಪಣ ಭಾವವನ್ನು ಮೂಡಿಸುತ್ತವೆ. ಹಾಗಾಗಿ ಪ್ರಸ್ತುತ ವಿದ್ಯಾರ್ಥಿಗಳು ಇವುಗಳೆಡೆಗೆ ಆಕರ್ಷಿತರಾಗಬೇಕೆಂದು ಕರೆ ನೀಡಿದರು. ಶಿಬಿರದ ವರದಿಯನ್ನು ಶಿಬಿರಧಿಕಾರಿ ಡಾ.ಕೆ. ಎಂ.ಚಂದ್ರಕಾಂತ್ ವಾಚನ ಮಾಡಿದರು.

ವಿದ್ಯಾರ್ಥಿಗಳು ಶಿಬಿರದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.ರಾಷ್ಟ್ರೀಯ ಸೇವಾ ಯೋಜನೆಯ ಬಿ ಘಟಕದಾಧಿಕಾರಿ ಬಕಡೆ ಪಂಪಾಪತಿ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರು ಬ್ಯಾಳೆ ಮಂಜುಳಾ, ಶಾಲಾ ಉಸ್ತುವಾರಿ ಸಮಿತಿಯ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಸಿದ್ದಪ್ಪ, ಗ್ರಂಥಪಾಲಕ ಯಮನೂರಪ್ಪ, ಪ್ರಥಮ ದರ್ಜೆ ಸಹಾಯಕ ಪೃಥ್ವಿರಾಜ್, ಉಪನ್ಯಾಸಕರಾದ ರಾಮಣ್ಣ ಪೂಜಾರಿ, ನರೇಶ್, ಪ್ರಶಾಂತ್ ಬಾಬು ಟಿ.ಎಸ್., ಶಿಬಿರಾರ್ಥಿಗಳು ಭಾಗವಹಿಸಿದ್ದರು.

ವಸತಿ ಯೋಜನೆ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ವಿಜಯನಗರ: ಜಿಲ್ಲೆಯ ವ್ಯಾಪ್ತಿಯಲ್ಲಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಸಮುದಾಯದ ವಸತಿ ರಹಿತರಿಗೆ ವಸತಿ ಯೋಜನೆಯಡಿ ಈಗಾಗಲೇ ಅರ್ಜಿ ಆಹ್ವಾನಿಸಲಾಗಿದ್ದು,ಅರ್ಜಿ ಸಲ್ಲಿಕೆ ಕೊನೆಯ ದಿನವನ್ನು ಜೂ.15ರವರೆಗೆ ವಿಸ್ತರಿಸಲಾಗಿದೆ.

ಅರ್ಹ ಫಲಾನುಭವಿಗಳು ಸಂಬಂಧಪಟ್ಟ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಅರ್ಜಿ ನಮೂನೆ ಪಡೆದು ಭರ್ತಿ ಮಾಡಿ ಅಗತ್ಯ ದಾಖಲೆಗಳೊಂದಿಗೆ ಅದೇ ಕಚೇರಿಗೆ ಸಲ್ಲಿಸುವಂತೆ ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ವೈ.ಎ.ಕಾಳೆ ತಿಳಿಸಿದ್ದಾರೆ.



ಹಗರಿಬೊಮ್ಮನಹಳ್ಳಿ: ಪಟ್ಟಣದ ಹಳೆ ಊರಿನ ಜ್ಞಾನ ಗಂಗಾ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ತಾಲೂಕು ವಕೀಲರ ಸಂಘ ಕಾನೂನು ಸೇವಾ ಸಮಿತಿ ಹಾಗೂ ಶಾಲಾ ಆಡಳಿತ ಮಂಡಳಿ ಸಾಮಾಜಿಕ ಮತ್ತು ವಲಯ ಅರಣ್ಯ ಅಧಿಕಾರಿಗಳ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ಪರಿಸರ ದಿನಾಚರಣೆಯ ಅಂಗವಾಗಿ ಸಸಿಗೆ ನೀರು ಹಾಕುವ ಮೂಲಕ ಚಾಲನೆ ಸಹಾಯಕ ಸರ್ಕಾರಿ ಅಭಿಯೋಜಕ ಟಿ.ರಾಘವೇಂದ್ರ ನೀಡಿದರು.

'ವನಮಹೋತ್ಸವ' ಕಾರ್ಯಕ್ರಮಕ್ಕೆ ಚಾಲನೆ

ಬಳ್ಳಾರಿ: ನಾವೆಲ್ಲರೂ ಪ್ರಕೃತಿಯಲ್ಲಿನ ಮರ-ಗಿಡಗಳನ್ನು ಹಾಗೂ ನದಿ-ಜಲಗಳನ್ನು ಸಂರಕ್ಷಿಸುವ ಮತ್ತು ಪೋಷಿಸುವ ಜವಾಬ್ದಾರಿಯನ್ನು ಹೊರಬೇಕು ಎಂದು ಬಾಲ ಭಾರತಿ ಕೇಂದ್ರೀಯ ವಿದ್ಯಾಲಯದ ಆಡಳಿತ ಮಂಡಳಿ ಕಾರ್ಯದರ್ಶಿ ಪ್ರಸನ್ನ ಜಿ. ಹೇಳಿದರು.

ನಗರದ ಬಾಲ ಭಾರತಿ ಕೇಂದ್ರೀಯ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಹಮ್ಮಿಕೊಂಡಿದ್ದ 'ವನಮಹೋತ್ಸವ' ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ಸಂದರ್ಭದಲ್ಲಿ ಅವರು 'ಮನೆಗೊಂದು ಮರ, ಊರಿಗೊಂದು ವನ' ಎಂಬ ಜನಪ್ರಿಯ ಘೋಷವಾಕ್ಯ ಸ್ಮರಿಸುತ್ತಾ, ಪರಿಸರ ಸಂರಕ್ಷಣೆಯ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು.

ವನಮಹೋತ್ಸವ ನಿಮಿತ್ತ ಶಾಲೆಯ ಆವರಣದಲ್ಲಿ ವಿವಿಧ ಜಾತಿಯ ಉಪಯುಕ್ತ ಸಸಿಗಳನ್ನು ನೆಡಲಾಯಿತು. ಶಾಲೆಯ ಎಲ್ಲ ವಿದ್ಯಾರ್ಥಿಗಳು ಪರಿಸರವನ್ನು ಉಳಿಸುವ ಮತ್ತು ಮರ-ಗಿಡಗಳನ್ನು ಸದಾ ಬೆಳೆಸಿ, ಪೋಷಿಸುವ ಜಾಗೃತಿಯ 'ಹಸಿರು ಸಂಕಲ್ಪ' ತೊಟ್ಟರು. ಈ ಸಂದರ್ಭದಲ್ಲಿ ಮಕ್ಕಳ ದೈಹಿಕ ವಿಕಾಸಕ್ಕಾಗಿ ಶಾಲಾ ಆವರಣದಲ್ಲಿ ಹೊಸದಾಗಿ ನಿರ್ಮಿಸಲಾದ ಸುಸಜ್ಜಿತ ಆಟದ ಮೈದಾನವನ್ನು ಕಾರ್ಯದರ್ಶಿ ಪ್ರಸನ್ನ ಜಿ. ಅವರು ಅಧಿಕೃತವಾಗಿ ಉದ್ಘಾಟಿಸಿ, ವಿದ್ಯಾರ್ಥಿಗಳಿಗೆ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಶಾಲೆಯ ಆಡಳಿತ ಮಂಡಳಿಯ ಪದಾಧಿಕಾರಿಗಳು, ಪ್ರಾಂಶುಪಾಲರು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ನೂರಾರು ವಿದ್ಯಾರ್ಥಿಗಳು ಭಾಗವಹಿಸಿದ್ದರು.



ಬಳ್ಳಾರಿ: ನಗರದ ಬಾಲ ಭಾರತಿ ಕೇಂದ್ರೀಯ ವಿದ್ಯಾಲಯದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ತ ಹಮ್ಮಿಕೊಂಡಿದ್ದ 'ವನಮಹೋತ್ಸವ' ಕಾರ್ಯಕ್ರಮಕ್ಕೆ ಬಾಲ ಭಾರತಿ ಕೇಂದ್ರೀಯ ವಿದ್ಯಾಲಯದ ಆಡಳಿತ ಮಂಡಳಿ ಕಾರ್ಯದರ್ಶಿ ಪ್ರಸನ್ನ ಜಿ. ಚಾಲನೆ ನೀಡಿ ಮಾತನಾಡಿದರು.

ಜಿಲ್ಲಾ ಮಟ್ಟದ ಸಭೆ | ಮನೋಜ್ ಜೈನ್ ಸೂಚನೆ

ನೀರಿನ ಸಮಸ್ಯೆ ಆಗದಂತೆ ನಿಗಾವಹಿಸಿ

ಯಾದಗಿರಿ: ಜಿಲ್ಲೆಯ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಕೊರತೆಯಾಗದಂತೆ ನಿಗಾ ವಹಿಸುವ ಜೊತೆಗೆ ಪ್ರತಿಗ್ರಾಮಕ್ಕೆ ಸಂಬಂಧಿಸಿದ ಅಧಿಕಾರಿಗಳು ಕ್ಷೇತ್ರ ಭೇಟಿ ನೀಡಿ ನೀರಿನ ಸಮಸ್ಯೆಗಳ ನಿವಾರಣೆಗೆ ವಿಶೇಷ ನಿಗಾವಹಿಸುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಜೈನ್ ಸೂಚನೆ ನೀಡಿದರು.

ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ವಿವಿಧ ಇಲಾಖೆಗಳ ಮೇ ಮಾಹೆವರಗಿನ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿ,ಶುದ್ಧ ನೀರು ಪಡೆಯುವುದು ಜನರ ಹಕ್ಕು. ನೂರು ಜನರಿದ್ದರೂ ಆ ಗ್ರಾಮದಲ್ಲಿ ನೀರಿನ ಸಮಸ್ಯೆಯಾದರೆ ಸಂಬಂಧಿಸಿದ ಅಧಿಕಾರಿಗಳು ಸಕಾಲಕ್ಕೆ ಸ್ಪಂದಿಸಬೇಕು ಎಂದರು.

ಪ್ರತಿವಾರಸಮಸ್ಯೆ ಇರುವಕಡೆ ಭೇಟಿನೀಡಬೇಕು. ವಿಶೇಷವಾಗಿ ಗ್ರಾಪಂ ಕೇಂದ್ರಕ್ಕೆ ಕ್ಷೇತ್ರ ಭೇಟಿ ನೀಡಿ, ಸಮಸ್ಯೆ ಪರಿಹರಿಸಲು ಪ್ರಯತ್ನಿಸಬೇಕು. ಇ.ಓ ಗಳು ಪ್ರತಿ ವಾರ ಸಾರ್ವಜನಿಕ ಕುಂದುಕೊರತೆ ಸಭೆ ನಡೆಸಬೇಕು. ನೋಡಲ್ ಅಧಿಕಾರಿಗಳು ಕೂಡ ಪ್ರತಿ ಗ್ರಾಮ ಹಾಗೂ ತಾಲೂಕು ಪಂಚಾಯಿತಿವಾರು ನೀರಿನ ಸಮಸ್ಯೆ ನಿವಾರಣೆ ಕುರಿತು ನಿಗಾ ವಹಿಸುವಂತೆ ತಿಳಿಸಿದ ಅವರು, ತಹಶೀಲ್ದಾರರು ಹಾಗೂ ಸಂಬಂಧಿಸಿದ ಅಧಿಕಾರಿಗಳು ವಿಶೇಷ ಗಮನ ನೀಡುವಂತೆಯೂ ಸೂಚನೆ ನೀಡಿದರು.

ಜಿಲ್ಲೆಯ ಯಾದಗಿರಿ, ಗುರುಮಠಕಲ್, ವಡಗೇರಾ ತಾಲೂಕುಗಳ ಕುಡಿಯುವ ನೀರಿನ ಸಮಸ್ಯಾತ್ಮಕ ಗ್ರಾಮಗಳಲ್ಲಿ ಅವಶ್ಯಕ ಗಮನ ನೀಡಬೇಕು. ಗುರುಮಠಕಲ್ 36 ಗ್ರಾಮಗಳಿಗೆ ನೀರು ಪೂರೈಸುವ ಯೋಜನೆ ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳಬೇಕು. ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ನೀರಿನ ಸಮರ್ಪಕ ನಿರ್ವಹಣೆ ಮಾಡಬೇಕು ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಸ್ವಚ್ಛತೆ ಕುರಿತಂತೆ ನಗರಸಭೆ ಆಯುಕ್ತರು ಹಾಗೂ ಸ್ಯಾನಿಟರಿ ಇನ್ಸ್‌ಪೆಕ್ಟರ್‌ಗಳು ವಾರ್ಡ್ ವಾರು ಕ್ಷೇತ್ರ ಭೇಟಿ ನೀಡಿ ಸೂಕ್ತ ಕ್ರಮ ಕೈಗೊಳ್ಳಬೇಕು. ಗಾಂಧಿ ಚೌಕ್, ಗಂಜ್, ಹನುಮಾನ್ ಚೌಕ್, ಲುಂಬಿನಿ ಉದ್ಯಾನವನ, ಹೊಸಳ್ಳಿ ಕ್ರಾಸ್, ರೈಲ್ವೆ ಸ್ಟೇಷನ್ ವ್ಯಾಪ್ತಿಯಲ್ಲಿನ ರಸ್ತೆಗಳ ಸುಧಾರಣೆಗೆ ಗಮನ ನೀಡಬೇಕು ಎಂದರು.

ಡಿಸಿ ರಾಹುಲ್ ತುಕಾರಾಮ ಪಾಂಡ್ವೆ ಅವರು, ಸಭೆಯಲ್ಲಿ ಕಾರ್ಯದರ್ಶಿಗಳು ಸೂಚಿಸಿದಂತೆ ಕಾಲ ಕಾಲಕ್ಕೆ ಪ್ರಗತಿ ಪರಿಶೀಲನೆ ನಡೆಸಲಾಗುವುದು. ಮುಂದಿನ ಸಭೆಯಲ್ಲಿ ಸೂಕ್ತ ಕ್ರಮಗಳ ವರದಿಯೊಂದಿಗೆ ಅಧಿಕಾರಿಗಳು ಆಗಮಿಸುವಂತೆ ತಿಳಿಸಿದರು.

ಜಿಪಂ ಸಿಇಒ ಲವೀಶ್ ಒರಡಿಯಾ ಅವರು, ಜಿಲ್ಲೆಯಲ್ಲಿ 471 ಆರ್‌ಒ ಪ್ಲಾಂಟ್‌ಗಳ ಪೈಕಿ 332 ಕಾರ್ಯನಿರ್ವಹಿಸುತ್ತಿವೆ. ಬಾಕಿ ಇರುವ ಆರ್‌ಒ ಪ್ಲಾಂಟ್‌ಗಳ ದುರಸ್ತಿಗೆ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪೃಥ್ವಿಕ್ ಶಂಕರ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



> **ಜಿಲ್ಲೆಯಲ್ಲಿ ಭತ್ತದ ಬದಲಾಗಿ ಪರ್ಯಾಯ ಬೆಳೆಗಳ ಬಗ್ಗೆ ರೈತರಲ್ಲಿ ಸೂಕ್ತ ಜಾಗೃತಿಯನ್ನು ಮೂಡಿಸಬೇಕು. ಬೀಜ, ರಸಗೊಬ್ಬರಗಳ ಲಭ್ಯತೆ ಅನುಸಾರ ಸಣ್ಣ ಅತಿ ಸಣ್ಣ ರೈತರಿಗೂ ವಿಶೇಷ ಗಮನ ನೀಡಬೇಕು. ಬೀಜ, ರಸಗೊಬ್ಬರ ಸಮಾನ ಹಂಚಿಕೆ ಮಾಡುವಂತೆ ನೋಡಿಕೊಳ್ಳಬೇಕು.**
> ■ ಮನೋಜ್ ಜೈನ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಮುಂದಿನ ವರ್ಷ ಶೇ.100ರಷ್ಟು ಫಲಿತಾಂಶ ತನ್ನಿ

ಬೀದರ: ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಗಳಲ್ಲಿ ಅಗ್ರ ಶ್ರೇಣಿಯಲ್ಲಿ ಉತ್ತೀರ್ಣರಾದ ಔರಾದ(ಬಿ) ಮತ್ತು ಕಮಲನಗರ ತಾಲ್ಲೂಕುಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮಾಜಿ ಸಚಿವರು ಹಾಗೂ ಔರಾದ(ಬಿ) ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಜೂ.5ರಂದು ಔರಾದ(ಬಿ) ಪಟ್ಟಣದಲ್ಲಿ ಸನ್ಮಾನಿಸಿದರು.

ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯ ತಾಲೂಕಿನ ಪ್ರಥಮ ಟಾಪರ್‌ಗಳಿಗೆ 21,000, ದ್ವಿತೀಯ ಟಾಪರ್‌ಗಳಿಗೆ 11,000 ಹಾಗೂ ತೃತೀಯ ಟಾಪರ್‌ಗಳಿಗೆ 7,000 ನಗದು ಬಹುಮಾನ ನೀಡಿದರಲ್ಲದೇ ಮತ್ತು ಶೇ.80ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಉಡುಗೊರೆಯ ಜೊತೆಗೆ ಸಸಿ ನೀಡುವ ಮೂಲಕ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು. ವಿದ್ಯಾರ್ಥಿಗಳ ಸಾಧನೆಗೆ ಪ್ರೋತ್ಸಾಹ ನೀಡಿದ ಅವರ ಪಾಲಕರು ಮತ್ತು ಶಾಲೆಯ ಮುಖ್ಯಗುರುಗಳಿಗೆ ಮತ್ತು ಶೇ.100 ಫಲಿತಾಂಶ ದಾಖಲಿಸಿದ ಶಾಲೆಗಳ ಮುಖ್ಯಗುರುಗಳಿಗೆ ವಿಶೇಷ ಸನ್ಮಾನ ನೀಡಿ ಅಭಿನಂದಿಸಲಾಯಿತು.

ಈ ವೇಳೆ ಮಾತನಾಡಿದ ಶಾಸಕ ಪ್ರಭು ಬಿ.ಚವ್ಹಾಣ, ವಿದ್ಯಾರ್ಥಿಗಳು ಅಂಕಗಳ ಜೊತೆಗೆ ಉತ್ತಮ ಸಂಸ್ಕಾರಗಳನ್ನು ರೂಢಿಸಿಕೊಳ್ಳಬೇಕು. ತಂದೆ-ತಾಯಿಗೆ ಗೌರವ ನೀಡಬೇಕು, ಶಿಕ್ಷಕರ ಮಾರ್ಗದರ್ಶನವನ್ನು ಪಾಲಿಸಬೇಕು. ಶಿಕ್ಷಣದ ಜೊತೆಗೆ ಆಟೋಟ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ ಸರ್ವತೋಮುಖ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು. ಭಾಲ್ಕಿ ಹಿರೇಮಠ ಸಂಸ್ಥಾನದ ಪೂಜ್ಯ ಗುರುಬಸವಪಟ್ಟದೇವರು ಮಾತನಾಡಿದರು. ತಹಶೀಲ್ದಾರ್ ಮಹೇಶ ಪಾಟೀಲ, ತಾಪಂ ಇಒ ಕಿರಣ ಪಾಟೀಲ, ಬಿಇಒ ವಾಗಂಬರ ಗಾಯಕವಾಡ, ಕ್ಷೇತ್ರ ಸಮನ್ವಯಾಧಿಕಾರಿ ಪ್ರಕಾಶ ರಾಠೋಡ, ಮುಖಂಡರಾದ ವಸಂತ ಬಿರಾದಾರ, ಧೊಂಡಿಬಾ ನರೋಟೆ, ಶಿವಾಜಿರಾವ ಪಾಟೀಲ ಮುಂಗನಾಳ, ಶಿವರಾಜ ಅಲ್ಮಾಜೆ, ಸಚಿನ ರಾಠೋಡ, ರಾಮಶೆಟ್ಟಿ ಪನ್ನಾಳೆ, ಪ್ರತೀಕ ಚವ್ಹಾಣ, ಇಲಾಖೆಯ ಸಂಜಯ ಮೇತ್ರೆ, ಶಾಲಿವಾನ ಉದಗೀರೆ, ಬಲಭೀಮ ಕುಲಕರ್ಣಿ, ರಾಜಕುಮಾರ ಹಲಮಂಡಗೆ, ನಯೀಮೋದ್ದಿನ, ಪ್ರವೀಣ ಕೋಳೆಕರ್, ಬಾಲಾಜಿ ಅಮರವಾಡಿ, ಓಂಪ್ರಕಾಶ ದಡ್ಡೆ, ಗುರುನಾಥ ರಾಜಗೀರಾ ಇದ್ದರು.



ಜೆಎಸ್‌ಡಬ್ಲ್ಯೂ ಆವರಣದಲ್ಲಿ ಪರಿಸರ ದಿನಾಚರಣೆ



ಗಾದಿಗನೂರು: ಅಂತಾರಾಷ್ಟ್ರೀಯ ಪರಿಸರ ದಿನಾಚರಣೆ ಅಂಗವಾಗಿ ಆರ್ಸೆಲೋರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಕಂಪನಿಯಿಂದ ಜೆಎಸ್‌ಡಬ್ಲ್ಯೂ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಜೆಎಸ್‌ಡಬ್ಲ್ಯೂ (ಎವಿಪಿ) ಯು.ಸಿ.ಮಿಶ್ರಾ ಮಾತನಾಡಿ, ಜೂ.5ರಂದು ನಾವೆಲ್ಲರೂ 'ವಿಶ್ವ ಪರಿಸರ ದಿನ'ವನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುತ್ತಿದ್ದೇವೆ. ಪರಿಸರವೇ ನಮ್ಮ ಜೀವನದ ಆಧಾರವಾಗಿದೆ. ಶುದ್ಧ ಗಾಳಿ, ಕುಡಿಯುವ ನೀರು, ಆಹಾರ ಮತ್ತು ನಮಗೆ ಬದುಕಲು ಬೇಕಾದ ಎಲ್ಲ ಸಂಪನ್ಮೂಲಗಳನ್ನು ಪ್ರಕೃತಿಯು ನಮಗೆ ಉಚಿತವಾಗಿ ನೀಡಿದೆ. ಆದರೆ ಇಂದಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆಯಿಂದಾಗಿ ನಮ್ಮ ಪರಿಸರವು ಗಂಭೀರ ಮಾಲಿನ್ಯವನ್ನು ಎದುರಿಸುತ್ತಿದೆ ಎಂದರು.

ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ ಪ್ರತಿಯೊಬ್ಬರು ಇಂದು ಪರಿಸರ ರಕ್ಷಣೆಯನ್ನು ಮಾಡುವುದು ಅವಶ್ಯಕತೆಯಾಗಿದೆ. ಸಕಲ ಜೀವಿಗಳಿಗೂ ಉಸಿರಾಡಲು ಶುದ್ಧವಾದ ಗಾಳಿ ಬೇಕಾಗಿರುವುದರಿಂದ ಮರಗಳನ್ನು ಬೆಳೆಸುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ ಎಂದು ತಿಳಿಸಿದರು.

ಹೆಚ್ಚುತ್ತಿರುವ ತಾಪಮಾನ ಮತ್ತು ಹವಾಮಾನ ವೈಪರೀತ್ಯಗಳು ಇಡೀ ಭೂಮಂಡಲಕ್ಕೆ ಎಚ್ಚರಿಕೆಯ ಗಂಟೆಯಾಗಿವೆ. ಪ್ರಕೃತಿಯನ್ನು ರಕ್ಷಿಸುವುದು ಎಂದರೆ ನಮ್ಮ ಸ್ವಂತ ಭವಿಷ್ಯವನ್ನು ರಕ್ಷಿಸಿಕೊಳ್ಳುವುದೇ ಆಗಿದೆ. ನಾವು ಪ್ರತಿದಿನ ಮಾಡುವ ಸಣ್ಣ ಸಣ್ಣ ಕೆಲಸಗಳು ಕೂಡ ಪರಿಸರದ ಮೇಲೆ ದೊಡ್ಡ ಪ್ರಭಾವ ಬೀರುತ್ತವೆ. ನಾವು ಇಂದು ಕನಿಷ್ಠ ಒಂದು ಗಿಡವನ್ನು ನೆಡುವ ಸಂಕಲ್ಪ ಮಾಡಬೇಕು. ಜೊತೆಗೆ, ಏಕಬಳಕೆಯ ಪ್ಲಾಸ್ಟಿಕ್ ಬಳಕೆಯನ್ನು ನಿಲ್ಲಿಸಿ, ಮಳೆನೀರು ಕೊಯ್ಲು ಮತ್ತು ನೀರಿನ ಮಿತಬಳಕೆಯನ್ನು ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿ.ಎಸ್.ಪ್ರಸಾದ್, ಎಜಿಎಂ ಚಂದ್ರಮೋಹನ್ ರೆಡ್ಡಿ, ಮ್ಯಾನೇಜರ್ ಜಿ.ರಾಘವ್ ರೆಡ್ಡಿ, ಎ.ಎಂ. ರಾಮಚಂದ್ರ ಜಗತಪ್ ಮೆನೇಜರ್ ಶಬ್ಬೀರ್ ಹುಸೇನ್ ಸುರಕ್ಷತಾ ಅಧಿಕಾರಿಗಳು ಹಾಗೂ ಕಾರ್ಮಿಕ ಸಿಬ್ಬಂದಿ ಭಾಗವಹಿಸಿದ್ದರು.

ಜಮೀರ್ ಅಹಮದ್‌ಗೆ ಡಿಸಿಎಂ ಹುದ್ದೆ ನೀಡಿ

ವಿಜಯನಗರ: ಮಾಜಿ ಸಚಿವ ಹಾಗೂ ಹಿರಿಯ ಶಾಸಕ ಬಿ.ಜೆಡ್.ಜಮೀರ್ ಅಹಮದ್ ಖಾನ್ ಅವರಿಗೆ ಸಚಿವರನ್ನಾಗಿಸಿ, ಉಪಮುಖ್ಯಮಂತ್ರಿ ಹುದ್ದೆ ನೀಡುವಂತೆ ಒತ್ತಾಯಿಸಿ ಹೊಸಪೇಟೆಯಲ್ಲಿ ಶನಿವಾರ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಅವರ ಅಭಿಮಾನಿಗಳು ಡಾ.ಪುನೀತ್ ರಾಜ್ ಕುಮಾರ್ ವೃತ್ತದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಹಿರಿಯ ಮುಖಂಡ ಮತ್ತು ಬಡವರ ಬಂಧು ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ಮತ್ತು ಉಪಮುಖ್ಯಮಂತ್ರಿ ಸ್ಥಾನವೂ ನೀಡಬೇಕು. ಒಂದು ವೇಳೆ ಉಪಮುಖ್ಯಮಂತ್ರಿ ಸ್ಥಾನ ನೀಡದಿದ್ದರೆ ಮುಂಬರುವ ದಿನಗಳಲ್ಲಿ ಉಗ್ರವಾದ ಹೋರಾಟ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದರು.

ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಕಾಂಗ್ರೆಸ್ ಪಕ್ಷದ ಮುಖಂಡ ಹಾಗೂ ವಕೀಲರ ಸಂಘದ ಜಿಲ್ಲಾಧ್ಯಕ್ಷ ಗುಜ್ಜಲ್ ನಾಗರಾಜ ಮಾತನಾಡಿ, ಸಚಿವ ಸಂಪುಟದಲ್ಲಿ ಅಲ್ಪಸಂಖ್ಯಾತ ಸಮುದಾಯಕ್ಕೆ ಸೂಕ್ತ ಪ್ರಾತಿನಿಧ್ಯ ನೀಡುವುದು ಕಾಂಗ್ರೆಸ್ ಪಕ್ಷದ ಸಾಮಾಜಿಕ ನ್ಯಾಯದ ಬದ್ಧತೆಗೆ ಅನುಗುಣವಾಗಿದೆ. ಈ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಅಲ್ಪಸಂಖ್ಯಾತರ ವಿಶ್ವಾಸವನ್ನು ಗಳಿಸಿರುವ ಜಮೀರ್ ಅಹಮದ್ ಖಾನ್ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಕಾಂಗ್ರೆಸ್ ಪಕ್ಷದ ಹೈಕಮಾಂಡ್ ನ್ನು ಒತ್ತಾಯಿಸಿದ ಅವರು, 15 ದಿನದೊಳಗೆ ಸಚಿವ ಸ್ಥಾನ ನೀಡದಿದ್ದರೆ ಉಗ್ರ ಹೋರಾಟ ನಡೆಸುವುದಾಗಿ ಅವರು ಎಚ್ಚರಿಸಿದರು.

ಯುವ ಕಾಂಗ್ರೆಸ್ ಮುಖಂಡ ಸಿ.ಆರ್.ಭರತ್ ಕುಮಾರ್ ಮಾತನಾಡಿದರು. ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ ತಾರಿಹಳ್ಳಿ ಹನುಮಂತಪ್ಪ, ಕಾಂಗ್ರೆಸ್ ಮುಖಂಡರಾದ ಪಿ.ಬಾಬು, ಜಾವೇದ್, ದಾದಾಪೀರ್, ಅತಾಯ್ ರಸೂಲ್, ಟಿ.ಶಿವಪ್ಪ ಮತ್ತಿತರರಿದ್ದರು.



ಪರಿಸರದ ಸಮತೋಲನ ಕಾಪಾಡಿ: ಪ್ರಭುಗೌಡ



ಹುಣಸಗಿ: ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಜಯ ಕರ್ನಾಟಕ ಜನಪರ ವೇದಿಕೆ ವತಿಯಿಂದ ಪಟ್ಟಣದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ನಂತರ ಮಾತನಾಡಿದ ವೇದಿಕೆಯ ಅಧ್ಯಕ್ಷ ಪ್ರಭುಗೌಡ ಪೋತರೆಡ್ಡಿ, ಪರಿಸರದ ಸಮತೋಲನ ಕಾಪಾಡಲು ಪ್ರತಿಯೊಬ್ಬರೂ ಕನಿಷ್ಠ ಒಂದು ಸಸಿಯನ್ನಾದರೂ ನೆಟ್ಟು ಅದರ ಪಾಲನೆ-ಪೋಷಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು ಎಂದು ತಿಳಿಸಿದರು.

ಗೌರವಾಧ್ಯಕ್ಷ ನೀಲಕಂಠ ಚಿಂಚೋಳಿ ಮಾತನಾಡಿ, ಪರಿಸರ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಾಗದೆ ಪ್ರತಿದಿನವೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಸಂಕಲ್ಪವಾಗಬೇಕು ಎಂದು ತಿಳಿಸಿದರು.

ಸಿದ್ಧಾರೂಡ ನೂಲಿನ, ಸಂಗನಬಸಪ್ಪ ಗೋಗಿ, ರಾಜು ಮಲಗಲದಿನ್ನಿ , ರುದ್ರು ಪಡಶೆಟ್ಟಿ, ರಾಜು ದೇಸಾಯಿ, ಮಲ್ಲಿಕಾರ್ಜುನ ಶೇವಟಿ, ಶಿವರಾಜ್ ಕುಂಬಾರ, ಮಂಜುನಾಥ ನೂಲಿನ, ರಾಮು ರಾಠೋಡ್ ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ವಿವಿಧೆಡೆ ಪರಿಸರ ದಿನ ಆಚರಣೆ: ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಸಿಡಿಸಿ ಅಧ್ಯಕ್ಷ ಬಸವರಾಜ ಸಜ್ಜನ ಸಸಿಗಳನ್ನು ನೆಡುವುದರ ಮೂಲಕ ವಿಶ್ವ ಪರಿಸರ ದಿನಾಚರಣೆ ಆಚರಣೆ ಮಾಡಿದರು.

ಕಾಲೇಜಿನ ಪ್ರಾಚಾರ್ಯ ಸಾಹೇಬಣ್ಣ ಭಜಂತ್ರಿ ಸೇರಿದಂತೆ ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪಟ್ಟಣದ ಸ್ಪಂದನ ಪಬ್ಲಿಕ್ ಶಾಲಾ ಆವರಣದಲ್ಲಿ ಸಂಸ್ಥೆಯ ಅಧ್ಯಕ್ಷ ಮುರಿಗೆಣ್ಣ ದೇಸಾಯಿ ಸಸಿ ನೆಡುವುದರ ಮೂಲಕ ಪರಿಸರ ದಿನಾಚರಣೆ ಆಚರಿಸಿದರು. ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯ



ಹಗರಿಬೊಮ್ಮನಹಳ್ಳಿ: ವಿಶ್ವ ಪರಿಸರ ದಿನದ ಅಂಗವಾಗಿ ಹಗರಿಬೊಮ್ಮನಹಳ್ಳಿ ತಾಲೂಕಿನ ನಂದಿಪುರ ಪುಣ್ಯಕ್ಷೇತ್ರದ ಶ್ರೀಗುರು ಚರಂತೇಶ್ವರ ಪ್ರೌಢಶಾಲೆಯ ಆವರಣದಲ್ಲಿ ಸಸಿ ನೆಡುವ ಮೂಲಕ ಪರಿಸರ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಲೆಯ ಮುಖ್ಯೋಪಾಧ್ಯಾಯ ಬಿಎಚ್ಎಂ ಕೊಟ್ರೇಶ್ ಸಸಿ ನೆಟ್ಟು ಮಾತನಾಡಿದ ಅವರು, ಪರಿಸರ ಸಂರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಿದ್ದು, ಗಿಡಗಳನ್ನು ನೆಡುವುದರ ಜೊತೆಗೆ ಅವುಗಳನ್ನು ಪೋಷಿಸಿ ಬೆಳೆಸುವುದು ಅತ್ಯವಶ್ಯಕವಾಗಿದೆ. ವಿದ್ಯಾರ್ಥಿಗಳು ಪ್ರಕೃತಿಯ ಮಹತ್ವವನ್ನು ಅರಿತು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಹೇಳಿದರು.

ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ವಿರೂಪಾಕ್ಷಿ ಉತ್ತಂಗಿ, ಪ್ರೌಢಶಾಲೆಯ ಸಹ ಶಿಕ್ಷಕರಾದ ಜಿ.ಬಸವರಾಜ್, ವಿನುತಾ ಪಾಟೀಲ, ನಂದಾದೀಪ, ಉಪನ್ಯಾಸಕ ಎಚ್. ಎಂ.ಗುರುಬಸವರಾಜಯ್ಯ ಇತರರಿದ್ದರು.

ಪ್ರೌಢಶಾಲಾ ಆವರಣದಲ್ಲಿ ಬೇವು, ಹೊಂಗೆ, ಮಹಾಗನಿ ಸೇರಿದಂತೆ ವಿವಿಧ ಜಾತಿಯ ಸಸಿಗಳನ್ನು ನೆಟ್ಟು ಅವುಗಳ ಆರೈಕೆಗೆ ಕ್ರಮ ಕೈಗೊಳ್ಳಲು ಮಾಹಿತಿ ನೀಡಲಾಯಿತು.

ಸರ್ಕಾರಿ ಶಾಲೆಗಳಲ್ಲಿ ಸಸಿ ವಿತರಣೆ

ಹೂವಿನಹಡಗಲಿ: ತಾಲೂಕಿನ ಹೊಳಗುಂದಿ ಬಾವಿಹಳ್ಳಿ ಗ್ರಾಮದ ಜಾಗೃತಿ ಸ್ನೇಹ ಬಳಗದಿಂದ ಶುಕ್ರವಾರ ಪರಿಸರ ದಿನಾಚರಣೆ ನಿಮಿತ್ತ ಗ್ರಾಮದ ಅಂಗನವಾಡಿ ಕೇಂದ್ರ, ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಸಸಿ ನಡೆಸಲಾಯಿತು.

ಗ್ರಾಪಂಸದಸ್ಯ ಎಚ್.ಎಂ.ಸ್ವರೂಪಾನಂದ ಮಾತನಾಡಿ, ಚಿಕ್ಕವಯಸ್ಸಿನಿಂದಲ್ಲೇ ಮಕ್ಕಳಲ್ಲಿ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಉಚಿತ ಸಸಿ ವಿತರಿಸುವ ಮೂಲಕ ಸಸಿಗಳನ್ನು ನಡೆಸಲಾಯಿತು. ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಜಾಗೃತಿ ಮೂಡಿಸಿದ್ದೇವೆ ಎಂದರು.

ಎಂ.ಭಾಷಾ ಸಾಹೇಬ್, ಹಳ್ಳಿಕೇರಿ ಮಲ್ಲಿಕಾರ್ಜುನ, ಎಸ್.ಬಿ.ವಿರುಪಾಕ್ಷಪ್ಪ, ಎಂ.ನಾಗನಗೌಡ, ಕೆ.ಗವಿಸಿದ್ದಪ್ಪ, ಎನ್.ಜಯಪ್ಪ, ಕೆ.ಮಂಜುನಾಥ, ಟಿ.ನವೀನ ಕುಮಾರ, ಅಂಗನವಾಡಿ ಕಾರ್ಯಕರ್ತೆ ಎಂ.ಗಂಗಮ್ಮ ಇದ್ದರು.



ಏಳುಬೆಂಚಿಯಲ್ಲಿ ವಿಶ್ವ ಪರಿಸರ ದಿನಾಚರಣೆ



ಕುರುಗೋಡು: ತಾಲೂಕಿನ ಏಳುಬೆಂಚಿ ಗ್ರಾಮದಲ್ಲಿ ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಶುಕ್ರವಾರ ಜರುಗಿತು.

ಈ ವೇಳೆ ಗ್ರಾಪಂ ಕಾರ್ಯದರ್ಶಿ ಹುಲುಗಪ್ಪ ಮಾತನಾಡಿ, ಕೇವಲ ಈ ದಿನದಂದು ಸಸಿ ನೆಡುವುದು ಅಷ್ಟೇ ಅಲ್ಲ ಅದರ ಪಾಲನೆ ಪೋಷಣೆಯನ್ನು ಮಾಡಬೇಕು ಎಂದು ಹೇಳಿದರು. ವಿಆರ್‌ಡ್ಬ್ಯೂ ಭರಮಪ್ಪ ಮಾತನಾಡಿ, ಪರಿಸರ ರಕ್ಷಣೆ ಮಾಡುವುದು ನಮ್ಮೆಲ್ಲರ ಹೊಣೆಯಾಗಿದೆ. ಪರಿಸರ ರಕ್ಷಣೆಯಿಂದ ನಾವು ಆರೋಗ್ಯವಾಗಿ ಇರೋದಕ್ಕೆ ಸಾಧ್ಯ ಮುಂದಿನ ಪೀಳಿಗೆಗೆ ಉಸಿರಾಟದ ತೊಂದರೆಗಳು ಆಗಬಾರದು ಅದಕ್ಕಾಗಿ ಪರಿಸರವನ್ನ ಉಳಿಸುವಂತಹ ಕೆಲಸವನ್ನು ನಾವೆಲ್ಲರೂ ಮಾಡಬೇಕು ಎಂದು ತಿಳಿಸಿದರು. ಶಾಲೆ ಶಿಕ್ಷಕರಾದ ಪಾಂಡುರಂಗ, ಗ್ರಾಪಂ ಕಾರ್ಯದರ್ಶಿ ಹುಲುಗಪ್ಪ, ವಿಆರ್‌ಡ್ಬ್ಯೂ ಭರಮಪ್ಪ ಕೆ., ಅಕ್ಕನಾಗಮ್ಮ, ಎರಿಯಮ್ಮ, ಹೊನ್ನೂರಸ್ವಾಮಿ ಇತರರಿದ್ದರು.

ಅರಣ್ಯ ಸಂಪತ್ತು ಉಳಿಸಿ ಬೆಳೆಸಿ

ಬಳ್ಳಾರಿ: ಅರಣ್ಯ ಸಂಪತ್ತು ಉಳಿಸಿ ಬೆಳೆಸುವ ಕೆಲಸ ಎಲ್ಲರಿಂದಾಗಬೇಕು. ಕೇವಲ ಅಧಿಕಾರಿಗಳು, ರಾಜಕಾರಣಿಗಳು ಎನ್ನುವುದಕ್ಕಿಂತ ಜನರು ಅರಣ್ಯ, ಪರಿಸರವನ್ನು ಉಳಿಸಿ ಬೆಳೆಸಲು ಕೈಜೋಡಿಸಬೇಕು ಎಂದು ಮಾಜಿ ಶಾಸಕ ಗಾಲಿ ಸೋಮಶೇಖರ್ ರೆಡ್ಡಿ ಹೇಳಿದರು.

ನಗರದ ಶಿವಲಿಂಗನಗರ ಬಡಾವಣೆಯ ಅಂಗನವಾಡಿ ಕೇಂದ್ರದಲ್ಲಿ ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಅರಣ್ಯ, ಪರಿಸರ, ನಾಡು ಸುಭಿಕ್ಷೆಯಾಗಿದ್ದರೆ ಎಲ್ಲರಿಗೂ ಅನುಕೂಲ. ಅರಣ್ಯ ಸಂಪತ್ತು ಉಳಿಯಬೇಕು, ಅರಣ್ಯ ಬೆಳೆಯಬೇಕು, ಯಾವುದೇ ಕಾರಣಕ್ಕೂ ಗಿಡ ಮರಗಳನ್ನು ಕಡಿಯದೇ ಅರಣ್ಯ ಸಂರಕ್ಷಣೆಗೆ ಎಲ್ಲರೂ ಶ್ರಮಿಸಬೇಕು ಎಂದರು.

ಬಿಜೆಪಿ ಬಳ್ಳಾರಿ ನಗರ ಘಟಕದ ವತಿಯಿಂದ ಹಾಗೂ ಬಿಜೆಪಿ ಒಬಿಸಿ ಮೋರ್ಚಾದ ವತಿಯಿಂದ ನಗರದಲ್ಲಿ ಸಸಿ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಬಿಜೆಪಿ ನಗರ ಘಟಕದ ಅಧ್ಯಕ್ಷ ಜಿ.ವೆಂಕಟರಮಣ, ಪಾಲಿಕೆ ಸದಸ್ಯರಾದ ಹನುಮಂತ ಗುಡಿಗಂಟಿ, ಕೆ.ಹನುಮಂತಪ್ಪ, ಶ್ರೀನಿವಾಸ್ ಮೊತ್ಕರ್, ಮುಖಂಡರಾದ ಅಡವಿಸ್ವಾಮಿ, ಓಂಪ್ರಕಾಶ್, ಹನುಮೇಶ ಉಪ್ಪಾರ ಇತರರಿದ್ದರು.

